ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1250
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ (ಮಂಗಳೂರು)

ಉತ್ತರಿಸುವ ದಿನಾಂಕ : 10–03–2021
ಉತ್ತರಿಸುವ ಮಾನ್ಯ ಸಚಿವರು : ಕೃಷಿ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ ಮಂಗಳೂರು ತಾಲ್ಲೂಕನ್ನು ಆಯ್ಕೆ ಮಾಡಿದ್ದರೂ ಇದುವರೆಗೆ ಯಾವುದೇ ಕಾಮಗಾರಿಗಳು ಅನುಷ್ಠಾನವಾಗದಿರಲು ಕಾರಣಗಳೇನು?</td><td>ಮಂಗಳೂರು ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ–ಜಲಾನಯನ ಅಭಿವೃದ್ಧಿ ಯೋಜನೆಯು 2019–20ರ ಸಾಲಿಗೆ ಮುಕ್ತಾಯಗೊಂಡಿರುತ್ತದೆ.

ಮುಂದುವರೆದು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ–ಇತರೆ ಉಪಚಾರಗಳಡಿ 2020–21ನೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 18 ಕಿಂಡಿ ಅಣೆಕಟ್ಟುಗಳನ್ನು ನಿರ್ಮಾಣಮಾಡಲಾಗಿದ್ದು ವಿವರ ಈ ಕೆಳಕಂಡಂತಿದೆ.

<table>
<tr><th>ಹೋಬಳಿ</th><th>ಗ್ರಾಮ</th><th>ಕಿಂಡಿ ಅಣೆಕಟ್ಟು ಕಾಮಗಾರಿಗಳ ಸಂಖ್ಯೆ</th></tr>
<tr><td rowspan="10">ಮೂಡಬಿದ್ರೆ</td><td>ಪುಚ್ಚಮೊಗರು</td><td>1</td></tr>
<tr><td>ಶಿರ್ತಾಡಿ</td><td>3</td></tr>
<tr><td>ವಾಲ್ಪಾಡಿ</td><td>1</td></tr>
<tr><td>ಪಣಪಿಲ</td><td>2</td></tr>
<tr><td>ಕೆಲ್ಲಪುತ್ತಿಗೆ</td><td>1</td></tr>
<tr><td>ದರೆಗುಡ್ಡೆ</td><td>3</td></tr>
<tr><td>ಇರುವೈಲು</td><td>5</td></tr>
<tr><td>ಕಲ್ಲಮುಂಡ್ಕೂರ</td><td>1</td></tr>
<tr><td>ನಿಡ್ಡೋಡಿ</td><td>1</td></tr>
<tr><td>ಒಟ್ಟು</td><td>18</td></tr>
</table>
</td></tr>
</table>

ಸಂಖ್ಯೆ: ಕೃಇ/30/ಕೃಕೈಉ/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1404
ಸದಸ್ಯರ ಹೆಸರು	: ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 10–03–2021

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಈಶಾನ್ಯ, ನೈರುತ್ಯ, ವಾಯವ್ಯ, ಕೇಂದ್ರ ಹಾಗೂ ಬಿ.ಎಂ.ಟಿ.ಸಿ. ಸಾರಿಗೆ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲಕರು ಮತ್ತು ನಿರ್ವಾಹಕರ ಸಂಖ್ಯೆ ಎಷ್ಟು; (ನಿಗಮವಾರು ವಿವರ ನೀಡುವುದು).</td><td>ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳ ನಿಗಮವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಸಂಸ್ಥೆ</th><th>ಹುದ್ದೆ</th><th>ಸಂಖ್ಯೆ</th></tr>
<tr><td rowspan="4">ಕ.ರಾ.ರ.ಸಾ.ನಿಗಮ</td><td>ಚಾಲಕ</td><td>9844</td></tr>
<tr><td>ಚಾಲಕ ಕಂ ನಿರ್ವಾಹಕ</td><td>14472</td></tr>
<tr><td>ನಿರ್ವಾಹಕ</td><td>2964</td></tr>
<tr><td>ಒಟ್ಟು</td><td>27280</td></tr>
<tr><td rowspan="4">ಬೆಂ.ಮ.ಸಾ.ಸಂಸ್ಥೆ</td><td>ಚಾಲಕ</td><td>12181</td></tr>
<tr><td>ಚಾಲಕ ಕಂ ನಿರ್ವಾಹಕ</td><td>9234</td></tr>
<tr><td>ನಿರ್ವಾಹಕ</td><td>4992</td></tr>
<tr><td>ಒಟ್ಟು</td><td>26407</td></tr>
<tr><td rowspan="4">ವಾ.ಕ.ರ.ಸಾ.ಸಂಸ್ಥೆ</td><td>ಚಾಲಕ</td><td>4630</td></tr>
<tr><td>ಚಾಲಕ ಕಂ ನಿರ್ವಾಹಕ</td><td>8255</td></tr>
<tr><td>ನಿರ್ವಾಹಕ</td><td>3199</td></tr>
<tr><td>ಒಟ್ಟು</td><td>16084</td></tr>
<tr><td rowspan="4">ಈ.ಕ.ರ.ಸಾ.ಸಂಸ್ಥೆ</td><td>ಚಾಲಕ</td><td>5269</td></tr>
<tr><td>ಚಾಲಕ ಕಂ ನಿರ್ವಾಹಕ</td><td>6698</td></tr>
<tr><td>ನಿರ್ವಾಹಕ</td><td>1485</td></tr>
<tr><td>ಒಟ್ಟು</td><td>13452</td></tr>
<tr><td colspan="2">ಒಟ್ಟಾರೆ</td><td>83223</td></tr>
</table></td></tr>
<tr><td>ಆ)</td><td>ಸದರಿ ನೌಕರರುಗಳಿಗೆ ಮಾಸಿಕ ವೇತನ ನೀಡಲು ಅವಶ್ಯವಿರುವ ಅನುದಾನ ಎಷ್ಟು; (ನಿಗಮವಾರು ವಿವರ ನೀಡುವುದು)</td><td>ಸದರಿ ನೌಕರರುಗಳಿಗೆ ಮಾಸಿಕ ವೇತನ ನೀಡಲು ಅವಶ್ಯವಿರುವ ಅನುದಾನದ ನಿಗಮವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಸಂಸ್ಥೆ</th><th>ಮೊತ್ತ
(ರೂ.ಕೋಟಿಗಳಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>69.05</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>78.27</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>47.71</td></tr>
<tr><td>ಈ.ಕ.ರ.ಸಾ.ಸಂಸ್ಥೆ</td><td>40.87</td></tr>
<tr><td>ಒಟ್ಟು</td><td>235.90</td></tr>
</table></td></tr>
</table>

...2

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1405
2. ಸದಸ್ಯರ ಹೆಸರು : ಶ್ರೀ ಯಶಂಪವತಗೌಡ ವಿಠ್ಠಲಗೌಡ ಪಾಟೀಲ್(ಇಂಡಿ)
3. ಉತ್ತರಿಸಬೇಕಾದ ದಿನಾಂಕ :10.03.2021
4. ಉತ್ತರಿಸುವ ಸಚಿವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳ ಕಾಮಗಾರಿಗೆ ಮಂಜೂರಾತಿ ನೀಡಿರುವುದು ನಿಜವೇ;</td><td>ನಿಜ.</td></tr>
<tr><td>ಆ)</td><td>ಸದರಿ 2 ವಿಮಾನ ನಿಲ್ದಾಣಗಳ ಯೋಜನಾ ವೆಚ್ಚ ಎಷ್ಟು; ಇದುವರೆವಿಗೂ ಮಂಜೂರು ಮಾಡಿದ ಅನುದಾನ ಎಷ್ಟು; ಅದರ ರೂಪುರೇಷಗಳೇನು (ವಿವರ ನೀಡುವುದು)</td><td>ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳ ಯೋಜನಾ ಹಾಗೂ ಈ ವಿಮಾನ ನಿಲ್ದಾಣಗಳಿಗೆ ಇದುವರೆವಿಗೂ ಮಂಜೂರು ಮಾಡಿದ ಅನುದಾನದ ವಿವರ ಈ ಕೆಳಕಂಡಂತಿವೆ.
<table><tr><th>ವಿಮಾನ ನಿಲ್ದಾಣದ ಹೆಸರು</th><th>ಯೋಜನಾ ಅಂದಾಜು ವೆಚ್ಚ</th><th>ಇಲ್ಲಿಯವರೆಗೆ ಮಂಜೂರು ಮಾಡಿದ ಅನುದಾನ ರೂ. ಕೋಟಿಗಳಲ್ಲಿ</th></tr><tr><td>ಶಿವಮೊಗ್ಗ</td><td>384</td><td>74.61</td></tr><tr><td>ವಿಜಯಪುರ</td><td>220</td><td>-</td></tr></table>
ಶಿವಮೊಗ್ಗ ವಿಮಾನ ನಿಲ್ದಾಣ ಅಭಿವೃದ್ಧಿಯ ರೂಪುರೇಷೆಯು ತಡೆಗೋಡೆ ನಿರ್ಮಾಣ, ಜಮೀನು ಸಮತಟ್ಟು, ATC ನಿರ್ಮಾಣ, ರನ್-ವೇ ಇತ್ಯಾದಿ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಒಳಗೊಂಡಿರುತ್ತವೆ. ಅದೇ ರೀತಿ ವಿಜಯಪುರ ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಗಳಲ್ಲಿಯೂ ಸಹ ತಡೆಗೋಡೆ ನಿರ್ಮಾಣ, ಜಮೀನು ಸಮತಟ್ಟು, ATC ನಿರ್ಮಾಣ, ರನ್-ವೇ ಇತ್ಯಾದಿ ವಿವಿಧ ಹಂತದ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿರುತ್ತವೆ.</td></tr>
<tr><td>ಇ)</td><td>ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿ ಕೈಗೊಳ್ಳಲು ಹೆಚ್ಚಿನ ಅನುದಾನ ಮಂಜೂರು ಮಾಡಲು ಕಾರಣಗಳೇನು;</td><td rowspan="2">ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣವನ್ನು ಎ-320 ಮಾದರಿ ವಿಮಾನ ಕಾರ್ಯಾಚರಣೆಗೆ ಅಭಿವೃದ್ಧಿಪಡಿಸಲಾಗುತ್ತಿದೆ. ವಿಜಯಪುರ ವಿಮಾನ ನಿಲ್ದಾಣವನ್ನು ಎಟಿಆರ್-72 ಮಾದರಿ ವಿಮಾನ ಕಾರ್ಯಾಚರಣೆಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಆದ್ದರಿಂದ ಕಾಮಗಾರಿಗಳ ಅಂದಾಜು ವೆಚ್ಚ ವಿಭಿನ್ನವಾಗಿದ್ದು, ಅನುದಾನ ಕಾಯ್ದಿರಿಸುವಿಕೆ ಅಥವಾ ಅನುದಾನ ಬಿಡುಗಡೆಯಲ್ಲಿ ಯಾವುದೇ ತಾರತಮ್ಯ ಅನುಸರಿಸಲಾಗುತ್ತಿಲ್ಲ.</td></tr>
<tr><td>ಈ)</td><td>ವಿಜಯಪುರ ವಿಮಾನ ನಿಲ್ದಾಣ ಕಾಮಗಾರಿಗೆ ಕಡಿಮೆ ಅನುದಾನ ಮಂಜೂರು ಮಾಡಲು ಕಾರಣಗಳೇನು; ಈ ರೀತಿಯದ ತಾರತಮ್ಯಕ್ಕೆ ಕಾರಣಗಳೇನು (ವಿವರ ನೀಡುವುದು);</td></tr>
<tr><td>ಉ)</td><td>ಸದರಿ ವಿಮಾನ ನಿಲ್ದಾಣಗಳ ಕಾಮಗಾರಿಗಳು ಯಾವ ಕಾಲಮಿತಿಯೊಳಗೆ ಸಂಪೂರ್ಣಗೊಳ್ಳುವವು ಹಾಗೂ ಯಾವಾಗ ಕಾರ್ಯಾರಂಭ ಮಾಡಲಿವೆ; ಕಾರ್ಯಾರಂಭ ಮಾಡಲು ಸರ್ಕಾರ ಕೈಗೊಂಡಿರುವ ರೂಪುರೇಷೆಗಳೇನು (ವಿವರ ನೀಡುವುದು)?</td><td>ಸದರಿ ವಿಮಾನ ನಿಲ್ದಾಣಗಳ ಕಾಮಗಾರಿಯನ್ನು 2022-23 ನೇ ಸಾಲಿನಲ್ಲಿ ಪೂರ್ಣಗೊಳಿಸಿ, ಕಾರ್ಯಚರಣೆಯನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದು. ಈ ವಿಮಾನ ನಿಲ್ದಾಣಗಳನ್ನು ಮುಂಬರುವ ಪ್ರಾದೇಶಿಕ ಸಂಪರ್ಕ ಯೋಜನೆಯ ಟೆಂಡರ್/ಬಿಡ್ ನಲ್ಲಿ ವಾಯು ಮಾರ್ಗವನ್ನು ಸೇರಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.</td></tr>
</table>

ಸಂಖ್ಯೆ:ಮೂಅಇ 20 ರಾಅವಿ 2021

(ಆನಂದ್ ಸಿಂಗ್)

ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1408
2. ಸದಸ್ಯರ ಹೆಸರು : ಶ್ರೀ ಯಶಂವತಗೌಡ ವಿಠ್ಠಲಗೌಡ ಪಾಟೀಲ್(ಇಂಡಿ)
3. ಉತ್ತರಿಸಬೇಕಾದ ದಿನಾಂಕ :10.03.2021
4. ಉತ್ತರಿಸುವ ಸಚಿವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ದಾಕ್ಷಿ,ದಾಳಿಂಬೆ, ಲಿಂಬೆ, ಮೊದಲಾದ ತೋಟಗಾರಿಕಾ ಬೆಳಗಳನ್ನು ಬೆಳೆಯುವುದರಲ್ಲಿ ಮುಂಚೂಣಿಯಲ್ಲಿದ್ದು, ತೋಟಗಾರಿಕ ಹಬ್ ಎಂದು ಪ್ರಖ್ಯಾತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಈ ತೋಟಗಾರಿಕೆ ಬೆಳೆಗಳು ವಿಶಿಷ್ಟ ಗುಣವನ್ನು ಹೊಂದಿದ್ದು, ಈ ಪದಾರ್ಥಗಳು ಹೊರರಾಜ್ಯ ಸೇರಿದಂತೆ ದೇಶ ವಿದೇಶಗಳಿಗೆ ರಫ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಬಂದಿದ್ದಲ್ಲಿ, ಈ ತೋಟಗಾರಿಕೆ ಬೆಳಗಳನ್ನು ಹೊರರಾಜ್ಯ, ದೇಶ-ವಿದೇಶಗಳಿಗೆ ರಫ್ತು ಮಾಡಲು ಅನುಕೂಲವಾಗುವಂತೆ ವಿಜಯಪುರದಲ್ಲಿ ಕಾರ್ಗೋ ವಿಮಾನಯಾನ (ಸರಕು ಸಂಚಾರ ವಿಮಾನ) ಆರಂಬಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಹಾಲಿಯಲ್ಲಿ ವಿಜಯಪುರ ವಿಮಾನ ನಿಲ್ದಾಣವನ್ನು ಎಟಿಆರ್-72 ಮಾದರಿ ವಿಮಾನ ಕಾರ್ಯಾಚರಣೆಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಭವಿಷ್ಯದಲ್ಲಿ ಉದ್ಭವಿಸುವ ಪ್ರಯಾಣಿಕರ ಬೇಡಿಕೆಯನ್ನಾದರಿಸಿ ಕಾರ್ಗೋ ವಿಮಾನಯಾನ ಆರಂಬಿಸುವ ಬಗ್ಗೆ ಪರಿಶೀಲಿಸಲಾಗುವುದು.
ಈ)	ಕಾರ್ಗೋ ವಿಮಾನದ (ಸರಕು) ಮೂಲಕ ರಫ್ತು ಮಾಡುವುದರಿಂದ ಪದಾರ್ಥಗಳು ಹಾಳಾಗದಂತೆ ಶೀಘ್ರವಾಗಿ ತಲುಪುವುದರಿಂದ ರೈತರು ಮತ್ತು ವರ್ತಕರುಗಳಿಗೆ ಅನುಕೂಲವಾಗುವುದಿಲ್ಲವೇ;	
ಉ)	ವಿಜಯಪುರದಲ್ಲಿ ಕಾರ್ಗೋ ವಿಮಾನಯಾನ ಆರಂಭಿಸಲು ಸರ್ಕಾರದ ನಿಲುವೇನು? (ವಿವರ ನೀಡುವುದು)	

ಸಂಖ್ಯೆ:ಮೂಅಇ 29 ರಾಅವಿ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ, ಹಜ್ ಮತ್ತು
ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1410
ಸದಸ್ಯರ ಹೆಸರು	: ಶ್ರೀ ವೇದವ್ಯಾಸ ಕಾಮತ್ ಡಿ.
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 10-03-2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಮಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿರುವ ಮಂಗಳೂರು ವಿಭಾಗದಲ್ಲಿ ದಿನಾಂಕ: 04.03.2021ರಲ್ಲಿದ್ದಂತೆ 479 ಅನುಸೂಚಿಗಳನ್ನು 601 ವಾಹನ ಬಲದಿಂದ ಕಾರ್ಯಾಚರಣೆ ಮಾಡುತ್ತಿದ್ದು, ಪ್ರಸ್ತುತ 122 ಹೆಚ್ಚುವರಿ ವಾಹನಗಳಿರುತ್ತವೆ. ಪ್ರಸ್ತುತ ವಿಭಾಗದಲ್ಲಿ ಬಸ್ಸುಗಳ ಕೊರತೆ ಇರುವುದಿಲ್ಲ.
ಆ)	ಬಂದಿದ್ದಲ್ಲಿ, ಸದರಿ ಬಸ್ಸುಗಳ ಕೊರತೆಯನ್ನು ಸರಿದೂಗಿಸಲು ಹೊಸ ಬಸ್ಸುಗಳನ್ನು ಯಾವಾಗ ಪೂರೈಸಲಾಗುವುದು;	ಮಂಗಳೂರು ವಿಭಾಗದಲ್ಲಿ ಪ್ರಸ್ತುತ ವಾಹನಗಳ ಕೊರತೆಯಿರುವುದಿಲ್ಲ. ಆದಾಗ್ಯೂ, ಮುಂದಿನ ದಿನಗಳಲ್ಲಿ ವಾಹನಗಳ ಅವಶ್ಯಕತೆ ಇದ್ದಲ್ಲಿ ಹೊಸ ವಾಹನಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು.
ಇ)	2019ರಿಂದ ಇಲ್ಲಿಯವರೆಗೆ ಎಷ್ಟು ಹೊಸ ಬಸ್ಸುಗಳನ್ನು ಮಂಗಳೂರು ನಗರ ದಕ್ಷಿಣ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರು ಮಾಡಲಾಗಿದೆ;	ಮಂಗಳೂರು ವಿಭಾಗದ ಮಂಗಳೂರು ನಗರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 03 ಘಟಕಗಳಿದ್ದು, 2019ರಿಂದ ಇಲ್ಲಿಯವರೆಗೆ ಮಂಜೂರು ಮಾಡಲಾದ ಹೊಸ ವಾಹನಗಳ ಸಂಖ್ಯೆ ಈ ಕೆಳಗಿನಂತಿದೆ:
ಈ)	ಬಸ್ಸುಗಳನ್ನು ಪೂರೈಸಲು ಸರ್ಕಾರ ವಿಫಲವಾಗಿದ್ದಲ್ಲಿ, ಹೊಸ ಬಸ್ಸುಗಳ ಪೂರೈಕೆಗೆ ತೆಗೆದುಕೊಂಡಿರುವ ಕ್ರಮಗಳೇನು?	ಪ್ರಸ್ತುತ ಮಂಗಳೂರು ವಿಭಾಗದಲ್ಲಿ ವಾಹನಗಳ ಕೊರತೆಯಿರುವುದಿಲ್ಲ.

(Table within answer ಇ):

ಅವಧಿ	ವಾಹನಗಳ ಸಂಖ್ಯೆ
2019-20	52
2020-21 (04.03.2021ರವರೆಗೆ)	09
ಒಟ್ಟು	**61**

ಸಂಖ್ಯೆ: ಟಿಡಿ 82 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1415
2)	ಸದಸ್ಯರ ಹೆಸರು	:	ಶ್ರೀ. ಹೊಲಗೇರಿ ಡಿ.ಎಸ್ (ಲಿಂಗಸುಗೂರು)
3)	ಉತ್ತರಿಸಬೇಕಾದ ದಿನಾಂಕ	:	10.03.2021
4)	ಉತ್ತರಿಸುವವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ರಾಯಚೂರು ನಗರದಲ್ಲಿ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಸದರಿ ಕಾಮಗಾರಿಗೆ ಯಾವ ಯಾವ ಇಲಾಖೆಯ ಅನುದಾನ ಬಳಕೆ ಮಾಡಿಕೊಳ್ಳಲಾಗಿದೆ;	ರಾಯಚೂರು ಜಿಲ್ಲೆ ಯರಮರಸ್ ಇಲ್ಲಿ ಸಣ್ಣ ವಿಮಾನಗಳ(9ರಿಂದ20 ಆಸನಗಳು) ಹಾರಾಟಕ್ಕೆ ಅನುಗುಣವಾಗುವಂತೆ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ವಿಸ್ತೃತ ಯೋಜನಾ ವರದಿ(DPR) ಮತ್ತು ವಿನ್ಯಾಸ ಕಾರ್ಯಸಾದ್ಯತಾ ವರದಿ(DFR)ಯನ್ನು ಸಿದ್ಧಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ಯೋಜನೆಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ಈವರೆಗೆ ಒಟ್ಟು ರೂ.11.44 ಕೋಟಿ ಬಿಡುಗಡೆ ಮಾಡಲಾಗಿದೆ.
ಆ	ರಾಯಚೂರು ಜಿಲ್ಲೆಯ ಲಿಂಗಸಗೂರು ವಿಧಾನಸಭಾ ಕ್ಷೇತ್ರದಲ್ಲಿ ಹಾದುಹೋಗಿರುವ ಬಳ್ಳಾರಿ -ಲಿಂಗಸಗೂರು ವಯಾ ಸಿರಿಗುಪ್ಪಾ-ಸಿಂಧನೂರು ನೂತನ ರೈಲು ಮಾರ್ಗ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;ಈ ಯೋಜನೆಯ ಕಾಮಗಾರಿ ಯಾವಾಗಿನಿಂದ ಪ್ರಾರಂಭಿಸಲಾಗುವುದು?	ಬಳ್ಳಾರಿ – ಲಿಂಗಸಗೂರು ವಯಾ ಸಿರುಗುಪ್ಪ – ಸಿಂಧನೂರು (132.18 ಕಿ.ಮೀ) ಮಾರ್ಗದ ಎಂಜಿನಿಯರಿಂಗ್ ಮತ್ತು ಸಂಚಾರ ಸಮೀಕ್ಷೆಯನ್ನು ಪೂರ್ಣಗೊಳಿಸಿದ್ದು, ಈ ಯೋಜನೆಯನ್ನು ಎಂಜಿನಿಯರಿಂಗ್ ಕಮ್ ಟ್ರಾಫಿಕ್ ಸರ್ವೆ ನೀಲಿ ಪುಸ್ತಕ 2018-19 ರ ಐಟಂ ನಂ.7ರಲ್ಲಿ ಸೇರಿಸಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.1162.00 ಕೋಟಿಗಳಾಗಿದ್ದು, ರೈಲ್ವೆ ಮಂಡಳಿಯ ಅನುಮೋದನೆಗೆ ಸಲ್ಲಿಸಿದೆ. ರೈಲ್ವೆ ಮಂಡಳಿಯ ಮಂಜೂರಾತಿ ದೊರೆತಿಲ್ಲವಾದ್ದರಿಂದ ಈ ಯೋಜನೆ ಪ್ರಾರಂಭವಾಗುವ ದಿನಾಂಕವನ್ನು ನಿಗಧಿಪಡಿಸಲು ಸಾಧ್ಯವಿರುವುದಿಲ್ಲ. ಎಂದು ರೈಲ್ವೆ ಇಲಾಖೆಯು ತಿಳಿಸಿರುತ್ತದೆ.

ಸಂಖ್ಯೆ: ಮೂಅಇ 30 ರಾಅವಿ 2021/ಇ

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **1417**

ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್.
(ಲಿಂಗಸುಗೂರು)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ಸಹಾಯಕ ಪ್ರಾದೇಶಿಕ ಅಧಿಕಾರಿಗಳ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸುಗೂರು ಅಥವಾ ಸಿಂಧನೂರು ತಾಲ್ಲೂಕಿನಲ್ಲಿ ಸಹಾಯಕ ಪ್ರಾದೇಶಿಕ ಅಧಿಕಾರಿಗಳ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.
(ಆ)	ಲಿಂಗಸುಗೂರು ಪಟ್ಟಣದಲ್ಲಿ ಬಸ್ ನಿಲ್ದಾಣದ ಕಾಮಗಾರಿ ಹಾಗೂ ಸಿಬ್ಬಂದಿ ವಸತಿ ಗೃಹದ ಕಾಮಗಾರಿ ಯಾವ ಹಂತದಲ್ಲಿದೆ; ಸದರಿ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಲಿಂಗಸುಗೂರು ಪಟ್ಟಣದಲ್ಲಿ ಬಸ್ ನಿಲ್ದಾಣದ ಕಾಮಗಾರಿ ಪೂರ್ಣಗೊಂಡಿರುತ್ತದೆ. 2ನೇ ಹಂತದ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು. ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ವಿಳಂಬವಾಗಿರುತ್ತದೆ. ಸಿಬ್ಬಂದಿ ವಸತಿ ಗೃಹದ ಕಾಮಗಾರಿ ದಿನಾಂಕ 15/01/2020 ರಂದು ಪ್ರಾರಂಭಿಸಿದ್ದು, ಪ್ರಸ್ತುತ ಕಟ್ಟಡದ 2ನೇ ಮಹಡಿಯ ಛಾವಣಿ ಅಳವಡಿಸಲಾಗಿದ್ದು, ಪ್ಲಾಸ್ಟರಿಂಗ್ ನೆಲಹಾಸು ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಕಾಮಗಾರಿಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು.
(ಇ)	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ 8 ಲಕ್ಷ ಕಿ.ಮೀ. ಸಂಚರಿಸಿರುವ ಬಸ್ಸುಗಳು ಎಷ್ಟು; ಸದರಿ ಬಸ್ಸುಗಳನ್ನು ಬದಲಾವಣೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅಶೋಕ ಲೈಲ್ಯಾಂಡ, ಟಾಟಾ ಹಾಗೂ ತತ್ಸಮಾನ ಮಾದರಿಯ ಸಾಮಾನ್ಯ ಬಸ್ಸುಗಳ ಜೀವಮಾನವನ್ನು 9.00 ಲಕ್ಷ ಕಿ.ಮೀ. ಹಾಗೂ ಕರೋನಾ ಹವಾನಿಯಂತ್ರಿತ ಬಸ್ಸುಗಳ ಜೀವಮಾನವನ್ನು 11.00 ಲಕ್ಷ ಕಿ.ಮೀ.ಗೆ ನಿಗದಿಪಡಿಸ ಲಾಗಿರುತ್ತದೆ. ನಿಗದಿಪಡಿಸಿದ ಕಿ.ಮೀ. ಕ್ರಮಿಸಿದ ನಂತರ ಆ ಬಸ್ಸಿನ ಭೌತಿಕ & ತಾಂತ್ರಿಕ ಸ್ಥಿತಿಗತಿ ಆಧಾರದ ಮೇಲೆ ನಿಷ್ಕ್ರಿಯೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಲಿಂಗಸುಗೂರು ಘಟಕದಲ್ಲಿ ಒಟ್ಟಾರೆ 123 ಬಸ್ಸುಗಳಿದ್ದು, ಈ ಪೈಕಿ 58 ಬಸ್ಸುಗಳು 8.00 ಲಕ್ಷ ಕಿ.ಮೀ. ಕ್ರಮಿಸಿರುವ ಬಸ್ಸುಗಳಿರುತ್ತವೆ. ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಬಸ್ಸುಗಳು ಸಹಜ ಕಾರ್ಯಾಚರಣೆಗೊಳ್ಳದೇ ಇದ್ದು, ಸಂಸ್ಥೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಪ್ರಸಕ್ತ (2020-21) ಸಾಲಿನಲ್ಲಿ ಹೊಸ ಬಸ್ಸುಗಳ ಖರೀದಿಯನ್ನು ಕೈಬಿಡಲಾಗಿರುತ್ತದೆ. ಹೊಸ ಬಸ್ಸುಗಳ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿದಾಗ ಘಟಕದ ಅವಶ್ಯಕತೆಗನುಗುಣವಾಗಿ ಹೊಸ ಬಸ್ಸುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಟಿಡಿ 31 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1423
ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್
ಉತ್ತರಿಸಬೇಕಾದ ದಿನಾಂಕ	:	10.03.2021
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದಲ್ಲಿ, 2019ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ತ್ರಿಚಕ್ರ ವಾಹನ ಕೋರಿ ಎಷ್ಟು ಅರ್ಹ ವಿಕಲ ಚೇತನರು ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಎಷ್ಟು ತ್ರಿಚಕ್ರ ವಾಹನಗಳನ್ನು ಒದಗಿಸಲಾಗಿದೆ;	ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದಲ್ಲಿ 2019ರಲ್ಲಿ ತ್ರಿಚಕ್ರ ವಾಹನಗಳಿಗಾಗಿ ಯಾವುದೇ ಅರ್ಜಿಗಳು ಸಲ್ಲಿಕೆಯಾಗಿರುವುದಿಲ್ಲ. ಆದುದರಿಂದ ತ್ರಿಚಕ್ರವಾಹನವನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ, ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಧಾನಸಭಾ ಮತಕ್ಷೇತ್ರದಲ್ಲಿ 2019ರಲ್ಲಿ ಯಂತ್ರಚಾಲಿತ ದ್ವಿಚಕ್ರ ವಾಹನ ಕೋರಿ 25 ಅರ್ಹ ವಿಕಲಚೇತನರು ಅರ್ಜಿ ಸಲ್ಲಿಸಿರುತ್ತಾರೆ. ಆ ಅರ್ಜಿಗಳ ಪೈಕಿ 15 ಅರ್ಹ ವಿಕಲಚೇತನರಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಒದಗಿಸಲಾಗಿದೆ.
ಆ)	ತ್ರಿಚಕ್ರ ವಾಹನಗಳು ಕಡಿಮೆ ಇದ್ದುದರಿಂದ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಹೆಚ್ಚಾಗಿದ್ದು, ಇಲ್ಲಿನ ಅಂಗವಿಕಲರಿಗೆ ತ್ರಿಚಕ್ರ ವಾಹನ ಒದಗಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತ್ರಿಚಕ್ರ ವಾಹನಗಳನ್ನು ಒದಗಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಇಲ್ಲಿನ ಅಂಗವಿಕಲರಿಗೆ ಅನುಕೂಲವಾಗಲು ಇನ್ನೂ 25 ತ್ರಿಚಕ್ರ ವಾಹನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?	ಪ್ರಶ್ನೆ 'ಅ'ಗೆ ನೀಡಿರುವ ಉತ್ತರದನ್ವಯ ಉದ್ಭವಿಸುವುದಿಲ್ಲ.

ಸಂಖ್ಯೆ: ಮಮಇ 69 ಪಿಹೆಚ್‌ಪಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1424

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ)	ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗದ ಬೈಲಹೊಂಗಲ ಪಟ್ಟಣದಲ್ಲಿ ನೂತನವಾಗಿ ಬಸ್ ನಿಲ್ದಾಣ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;	ಹೌದು, ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಈ ಬಸ್ ನಿಲ್ದಾಣ ಕಪ್ಪು ಮಿಶ್ರಿತ ಮಣ್ಣಿನಿಂದ ಕೂಡಿದ್ದರಿಂದ ಮಳೆಗಾಲದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಸರ್ಕಾರದ ಗಮನಕ್ಕೆ ಬಂದಿದೆ.
ಇ)	ಈ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರ ಅನುಕೂಲತೆಗಾಗಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲು ಸುಮಾರು ರೂ.10 ಕೋಟಿಗಳ ಅಂದಾಜು ಪಟ್ಟಿ ತಯಾರಿಸಿರುವುದು ನಿಜವೇ;	ಈವರೆಗೂ ಅಂದಾಜು ಪಟ್ಟಿ ತಯಾರಿಸಿರುವುದಿಲ್ಲ.
ಈ)	ಹಾಗಿದ್ದಲ್ಲಿ, ಸಾರ್ವಜನಿಕರ ಅನುಕೂಲತೆಗಾಗಿ ಬೈಲಹೊಂಗಲ ಬಸ್ ನಿಲ್ದಾಣವನ್ನು ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲು ಅವಶ್ಯವಿರುವ ರೂ.10 ಕೋಟಿ ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೇ?	ಸಾರ್ವಜನಿಕರ ಅನುಕೂಲತೆಗಾಗಿ ಬೈಲಹೊಂಗಲ ಬಸ್ ನಿಲ್ದಾಣದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲು ಅವಶ್ಯವಿರುವ ಅನುದಾನದ ಪ್ರಸ್ತಾವನೆಯನ್ನು 2021-22ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 68 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1425
ಉತ್ತರ ದಿನಾಂಕ : 10.03.2021

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಅಮಟೂರು ಹಾಗೂ 19 ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ ಎಷ್ಟು ಮೊತ್ತಕ್ಕೆ ಹಾಗೂ ಯಾವಾಗ ಮಂಜೂರಾತಿ ನೀಡಲಾಗಿದೆ;	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಅಮಟೂರು ಮತ್ತು 19 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ರೂ.5600.00ಲಕ್ಷಗಳಿಗೆ 2019-20ನೇ ಸಾಲಿನಲ್ಲಿ ತಯಾರಿಸಲಾಗಿರುತ್ತದೆ.
ಆ)	ಅಮಟೂರು ಹಾಗೂ 19 ಗ್ರಾಮಗಳ ಹೆಚ್ಚಿನ ಗ್ರಾಮಗಳು ಮಲಪ್ರಭಾ ಯೋಜನೆಯ ಪುನರ್ವಸತಿ ಗ್ರಾಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ಯೋಜನೆಯಡಿ ಬೇವಿನಕೊಪ್ಪ, ಚಿಕ್ಕಮುಳಕೂರ ಮತ್ತು ಹಿರೇಮುಳಕೂರ ಪುನರ್ವಸತಿ ಗ್ರಾಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಇ)	ಈ ಯೋಜನೆಯಿಂದ ಮಲಪ್ರಭಾ ನದಿಯಿಂದ ಕೇವಲ 500 ಮೀಟರ್ ಅಂತರದಲ್ಲಿರುವ ಗ್ರಾಮಗಳಿಗೂ ಸಹ ನೀರು ಸಮರ್ಪಕವಾಗಿ ಪೂರೈಕೆಯಾಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಲಪ್ರಭಾ ನದಿಯಿಂದ ಕೇವಲ 500ಮೀಟರ್ ಅಂತರದಲ್ಲಿರುವ ಗ್ರಾಮಗಳಾದ 1)ಬೇವಿನಕೊಪ್ಪ, 2) ಚಿಕ್ಕಮುಳಕೂರ, 3) ಹಿರೇಮುಳಕೂರ ಗ್ರಾಮಗಳು ಸದರಿ ಯೋಜನೆಯಿಂದ ನೀರು ಸಮರ್ಪಕವಾಗಿ ಪೂರೈಕೆಯಾಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ.
ಈ)	ಮಲಪ್ರಭಾ ಯೋಜನೆಯ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗೆ ಕೈಗೊಂಡ ಅಮಟೂರು ಹಾಗೂ 19 ಗ್ರಾಮಗಳ ಕುಡಿಯುವ ನೀರು ಯೋಜನೆಯನ್ನು ಪುನಶ್ಚೇತನಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ಸಂಗತಿ ನಿಜವೇ:	ಅಮಟೂರು ಹಾಗೂ 19 ಗ್ರಾಮಗಳ ಕುಡಿಯುವ ನೀರು ಯೋಜನೆಯನ್ನು ಪುನಶ್ಚೇತನಗೊಳಿಸುವ ಮೂಲಕ ಯೋಜನೆಯ ಗ್ರಾಮಗಳಿಗೆ ಮಲಪ್ರಭಾ ನದಿಯಿಂದ ಕುಡಿಯುವ ನೀರನ್ನು ಒದಗಿಸಲು, ಜಲ ಜೀವನ್ ಮಿಷನ್ (ಜೆ.ಜೆ.ಎಂ) ಮಾರ್ಗಸೂಚಿಗಳನ್ವಯ ಜಲಮೂಲದ ಸುಸ್ಥಿರತೆಯನ್ನು ಖಚಿತಪಡಿಸಿಕೊಂಡು ಯೋಜನೆಯನ್ನು 55LPCDಗೆ ಮರು ವಿನ್ಯಾಸಗೊಳಿಸುವ ಪ್ರಾರ್ಥಮಿಕ ಯೋಜನಾ ವರದಿ (ಪಿ.ಎಸ್.ಆರ್) ತಯಾರಿಕೆ ಹಂತದಲ್ಲಿರುತ್ತದೆ. ಅನುದಾನದ ಲಭ್ಯತೆಗನುಗುಣವಾಗಿ ಸದರಿ ಯೋಜನೆಯನ್ನು ಜೆ.ಜೆ.ಎಂ ಅಡಿ ಕೈಗೆತ್ತಿಕೊಂಡು ಎಲ್ಲಾ ಗ್ರಾಮಗಳಿಗೆ ಸಮರ್ಪಕವಾಗಿ ನೀರು ಪೂರೈಸಲು ಉದ್ದೇಶಿಸಲಾಗಿದೆ.
ಉ)	ಹಾಗಿದ್ದಲ್ಲಿ, ಈ ವರ್ಷದಲ್ಲಿಯೇ ಈ ಯೋಜನೆಯನ್ನು ಪುನಶ್ಚೇತನಗೊಳಿಸಿ ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಸಲಾಗುವುದೆ?	

ಸಂ:ಗ್ರಾಕುನೀ&ನೈಇ 62 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1427
ಸದಸ್ಯರ ಹೆಸರು	:	ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.
ಉತ್ತರಿಸುವ ದಿನಾಂಕ	:	10.03.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹುದ್ದೆಗೆ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ವರ್ಗಾವಣೆ/ನಿಯುಕ್ತಿಗೊಳಿಸದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ತೀರ್ಪು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಮಾನ್ಯ ನ್ಯಾಯ ಮಂಡಳಿಯು ನೀಡಿರುವ ತೀರ್ಪನ್ನು ಯಾವ ಕಾಲಮಿತಿಯೊಳಗೆ ಅನುಷ್ಠಾನ ಮಾಡಲಾಗುವುದು; (ವಿವರ ನೀಡುವುದು)	ತೀರ್ಪನ್ನು ಅನುಷ್ಠಾನಗೊಳಿಸಲು ಮಾನ್ಯ ನ್ಯಾಯಮಂಡಳಿಯು ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ. ಆದಾಗ್ಯೂ ಆದಷ್ಟು ಕಡಿಮೆ ಕಾಲಾವಕಾಶದಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.
ಇ)	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಚಿಂತಾಮಣಿ ಇಲ್ಲಿನ ಹುದ್ದೆಯಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಈ)	ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)	ಮಾನ್ಯ ನ್ಯಾಯ ಮಂಡಳಿಯ ತೀರ್ಪನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ.

ಸಂ. ಮಮಇ 93 ಎಸ್‌ಜೆಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1428
ಸದಸ್ಯರ ಹೆಸರು	ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	10.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕಸಬಾ ಹೋಬಳಿ ಕಟಮಾಚನಹಳ್ಳಿ ಗ್ರಾಮದಿಂದ ಮುನಗನಹಳ್ಳಿ ಗ್ರಾಮಕ್ಕೆ ಹೋಗುವ ಸಂಪರ್ಕ ಬಂಡಿ ರಸ್ತೆಯನ್ನು ಒತ್ತುವರಿ ಮಾಡಿದ್ದು, ಇದರಿಂದಾಗಿ ಸದರಿ ರಸ್ತೆಯಲ್ಲಿ ಸಾರ್ವಜನಿಕರು, ರೈತರುಗಳು, ವಿದ್ಯಾರ್ಥಿಗಳು ದಿನನಿತ್ಯ ಓಡಾಟ ಮಾಡಲು ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ
ಆ.	ಬಂದಿದ್ದಲ್ಲಿ ಸದರಿ ರಸ್ತೆಯನ್ನು ಒತ್ತುವರಿ ಮಾಡಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಒತ್ತುವರಿಯಾದ ರಸ್ತೆಯ ಜಾಗವನ್ನು ಪುನಃ ಇಲಾಖೆಯ ವಶಕ್ಕೆ ಪಡೆಯಲಾಗಿದೆಯೇ? (ವಿವರ ನೀಡುವುದು)	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕಸಬಾ ಹೋಬಳಿ ಕಟಮಾಚನಹಳ್ಳಿ ಗ್ರಾಮದಿಂದ ಮುನಗನಹಳ್ಳಿ ಗ್ರಾಮಕ್ಕೆ ಹೋಗುವ ಸಂಪರ್ಕ ಬಂಡಿ ರಸ್ತೆಯು ಗ್ರಾಮೀಣ ರಸ್ತೆಯಾಗಿರುತ್ತದೆ. • ಈ ರಸ್ತೆಯು ಜಿಲ್ಲಾ ಗ್ರಾಮೀಣ ರಸ್ತೆ ಯೋಜನೆ(ಡಿ.ಆರ್.ಆರ್.ಪಿ) ಯ ಪಟ್ಟಿಯಲ್ಲಿ ಸಂಖ್ಯೆ(ವಿ.ಆರ್.245) ರಲ್ಲಿರುವಂತೆ ಈ ರಸ್ತೆಯ ಒಟ್ಟು ಉದ್ದ 1.85 ಕಿ.ಮೀ. ಇರುತ್ತದೆ. • ಸುಮಾರು 250 ಮೀಟರ್ ನಷ್ಟು ವಿವಿದ ಸರಪಳಿಗಳಲ್ಲಿ 3.50 ಮೀಟರ್, 3.00 ಮೀಟರ್ ಹಾಗೂ 4.00 ಮೀಟರ್‌ನಷ್ಟು ಅಗಲವಿದ್ದು, ಗ್ರಾಮೀಣ ರಸ್ತೆಯ ಮಾನದಂಡದಂತೆ ಇರುವುದಿಲ್ಲ. ಆದುದರಿಂದ ರಸ್ತೆಯು ಒತ್ತುವರಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಕಂದಾಯ ಇಲಾಖೆಯ ಮೂಲಕ ಸರ್ವೆ ಕಾರ್ಯವನ್ನು ಕೈಗೊಂಡು ವಾಸ್ತವ ಸ್ಥಿತಿಯ ಮಾಹಿತಿಯನ್ನು ಪಡೆದುಕೊಂಡು ಮುಂದಿನ ಕ್ರಮ ವಹಿಸಲಾಗುವುದು.

ಕಡತ ಸಂಖ್ಯೆ: ಗ್ರಾಅಪ:ಅಧಿ-15/ :ಆರ್‌ಆರ್‌ಸಿ:2020

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಕೃಷ್ಣಾರೆಡ್ಡಿ.ಎಂ (ಚಿಂತಾಮಣಿ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1426

ಉತ್ತರ ದಿನಾಂಕ : 10.03.2021

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು 2020-21ನೇ ಸಾಲಿನಲ್ಲಿ ಟಾಸ್ಕ್‌ಫೋರ್ಸ್ ಯೋಜನೆಯಡಿ ಚಿಂತಾಮಣಿ ತಾಲ್ಲೂಕಿಗೆ 17 ಕಾಮಗಾರಿಗಳನ್ನು ಅಂದಾಜು ಮೊತ್ತ ರೂ.55.00ಲಕ್ಷಗಳಿಗೆ ಕೈಗೊಂಡು ಪೂರ್ಣಗೊಳಿಸಲಾಗಿದೆ. IMISನಲ್ಲಿನ ದಾಖಲಾತಿಯಲ್ಲಿನಂತೆ ಪ್ರಸ್ತುತ ಯಾವುದೇ ಜಲಮೂಲವು ಕಲುಷಿತವಿಲ್ಲದಿರುವುದರಿಂದ ಶುದ್ಧ ಕುಡಿಯುವ ನೀರಿನ ಘಟಕದ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ಪ್ರಸ್ತಾವನೆ ಯಾವ ಹಂತದಲ್ಲಿದೆ? (ವಿವರ ನೀಡುವುದು)	

ಸಂ:ಗ್ರಾಕುನೀ&ನೈಇ 63 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ.(ಬಂಗಾರಪೇಟೆ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	1429
ಉತ್ತರ ದಿನಾಂಕ	:	10.03.2021

ಕ್ರ.ಸ	ಪ್ರಶ್ನೆ	ಉತ್ತರ
ಅ)	ಕೋಲಾರ ಜಿಲ್ಲೆಯಲ್ಲಿ 2018-19 ರಿಂದ 2020-21ನೇ ಸಾಲಿನವರೆಗೆ ಅಳವಡಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಎಷ್ಟು;	ಕೋಲಾರ ಜಿಲ್ಲೆಯಲ್ಲಿ 2018-19 ರಿಂದ 2020-21ನೇ ಸಾಲಿನವರೆಗೆ ಅಳವಡಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಮತ್ತು ವಿವರಗಳು ಕೆಳಕಂಡಂತಿವೆ;

ಕ್ರ.ಸ	ವರ್ಷ	ಮಂಜೂರಾದ ಘಟಕಗಳ ಸಂಖ್ಯೆ	ಅಳವಡಿಸಲಾದ ಶು.ಕು.ನೀ. ಘಟಕಗಳ ಸಂಖ್ಯೆ	ಷರಾ
1	2018-19	0	0	2019-20ರಲ್ಲಿ ಮಂಜೂರಾದ 17 ಶುದ್ಧ ಕುಡಿಯುವ ನೀರಿನ ಘಟಕಗಳ ಪೈಕಿ 5 ಘಟಕಗಳನ್ನು 2020-21ರಲ್ಲಿ ಅಳವಡಿಸಲಾಗಿದ್ದು, ಉಳಿದ 12 ಘಟಕಗಳ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
2	2019-20	17	0	
3	2020-21	0	5	
	ಒಟ್ಟು	**17**	**5**	

ಕ್ರ.ಸ	ಪ್ರಶ್ನೆ	ಉತ್ತರ
ಆ)	ಈ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಕಳೆದ ಎರಡು ವರ್ಷಗಳಿಂದ ಮಂಜೂರಾತಿ ನೀಡದಿರಲು ಕಾರಣವೇನು;	ದಿನಾಂಕ:21.03.2020ರಂದು 17 ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. 2020-21ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸದರಿ 17 ಘಟಕಗಳನ್ನು ಸೇರ್ಪಡಿಸಲು ಪರಿಶೀಲನಾ ಹಂತದಲ್ಲಿರುತ್ತದೆ.
ಇ)	ಶುದ್ಧ ಕುಡಿಯುವ ನೀರಿನ ಲಭ್ಯತೆ ಇಲ್ಲದೆ ಸಾರ್ವಜನಿಕರು ಅನಾರೋಗ್ಯಕ್ಕೆ ಒಳಗಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಸಾಲಗಾರರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)	ವರದಿಯಾಗಿರುವುದಿಲ್ಲ.

ಸಂ:ಗ್ರಾಕುನೀ&ನೈಇ 64 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1434

ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ (ಶೃಂಗೇರಿ)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಸೃಷ್ಟಿ ಯೋಜನೆಯಡಿ ಗರ್ಭಿಣಿ / ಬಾಣಂತಿ ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲು ಇದುವರೆವಿಗೂ ಮುಂಗಡವಾಗಿ ಹಣ ವಿತರಿಸದೇ ಹಾಗೂ ಇಲಾಖೆಯೂ ಸಹ ಸರಬರಾಜು ಮಾಡದೇ ನಿರ್ಲಕ್ಷ್ಯ ವಹಿಸುತ್ತಿದ್ದು, ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಕೈಯಿಂದ ಹಣ ನೀಡಿ ಮೊಟ್ಟೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಸೃಷ್ಟಿ ಯೋಜನೆಯಡಿ ಗರ್ಭಿಣಿ / ಬಾಣಂತಿ ಫಲಾನುಭವಿಗಳಿಗೆ ಮೊಟ್ಟೆ ವಿತರಿಸಲು ಮುಂಗಡವಾಗಿ ಹಣ ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಖಜಾನೆ-2 ತಂತ್ರಾಂಶಗಳ ಮೂಲಕ ಯೋಜನೆಯ ಅನುದಾನ ಬಿಡುಗಡೆಗೊಳಿಸಲಾಗುತ್ತಿದ್ದು, ಖಜಾನೆ-2ರಲ್ಲಿ ಮುಂಗಡ ಹಣ ಪಾವತಿಗೆ ಅವಕಾಶವಿರುವುದಿಲ್ಲ.
ಆ.	ಆಗಸ್ಟ್-2020 ರಿಂದ ಮೊಟ್ಟೆ ಬೆಲೆ ಹೆಚ್ಚಳವಾಗಿದ್ದು, ಸರ್ಕಾರ ಒಂದು ಮೊಟ್ಟೆಗೆ ರೂ.5/- ಮಾತ್ರ ನೀಡುತ್ತಿದ್ದು, ಬೆಲೆ ಹೆಚ್ಚಳಕ್ಕನುಗುಣವಾಗಿ ಮೊಟ್ಟೆ ದರವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಮೊಟ್ಟೆ ಖರೀದಿಸುವಲ್ಲಿ ಹೆಚ್ಚಾಗುವ ವ್ಯತ್ಯಾಸದ ಮೊತ್ತವನ್ನು ಜಿಲ್ಲಾ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲದಿಂದ ಭರಿಸಲು ಈಗಾಗಲೇ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
ಇ.	ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚುವರಿ ಹಣವನ್ನು ಕೈಯಿಂದ ನೀಡುತ್ತಿದ್ದು, 4 ತಿಂಗಳಿಗೊಮ್ಮೆ ಮೊಟ್ಟೆ ಹಣ ಬರುತ್ತಿರುವುದರಿಂದ ಶೀಘ್ರವಾಗಿ ಬಿಡುಗಡೆ ಮಾಡಲು ಇರುವ ತೊಡಕುಗಳೇನು:	ಖಜಾನೆ-2 ತಂತ್ರಾಂಶಗಳ ಮೂಲಕ ಯೋಜನೆಯ ಅನುದಾನ ಬಿಡುಗಡೆಗೊಳಿಸಲಾಗುತ್ತಿದ್ದು, ಖಜಾನೆ-2ರಲ್ಲಿ ಮುಂಗಡ ಹಣ ಪಾವತಿಗೆ ಅವಕಾಶವಿರುವುದಿಲ್ಲ. ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸುವ ಕೋಳಿಮೊಟ್ಟೆ ಖರೀದಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಅನುದಾನವನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗಳ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಮರು ಹಂಚಿಕೆಗೊಳಿಸಲಾಗುತ್ತಿದೆ. ಮರುಹಂಚಿಕೆಗೊಂಡ ಅನುದಾನದಲ್ಲಿ ಫಲಾನುಭವಿಗಳಿಗೆ ಮೊಟ್ಟೆ ಖರೀದಿಸಲು ಅಗತ್ಯವಿರುವ ಹಣವನ್ನು ಬಾಲವಿಕಾಸ ಸಮಿತಿಯ ಜಂಟಿ ಖಾತೆಗೆ ಜಮೆ ಮಾಡಿ ಸ್ಥಳೀಯವಾಗಿ ಮೊಟ್ಟೆ ಖರೀದಿಸಿ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.
ಈ.	ಯಾವ ಕಾಲಮಿತಿಯೊಳಗೆ ಈ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗುತ್ತದೆ?	ಅನ್ವಯಿಸುವುದಿಲ್ಲ

ಸಂಖ್ಯೆ: ಮಮಇ 77 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1443

ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.03.2021

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನಲ್ಲಿ ಕೋವಿಡ್-19ರ ಪರಿಣಾಮದಿಂದ ಹಾನಿಯಾದ ತೋಟಗಾರಿಕಾ ಬೆಳೆಗಳ ಪರಿಹಾರ ಮೊತ್ತವನ್ನು ಎಷ್ಟು ಜನ ರೈತರ ಖಾತೆಗೆ ಜಮೆ ಮಾಡಲಾಗಿದೆ; (ಬೆಳೆಗಳವಾರು ರೈತರ ಸಂಖ್ಯೆ ನೀಡುವುದು)</td><td>ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬೈಲಹೊಂಗಲ ಹಾಗೂ ಕಿತ್ತೂರು ತಾಲ್ಲೂಕಿನಲ್ಲಿ ಕೋವಿಡ್-19ರ ಪರಿಣಾಮದಿಂದ ಹಾನಿಯಾದ ತೋಟಗಾರಿಕಾ ಬೆಳೆಗಳ ಪರಿಹಾರ ಮೊತ್ತವನ್ನು ಜಮೆ ಮಾಡಲಾದ ವಿವರಗಳು ಈ ಕೆಳಕಂಡತೆ ಇರುತ್ತವೆ.
<table>
<tr><th rowspan="2">ಕ್ರ.ಸಂ.</th><th rowspan="2">ತಾಲ್ಲೂಕು</th><th colspan="2">ಬೆಳೆಗಳು</th><th rowspan="2">ಒಟ್ಟು</th></tr>
<tr><th>ತರಕಾರಿ (ಸಂಖ್ಯೆ)</th><th>ಹಣ್ಣು (ಸಂಖ್ಯೆ)</th></tr>
<tr><td>1</td><td>ಬೈಲಹೊಂಗಲ</td><td>1056</td><td>52</td><td>1108</td></tr>
<tr><td>2</td><td>ಕಿತ್ತೂರು</td><td>536</td><td>22</td><td>558</td></tr>
</table></td></tr>
<tr><td>ಆ)</td><td>ಬೆಳೆ ಪರಿಹಾರ ಜಮಾ ಆಗದೆಯಿರುವ ರೈತರ ಸಂಖ್ಯೆ ಎಷ್ಟು; (ಬೆಳೆಗಳವಾರು ರೈತರ ಸಂಖ್ಯೆ ನೀಡುವುದು)</td><td>ಎಲ್ಲಾ ಅರ್ಹ ಫಲಾನುಭವಿಗಳಿಗೆ ಬೆಳೆ ಪರಿಹಾರ ಜಮೆಮಾಡಲು ಕ್ರಮ ಕೈಗೊಳಲಾಗಿದೆ.</td></tr>
<tr><td>ಇ)</td><td>ಯಾವ ಕಾರಣದಿಂದ ಬಾಕಿ ಇರುವ ರೈತರಿಗೆ ಪರಿಹಾರ ಹಣ ಜಮೆಯಾಗಿರುವುದಿಲ್ಲ;</td><td rowspan="2">ಉದ್ಭವಿಸುವುದಿಲ್ಲ.</td></tr>
<tr><td>ಈ)</td><td>ಬಾಕಿ ಉಳಿದಿರುವ ರೈತರಿಗೆ ಪರಿಹಾರ ದೊರಕಿಸಲು ಸರ್ಕಾರ ಕೈಗೊಂಡ ಕ್ರಮವೇನು?</td></tr>
</table>

ಸಂಖ್ಯೆ: **HORTI 120 HGM 2021**

(ಆರ್. ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1444
ಸದಸ್ಯರ ಹೆಸರು	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ	10/03/2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿಗೆ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ ನಿರ್ಮಾಣಕ್ಕೆ ರೂ. 98.00 ಲಕ್ಷ ಬಿಡುಗಡೆಯಾಗಿರುವ ಅನುದಾನ ಬೇರೆ ಉದ್ದೇಶಕ್ಕಾಗಿ ಬದಲಾಯಿಸಿರುವುದು ನಿಜವೇ?	ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿಗೆ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ ನಿರ್ಮಾಣಕ್ಕೆ ರೂ.98.00 ಲಕ್ಷ ಅನುದಾನ ಬಿಡುಗಡೆ ಯಾಗಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ತಾಲ್ಲೂಕಿಗೆ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಬಿಡುಗಡೆಯಾಗಿರುವ ಅನುದಾನ ಬೇರೆ ಕಡೆ ಬದಲಾಯಿಸಿರುವುದು ಅನ್ಯಾಯವಲ್ಲವೇ?	ಉದ್ಭವಿಸುವುದಿಲ್ಲ.
ಇ)	ಸದರಿ ಅನುದಾನ ಬಿಡುಗಡೆ ಮಾಡಿ ಯಾವ ಕಾಲಮಿತಿಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: AGRI-ACT/32/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ. ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	1448
ಉತ್ತರ ದಿನಾಂಕ	:	10.03.2021

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ಕೆಂಪಟ್ಟಿ ಹಾಗೂ ಇತರೆ 4 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಯಭಾಗ ತಾಲ್ಲೂಕಿನ ಕೆಂಪಟ್ಟಿ ಹಾಗೂ ಇತರೆ 04 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿದೆ.
ಆ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭಿಸಿ ಯಾವ ಕಾಲ ಮಿತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಇಲ್ಲಿನ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುವುದು;	ಸದರಿ ಯೋಜನೆಗೆ ದಿನಾಂಕ:01.02.2017ರ SLSSC ಸಭೆಯಲ್ಲಿ 85LPCD ಸೇವಾ ಮಟ್ಟಕ್ಕೆ ಅನುಮೋದನೆ ನೀಡಲಾಗಿರುತ್ತದೆ. ಆದರೆ, ಪ್ರಸ್ತುತ ಯೋಜನಾ ವರದಿಯನ್ನು ಜೆ.ಜೆ.ಎಂ ಮಾರ್ಗಸೂಚಿಗಳನ್ವಯ 55LPCD ಸೇವಾ ಮಟ್ಟಕ್ಕೆ ಮಾರ್ಪಡಿಸಲಾಗುತ್ತಿದ್ದು, ಪ್ರಸ್ತಾವನೆಯ ಕಾಮಗಾರಿಗೆ ಅಂದಾಜು ಮೊತ್ತ ಸುಮಾರು ರೂ.21.46ಕೋಟಿಗಳಾಗುತ್ತಿದ್ದು, ಸದರಿ ಯೋಜನೆಯ ತಾಂತ್ರಿಕ ಮತ್ತು ಆರ್ಥಿಕ Feasibilityಯನ್ನು ಪರಿಶೀಲಿಸಿ, ಜಲಮೂಲದ ಸುಸ್ಥಿರತೆಯನ್ನು ಖಚಿತಪಡಿಸಿಕೊಂಡು ಅನುದಾನದ ಲಭ್ಯತೆಯ ಅನುಸಾರ ಮುಂದಿನ ಕ್ರಮಕೈಗೊಳ್ಳಲಾಗುವುದು.
ಇ)	ಈ ಪ್ರಸ್ತಾವನೆಯ ಕಾಮಗಾರಿಗೆ ತಗಲಬಹುದಾದ ಅಂದಾಜು ಮೊತ್ತವೆಷ್ಟು; ಈ ಕಾಮಗಾರಿಯನ್ನು ಪ್ರಸಕ್ತ ವರ್ಷದಲ್ಲಿಯೇ ಪೂರ್ಣಗೊಳಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	
ಈ)	ಇಲ್ಲಿವಾದಲ್ಲಿ, ಸರ್ಕಾರಕ್ಕಿರುವ ತೊಂದರೆಗಳೇನು ? (ಸಂಪೂರ್ಣ ವಿವರ ನೀಡುವುದು)	

ಸಂ:ಗ್ರಾಕುನೀ&ನೈಇ 65 ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1458
ಸದಸ್ಯರ ಹೆಸರು	ಶ್ರೀ ಅಜಯ್ ಧರ್ಮಸಿಂಗ್ ಡಾ॥ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ	10.03.2021

<table>
<tr><th>ಕ್ರಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ಎಷ್ಟು ಅಂತರದ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ಮಿಸಿದ ರಸ್ತೆ ಕಾಮಗಾರಿಗಳ ವಿವರ ಕೆಳಕಂಡಂತಿವೆ:
<table>
<tr><th>ಕ್ರಸ</th><th>ವರ್ಷ</th><th>ನಿರ್ಮಿಸಿದ ರಸ್ತೆಯ ಅಂತರ (ಕಿ.ಮೀ.ಗಳಲ್ಲಿ)</th></tr>
<tr><td>1</td><td>2017-18</td><td>444.06</td></tr>
<tr><td>2</td><td>2018-19</td><td>993.01</td></tr>
<tr><td>3</td><td>2019-20</td><td>1823.16</td></tr>
<tr><td colspan="2">ಒಟ್ಟು</td><td>3260.23</td></tr>
</table>
ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಸಿ.ಡಿ. ರೂಪದಲ್ಲಿ ನೀಡಿದೆ.</td></tr>
<tr><td>ಆ</td><td>ಯಾವ ಮಾರ್ಗಸೂಚಿಗಳನ್ವಯ ಸದರಿ ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗಿದೆ;</td><td>ವಿವಿಧ ಇಲಾಖೆಗಳಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ

ಅಂದಾಜು ಪಟ್ಟಿಗಳನ್ನು ನಿಯಮಾನುಸಾರ ಐ.ಆರ್.ಸಿ. ಮತ್ತಿತರ ತತ್ಸಮಾನ ತಾಂತ್ರಿಕ ನಿಬಂಧನೆಗಳಂತೆ ಪರಿಶೀಲನೆಗೆ ಒಳಪಡಿಸಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ.
ಕಾಮಗಾರಿಗಳನ್ನು ನಿರ್ವಹಿಸುವ ಸಮಯದಲ್ಲಿ 3ನೇ ಪಾರ್ಟಿ ತಪಾಸಣೆಗೆ ಒಳಪಡಿಸತಕ್ಕದೆಂಬ ನಿಬಂಧನೆಗಳು / ಮಾರ್ಗಸೂಚಿಗಳನ್ವಯ ಆಡಳಿತಾತ್ಮಕ ಅನುಮೋದನೆ ನೀಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.
</td></tr>
<tr><td>ಇ</td><td>ರಸ್ತೆ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ತಾರತಮ್ಯವೆಸಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಇಲ್ಲ</td></tr>
<tr><td>ಈ</td><td>ಹಾಗಿದ್ದಲ್ಲಿ, ಸದರಿ ತಾರತಮ್ಯ ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು?</td><td>ಉದ್ಭವಿಸುವುದಿಲ್ಲ</td></tr>
</table>

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/10:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1459
ಸದಸ್ಯರ ಹೆಸರು	ಶ್ರೀ ಅಜಯ್ ಧರ್ಮಸಿಂಗ್ ಡಾ॥ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ	10.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ.ಆರ್.ಐ.ಡಿ.ಎಲ್) ದ ಮೂಲಕ ಟೆಂಡರ್ ಕರೆಯದೆ ಎಷ್ಟು ಮೊತ್ತದ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು ಅವಕಾಶವಿದೆ;	ಆರ್ಥಿಕ ಇಲಾಖೆ ಅಧಿಸೂಚನೆ ಸಂಖ್ಯೆ: ಆಇ 541 ವೆಚ್ಚ-12/2019 ದಿನಾಂಕ 29.05.2018 ರ ಪ್ರಕಾರ 2019-20 ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆ.ಆರ್.ಐ.ಡಿ.ಎಲ್) ರೂ.2.00 ಕೋಟಿಗಳಿಗೆ ಮೀರದ ಕಾಮಗಾರಿಗಳನ್ನು ಟೆಂಡರ್ ಕರೆಯದೆ ಅನುಷ್ಠಾನ ಮಾಡಲು ಕೆ.ಟಿ.ಟಿ.ಪಿ. ಅಧಿನಿಯಮದ ಕಲಂ 4ಜಿ ರಡಿ ಅವಕಾಶ ನೀಡಲಾಗಿತ್ತು. ಆದರೆ ಸದರಿ ಅಧಿಸೂಚನೆಯ ಅವಧಿ 01.04.2020 ಕ್ಕೆ ಮುಗಿಸಿದ್ದು, ಕೆ.ಆರ್.ಐ.ಡಿ.ಎಲ್. ಮೂಲಕ ಟೆಂಡರ್ ಕರೆಯದೆ ಕಾಮಗಾರಿ ಮಾಡುವ ಅನುಮತಿ ಈಗ ಇರುವುದಿಲ್ಲ.
ಆ.	ಪ್ರಸ್ತುತ ಸದರಿ ನಿಗಮದ ಮೂಲಕ ಗರಿಷ್ಠ ಮಿತಿಯನ್ನು ಹೆಚ್ಚಿಸಲು ಸರ್ಕಾರ ಆಲೋಚಿಸಿದೆಯೇ;	ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ ನೀಡಿರುವ 4ಜಿ ವಿನಾಯಿತಿಯ ಗರಿಷ್ಠ ಮೊತ್ತವನ್ನು ರೂ.2.00 ಕೋಟಿಗಳಿಂದ ರೂ.5.00 ಕೋಟಿಯವರೆಗೆ ಹೆಚ್ಚಿಸುವಂತೆ ಕೆ.ಆರ್.ಐ.ಡಿ.ಎಲ್.ನಿಂದ ಮನವಿ ಸ್ವೀಕರಿಸಲಾಗಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಕೆ.ಅರ್.ಐ.ಡಿ.ಎಲ್.ಗೆ ನೀಡಿದ್ದ 4ಜಿ ವಿನಾಯಿತಿಗೆ ತಡೆಯಾಜ್ಞೆ ನೀಡಿರುವುದರಿಂದ ಪ್ರಸ್ತುತ ಪರ್ಯಾಯ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ.
ಇ.	ಹಾಗಿದ್ದಲ್ಲಿ, ಗರಿಷ್ಠ ಮಿತಿ ಹೆಚ್ಚಿಸಿದ್ದಲ್ಲಿ ಅದರಿಂದಾಗುವ ಸಾದಕ-ಬಾಧಕಗಳ ಕುರಿತಾಗಿ ಯಾವಯಾವ ಪರ್ಯಾಯ ಕ್ರಮಗಳನ್ನು ಜರುಗಿಸಲು ಆಲೋಚಿಸುತ್ತಿದೆ?	

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/10:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1457
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ .ಅಜಯ್ ಧರ್ಮ ಸಿಂಗ್ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ : 10-03-2021.
ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಜೇವರ್ಗಿ ವಿಧಾನಸಭಾ ಕ್ಷೇತ್ರದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ ವೃಂದ ಸೇರಿದಂತೆ ಲಿಪಿಕ ಸಿಬ್ಬಂದಿ ಹುದ್ದೆಗಳು ಹೋಬಳಿವಾರು ಸೇರಿದಂತೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ಖಾಲಿಯಿರುವ ಹುದ್ದೆಗಳಿಂದ ಇಲಾಖೆಯ ಕಾರ್ಯಕ್ರಮಗಳನ್ನು ಯಶಸ್ವಿ ಅನುಷ್ಠಾನಕ್ಕೆ ತರುವಲ್ಲಿ ತೊಂದರೆ ಯಾಗುತ್ತಿರುವುದನ್ನುಗಮನಿಸಿದೆಯೇ;	ಇಲಾಖೆಯ ಕಾರ್ಯಕ್ರಮಗಳನ್ನು ಯಶಸ್ವಿ ಅನುಷ್ಠಾನಕ್ಕೆ ತರುವಲ್ಲಿ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ.
ಇ)	ಹಾಗಿದ್ದಲ್ಲಿ, ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಪರ್ಯಾಯ ಕ್ರಮಗಳ ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕಾಲಮಿತಿಯಲ್ಲಿ ಕ್ರಮ ಜರುಗಿಸಲಾಗುವುದು; (ವಿವರ ನೀಡುವುದು)	ಲಭ್ಯವಿರುವ ಅಧಿಕಾರಿ/ಸಿಬ್ಬಂಧಿ ವರ್ಗದವರಿಂದ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ತೊಂದರೆ ಆಗದಂತೆ ಕ್ರಮ ವಹಿಸಲಾಗುತ್ತಿದೆ. ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: HORTI 122 HGM 2021

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1460

ಸದಸ್ಯರ ಹೆಸರು : ಡಾ॥ ಅಜಯ್ ಧರ್ಮಸಿಂಗ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಗ್ರಾಮೀಣ ಪ್ರದೇಶದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆಯೇ;	ಗ್ರಾಮೀಣ ಪ್ರದೇಶದ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಅನುಕೂಲಕ್ಕಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.
ಆ)	ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಬಸ್ ನಿಲ್ದಾಣಗಳಲ್ಲಿ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಪ್ರಸ್ತುತ ಪ್ರಮುಖ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಲಾಗಿರುತ್ತದೆ. ಇನ್ನುಳಿದ ಬಸ್ ನಿಲ್ದಾಣಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿರುತ್ತದೆ.
ಇ)	ಖಾಸಗಿ ಸಂಸ್ಥೆಗಳಿಂದ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಿದ್ದಲ್ಲಿ, ಸರ್ಕಾರವು ಮಂಜೂರಾತಿ ನೀಡಲು ಕ್ರಮಕೈಗೊಳ್ಳುವುದೇ;	ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಸಗಿ ಸಂಸ್ಥೆ / ಸ್ವಯಂಸೇವಾ ಸಂಸ್ಥೆಗಳಿಂದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಅನುಮತಿ ಕೋರಿದ ಪ್ರಕರಣಗಳಲ್ಲಿ ಷರತ್ತುಬದ್ಧ ಅನುಮತಿ ನೀಡಲಾಗುತ್ತಿದೆ.

ಸಂಖ್ಯೆ: ಟಿಡಿ 70 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1486
ಸದಸ್ಯರ ಹೆಸರು : ಶ್ರೀ.ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ : 10-03-2021
ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಳೆದ ಮೂರು ವರ್ಷಗಳಿಂದ ನಿಗದಿಪಡಿಸಿರುವ ಮೊತ್ತವೆಷ್ಟು;</td><td>ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಳೆದ ಮೂರು ವರ್ಷಗಳಿಂದ ನಿಗದಿಪಡಿಸಿರುವ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.
(ರೂ.ಕೋಟಿಗಳಲ್ಲಿ)
<table>
<tr><th>ಕ್ರಸಂ</th><th>ವರ್ಷ</th><th>ನಿಗದಿಪಡಿಸಿರುವ ಅನುದಾನ</th></tr>
<tr><td>1</td><td>2017-18</td><td>400.00</td></tr>
<tr><td>2</td><td>2018-19</td><td>400.00</td></tr>
<tr><td>3</td><td>2019-20</td><td>400.00</td></tr>
</table></td></tr>
<tr><td>ಆ)</td><td>ಪ್ರಸ್ತುತ ಸಾಲಿನಲ್ಲಿ ಒದಗಿಸಿರುವ ಹಣ ಎಷ್ಟು; ಹಣ ಕಡಿಮೆ ಆಗಲು ಕಾರಣಗಳೇನು?</td><td>ಪ್ರಸ್ತುತ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. ಆದರೆ ಬೆಂಗಳೂರು ಸೇರಿದಂತೆ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಅಧಿಸೂಚಿತವಲ್ಲದ ಅಲ್ಪಸಂಖ್ಯಾತರ ಕೊಳಗೇರಿ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶಕ್ಕಾಗಿ 2020-21ನೇ ಸಾಲಿನಲ್ಲಿ ರೂ.200.00ಕೋಟಿಗಳನ್ನು ಮೀಸಲಿಡಲಾಗಿದ್ದು, ಪರಿಷ್ಕೃತ ಆಯವ್ಯಯದಲ್ಲಿ ರೂ.48.00ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಕೋವಿಡ್-19ರ ಹಿನ್ನೆಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಹಣ ಕಡಿಮೆ ಮಾಡಲಾಗಿದೆ.</td></tr>
</table>

ಸಂಖ್ಯೆ:MWD 74 LMQ 2021

(ಶ್ರೀಮಂತ ಬಾಳಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1487
ಸದಸ್ಯರ ಹೆಸರು	: ಶ್ರೀ ಶಿವಲಿಂಗೇಗೌಡ ಕೆ.ಎಂ.
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಅರಸೀಕೆರೆ ನಗರದಲ್ಲಿರುವ ಬಸ್ ನಿಲ್ದಾಣವನ್ನು ವಿಸ್ತರಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ, ಯಾವಾಗ ವಿಸ್ತರಿಸಲಾಗುವುದು;	ಅರಸೀಕೆರೆ ನಗರದಲ್ಲಿನ ಬಸ್ ನಿಲ್ದಾಣವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.
ಆ)	ಬಸ್ ನಿಲ್ದಾಣ ವಿಸ್ತರಣೆಗಾಗಿ ಪಶುಸಂಗೋಪನೆ ಇಲಾಖೆಯ ಜಾಗವನ್ನು ಹಸ್ತಾಂತರ ಮಾಡಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ನಿಲ್ದಾಣ ವಿಸ್ತರಣೆ ಮಾಡದಿರಲು ಕಾರಣವೇನು?	ಬಸ್ ನಿಲ್ದಾಣ ವಿಸ್ತರಣೆಗಾಗಿ ಪಶುಸಂಗೋಪನೆ ಇಲಾಖೆಯಿಂದ 7537.0 ಚ.ಅಡಿ ವಿಸ್ತೀರ್ಣದ ಜಾಗವನ್ನು ದಿನಾಂಕ: 21.11.2019ರಲ್ಲಿ ನಿಗಮಕ್ಕೆ ನೋಂದಣಿ ಮಾಡಿಕೊಡಲಾಗಿದೆ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಪಿಡುಗಿನಿಂದಾಗಿ, ನಿಗಮದ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲವಾದ ಕಾರಣ, ಯಾವುದೇ ಹೊಸ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿಗಮದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ನಂತರ ಸಾರಿಗೆ ಅವಶ್ಯಕತೆ ಹಾಗೂ ನಿಗಮವು ಹೊರಡಿಸಿರುವ ಸುತ್ತೋಲೆ ಸಂಖ್ಯೆ:01/2015-16 ದಿನಾಂಕ:06-06-2015ರ ಪ್ರಕಾರ ಬಸ್ ನಿಲ್ದಾಣ ವಿಸ್ತರಣೆ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಟಿಡಿ 71 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ. ಶಿವಲಿಂಗೇಗೌಡ, ಕೆ.ಎಂ. (ಅರಸೀಕೆರೆ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	1490
ಉತ್ತರ ದಿನಾಂಕ	:	10.03.2021

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಅರಸೀಕೆರೆ ತಾಲ್ಲೂಕಿಗೆ ಯಗಚಿ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಗ್ರಾಮಗಳಿಗೆ ಜೆಜೆಎಂ ಯೋಜನೆಯಡಿ ಪ್ರತಿ ಮನೆಗೆ ಕೊಳವೆ ಅಳವಡಿಸುವ ರೂ.47 ಕೋಟಿಗಳ ಕಾಮಗಾರಿಗೆ ಮಂಜೂರಾತಿ ನೀಡಿದ್ದರೂ ಟೆಂಡರ್ ಪ್ರಕ್ರಿಯೆ ಆಗಿಲ್ಲದಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ ಟೆಂಡರ್ ಮಾಡದಿರಲು ಕಾರಣಗಳೇನು, ಯಾವಾಗ ಮಾಡಲಾಗುವುದು.	ಅರಸೀಕೆರೆ ತಾಲ್ಲೂಕಿನ 48 ಫ್ಲೋರೈಡ್ ಬಾಧಿತ ಹಳ್ಳಿಗಳು ಮತ್ತು ಇತರೆ 10 ಜನವಸತಿಗಳು & ಬೇಲೂರು ತಾಲ್ಲೂಕು ಮಾರ್ಗದ 12 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯು ರೂ.1883.53ಲಕ್ಷಗಳಿಗೆ 2008ರಲ್ಲಿ ಅನುಮೋದನೆಯಾಗಿರುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಆಹ್ವಾನಿಸಿ, ಗುತ್ತಿಗೆ ಆಧಾರದ ಮೇಲೆ ಶ್ರೀ.ಶ್ರೀನಿವಾಸ್ ಕನ್ಸಟ್ರಕ್ಷನ್ಸ್‌ರವರಿಗೆ ದಿನಾಂಕ:01.10.2008 ರಂದು ರೂ.25,70,48,598/- ಗಳಿಗೆ ವಹಿಸಿದ್ದು, ಟೆಂಡರ್ ಕಾಲಾವಧಿ 24 ತಿಂಗಳಿದ್ದು. ಸದರಿ ಕುಡಿಯುವ ನೀರು ಯೋಜನೆಯನ್ನು ದಿನಾಂಕ:23.10.2010 ರಂದು ಪೂರ್ಣಗೊಳಿಸಬೇಕಾಗಿರುತ್ತದೆ. ಆದರೆ ಗುತ್ತಿಗೆದಾರರು ನಿಗದಿತ ಟೆಂಡರ್ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾಗಿರುತ್ತಾರೆ. ಸದರಿ ಎಂ.ವಿ.ಎಸ್ ಯೋಜನೆಯು ಭೌತಿಕವಾಗಿ ಹಾಗೂ ಆರ್ಥಿಕವಾಗಿ ಪೂರ್ಣಗೊಂಡಿರುವುದಿಲ್ಲ. ದಿನಾಂಕ:03.03.2021ರಂದು ನಡೆದ DWSM ಸಭೆಯಲ್ಲಿ ಗುತ್ತಿಗೆ ಕರಾರನ್ನು ಗುತ್ತಿಗೆದಾರರ ಹೊಣೆಗಾರಿಕೆ ಮೇಲೆ ರದ್ದುಪಡಿಸಲು ತೀರ್ಮಾನಿಸಲಾಗಿರುತ್ತದೆ. ಅರಸೀಕೆರೆ ತಾಲ್ಲೂಕಿಗೆ ಯಗಚಿ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಗ್ರಾಮಗಳಿಗೆ ಜೆಜೆಎಂ ಯೋಜನೆಯಡಿ restoration ಹಾಗೂ augmentation ಒಳಗೊಂಡಂತೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವುದನ್ನು ಸೇರಿ ಒಟ್ಟು ರೂ.47.1985ಕೋಟಿಗಳಿಗೆ ದಿನಾಂಕ:03.08.2020ರಂದು ನಡೆದ SLSSC ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಜೆಜೆಎಂ ಯೋಜನೆಯಡಿಯಲ್ಲಿ ಈ ಯೋಜನೆಯ restoration ಹಾಗೂ augmentation ಒಳಗೊಂಡಂತೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಲು ವಿಸ್ತೃತ ಯೋಜನಾ ವರದಿಯು ತಯಾರಿಕಾ ಹಂತದಲ್ಲಿದ್ದು, ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತು, ತಾಂತ್ರಿಕ ಮಂಜೂರಾತಿ ದೊರೆತ ನಂತರ ಟೆಂಡರ್ ಆಹ್ವಾನಿಸಲಾಗುವುದು.

ಸಂ:ಗ್ರಾಕುನೀ&ನೈಇ 67 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1494
ಸದಸ್ಯರ ಹೆಸರು	: ಶ್ರೀ ಸುಬ್ಬಾರೆಡ್ಡಿ ಎಸ್.ಎನ್.
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನಲ್ಲಿ ಸಾರಿಗೆ ಇಲಾಖೆಯ ವಶಕ್ಕೆ ಜಮೀನನ್ನು ಪಡೆಯಲಾಗಿದೆಯೇ; ಹಾಗಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಜಮೀನನ್ನು ವಶಕ್ಕೆ ಪಡೆಯಲಾಗಿದೆ;	ಗುಡಿಬಂಡೆ ತಾಲ್ಲೂಕು ಕಸಬಾ ಹೋಬಳಿ ಪತ್ತೆಗಾರನಹಳ್ಳಿ ಗ್ರಾಮದ ಸರ್ವೆ ಸಂ.'17/ಬಿ1'ರಲ್ಲಿ 8 ಎಕರೆ 10 ಗುಂಟೆ ಹಾಗೂ ರೆಡ್ಡಿ ಹಳ್ಳಿ ಗ್ರಾಮದ ಸರ್ವೆ ಸಂ.134ರಲ್ಲಿ 1 ಎಕರೆ 30 ಗುಂಟೆ ಸೇರಿದಂತೆ ಒಟ್ಟು 10 ಎಕರೆ ಜಮೀನನ್ನು ಘಟಕ ನಿರ್ಮಿಸುವ ಉದ್ದೇಶಕ್ಕಾಗಿ ಕ.ರಾ.ರ.ಸಾ.ನಿಗಮದ ವಶಕ್ಕೆ ಪಡೆಯಲಾಗಿರುತ್ತದೆ.
ಆ)	ಈ ಜಮೀನನ್ನು ಯಾವ ದಿನಾಂಕದಂದು ಇಲಾಖೆಯ ವಶಕ್ಕೆ ಪಡೆಯಲಾಗಿದೆ;	ಸದರಿ ಜಮೀನನ್ನು ದಿನಾಂಕ: 10-04-2014ರಂದು ನಿಗಮದ ವಶಕ್ಕೆ ಪಡೆಯಲಾಗಿರುತ್ತದೆ.
ಇ)	ಈ ಜಮೀನಿನಲ್ಲಿ ಉದ್ದೇಶಿತ ಕಾಮಗಾರಿಯನ್ನು ಯಾವಾಗ ಎಷ್ಟು ವೆಚ್ಚದಲ್ಲಿ ಕೈಗೊಳ್ಳಲಾಗುವುದು; (ವಿವರ ನೀಡುವುದು)	ಪ್ರಸ್ತುತ ಗುಡಿಬಂಡೆ ತಾಲ್ಲೂಕಿಗೆ ಸಮೀಪದ ಬಾಗೇಪಲ್ಲಿ ಘಟಕ, ಗೌರಿಬಿದನೂರು ಘಟಕ ಮತ್ತು ಚಿಕ್ಕಬಳ್ಳಾಪುರ ಘಟಕಗಳಿಂದ ಗುಡಿಬಂಡೆ ತಾಲ್ಲೂಕಿನ ಸಾರಿಗೆ ಅವಶ್ಯಕತೆಗಳನ್ನು ಪೂರೈಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಗುಡಿಬಂಡೆಯಲ್ಲಿ ಘಟಕ ಸ್ಥಾಪಿಸುವ ಅವಶ್ಯಕತೆಗಳಿಗಾಗಿ ನಿವೇಶನವನ್ನು ಪಡೆಯಲಾಗಿರುತ್ತದೆ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಪಿಡುಗಿನಿಂದ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಯಾವುದೇ ನೂತನ ಬಸ್ ಘಟಕ ಮತ್ತು ಬಸ್ ನಿಲ್ದಾಣ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತುಂಬಾ ಕಷ್ಟಕರವಾಗಿದೆ. ಮುಂದಿನ ದಿನಗಳಲ್ಲಿ ನಿಗಮದ ಆರ್ಥಿಕ ಪರಿಸ್ಥಿತಿಯು ಸುಧಾರಿಸಿದ ನಂತರ ನಿಗಮವು ಬಸ್ ಘಟಕಗಳ ನಿರ್ಮಾಣಕ್ಕಾಗಿ ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16 ದಿನಾಂಕ:06-06-2015 ರ ಪ್ರಕಾರ, ಸಾರಿಗೆ ಅವಶ್ಯಕತೆ ಮತ್ತು ಆರ್ಥಿಕ ಲಭ್ಯತೆಯನ್ನು ಆಧರಿಸಿ ಬಸ್ ಘಟಕ ನಿರ್ಮಿಸುವ ಬಗ್ಗೆ ಕ್ರಮ ಜರುಗಿಸಲಾಗುವುದು.
ಈ)	ಗುಡಿಬಂಡೆ ತಾಲ್ಲೂಕಿನ ಈ ಜಮೀನಿನಲ್ಲಿ ಬಸ್ ಡಿಪೋ ಪ್ರಾರಂಭ ಮಾಡಲಾಗುವುದೇ ಅಥವಾ ಬೇರೆ ಯಾವುದಾದರೂ ಕಾಮಗಾರಿ, ಸಂಸ್ಥೆ ಪ್ರಾರಂಭಿಸಲಾಗುವುದೇ? (ವಿವರ ನೀಡುವುದು)	

ಸಂಖ್ಯೆ: ಟಿಡಿ 72 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1497
ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ.ಎಸ್.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ಹಾಸನ ಜಿಲ್ಲೆಯ ತಾಲ್ಲೂಕುಗಳಿಂದ ಹಾಗೂ ಗ್ರಾಮೀಣ ಪ್ರದೇಶಗಳಿಂದ ಪ್ರತಿದಿನ ಸಾವಿರಾರು ಹೆಣ್ಣುಮಕ್ಕಳು ಹಾಸನ ನಗರದಲ್ಲಿರುವ ಗಾರ್ಮೆಂಟ್ ಹಾಗೂ ಇತರೆ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸಲು ಬಂದು ಹೋಗುತ್ತಿದ್ದು, ಸಾರಿಗೆ ಬಸ್ ವ್ಯವಸ್ಥೆ ಇಲ್ಲದೆ ಟೆಂಪೋ, ಆಟೋರಿಕ್ಷಾ ಹಾಗೂ ಇತರೆ ವಾಹನಗಳಲ್ಲಿ ಸಂಚರಿಸುತ್ತಿದ್ದು, ಸಂಚಾರ ಸುರಕ್ಷತೆ ಇಲ್ಲದ ಕಾರಣ ಹೆಣ್ಣುಮಕ್ಕಳಿಗೆ ತೊಂದರೆಯಾಗುತ್ತಿರುವುದು ಹಾಗೂ ವಾಹನಗಳು ಅಪಘಾತಕ್ಕೀಡಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ನಗರವು ವಾಣಿಜ್ಯ ಕೇಂದ್ರವಾಗಿರುವುದರಿಂದ ಹಾಸನ ನಗರ ವ್ಯಾಪ್ತಿಯಲ್ಲಿ ಗಾರ್ಮೆಂಟ್ಸ್ ಮತ್ತು ಇತರೆ ಕಾರ್ಮಿಕರ ಅನುಕೂಲಕ್ಕಾಗಿ ಹಾಸನ ನಗರದ ದಾಸರಕೊಪ್ಪಲು-ಎಂ.ಸಿ.ಇ-ಸಾಲಗಾಮೆ ಗೇಟ್-ನಗರ ಸಾರಿಗೆ ಬಸ್ ನಿಲ್ದಾಣ-ಎನ್.ಆರ್.ವೃತ್ತ-ಹೊಸ ಬಸ್ ನಿಲ್ದಾಣ-ಚನ್ನಪಟ್ಟಣ-ಹೊಸಕೊಪ್ಪಲು-ಕೆ.ಐ.ಎ.ಡಿ.ಬಿ ಮಾರ್ಗದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಪ್ರಯಾಣಿಸುತ್ತಿರುವುದರಿಂದ 3 ಅನುಸೂಚಿಗಳಿಂದ 6 ಪ್ರತ್ಯೇಕ ಸುತ್ತುವಳಿಗಳು ಒಳಗೊಂಡಂತೆ ಹಾಸನ ನಗರದಲ್ಲಿ ಒಟ್ಟು 32 ಅನುಸೂಚಿಗಳಿಂದ 556 ಸುತ್ತುವಳಿಗಳ ನಗರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಅಲ್ಲದೆ ಹಾಸನ-ಹೊಳೆನರಸೀಪುರ ಮಾರ್ಗದಲ್ಲಿ ಕೆ.ಐ.ಎ.ಡಿ.ಬಿ ವೃತ್ತದ ಮಾರ್ಗವಾಗಿ ಪ್ರತಿ ನಿತ್ಯ 68 ಸುತ್ತುವಳಿಗಳನ್ನು ಕಾರ್ಯಾಚರಿಸಲಾಗುತ್ತಿದೆ. ಮುಂದುವರೆದು, ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ 934 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಸದರಿ ಸಾರಿಗೆಗಳ ಅನುಕೂಲವನ್ನು ಹಾಸನ ಜಿಲ್ಲೆ ಸುತ್ತಮುತ್ತಲಿನ ತಾಲ್ಲೂಕು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಹಾಸನ ನಗರಕ್ಕೆ ಬರುವ ಸಾರ್ವಜನಿಕ ಪ್ರಯಾಣಿಕರು, ವಿದ್ಯಾರ್ಥಿಗಳು, ನೌಕರರು ಹಾಗೂ ರೈತರು ಪಡೆದುಕೊಳ್ಳುತ್ತಿದ್ದು, ಇದು ಅವಶ್ಯಕತೆಗೆ ಅನುಗುಣವಾಗಿದೆ.
ಆ)	ಹಾಗಿದ್ದಲ್ಲಿ, ಪ್ರತಿದಿನ ಸಾವಿರಾರು ಹೆಣ್ಣುಮಕ್ಕಳಿಗೆ ಸೂಕ್ತ ಸಂಚಾರ ಸುರಕ್ಷತೆ ಇಲ್ಲದ ಕಾರಣ ಈಗಾಗಲೇ ತುಮಕೂರು ಜಿಲ್ಲಾ ಸಚಿವರು ಖಾಸಗಿ ಗಾರ್ಮೆಂಟ್/ಕಾರ್ಖಾನೆ ಮಾಲೀಕರು ಶೇ.50 ಹಾಗೂ ಸಾರಿಗೆ ಇಲಾಖೆ ರಿಯಾಯಿತಿ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮಾಡಲಾಗಿದ್ದು, ಅದೇ ರೀತಿ ಹಾಸನ ಜಿಲ್ಲೆಯ ತಾಲ್ಲೂಕು ಹಾಗೂ ಗ್ರಾಮೀಣ ಪ್ರದೇಶದಿಂದ ಗಾರ್ಮೆಂಟ್/ ಕಾರ್ಖಾನೆಗಳಿಗೆ ಬರುವಂತಹ ಹೆಣ್ಣುಮಕ್ಕಳಿಗೆ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸುವ ಬಗ್ಗೆ ಹಾಗೂ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದ ಕ್ರಮವೇನು; (ಸಂಪೂರ್ಣ ವಿವರ ನೀಡುವುದು)	ಕ.ರಾ.ರ.ಸಾ.ನಿಗಮವು ತುಮಕೂರು ಜಿಲ್ಲೆಯ ಖಾಸಗಿ ಗಾರ್ಮೆಂಟ್ / ಕಾರ್ಖಾನೆಗಳಿಗೆ ಬರುವಂತಹ ಹೆಣ್ಣುಮಕ್ಕಳಿಗೆ ರಿಯಾಯಿತಿ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮಾಡಿರುವುದಿಲ್ಲ.

ಸಂಖ್ಯೆ: ಟಿಡಿ 73 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1498
ಮಾನ್ಯ ಸದಸ್ಯರ ಹೆಸರು	: ಶ್ರೀ ಲಿಂಗೇಶ್ .ಕೆ.ಎಸ್. (ಬೇಲೂರು)
ಉತ್ತರಿಸುವವರು	: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು
ಉತ್ತರಿಸಬೇಕಾದ ದಿನಾಂಕ	: 10-03-2021.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಹಾಸನ ಜಿಲ್ಲೆಯಲ್ಲಿ ನಿರುದ್ಯೋಗಿ ಮಹಿಳೆಯರನ್ನು ಗುರುತಿಸಲಾಗಿದೆಯೇ;(ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ನಿರುದ್ಯೋಗಿಗಳನ್ನು ಗುರುತಿಸುವ ವಿಷಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.</td></tr>
<tr><td>ಆ</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಉದ್ಯೋಗಿನಿ ಯೋಜನೆಯ ಅಡಿಯಲ್ಲಿ ಹಾಸನ ಜಿಲ್ಲೆಯಲ್ಲಿ ಎಷ್ಟು ಮಹಿಳಾ ಫಲಾನುಭವಿಗಳನ್ನು ಪ್ರಸಕ್ತ ಸಾಲಿನಲ್ಲಿ ಆಯ್ಕೆ ಮಾಡಲಾಗಿದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಉದ್ಯೋಗಿನಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಆಯ್ಕೆ ಮಾಡಲಾದ ಮಹಿಳಾ ಫಲಾನುಭವಿಗಳ ಸಂಖ್ಯೆ ಈ ಕೆಳಗಿನಂತೆ ಇರುತ್ತದೆ.
<table>
<tr><th>ಕ್ರಸಂ</th><th>ವಿಧಾನಸಭಾ ಕ್ಷೇತ್ರ</th><th>ಆಯ್ಕೆಮಾಡಲಾದ ಮಹಿಳಾ ಫಲಾನುಭವಿಗಳ ಸಂಖ್ಯೆ</th></tr>
<tr><td>1</td><td>ಅರಸೀಕೆರೆ</td><td>5</td></tr>
<tr><td>2</td><td>ಅರಕಲಗೂಡು</td><td>5</td></tr>
<tr><td>3</td><td>ಬೇಲೂರು</td><td>5</td></tr>
<tr><td>4</td><td>ಚನ್ನರಾಯಪಟ್ಟಣ ಶ್ರವಣಬೆಳಗೊಳ</td><td>5</td></tr>
<tr><td>5</td><td>ಹಾಸನ</td><td>5</td></tr>
<tr><td>6</td><td>ಹೊಳೆನರಸೀಪುರ</td><td>5</td></tr>
<tr><td>7</td><td>ಸಕಲೇಶಪುರ</td><td>5</td></tr>
<tr><td></td><td>ಒಟ್ಟು</td><td>35</td></tr>
</table></td></tr>
<tr><td>ಇ</td><td>ಹಾಸನ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿ ಮಹಿಳೆಯರಿದ್ದು, ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಫಲಾನುಭವಿಗಳ ಸಂಖ್ಯೆ ಕಡಿಮೆ ಇದ್ದು, ಈ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಉದ್ಯೋಗಿನಿ ಯೋಜನೆಯಡಿ ಪ್ರಸಕ್ತ ಸಾಲಿಗೆ ಒದಗಿಸಿರುವ ಆಯವ್ಯಯದಿಂದ ಹಾಸನ ಜಿಲ್ಲೆಯಲ್ಲಿನ ಮಹಿಳಾ ಜನ ಸಂಖ್ಯೆಯನ್ನು ಆಧರಿಸಿ ಜಿಲ್ಲೆಗೆ ಭೌತಿಕ ಗುರಿ-35, ಆರ್ಥಿಕ ಗುರಿ-ರೂ.36,56,250/- ಗಳನ್ನು ನಿಗದಿಪಡಿಸಲಾಗಿದೆ.</td></tr>
<tr><td>ಈ</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉದ್ಯೋಗಿನಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಎಷ್ಟು ಮಹಿಳಾ ಫಲಾನುಭವಿಗಳನ್ನು ಪ್ರಸಕ್ತ ಸಾಲಿನಲ್ಲಿ ಆಯ್ಕೆ ಮಾಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಉದ್ಯೋಗಿನಿ ಯೋಜನೆಯಡಿ ಒಟ್ಟು ಭೌತಿಕ ಗುರಿ-1813 ಮತ್ತು ಆರ್ಥಿಕ ಗುರಿ- ರೂ.2000.00 ಲಕ್ಷಗಳನ್ನು ನೀಡಲಾಗಿದ್ದು, ವಿಧಾನಸಭಾ ಕ್ಷೇತ್ರವಾರು ಮಾನ್ಯ ಶಾಸಕರ ಅಧ್ಯಕ್ಷತೆಯ ಸಮಿತಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.</td></tr>
<tr><td>ಉ</td><td>ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿ ಮಹಿಳೆಯರಿದ್ದು ಪ್ರಸಕ್ತ ಸಾಲಿನಲ್ಲಿ ನಿಗದಿ ಪಡಿಸಿರುವ ಫಲಾನುಭವಿಗಳ ಸಂಖ್ಯೆ ಕಡಿಮೆ ಇದ್ದು, ಈ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>2020-21ನೇ ಸಾಲಿನಲ್ಲಿ ಉದ್ಯೋಗಿನಿ ಯೋಜನೆಯಡಿ ಒದಗಿಸಿರುವ ಆಯವ್ಯಯದಿಂದ ರಾಜ್ಯದ ಒಟ್ಟು ಮಹಿಳಾ ಜನ ಸಂಖ್ಯೆಯನ್ನು ಆಧರಿಸಿ ಭೌತಿಕ ಗುರಿ-1813 ಮತ್ತು ಆರ್ಥಿಕ ಗುರಿ- ರೂ.2000.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.</td></tr>
</table>

ಸಂಖ್ಯೆ: ಮಮಇ/28/ಮಲನಿ 2021

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1501
2)	ಸದಸ್ಯರ ಹೆಸರು	:	ಶ್ರೀ. ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)
3)	ಉತ್ತರಿಸಬೇಕಾದ ದಿನಾಂಕ	:	10.03.2021
4)	ಉತ್ತರಿಸುವವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ತುಮಕೂರು-ಚಿತ್ರದುರ್ಗ ರೈಲ್ವೆ ಮಾರ್ಗ ಮಂಜೂರಾತಿ ಯಾವ ಹಂತದಲ್ಲಿದೆ;	ತುಮಕೂರು-ಚಿತ್ರದುರ್ಗ ರೈಲ್ವೆ ಮಾರ್ಗ ಯೋಜನೆಯನ್ನು ರೈಲ್ವೆ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರವು ಶೇ.50 ರ ಅನುಪಾತದಲ್ಲಿ ವೆಚ್ಚ ಹಂಚಿಕೆಯೊಂದಿಗೆ ಹಾಗೂ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ತನ್ನ ವೆಚ್ಚದಲ್ಲಿ ಸ್ವಾಧೀನ ಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಮೂಲಕ ಯೋಜನೆಯನ್ನು ರಾಜ್ಯ ಸರ್ಕಾರವು ಕೈಗೆತ್ತಿಕೊಳ್ಳಲು ಮಂಜೂರಾತಿ ನೀಡಿದೆ.
ಆ	ಇದಕ್ಕೆ ತಗಲುವ ವೆಚ್ಚ ಎಷ್ಟು; ಭೂಸ್ವಾಧೀನವಾಗಿದೆಯೇ;	ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. 1801.00 ಕೋಟಿಗಳು.
ಇ	ಆಗಿಲ್ಲದಿದ್ದಲ್ಲಿ; ಯಾವಾಗ ಭೂಸ್ವಾಧೀನವಾಗುವುದು;	ಈ ಯೋಜನೆಗೆ ಒಟ್ಟು 2461.65 ಎಕರೆ ಜಮೀನಿನ ಅಗತ್ಯವಿದ್ದು, ಈ ಪೈಕಿ ಇದುವರೆಗೂ 130.03 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಉಳಿದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.
ಈ	ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು ಹಾಗೂ ಯಾವ ಕಾಲಮಿತಿಯಲ್ಲಿ ಅನುಷ್ಟಾನಗೊಳ್ಳುವುದು?	ಈ ಯೋಜನೆಯನ್ನು ವೆಚ್ಚ ಹಂಚಿಕೆ ಆಧಾರ ಮೇಲೆ ಕೈಗೆತ್ತಿಕೊಳ್ಳಲಾಗುತ್ತಿದ್ದು, ರೈಲ್ವೆ ಪಾಲು ರೂ. 900.50 ಕೋಟಿಗಳು ಹಾಗೂ ರಾಜ್ಯದ ಪಾಲು ರೂ. 900.50ಕೋಟಿಗಳಾಗಿದ್ದು, ಈ ಯೋಜನೆಯ ಕಾಮಗಾರಿಯನ್ನು ನೈರುತ್ಯ ರೈಲ್ವೆರವರಿಂದ ಮಾಡಲಾಗುತ್ತಿದ್ದು, ಕಾಲಮಿತಿಯನ್ನು ನಿಗಧಿಪಡಿಸಲಾಗಿಲ್ಲ.

ಸಂಖ್ಯೆ: ಮೂಅಇ 48 ರಾರಾಹೆ 2021/ಇ

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **1505**

ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಖಾಸಗಿ ಬಸ್‌ಗಳ ಸಂಖ್ಯೆ ಎಷ್ಟು; ಇತ್ತೀಚೆಗೆ ಖಾಸಗಿ ಬಸ್ ಮಾಲೀಕರು ತೀವ್ರ ಸಂಕಷ್ಟದಲ್ಲಿದ್ದು, ಇವರ ನೆರವಿಗೆ ಸರ್ಕಾರ ಯಾವ ರೀತಿ ಸ್ಪಂದಿಸಲಿದೆ? (ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ದಿನಾಂಕ:31-01-2021ರ ಅಂತ್ಯಕ್ಕೆ ಒಟ್ಟು 2,05,588 ಖಾಸಗಿ ಬಸ್‌ಗಳು ನೋಂದಣಿಯಾಗಿ ಚಾಲ್ತಿಯಲ್ಲಿವೆ. ತೀವ್ರ ಸಂಕಷ್ಟದಲ್ಲಿರುವ ಖಾಸಗಿ ಬಸ್ ಮಾಲೀಕರ ನೆರವಿಗಾಗಿ ಸರ್ಕಾರ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 09 ಟಿಡಿಆರ್ 2020, ದಿನಾಂಕ: 19-05-2020ರಲ್ಲಿ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ, ಕಲಂ 16(1)ರಂತೆ ರಾಜ್ಯದಲ್ಲಿ ನೋಂದಾಯಿಸಿರುವ ಎಲ್ಲಾ ಪ್ರಯಾಣಿಕ ಮತ್ತು ಸರಕು ಸಾರಿಗೆ ವಾಹನಗಳ ಮೋಟಾರು ವಾಹನ ತೆರಿಗೆಯನ್ನು ದಿನಾಂಕ:24-03-2020 ರಿಂದ 23-05-2020ರವೆಗೆ ಒಟ್ಟು 02 ತಿಂಗಳ ಅವಧಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. 2. ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 09 ಟಿಡಿಆರ್ (ಪಿ-1) 2020, ದಿನಾಂಕ:06-07-2020ರಲ್ಲಿ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ 4(1)ರ ನಿಯಮಗಳನ್ನು ಸಡಿಲಿಸಿ ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ ಅನ್ವಯಿಸುವಂತೆ ದಿನಾಂಕ:15-04-2020 ಮತ್ತು 15-05-2020 ರೊಳಗಾಗಿ ಪಾವತಿಸಿಬೇಕಾಗಿದ್ದ ತೆರಿಗೆಯನ್ನು ದಿನಾಂಕ:15-07-2020 ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ. 3. ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 09 ಟಿಡಿಆರ್ (ಪಿ-1) 2020, ದಿನಾಂಕ: 28-08-2020ರಲ್ಲಿ ಮೋಟಾರು ವಾಹನ ತೆರಿಗೆ ಕಾಯ್ದೆ 1957ರ ಕಲಂ 4(1)ರ ನಿಯಮಗಳನ್ನು ಸಡಿಲಿಸಿ ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ ಅನ್ವಯಿಸುವಂತೆ ದಿನಾಂಕ:15-08-2020 ಮತ್ತು 15-09-2020 ರೊಳಗಾಗಿ ಪಾವತಿಸಿಬೇಕಾಗಿದ್ದ ತೆರಿಗೆಯನ್ನು ದಿನಾಂಕ:30-09-2020 ರವರೆಗೆ ದಂಡರಹಿತವಾಗಿ ಪಾವತಿಸಲು ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಟಿಡಿ 34 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1506
ಸದಸ್ಯರ ಹೆಸರು	:	ಶ್ರೀ ಸತೀಶ್ ಎಲ್ ಜಾರಕಿಹೊಳಿ (ಯಮಕನಮರಡಿ)
ಉತ್ತರಿಸುವ ದಿನಾಂಕ	:	10-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ತಾಲ್ಲೂಕಿನ ಯಮಕನಮರಡಿ ಮತಕ್ಷೇತ್ರದ ಅಲತಗಾ ಲೇಬರ ಕ್ಯಾಂಪ್ ಕಾರ್ಮಿಕರಿಗೆ ಅಕ್ರಮ ಸಕ್ರಮ ಯೋಜನೆಯಡಿ 56 ಕುಟುಂಬಗಳಿಗೆ ಈಗಾಗಲೇ ಹಕ್ಕುಪತ್ರ ವಿತರಿಸಿದ್ದು, ಸದರಿ ಗ್ರಾಮದ ರಿ.ಸ.ನಂ.55ರಲ್ಲಿ ಕಂಗ್ರಾಳಿ ಗ್ರಾಮ ಪಂಚಾಯತಿಯಲ್ಲಿ ಫಲಾನುಭವಿಗಳ ಹೆಸರನ್ನು ದಾಖಲು ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ತಾಲೂಕಿನ ಯಮಕನಮರಡಿ ಮತಕ್ಷೇತ್ರದ ಅಲತಗಾ ಲೇಬರ್ ಕ್ಯಾಂಪ್ ಕಾರ್ಮಿಕರಿಗೆ ತಹಶೀಲ್ದಾರ್, ಬೆಳಗಾವಿ ಇವರು ರಿ.ಸ.ನಂ 55 ರಲ್ಲಿ ಒಟ್ಟು 52 ಫಲಾನುಭವಿಗಳ ಅರ್ಜಿಗಳನ್ನು ಸಕ್ರಮಗೊಳಿಸಿರುತ್ತಾರೆ.
(ಆ)	ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?	ಬೆಳಗಾವಿ ತಾಲೂಕಿನ ಕಂಗ್ರಾಳಿ ಖುರ್ದ ಗ್ರಾಮ ಪಂಚಾಯತಿಯವರು ತಹಶೀಲ್ದಾರ್, ಬೆಳಗಾವಿ ಇವರ ಕಛೇರಿಯಿಂದ ಫಲಾನುಭವಿಗಳಿಗೆ ಸಕ್ರಮಗೊಳಿಸಿದ ಬಗ್ಗೆ ವಿನ್ಯಾಸ ನಕ್ಷೆ ಮತ್ತು ಚೆಕ್ ಬಂಧಿ ವಿವರಗಳನ್ನು ಪಡೆದುಕೊಂಡು ನಂತರ ಕ್ರಮವಹಿಸಲು ದಿನಾಂಕ: 05-03-2019 ರಂದು ಗ್ರಾಮ ಪಂಚಾಯತಿ ಸಭೆಯಲ್ಲಿ ತೀರ್ಮಾನಿಸಿ ಠರಾವು ಪಾಸ್ ಮಾಡಿರುತ್ತಾರೆ.

ಸಂ. ಗ್ರಾಅಪ 99 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1508
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ(ಉಡುಪಿ)
ಉತ್ತರಿಸುವ ದಿನಾಂಕ	:	10-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	73ನೇ ತಿದ್ದುಪಡಿಯಂತೆ ಗ್ರಾಮ ಮಟ್ಟದಲ್ಲಿ ಸ್ಥಳೀಯ ಸರ್ಕಾರವು ಅಸ್ತಿತ್ವಕ್ಕೆ ಬಂದಿದ್ದು, ವಿವಿಧ ಇಲಾಖೆಗಳ ಯೋಜನೆಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪಂಚಾಯತ್‌ನಲ್ಲಿ ಸಿಬ್ಬಂದಿ ಮಾದರಿ ವ್ಯವಸ್ಥೆ ಕೆಲಸಕ್ಕೆ ತಕ್ಕಂತೆ ಮಂಜೂರಾತಿಯಾಗಿದೆಯೇ;	ವಿವಿಧ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು / ನೌಕರರುಗಳು ಜವಾಬ್ದಾರಿ ಹೊಂದಿರುತ್ತಾರೆ. ಗ್ರಾಮ ಪಂಚಾಯತಿಗಳು ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ ಉಸ್ತುವಾರಿ ಮತ್ತು ನಿಯಂತ್ರಣವನ್ನು ಹೊಂದಿರುತ್ತವೆ.
(ಇ)	ಮಂಜೂರಾತಿಯಾಗದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂ. ಗ್ರಾಅಪ 100 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1509
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸಬೇಕಾದ ದಿನಾಂಕ	:	10-03-2021.
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಅಲ್ಪಸಂಖ್ಯಾತ ಸಮುದಾಯದ ಪ್ರಾರ್ಥನಾ ಮಂದಿರಗಳಿಗೆ ಮೂಲಭೂತ ಸೌಕರ್ಯಕ್ಕೆ ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದಿಂದ ನೀಡಿದ ಅನುದಾನವೆಷ್ಟು; (2017-18, 2019-20, 2020-21 ನೇ ಸಾಲಿನ ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು)	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ (KMDC) ಅಲ್ಪಸಂಖ್ಯಾತ ಸಮುದಾಯದ ಪ್ರಾರ್ಥನಾ ಮಂದಿರಗಳಿಗೆ ಮೂಲಭೂತ ಸೌಕರ್ಯಕ್ಕಾಗಿ ಯಾವುದೇ ಅನುದಾನ ಬಿಡುಗಡೆ ಮಾಡುವ ಯೋಜನೆ ಇರುವುದಿಲ್ಲ.

ಸಂಖ್ಯೆ: **MWD 59 LMQ 2021**

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1513
ಸದಸ್ಯರ ಹೆಸರು : ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ನಿರುದ್ಯೋಗ ಯುವಕ-ಯುವತಿಯರಿಗಾಗಿ ಸರ್ಕಾರದಿಂದ ಉಚಿತ-ಲಘುವಾಹನ ತರಬೇತಿಯನ್ನು ನೀಡಲಾಗುತ್ತಿದೆಯೇ; (ಮಾಹಿತಿಯನ್ನು ನೀಡುವುದು).	ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಉಚಿತ-ಲಘುವಾಹನ ತರಬೇತಿಯನ್ನು ನೀಡಲಾಗುತ್ತಿದೆ. ಅಲ್ಲದೇ, ವಾ.ಕ.ರ.ಸಾ.ಸಂಸ್ಥೆಯು ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಯೋಜನೆಯಡಿ ಪರಿಶಿಷ್ಟ ಜಾತಿ/ಪಂಗಡದವರಿಗೆ ಲಘುವಾಹನ ತರಬೇತಿ ನೀಡುತ್ತಿದೆ.
ಆ)	ಹಾಗಿದ್ದಲ್ಲಿ, ಕಳೆದ 2019-20ನೇ ಸಾಲಿನಲ್ಲಿ ಒಟ್ಟು ಎಷ್ಟು ಜನ ನಿರುದ್ಯೋಗಿ ಯುವಕ-ಯುವತಿಯರು ಉಚಿತ ವಾಹನ ಚಾಲನಾ ತರಬೇತಿಯನ್ನು ಪಡೆದಿದ್ದಾರೆ;	2019-20ನೇ ಸಾಲಿನಲ್ಲಿ ಯುವಕ-ಯುವತಿಯರಿಗೆ ನೀಡಿರುವ ಉಚಿತ ಲಘುವಾಹನ ಚಾಲನಾ ತರಬೇತಿಯ ನಿಗಮವಾರು ಮಾಹಿತಿ ಈ ಕೆಳಕಂಡಂತಿದೆ: ಸಂಸ್ಥೆ — ತರಬೇತಿ ಪಡೆದವರ ಸಂಖ್ಯೆ ಕ.ರಾ.ರ.ಸಾ.ನಿಗಮ — 645 ಬೆಂ.ಮ.ಸಾ.ಸಂಸ್ಥೆ — 1751 ವಾ.ಕ.ರ.ಸಾ.ಸಂಸ್ಥೆ — 77 ಈ.ಕ.ರ.ಸಾ.ಸಂಸ್ಥೆ — 318 ಒಟ್ಟು — **2791**
ಇ)	ತರಬೇತಿಯನ್ನು ಪಡೆಯಲು ಅಗತ್ಯವಿರುವ ಅರ್ಹತೆಗಳೇನು?	ತರಬೇತಿಯನ್ನು ಪಡೆಯಲು ಅಗತ್ಯವಿರುವ ಅರ್ಹತೆಗಳು ಈ ಕೆಳಕಂಡಂತೆ ಇರುತ್ತವೆ: ➢ ಜನ್ಮ ದಿನಾಂಕದ ದೃಢೀಕರಣ ಪತ್ರ ಸಲ್ಲಿಸಬೇಕು. ➢ ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 18 ವರ್ಷ ಆಗಿರಬೇಕು ಹಾಗೂ ಗರಿಷ್ಠ 35 ವರ್ಷ ಮೀರಿರಬಾರದು. ➢ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಹಾಗೂ ಆಧಾರ್ ಕಾರ್ಡ್ ಹೊಂದಿರಬೇಕು. ➢ ಪಾಸ್‌ಪೋರ್ಟ್ ಅಳತೆಯ ಫೋಟೋ ಸಲ್ಲಿಸಬೇಕು. ➢ ವಿಳಾಸ, ಗುರುತು, ಹುಟ್ಟಿದ ದಿನಾಂಕದ ದೃಢೀಕರಣ ಪತ್ರ

ಸಂಖ್ಯೆ: ಟಿಡಿ 92 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1518

ಸದಸ್ಯರ ಹೆಸರು : ಶ್ರೀ ವೀರಭದ್ರಯ್ಯ ಎಂ.ವಿ (ಮಧುಗಿರಿ)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ	ಮಧುಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲದೇ ಕಡಿಮೆ ವಿಸ್ತೀರ್ಣದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ.	ಬಂದಿದ್ದಲ್ಲಿ, ಸ್ವಂತ ಕಟ್ಟಡ ನಿರ್ಮಾಣ ಮಾಡಲು ಯಾವಾಗ ಅನುದಾನ ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು).	ಮಧುಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 428 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಈ ಪೈಕಿ 326 ಸ್ವಂತ ಕಟ್ಟಡಗಳಲ್ಲಿ, 66 ಬಾಡಿಗೆ ಕಟ್ಟಡಗಳಲ್ಲಿ, 11 ಶಾಲಾ ಕಟ್ಟಡಗಳಲ್ಲಿ, 20 ಸಮುದಾಯ ಭವನಗಳಲ್ಲಿ ಹಾಗೂ 5 ಪರ್ಯಾಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿವೆ. 2020-21ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ನರೇಗಾ ಒಗ್ಗೂಡಿಸುವಿಕೆ ಹಾಗೂ ಎಸ್.ಡಿ.ಪಿ ಯೋಜನೆಯಡಿ ಒಟ್ಟು 06 ಕಟ್ಟಡಗಳಿಗೆ ಅನುದಾನ ಬಿಡುಗಡೆಯಾಗಿರುತ್ತದೆ.

ಯೋಜನೆ	ಗ್ರಾಮದ ಹೆಸರು	ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ)
ನರೇಗಾ	ಪೂಜಾರಹಳ್ಳಿ	5.00
ಎಸ್.ಡಿ.ಪಿ	ಗಿರಿಯ್ಯನಪಾಳ್ಯ	5.00
	ಲಿಂಗಸಂದ್ರ	5.00
	ಹೊಸಕೆರೆ-1	5.00
	ಬ್ಯೆರಾಪುರ ತಾಂಡ	5.00
	ಜಾಲಿಹಳ್ಳಿ	5.00

ಅನುದಾನ ಮತ್ತು ನಿವೇಶನ ಲಭ್ಯತೆಗನುಣವಾಗಿ ಅಂಗನವಾಡಿ ಕಟ್ಟಡಗಳನ್ನು ಹಂತ ಹಂತವಾಗಿ ನಿರ್ಮಿಸಲು ಕ್ರಮವಹಿಸಲಾಗುವುದು.

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಸಂ: ಮಮಇ 86 ಐಸಿಡಿ 2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1524
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ)	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಚಾಲನಾ ಸಿಬ್ಬಂದಿಗಳಿಗೆ ಓವರ್ ಟೈಮ್ ಕರ್ತವ್ಯಕ್ಕೆ ನಿಗಧಿಪಡಿಸಿದ್ದ ಗೌರವ ಧನವನ್ನು ಸ್ಥಗಿತಗೊಳಿಸಿದ್ದು ಗ್ರಾಮೀಣ ವಿಭಾಗದ ಬಸ್ಸುಗಳ ಸಂಚಾರ ಸಿಬ್ಬಂದಿಗಳ ಕೊರತೆಯಿಂದ ಬಸ್ಸುಗಳ ಸಂಚಾರ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಕೋವಿಡ್-19 ಸೋಂಕು ಹಿನ್ನೆಲೆಯಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಕಡಿಮೆ ಇದ್ದುದರಿಂದ ಲಾಕ್‌ಡೌನ್ ಪೂರ್ವದಲ್ಲಿದ್ದ ಎಲ್ಲಾ ಸಾರಿಗೆಗಳನ್ನು ಕಾರ್ಯಾಚರಣೆ ಮಾಡದೆ ಇದ್ದು ಹಾಗೂ ಘಟಕಗಳಲ್ಲಿ ಎಲ್ಲಾ ಚಾಲಕ ಮತ್ತು ನಿರ್ವಾಹಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡಲ್ಲಿ, ಡ್ಯೂಟಿ ನೀಡುವುದು ಕಷ್ಟಕರವಾಗಿದ್ದರಿಂದ ಮತ್ತು ನಿಗಮದ ಆರ್ಥಿಕ ಸ್ಥಿತಿ ಕ್ಲಿಷ್ಟಕರವಾಗಿದ್ದರಿಂದ ಪ್ರತಿ 6 ಗಂಟೆಗಳ ಅನುಸೂಚಿ ಹೆಚ್ಚುವರಿ ಭತ್ಯೆ (SOT) ಗೆ ಒಂದು ದಿನದ ಸಂಬಳ ಸಹಿತ ಹಾಜರಾತಿ ನೀಡಲಾಗುತ್ತಿತ್ತು. ದಿನಾಂಕ 01.03.2021 ರಿಂದ ಜಾರಿಗೆ ಬರುವಂತೆ ಒಂದು ದಿನದ ಸಂಬಳ ಸಹಿತ ಹಾಜರಾತಿ ನೀಡುತ್ತಿರುವ ಪದ್ಧತಿಯನ್ನು ಕೈಬಿಟ್ಟು, ಅನುಸೂಚಿ ಹೆಚ್ಚುವರಿ ಭತ್ಯೆ (SOT) ನೀಡಲು ಕ್ರಮ ಕೈಗೊಳ್ಳಲಾಗಿದೆ.
ಆ)	ಹಾಗಿದ್ದಲ್ಲಿ, ಶಾಲಾ ಕಾಲೇಜುಗಳಿಗೆ ಸಂಚರಿಸುವ ವಿದ್ಯಾರ್ಥಿಗಳಿಗೆ, ಆಸ್ಪತ್ರೆಗೆ ತೆರಳುವ ರೋಗಿಗಳಿಗೆ, ವಯೋ ವೃದ್ಧರಿಗೆ ತೀರಾ ಅನಾನುಕೂಲವಾಗುತ್ತಿರುವುದ ು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈಗಾಗಲೇ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಾಲೇಜು ಮಾರ್ಗಗಳಲ್ಲಿ ಸಾಮಾನ್ಯ/ವೇಗದೂತ ಸೇವೆಗಳನ್ನು ಪ್ರಾರಂಭಿಸಲಾಗಿರುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಅವಶ್ಯಕತೆ ಅನುಗುಣವಾಗಿ ಬೇಡಿಕೆ ಅನುಸಾರ ಸಾರಿಗೆಗಳನ್ನು ಪ್ರಾರಂಭಿಸಲಾಗುತ್ತಿದೆ.
ಇ)	ಬಂದಿದ್ದಲ್ಲಿ, ಯಾವಾಗ ಗೌರವ ಧನ ನೀಡಲಾಗುವುದು?	ದಿನಾಂಕ: 01.03.2021ರಿಂದ ಜಾರಿಗೆ ಬರುವಂತೆ ಅನುಸೂಚಿ ಹೆಚ್ಚುವರಿ ಭತ್ಯೆ (SOT) ನೀಡಲು ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ಟಿಡಿ 74 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **1581**

ಸದಸ್ಯರ ಹೆಸರು : ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಗಂಗಾವತಿ ನಗರದಲ್ಲಿ ಈ ಹಿಂದೆ ಇದ್ದ ಸಹಾಯಕ ಪ್ರಾದೇಶಿಕ ಸಾರಿಗೆ (ಎ.ಆರ್.ಟಿ.ಓ.) ಕಛೇರಿ 1998 ರಲ್ಲಿ ರದ್ದು ಪಡಿಸಿದ ಪರಿಣಾಮ ಸಾರ್ವಜನಿಕರು ವಾಹನ ನೋಂದಣಿಗಾಗಿ ಕೊಪ್ಪಳಕ್ಕೆ ಹೋಗ ಬೇಕಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಂಗಾವತಿ ನಗರದಲ್ಲಿ ಈ ಹಿಂದೆ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯು ಕಾರ್ಯ ನಿರ್ವಹಿಸುತ್ತಿದ್ದು ಕೊಪ್ಪಳ ಜಿಲ್ಲೆಯಾದ ನಂತರ ಸದರಿ ಕಛೇರಿಯನ್ನು ಉನ್ನತೀಕರಿಸಿ ಕೊಪ್ಪಳಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಗಂಗಾವತಿ ನಗರದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಯಾವುದೇ ತೊಂದರೆ ಆಗದಂತೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗಾಗಿ ಪ್ರತಿ ಮಾಹೆಯ ಮೊದಲನೆಯ, ಎರಡನೆಯ ಮತ್ತು ನಾಲ್ಕನೆಯ ಬುಧವಾರಗಳಂದು ಶಿಬಿರವನ್ನು ನಡೆಸಲಾಗುತ್ತಿದೆ.
(ಆ)	ಬಂದಿದ್ದಲ್ಲಿ, ಗಂಗಾವತಿ ನಗರದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ (ಎ.ಆರ್.ಟಿ.ಓ.) ಕಛೇರಿ ನಿರ್ಮಾಣ ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ;	ಗಂಗಾವತಿ ನಗರದಲ್ಲಿ ಸಾರಿಗೆ ಕಛೇರಿಯನ್ನು ಪುನಃ ಪ್ರಾರಂಭಿಸುವ ಕುರಿತಂತೆ ನಿಗಧಿಪಡಿಸಿರುವ ಮಾನದಂಡಗಳ ಪ್ರಕಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ನೀಡುವಂತೆ ಸಾರಿಗೆ ಆಯುಕ್ತರು ದಿನಾಂಕ:27-03-2020, 30-05-2020 ಮತ್ತು 01-03-2020 ರ ಪತ್ರಗಳಲ್ಲಿ ಜಂಟಿ ಸಾರಿಗೆ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ ಇವರಿಂದ ವರದಿಯನ್ನು ಕೋರಲಾಗಿದ್ದು, ವರದಿ ಸ್ವೀಕರಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು.
(ಇ)	ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು;	
(ಈ)	ಪ್ರಸ್ತುತ ಯಾವ ಹಂತದಲ್ಲಿದೆ?	

ಟಿಡಿ 35 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1588
ಸದಸ್ಯರ ಹೆಸರು : ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್. (ಪುಲಕೇಶಿ ನಗರ)
ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಆಟೋ ಮತ್ತು ಟ್ಯಾಕ್ಸಿ ಚಾಲಕರುಗಳ ಅನುಕೂಲಕ್ಕಾಗಿ ಕಲ್ಯಾಣ ಮಂಡಳಿಯನ್ನು ರಚಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಇದೆಯೇ;	ಕಾರ್ಮಿಕ ಇಲಾಖೆಯಿಂದ ಆಟೋ ಟ್ಯಾಕ್ಸಿ ಹಾಗೂ ಖಾಸಗಿ ವಾಣಿಜ್ಯ ಸಾರಿಗೆ ಚಾಲಕರು, ನಿರ್ವಾಹಕರು, ಕ್ಲೀನರ್‌ಗಳು, ಮೆಕ್ಯಾನಿಕ್ಸ್, ಆಟೋ ಮೊಬೈಲ್ ವರ್ಕರ್ಸ್, ಪಂಚರ್ ಶಾಪ್ ವರ್ಕರ್ಸ್, ಸ್ಟೇಷನ್ ಸಿಬ್ಬಂದಿಗಳು, ಬುಕಿಂಗ್ ಕ್ಲರ್ಕ್ ಹಾಗೂ ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಸದುದ್ದೇಶದಿಂದ, "ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಮತ್ತು ಇತರೆ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ವಿಧೇಯಕ-2020" ರ ಕರಡನ್ನು ರೂಪಿಸಲಾಗಿದ್ದು, ಸರ್ಕಾರದ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿರುತ್ತದೆ.
ಆ	ಇದ್ದಲ್ಲಿ, ಸದರಿ ಕಲ್ಯಾಣ ಮಂಡಳಿಯನ್ನು ಅಸಂಘಟಿತ ಚಾಲಕರ ವರ್ಗದವರ ಶ್ರೇಯೋಭಿವೃದ್ಧಿಗಾಗಿ ಹಾಗೂ ಆರ್ಥಿಕವಾಗಿ ಸದೃಢರಾಗಲು, 2021-2022ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ, ಅನುದಾನವನ್ನು ಕಾಯ್ದಿರಿಸಲಾಗುವುದೇ; (ಮಾಹಿತಿಯನ್ನು ನೀಡುವುದು)	ಸದರಿ ವಿಧೇಯಕದಲ್ಲಿ ಕಲ್ಯಾಣ ಸೆಸ್ ಅನ್ನು ಸಂಗ್ರಹಿಸುವುದು ಹಾಗೂ ನಿಧಿ ಸ್ಥಾಪಿಸುವ ಪ್ರಾವಧಾನಗಳನ್ನು ರೂಪಿಸಲಾಗಿದ್ದು, ಸದರಿ ನಿಧಿಯ ಮೂಲಕ ಸಂಗ್ರಹವಾದ ಮೊತ್ತವನ್ನು ಬಳಸಿಕೊಂಡು ಫಲಾನುಭವಿಗಳಿಗೆ ಯೋಜನೆ / ಸೌಲಭ್ಯಗಳನ್ನು ರೂಪಿಸಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ.
ಇ)	ಕರ್ನಾಟಕ ಗೃಹ ಮಂಡಳಿ ಹಾಗೂ ಬಿ.ಡಿ.ಎ. ವತಿಯಿಂದ "ಸರ್ವರಿಗೂ ಸೂರು" ಎಂಬ ಸರ್ಕಾರದ ಧ್ಯೇಯವನ್ನು ಮತ್ತು "ಸಾರಥಿ ಸೂರು" ಎಂಬ ಸರ್ಕಾರದ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆಯೇ;	"ಸರ್ವರಿಗೂ ಸೂರು" ಎಂಬ ಸರ್ಕಾರದ ಧ್ಯೇಯವನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ ಕೇಂದ್ರ ಪುರಸ್ಕೃತ ಸರ್ವರಿಗೂ ಸೂರು - ಪ್ರಧಾನ ಮಂತ್ರಿ ಅವಾಸ್ ಯೋಜನೆ (ನಗರ) ಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ಬಿ.ಡಿ.ಎ. ವತಿಯಿಂದ ಈ ಬಗ್ಗೆ ಯೋಜನೆ ಕೈಗೆತ್ತಿಕೊಂಡಿರುವುದಿಲ್ಲ.
ಈ)	ಸದರಿ ಯೋಜನೆಯಲ್ಲಿ ಎಷ್ಟು ಜನರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ? (ವಿವರ ನೀಡುವುದು)	ವಸತಿ ಇಲಾಖೆಯಿಂದ "ಸರ್ವರಿಗೂ ಸೂರು" (ಹೌಸಿಂಗ್ ಫಾರ್ ಆಲ್) ಯೋಜನೆಯಡಿ ಇವರಿಗೆ 579918 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಟಿಡಿ 36 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1590
ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು)
ಉತ್ತರಿಸುವ ದಿನಾಂಕ : 10-03-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಹುಣಸೂರು ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿಗಳಲ್ಲಿ ಕೆಲವು ಕಟ್ಟಡಗಳು ಅತ್ಯಂತ ಶಿಥಿಲಾವಸ್ಥೆಯಲ್ಲಿದ್ದು, ಸಿಬ್ಬಂದಿಗಳು ಕೆಲಸ ನಿರ್ವಹಿಸಲು ಸಾಧ್ಯವಾಗದೆ ಭಯದಿಂದ ದಿನದೂಡುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಹಾಗಿದ್ದಲ್ಲಿ, ಸದರಿ ಕ್ಷೇತ್ರದಲ್ಲಿ ಎಷ್ಟು ಪಂಚಾಯತಿ ಕಟ್ಟಡಗಳು ತೀರ ಶಿಥಿಲಾವಸ್ಥೆಯಲ್ಲಿವೆ; (ವಿವರ ನೀಡುವುದು)	ಹುಣಸೂರು ತಾಲ್ಲೂಕಿನ 41 ಗ್ರಾಮ ಪಂಚಾಯತಿಯ ಪೈಕಿ 29 ಗ್ರಾಮ ಪಂಚಾಯತಿಗಳ ಕಟ್ಟಡವು ಹೊಸ ಕಟ್ಟಡ ಸುಸ್ಥಿತಿಯಲ್ಲಿದ್ದು, 7 ಗ್ರಾಮ ಪಂಚಾಯತಿ ಕಟ್ಟಡಗಳು ಪ್ರಗತಿ ಹಂತದಲ್ಲಿದ್ದು, 4 ಗ್ರಾಮ ಪಂಚಾಯತಿಗಳಲ್ಲಿ ಸ್ಥಳದ ಕೊರತೆಯಿಂದ ಕಾಮಗಾರಿ ಇನ್ನು ಪ್ರಾರಂಭಗೊಂಡಿರುವುದಿಲ್ಲ. ಬೇರೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿವೆ.
(ಇ)	ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ದುರಸ್ಥಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?	ಗ್ರಾಮ ಪಂಚಾಯತಿಯ ಸ್ಥಳೀಯ ಸಂಪನ್ಮೂಲದ ವರ್ಗ-2 ರ ಮೊತ್ತದಲ್ಲಿ ಮತ್ತು 14ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಗ್ರಾಮ ಪಂಚಾಯತಿ ಹಂತದಲ್ಲಿಯೇ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಸಣ್ಣಪುಟ್ಟ ಪ್ರಮಾಣದಲ್ಲಿ ದುರಸ್ಥಿ ಮಾಡಿಕೊಳ್ಳಲಾಗಿದೆ.
(ಈ)	ಕಟ್ಟಡ ದುರಸ್ಥಿಗೆ/ಹೊಸ ಕಟ್ಟಡಗಳಿಗೆ ಸರ್ಕಾರ ಅನುದಾನ ಮಂಜೂರು ಮಾಡಿದೆಯೇ; ಮಾಡಿದ್ದಲ್ಲಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆಯ? (ವಿವರ ನೀಡುವುದು)	ಕಟ್ಟಡ ದುರಸ್ಥಿಗೆ / ಹೊಸ ಕಟ್ಟಡಗಳಿಗೆ ಸರ್ಕಾರ ಅನುದಾನ ಮಂಜೂರು ಮಾಡಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ.26.00 ಲಕ್ಷಗಳು, 15ನೇ ಹಣಕಾಸು ಆಯೋಗದ ಅನುದಾನದಡಿ ರೂ.2.00 ಲಕ್ಷಗಳು, ಸರ್ಕಾರದಿಂದ ಬಿಡುಗಡೆ ಹಣ ರೂ.20.00 ಲಕ್ಷಗಳು ಸೇರಿದಂತೆ ಒಟ್ಟು ರೂ.48.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಸಂ. ಗ್ರಾಅಪ 101 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.
ಕೆ.ಎಸ್. ಈಶ್ವರಪ್ಪ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1594
ಸದಸ್ಯರ ಹೆಸರು	ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ (ಕೊಪ್ಪಳ)
ಉತ್ತರಿಸಬೇಕಾದ ದಿನಾಂಕ	10.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಕೊಪ್ಪಳ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಭಾಗದ ರಸ್ತೆಗಳು ತುಂಬಾ ಹದೆಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ.	ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಆಯಾ ಆರ್ಥಿಕ ವರ್ಷದಲ್ಲಿ ಇಲಾಖೆಗೆ ವಿವಿಧ ಯೋಜನೆಗಳಲ್ಲಿ ಹಂಚಿಕೆಯಾಗಿ ಲಭ್ಯಗೊಳ್ಳುವ ಅನುದಾನದ ಮಿತಿಯಲ್ಲಿ ಹದಗೆಟ್ಟ ರಸ್ತೆಗಳನ್ನು ಆದ್ಯತೆ ಪಟ್ಟಿ ಅನುಸಾರ ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಕ್ರಮ ವಹಿಸಿದೆ.
ಇ.	ಪ್ರಸಕ್ತ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಸದರಿ ರಸ್ತೆಗಳ ಅಭಿವೃದ್ಧಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;	ಪ್ರಸಕ್ತ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, ರಸ್ತೆಗಳ ಅಭಿವೃದ್ಧಿಗೆ ರೂ.1689.68 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವಿವರ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

ಕ್ರಸ	ವರ್ಷ	ಯೋಜನೆ/ಲೆಶೀ	ಬಿಡುಗಡೆ
1	2020-21	3054	71.92
2		ನಮ್ಮ ಗ್ರಾಮ ನಮ್ಮ ರಸ್ತೆ	25.65
3		ಪಿ.ಎ.ಜಿ.ಎಸ್.ವೈ.-3	1445.11
4		ನಬಾರ್ಡ್	147.00
ಒಟ್ಟು			1689.68

ಕ್ರಸಂ	ಪ್ರಶ್ನೆಗಳು	ಉತ್ತರ
ಈ.	ಕೊಪ್ಪಳ ವಿಧಾನಸಭಾ ಕ್ಷೇತ್ರಕ್ಕೆ ಕಳೆದ 2 ವರ್ಷಗಳಿಂದ 3054 ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಎಷ್ಟು?	ಕೊಪ್ಪಳ ವಿಧಾನಸಭಾ ಕ್ಷೇತ್ರಕ್ಕೆ ಕಳೆದ 2 ವರ್ಷಗಳಿಂದ ಲೆಕ್ಕ ಶೀರ್ಷಿಕೆ: 3054-ಸಿ.ಎಂ.ಜಿ.ಎಸ್.ವೈ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಅನುದಾನ ವಿವರ ಕೆಳಕಂಡಂತಿದೆ.

ಕ್ರಸ	ವರ್ಷ	ಅನುದಾನ (ರೂ.ಲಕ್ಷಗಳಲ್ಲಿ)
1	2019-20	67.07
2	2020-21	71.92
ಒಟ್ಟು		**138.99**

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/09:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1605
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವಿದ್ಯಾರ್ಥಿಗಳು ರಿಯಾಯಿತಿ ದರದ ಬಸ್ ಪಾಸ್ ಪಡೆಯಲು ಸೇವಾಸಿಂಧು ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬೇಕಾಗಿದ್ದು, ಒಮ್ಮೆ ಅರ್ಜಿಯಲ್ಲಿ ಮಾಹಿತಿ ತುಂಬಿ ಬಳಿಕ ಶಾಲಾ ಮುಖ್ಯಸ್ಥರಿಂದ ದೃಢೀಕರಿಸಿ ಪುನಃ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಮತ್ತೆ ಬಸ್ ಡಿಪೋಗೆ ಕೊಡುವ ಪ್ರಕ್ರಿಯೆಯಿಂದ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿದ್ಯಾರ್ಥಿಗಳು ಬಸ್ ಪಾಸ್ ಪಡೆಯಲು ಸೇವಾಸಿಂಧು ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಕರ್ನಾಟಕ ಸರ್ಕಾರದ ಯೋಜನೆಯಾಗಿರುತ್ತದೆ. ಪ್ರಾಥಮಿಕ ಹಂತದಲ್ಲಿ ಕೆಲವು ಸಮಸ್ಯೆಗಳಿದ್ದು ಅವುಗಳನ್ನು ವಿದ್ಯುನ್ಮಾನ ನಾಗರಿಕರ ಸೇವಾ ವಿತರಣಾ ನಿರ್ದೇಶನಾಲಯದೊಂದಿಗೆ (ಇಡಿಸಿಎಸ್) ನಿರಂತರ ಸಂಪರ್ಕದಲ್ಲಿದ್ದು ಬಗೆಹರಿಸಲಾಗುತ್ತಿದೆ. ವಿದ್ಯಾರ್ಥಿಗಳು ಮೊದಲು ಸೇವಾಸಿಂಧು ಪೋರ್ಟಲ್‌ನಲ್ಲಿ ರಿಜಿಸ್ಟರ್ ಮಾಡಿಕೊಳ್ಳಬೇಕು. ತದನಂತರ ಪೂರ್ವ ಮುದ್ರಿತ ದೃಢೀಕರಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು, ಶಾಲಾ / ಕಾಲೇಜು ಪ್ರಾಂಶುಪಾಲರಿಂದ ಸಹಿ ಪಡೆದುಕೊಂಡ ನಂತರ ಸೇವಾಸಿಂಧು ಪೋರ್ಟಲ್‌ನಲ್ಲಿ ಸಂಬಂಧಿಸಿದ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬೇಕು. ಪ್ರಸಕ್ತ ವರ್ಷದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಿದ್ದು, ನಿಗದಿತ ದಾಖಲಾತಿಗಳನ್ನು ಸಮರ್ಪಕವಾಗಿ ಅಪ್‌ಲೋಡ್ ಮಾಡಿದ ಸಂಬಂಧ ಹಾಗೂ ಪಾಸು ವಿತರಣೆ ಸಂಬಂಧ ವಿದ್ಯಾರ್ಥಿಗಳಿಗೆ ಸೂಕ್ತ ಎಸ್‌ಎಂಎಸ್ ರವಾನೆಯಾಗುತ್ತದೆ. ತದನಂತರವಷ್ಟೇ ನಿಗದಿತ ಕೌಂಟರ್‌ಗಳಿಗೆ ಬಂದು ಶುಲ್ಕವನ್ನು ಪಾವತಿಸಿ ಪಾಸುಗಳನ್ನು ಪಡೆದುಕೊಳ್ಳಬೇಕಿರುತ್ತದೆ ಅಥವಾ ಆಯಾ ಕಾಲೇಜುಗಳ ಸಿಬ್ಬಂದಿಯೂ ಸಹ ಕೌಂಟರ್‌ಗಳಿಂದ ಪಾಸುಗಳನ್ನು ಪಡೆದು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.
ಆ)	ಇದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಸರ್ವರ್ ಸಮಸ್ಯೆ ಇರುವ ಸೈಬರ್ ಕೇಂದ್ರಗಳಲ್ಲಿ ಅಲೆದಾಡುವಂತಾಗಿದ್ದು, ಸರ್ಕಾರವು ಯಾವ ಕ್ರಮ ಕೈಗೊಂಡಿದೆ (ಸಂಪೂರ್ಣ ವಿವರ ನೀಡುವುದು)?	ವಿದ್ಯಾರ್ಥಿಗಳು ಸರ್ಕಾರ ಗುರುತಿಸಿರುವ ಎಲ್ಲಾ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಹಾಗೂ ಮೊಬೈಲ್ ಮೂಲಕವೂ ಸಹ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದಂತೆ, ವಿದ್ಯಾರ್ಥಿಗಳಿಗೆ ಪಾಸ್‌ಗಳನ್ನು ಪಡೆದುಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡುವ ಸಲುವಾಗಿ 2019-20ನೇ ಸಾಲಿನಲ್ಲಿ ನೀಡಿದ ಪಾಸ್‌ನೊಂದಿಗೆ ಅಥವಾ ಪ್ರಸಕ್ತ ಸಾಲಿನಲ್ಲಿ ಶಾಲಾ/ಕಾಲೇಜಿಗೆ ದಾಖಲಾಗಿರುವ ಶುಲ್ಕ ರಸೀದಿ ಅಥವಾ ಗುರುತಿನ ಚೀಟಿಯೊಂದಿಗೆ ದಿನಾಂಕ: 31.03.2021 ರವರೆಗೆ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.

ಸಂಖ್ಯೆ: ಟಿಡಿ 78 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1606
ಸದಸ್ಯರ ಹೆಸರು	:	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	10-03-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಇದೆಯೇ: ಹಾಗಿದ್ದಲ್ಲಿ ಜಮಖಂಡಿ ಮತಕ್ಷೇತ್ರಕ್ಕೆ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗುವುದೇ:	ಜಮಖಂಡಿ ಮತ ಕ್ಷೇತ್ರಕ್ಕೆ ಒಟ್ಟು 35 ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ನಂತರ ನಿವೇಶನಗಳ ಲಭ್ಯತೆ ಮೇರೆಗೆ ಅಂಗನವಾಡಿ ಕೇಂದ್ರಗಳನ್ನು ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.
ಆ.	ಜಮಖಂಡಿ ನಗರದ ಚೌಡಯ್ಯ ನಗರದಲ್ಲಿ ಮತ್ತು ಶಿರಗುಪ್ಪ ಗ್ರಾಮದ ಶಿರಗುಪ್ಪ ಮಡ್ಡಿಯಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರ ಅತಿ ಅವಶ್ಯವಿದ್ದು ಯಾವಾಗ ಮಂಜೂರಾತಿ ನೀಡಲಾಗುವುದು?	ಯಾವುದೇ ಪ್ರಸ್ತಾವನೆ ಇರುವುದಿಲ್ಲ.

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ: ಮಮಇ 87 ಐಸಿಡಿ 2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1607

ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಜಮಖಂಡಿ ನಗರದಲ್ಲಿ ಹೈ-ಟೆಕ್ ಮಾದರಿಯಲ್ಲಿ ನಿರ್ಮಾಣವಾಗಿರುವ ಬಸ್ ನಿಲ್ದಾಣದ ಎರಡನೇ ಹಂತದ ಕಾಮಗಾರಿಗೆ ರೂ.5 ಕೋಟಿಗಳ ಅನುದಾನ ಮಂಜೂರಾತಿ ನೀಡಿ ಯಾವಾಗ ಕೆಲಸ ಪ್ರಾರಂಭಿಸಲಾಗುವುದು;	ಜಮಖಂಡಿ ಬಸ್ ನಿಲ್ದಾಣದ ಎರಡನೇ ಹಂತದ ಕಾಮಗಾರಿಗೆ ಅವಶ್ಯವಿರುವ ಅನುದಾನದ ಪ್ರಸ್ತಾವನೆಯನ್ನು 2021-22ನೇ ಸಾಲಿನ ಬಂಡವಾಳ ವೆಚ್ಚಗಳ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಲಾಗಿದೆ.
ಆ)	ಸಾವಳಗಿ ಹೋಬಳಿಯಲ್ಲಿ ಹೊಸದಾಗಿ ಬಸ್ ನಿಲ್ದಾಣ ನಿರ್ಮಾಣದ ಪ್ರಸ್ತಾವನೆ ಇದ್ದು, ಹೊಸದಾಗಿ ಬಸ್ ನಿಲ್ದಾಣವನ್ನು ಯಾವಾಗ ಮಂಜೂರು ಮಾಡಲಾಗುವುದು?	ಸಾವಳಗಿ ಹೋಬಳಿಯಲ್ಲಿ ನೂತನ ಬಸ್ ನಿಲ್ದಾಣದ ನಿರ್ಮಾಣಕ್ಕೆ ಸೂಕ್ತ ನಿವೇಶನದ ಹುಡುಕಾಟದಲ್ಲಿದ್ದು, ನಿವೇಶನ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ. ಈ ಕುರಿತು ಗ್ರಾಮ ಪಂಚಾಯತಿಯೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಸೂಕ್ತ ನಿವೇಶನ ದೊರೆತ ನಂತರ, ವಾ.ಕ.ರ.ಸ.ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನಾಧರಿಸಿ, ಬಸ್ ನಿಲ್ದಾಣದ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು.

ಸಂಖ್ಯೆ: ಟಿಡಿ 79 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1609
ಸದಸ್ಯರ ಹೆಸರು	:	ಶ್ರೀ ರಾಮದಾಸ್ ಎಸ್.ಎ. (ಕೃಷ್ಣರಾಜ)
ಉತ್ತರಿಸಬೇಕಾದ ದಿನಾಂಕ	:	10-03-2021.
ಉತ್ತರಿಸುವ ಸಚಿವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯದಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ವ್ಯಾಪ್ತಿಯೊಳಗೆ ಬರುವ ರಾಜ್ಯ ವಕ್ಫ್ ಮಂಡಳಿಯಲ್ಲಿ ನಡೆದಿರುವ ಅಕ್ರಮಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ವಕ್ಫ್ ಆಸ್ತಿಗಳ ಒತ್ತುವರಿ ಬಗ್ಗೆ ವಕ್ಫ್ ಕಾಯ್ದೆ ಕಲಂ 54, ಕೆ.ಪಿ.ಪಿ. ಕಾಯ್ದೆ 1974, ಭೂ ಕಬಳಿಕೆ ಕಾಯ್ದೆ ಅನ್ವಯ ಕ್ರಮಕೈಗೊಳ್ಳಲಾಗುತ್ತಿದೆ. ಕಾನೂನು ಬಾಹಿರವಾಗಿ ಮಾರಾಟವಾಗಿರುವ ವಕ್ಫ್ ಆಸ್ತಿಗಳನ್ನು ಹಿಂಪಡೆಯಲು ವಕ್ಫ್ ಕಾಯ್ದೆ ಕಲಂ 52ರ ಅನ್ವಯ ಕ್ರಮಕೈಗೊಳ್ಳಲಾಗುತ್ತಿದೆ, ಹಣದ ದುರುಪಯೋಗದ ಬಗ್ಗೆ ಪ್ರಚಲಿತ ಕಾನೂನುಗಳ ಅನ್ವಯ ಕ್ರಮಕೈಗೊಳ್ಳಲಾಗುತ್ತಿದೆ.
ಆ.	ರಾಜ್ಯ ವಕ್ಫ್ ಮಂಡಳಿಯಲ್ಲಿ ಆಗಿಂದಾಗ್ಗೆ ಅಕ್ರಮಗಳು ನಡೆಯುತ್ತಿರುವುದರಿಂದ ರಾಜ್ಯ ವಕ್ಫ್ ಮಂಡಳಿಯನ್ನು ಅಮಾನತ್ತಿಲ್ಲಿರಿಸಲು ಸರ್ಕಾರವು ಉದ್ದೇಶಿಸಿದೆಯೇ;	ಇಲ್ಲ
ಇ	ರಾಜ್ಯ ವಕ್ಫ್ ಮಂಡಳಿಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಿ.ಬಿ.ಐ. ನಿಂದ ತನಿಖೆ ನಡೆಸಲು ಸರ್ಕಾರವು ಉದ್ದೇಶಿಸಿದೆಯೇ;	ಇಲ್ಲ
ಈ	ಮೈಸೂರಿನಲ್ಲಿ, ವಕ್ಫ್ ಮಂಡಳಿಯ ಮಜ್ಲೀಸ್-ಇ-ರಿಫಾಹುಲ್ ಮುಸ್ಲಿಮೀನ್ ಬಾಲಕರು ಮತ್ತು ಬಾಲಕಿಯರ ಅನಾಥಾಶ್ರಮಕ್ಕೆ ಸಂಬಂಧಪಟ್ಟಂತೆ ಆಗಿರುವ ಅಕ್ರಮಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಅಕ್ರಮಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು)	ಇಲ್ಲ
ಉ	ಈ ಅಕ್ರಮಗಳ ಕುರಿತು ಸರ್ಕಾರವು ಉನ್ನತ ಮಟ್ಟದ ತನಿಖೆಗೆ ಆದೇಶಿಸಿ ತಪ್ಪಿತಸ್ಥರನ್ನು ಶಿಕ್ಷಿಸುವ ಉದ್ದೇಶವನ್ನು ಹೊಂದಿದೆಯೇ?	ಅನ್ವಯಿಸುವುದಿಲ್ಲ

ಸಂಖ್ಯೆ: **MWD 63 LMQ 2021**

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1612
2)	ಸದಸ್ಯರ ಹೆಸರು	:	ಶ್ರೀ. ಶಿವಾನಂದ ಎಸ್ ಪಾಟೀಲ್
3)	ಉತ್ತರಿಸಬೇಕಾದ ದಿನಾಂಕ	:	10.03.2021
4)	ಉತ್ತರಿಸುವವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಗದಗ-ಹೊಟಗಿ ರೈಲ್ವೆ ಮಾರ್ಗದ ಮುಳವಾಡ ರೈಲ್ವೆ ನಿಲ್ದಾಣ ಬಳಿಯಲ್ಲಿ ಎಸ್.ಸಿ.ನಂ:72ರಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;	ರೈಲ್ವೆ ದ್ವಿಪಥೀಕರಣ ಕಾಮಗಾರಿಗಳ ಅಡಿಯಲ್ಲಿ ಈ ಕಾಮಗಾರಿಯನ್ನು ನೈರುತ್ಯ ರೈಲ್ವೆ ಇಲಾಖೆಯು ಮಂಜೂರು ಮಾಡಿರುತ್ತದೆ ಎಂದು ರೈಲ್ವೆ ಇಲಾಖೆಯು ತಿಳಿಸಿರುತ್ತದೆ.
ಆ	ಕಾಮಗಾರಿಯನ್ನು ಪ್ರಾರಂಭ ಮಾಡಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು;	ಈ ಯೋಜನೆಯ ಜನರಲ್ ಅಲೈನ್‌ಮೆಂಟ್ ಡ್ರಾಯಿಂಗ್ (GAD) ಸಿದ್ಧವಾಗಿದ್ದು, ಮುಖ್ಯ ಇಂಜಿನಿಯರ್, ನಿರ್ಮಾಣ-1, ನೈರುತ್ಯ ರೈಲ್ವೆ, ಹುಬ್ಬಳ್ಳಿ ಇವರು ಅನುಮೋದನೆ ನೀಡಿರುತ್ತಾರೆ. ಸದರಿ ಜನರಲ್ ಅರೇಂಜ್‌ಮೆಂಟ್ ಡ್ರಾಯಿಂಗ್ ಗೆ ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ನೈರುತ್ಯ ರೈಲ್ವೆ ಇಲಾಖೆಯಿಂದ ಟೆಂಡರ್ ಅನ್ನು ಕರೆಯಲಾಗುತ್ತದೆ ಎಂದು ತಿಳಿಸಿರುತ್ತಾರೆ.
ಇ	ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;	ಈ ಕಾಮಗಾರಿಯ ಜಿಎಡಿ ಅನುಮೋದನೆಯಾದ ನಂತರ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.
ಈ	ಕಾಮಗಾರಿಯ ಅಂದಾಜು ಮೊತ್ತ ಎಷ್ಟು?	

ಸಂಖ್ಯೆ: ಮೂಅಇ 49 ರಾರಾಹೆ 2021/ಇ

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1614
ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ. ಸಂ	ಪ್ರಶ್ನೆ	ಉತ್ತರಗಳು
ಅ)	2019-20ನೇ ಸಾಲಿನಲ್ಲಿ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಬಸ್ ಘಟಕಗಳನ್ನು ಸ್ಥಾಪಿಸಲಾಗಿದೆ;	2019-20ನೇ ಸಾಲಿನಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಹುಕ್ಕೇರಿ ಹಾಗೂ ಶಿರಹಟ್ಟಿಯಲ್ಲಿ ನೂತನ ಬಸ್ ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಕೊಪ್ಪಳ, ಸಿಂಧನೂರು, ಬಳ್ಳಾರಿ ಬಸ್ ಘಟಕ-02 ಮತ್ತು ಇಂಡಿ ಬಸ್ ಘಟಕಗಳನ್ನು ಮರು ನಿರ್ಮಿಸಲಾಗಿದೆ.
ಆ)	ಪ್ರಸ್ತುತ ರಾಜ್ಯದಲ್ಲಿ ಹೊಸದಾಗಿ ಬಸ್ ಘಟಕಗಳನ್ನು ಸ್ಥಾಪಿಸಲಾಗುವುದೇ;	ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿ ಪ್ರಸ್ತುತ ಶಿಡ್ಲಘಟ್ಟ, ದಾವಣಗೆರೆ ಹಾಗೂ ಶಿಕಾರಿಪುರದಲ್ಲಿ ಬಸ್ ಘಟಕ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಪಿಡುಗಿನಿಂದಾಗಿ, ನಿಗಮದ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲವಾದ ಕಾರಣ, ಯಾವುದೇ ಹೊಸ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿಗಮದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ನಂತರ ಸಾರಿಗೆ ಅವಶ್ಯಕತೆ ಹಾಗೂ ನಿಗಮವು ಹೊರಡಿಸಿರುವ ಸುತ್ತೋಲೆ ಸಂಖ್ಯೆ:01/2015-16 ದಿನಾಂಕ:06-06-2015 ರ ಪ್ರಕಾರ, ಘಟಕ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು. ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಮುಂದಿನ ಆರ್ಥಿಕ ವರ್ಷದಲ್ಲಿ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಿತ್ತೂರು ಮತ್ತು ಉತ್ತರಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನಲ್ಲಿ ಹೊಸದಾಗಿ ಬಸ್ ಘಟಕಗಳನ್ನು ಸ್ಥಾಪಿಸಲಾಗುವುದು. ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯ ಚಡಚಣದಲ್ಲಿ 2021-22ನೇ ಸಾಲಿನಲ್ಲಿ ನೂತನ ಬಸ್ ಘಟಕವನ್ನು ನಿರ್ಮಿಸಲು ಯೋಜಿಸಿದೆ.
ಇ)	ವಿಜಯಪುರ ಜಿಲ್ಲೆಯ ನಿಡಗುಂದಿಯಲ್ಲಿ ಬಸ್ ಘಟಕ ಸ್ಥಾಪನೆಗಾಗಿ ಕಂದಾಯ ಇಲಾಖೆಯಿಂದ ಸಾರಿಗೆ ಸಂಸ್ಥೆಗೆ ಜಮೀನು ಹಂಚಿಕೆ ಮಾಡಲಾಗಿದೆಯೇ;	ಈ.ಕ.ರ.ಸಾ.ಸಂಸ್ಥೆಗೆ ಕಂದಾಯ ಇಲಾಖೆಯಿಂದ ವಿಜಯಪುರ ಜಿಲ್ಲೆಯ ನಿಡಗುಂದಿಯ ಸರ್ವೆ ನಂ.532/ಆ ರಲ್ಲಿಯ ಕ್ಷೇತ್ರ 195 ಎಕರೆ 27 ಗುಂಟೆ ಪೈಕಿ 03 ಎಕರೆ ಜಮೀನು ದಿನಾಂಕ: 25.01.2021ರಂದು ಹಸ್ತಾಂತರವಾಗಿದೆ.
ಈ)	ಹಾಗಿದ್ದಲ್ಲಿ, ನಿಡಗುಂದಿಯಲ್ಲಿ ಬಸ್ ಘಟಕ ಸ್ಥಾಪನೆಗೆ ಇದುವರೆಗೂ ಕೈಗೊಂಡಿರುವ ಕ್ರಮಗಳೇನು; ನಿಡಗುಂದಿಯಲ್ಲಿ ಯಾವಾಗ ಬಸ್ ಘಟಕವನ್ನು ಸ್ಥಾಪಿಸಲಾಗುವುದು?	ಘಟಕ ನಿರ್ಮಿಸುವ ಸುಕ್ತಾಸೂಕ್ತತೆ ಬಗ್ಗೆ ಪರಿಶೀಲಿಸಿ, ಅನುದಾನದ ಲಭ್ಯತೆಯನುಸಾರ ಕ್ರಮ ವಹಿಸಲಾಗುವುದು. ----

ಸಂಖ್ಯೆ: ಟಿಡಿ 80 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1616
ಸದಸ್ಯರ ಹೆಸರು	:	ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ॥ (ಖಾನಾಪುರ)
ಉತ್ತರಿಸುವ ದಿನಾಂಕ	:	10-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯಾದ್ಯಂತ ಪ್ರತಿ ಗ್ರಾಮ ಪಂಚಾಯತ್‌ಗೆ ಒಬ್ಬ ಹೆಚ್ಚುವರಿ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಕಳೆದ ಮೂರು ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಈ ನೇಮಕ ಪ್ರಕ್ರಿಯೆ ಸ್ಥಗಿತಗೊಳ್ಳಲು ಕಾರಣಗಳೇನು?	ಸರ್ಕಾರವು ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ವಸತಿ ಯೋಜನೆ, ಬಾಪೂಜಿ ಸೇವಾ ಕೇಂದ್ರ ನಿರ್ವಹಣೆ, ಗಾಂಧಿ ಸಾಕ್ಷಿ ಕಾಯಕ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯನ್ನು ಸೃಜಿಸಿ, ದಿನಾಂಕ:02-11-2017 ರಂದು ಆದೇಶ ಹೊರಡಿಸಿ, ಈ ಹುದ್ದೆಗೆ ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸಿ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಈ ನೇಮಕಾತಿಗೆ ಮೀಸಲಾತಿ ಕಲ್ಪಿಸಬೇಕೆಂಬ ಆಕ್ಷೇಪಣೆ ಬಂದ ಹಿನ್ನೆಲೆಯಲ್ಲಿ ತಡೆ ಹಿಡಿಯಲಾಗಿತ್ತು.
(ಇ)	ಹಾಗಿದ್ದಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ;	ಪ್ರಸ್ತುತ ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ:29-09-2020 ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ಅನ್ನು ರೂಪಿಸಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 112 ಮತ್ತು 113 ರಂತೆ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಸ್ವರೂಪ, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸಲಾಗಿದೆ. ಸದರಿ ಆದೇಶದಲ್ಲಿ ಪ್ರತಿ ಗ್ರಾಮ ಪಂಚಾಯತಿಯ ಹುದ್ದೆಗಳ ಸಂಖ್ಯೆಯನ್ನು ಪ್ರತ್ಯೇಕವಾದ ಸರ್ಕಾರಿ ಆದೇಶದಲ್ಲಿ ಒದಗಿಸುವುದಾಗಿ ತಿಳಿಸಿದ್ದು, ಅದರಂತೆ ಹುದ್ದೆಗಳ ಸಂಖ್ಯೆಯನ್ನು ಗುರುತಿಸಿದ ನಂತರ ಗ್ರಾಮ ಪಂಚಾಯತಿಗಳಲ್ಲಿನ ಕಾರ್ಯದ ಒತ್ತಡ ಆಧರಿಸಿ ಹೆಚ್ಚುವರಿ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದು.

ಸಂ. ಗ್ರಾಅಪ 103 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮಂತ್ರಿ

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1620

2) ಸದಸ್ಯರ ಹೆಸರು : ಶ್ರೀ. ವೆಂಕಟರಮಣಯ್ಯ ಟಿ.

3) ಉತ್ತರಿಸಬೇಕಾದ ದಿನಾಂಕ : 10.03.2021

4) ಉತ್ತರಿಸುವವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರು-ಹಿಂದೂಪುರ ಅಂತರರಾಜ್ಯ ಹೆದ್ದಾರಿಯ ದೊಡ್ಡಬಳ್ಳಾಪುರ "ಡಿ" ಬಳಿ ನಿರ್ಮಾಣಗೊಂಡಿರುವ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ರೈತರ ಭೂಸ್ವಾಧೀನ ಪರಿಹಾರ ಎಲ್ಲಾ ರೈತರಿಗೆ ನೀಡಲಾಗಿದೆಯೇ;	ದೊಡ್ಡಬಳ್ಳಾಪುರ ಡಿ-ಕ್ರಾಸ್ ಬಳಿ ನಿರ್ಮಾಗೊಂಡಿರುವ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ 12 ಸ್ವತ್ತುಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿದ್ದು, ಸದರಿ 12 ಸ್ವತ್ತುಗಳ ಮಾಲಿಕರುಗಳು ದಾಖಲೆಗಳನ್ನು ದೊಡ್ಡಬಳ್ಳಾಪುರ ಉಪ-ವಿಭಾಗಾಧಿಕಾರಿಗಳ ಧೃಡೀಕರಣದೊಂದಿಗೆ ಈ ಕಛೇರಿಗೆ ಸಲ್ಲಿಸಿದ್ದು, ಸದರಿ 12 ಸ್ವತ್ತುಗಳಲ್ಲಿ 4 ಸ್ವತ್ತುಗಳ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ದಾಖಲೆಗಳು ಸರಿಯಾಗಿರುವುದರಿಂದ ಪರಿಹಾರವನ್ನು ಶೀಘ್ರವಾಗಿ ನೀಡಲಾಗುವುದು. ಉಳಿಕೆ 8 ಸ್ವತ್ತುಗಳ ಮಾಲಿಕರು ಪೂರ್ಣ ದಾಖಲೆಗಳನ್ನು ಸಲ್ಲಿಸದ ಕಾರಣ, ಪೂರ್ಣ ದಾಖಲೆಗಳನ್ನು ಸಲ್ಲಿಸಲು ಸೂಚಿಸಲಾಗಿದೆ. ಸ್ವತ್ತುಗಳ ಮಾಲಿಕರು ಪೂರ್ಣ ದಾಖಲೆಗಳನ್ನು ಸಲ್ಲಿಸಿದ ನಂತರ ದಾಖಲೆಗಳನ್ನು ಪರಿಶೀಲಿಸಿ ಪರಿಹಾರವನ್ನು ಶೀಘ್ರವಾಗಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಇವರು ತಿಳಿಸಿರುತ್ತಾರೆ.
ಆ	ಹಾಗಿದ್ದಲ್ಲಿ ನೀಡಿರುವ ಪರಿಹಾರವೆಷ್ಟು; (ವಿವರ ನೀಡುವುದು)	ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ಅಂದಾಜು ಮೊತ್ತವು ರೂ.472.00 ಲಕ್ಷಗಳಾಗಿದ್ದು, ಸದರಿ ಮೊತ್ತವು ಸರ್ಕಾರದಿಂದ ಬಿಡುಗಡೆಯಾಗಿದ್ದು, ಮೇಲೆ ವಿವರಿಸಿದಂತೆ ದಾಖಲೆಗಳನ್ನು ಪರಿಶೀಲಿಸಿ ಸ್ವತ್ತುಗಳ ಮಾಲಿಕರುಗಳಿಗೆ ಪರಿಹಾರವನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಮೂಅಇ 54 ರಾರಾಹೆ 2021/ಇ

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1621
2)	ಸದಸ್ಯರ ಹೆಸರು	:	ಶ್ರೀ. ವೆಂಕಟರಮಣಯ್ಯ ಟಿ.
3)	ಉತ್ತರಿಸಬೇಕಾದ ದಿನಾಂಕ	:	10.03.2021
4)	ಉತ್ತರಿಸುವವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರು-ಹಿಂದೂಪುರ ಅಂತರರಾಜ್ಯ ಹೆದ್ದಾರಿಯ ದೊಡ್ಡಬಳ್ಳಾಪುರ ರೈಲ್ವೆ ನಿಲ್ದಾಣ ವೃತ್ತದಲ್ಲಿ ಹೆಚ್ಚಿನ ವಾಹನಗಳ ದಟ್ಟಣೆಯಿರುವುದರಿಂದ ವಾಹನಗಳ ಮುಕ್ತ ಸಂಚಾರಕ್ಕೆ ಕೆಳ ಸೇತುವೆ ನಿರ್ಮಾಣದ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೊಡ್ಡಬಳ್ಳಾಪುರ ಯಾರ್ಡ್‌ನ ಭಾಗವಾದ ಈ ಪ್ರದೇಶದಲ್ಲಿ ರಸ್ತೆ ಕೆಳ ಸೇತುವೆಯನ್ನು ನಿರ್ಮಿಸಲು ಕ್ರಮವಹಿಸುತ್ತಿರುವುದಾಗಿ ರೈಲ್ವೆ ಇಲಾಖೆಯವರು ತಿಳಿಸಿರುತ್ತಾರೆ. ರೈಲ್ವೆ ಇಲಾಖೆಯು ಅಗತ್ಯವಿರುವ ಜಮೀನಿನ ಭೂಸ್ವಾಧೀನಕ್ಕಾಗಿ ಜಿಲ್ಲಾಡಳಿತದೊಂದಿಗೆ ಸಂಪರ್ಕದಲ್ಲಿರುವುದಾಗಿ ತಿಳಿಸಿರುತ್ತಾರೆ.
ಆ	ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ಇದು ಸಂಪೂರ್ಣವಾಗಿ ರೈಲ್ವೆ ಇಲಾಖೆಯ ವೆಚ್ಚದಲ್ಲಿಯೇ ನಿರ್ಮಾಣಗೊಳ್ಳುತ್ತಿರುವ ಯೋಜನೆಯಾಗಿರುವುದರಿಂದ ರಾಜ್ಯ ಸರ್ಕಾರದ ಕಡೆಯಿಂದ ಯಾವುದೇ ಕ್ರಮ ಇರುವುದಿಲ್ಲ.

ಸಂಖ್ಯೆ: ಮೂಅಇ 53 ರಾರಾಹೆ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1624

ಸದಸ್ಯರ ಹೆಸರು : ಶ್ರೀ. ಬಾಲಕೃಷ್ಣ ಸಿ.ಎನ್.

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಪ್ರಮುಖವಾಗಿ ತೋಟಗಾರಿಕೆ ಬೆಳೆಗಳಾದ ಆಲೂಗೆಡ್ಡೆ, ತೆಂಗು, ಕಾಫಿ, ಮೆಣಸು, ಏಲಕ್ಕಿ, ಅಡಿಕೆ, ಶುಂಠಿ ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಸಪೋಟ, ಪಪ್ಪಾಯ ಹಾಗೂ ತರಕಾರಿ ಬೆಳೆಗಳಾದ ಟೊಮೆಟೋ, ಹಸಿರು ಮೆಣಸಿನಕಾಯಿ, ಬೀನ್ಸ್, ಈರುಳ್ಳಿ ಪ್ರಮುಖ ಬೆಳೆಗಳನ್ನು ಸುಮಾರು ಒಂದು ಲಕ್ಷ ತೋಂಬತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಹಾಸನ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ವೃಂದದಲ್ಲಿ ಮಂಜೂರಾದ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ವೃಂದದಲ್ಲಿ ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ: 229. ಖಾಲಿ ಇರುವ ಹುದ್ದೆಗಳ ಒಟ್ಟು ಸಂಖ್ಯೆ: 119 ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಹಾಸನ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರ ಕಛೇರಿ ಅಧೀನದಲ್ಲಿರುವ ವಿವಿಧ ತಾಲ್ಲೂಕುಗಳಲ್ಲಿ ಹಲವಾರು ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ರೈತರ ಹಿತದೃಷ್ಟಿಯಿಂದ ಕೂಡಲೇ ನೇಮಕಾತಿ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?	

ಸಂಖ್ಯೆ: HORTI 111 HGM 2021

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1643
ಸದಸ್ಯರ ಹೆಸರು : ಶ್ರೀ ವೆಂಕಟರೆಡ್ಡಿ ಮುದ್ನಾಳ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ)	ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಡಗೇರ ತಾಲ್ಲೂಕು ಘೋಷಣೆಯಾಗಿ 04 ವರ್ಷಗಳು ಕಳೆದರೂ ತಾಲ್ಲೂಕು ಕೇಂದ್ರ ಬಸ್ ನಿಲ್ದಾಣ ಘಟಕ ನಿರ್ಮಾಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಡಗೇರಾದಲ್ಲಿ ನೂತನ ಬಸ್ ನಿಲ್ದಾಣವನ್ನು 2013-14ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ ಹಾಗೂ ವಡಗೇರಾದಲ್ಲಿ ಬಸ್ ಘಟಕವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ತಾಲ್ಲೂಕು ಕೇಂದ್ರ ಬಸ್ ನಿಲ್ದಾಣ ಘಟಕ ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?	ವಡಗೇರಾ ನೂತನ ತಾಲೂಕು ಕೇಂದ್ರವಾಗಿದ್ದು, ಸಂಸ್ಥೆಯ ಸುತ್ತೋಲೆ ಸಂಖ್ಯೆ: 322/2015 ದಿನಾಂಕ 31.07.2015ರ ಕಂಡಿಕೆ 'ಊ' ರ ಪ್ರಕಾರ ತಾಲೂಕು ಕೇಂದ್ರಗಳಲ್ಲಿ ಬಸ್ ಘಟಕಗಳನ್ನು ಕನಿಷ್ಠ 75 ಅನುಸೂಚಿಗಳಿದ್ದಲ್ಲಿ ನಿರ್ಮಿಸಲು ನಿರ್ದೇಶನವಿರುತ್ತದೆ. ಅಲ್ಲದೇ, ಹತ್ತಿರದ ಘಟಕಗಳು, ಅಂದರೆ, 40ರಿಂದ 50 ಕಿ.ಮೀ. ಅಂತರದಲ್ಲಿ ಬರುವ ಘಟಕಗಳು 125ರಿಂದ 150 ಅನುಸೂಚಿಗಳನ್ನು ಹೊಂದಿದ್ದಲ್ಲಿ, ಅಂತಹ ತಾಲೂಕು ಕೇಂದ್ರಗಳಲ್ಲಿ ಬಸ್ ಘಟಕ ಪ್ರಾರಂಭಿಸಲು ಕನಿಷ್ಠ 50 ಅನುಸೂಚಿಗಳು ಹೊಂದಿರಬೇಕೆಂಬ ನಿರ್ದೇಶನವಿರುತ್ತದೆ. ಪ್ರಸ್ತುತ ವಡಗೇರಾ ತಾಲೂಕು ಕೇಂದ್ರದಿಂದ 40ರಿಂದ 50 ಕಿ.ಮೀ. ಅಂತರದಲ್ಲಿ ಯಾದಗಿರಿ ಮತ್ತು ಶಹಾಪೂರ ಎರಡು ಬಸ್ ಘಟಕಗಳು ಇರುತ್ತವೆ. ಈ ಎರಡು ಬಸ್ ಘಟಕಗಳಿಂದ ಹಾಲಿ ಕಾರ್ಯಾಚರಣೆಯಲ್ಲಿರುವ ಅನುಸೂಚಿಗಳ ವಿವರಗಳು ಈ ಕೆಳಗಿನಂತಿವೆ:

ಕ್ರ ಸಂ.	ಬಸ್ ಘಟಕ	ವಡಗೇರಾದಿಂದ ಇರುವ ಅಂತರ (ಕಿ.ಮೀ.ಗಳಲ್ಲಿ)	ಕಾರ್ಯಾಚರಣೆಯಲ್ಲಿರುವ ಅನುಸೂಚಿಗಳ ಸಂಖ್ಯೆ
1	ಯಾದಗಿರಿ	20	72
2	ಶಹಾಪೂರ	40	73

ಮೇಲಿನಂತೆ ವಡಗೇರಾ ತಾಲೂಕು ಕೇಂದ್ರದ ಸಮೀಪ ಬರುವ ಯಾದಗಿರಿ ಮತ್ತು ಶಹಾಪುರ ಬಸ್ ಘಟಕಗಳಿಂದ ಹಾಲಿ ಕಡಿಮೆ ಸಂಖ್ಯೆಯ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಈ ಘಟಕಗಳಲ್ಲಿ ಇನ್ನು ಹೆಚ್ಚುವರಿ ಅನುಸೂಚಿಗಳನ್ನು ಸೇರ್ಪಡೆಗೊಳಿಸಲು ಅವಕಾಶವಿರುತ್ತದೆ.

ಪ್ರಸ್ತುತ ವಡಗೇರಾ ತಾಲೂಕಿನ ವ್ಯಾಪ್ತಿಯಲ್ಲಿ ಯಾದಗಿರಿ ಮತ್ತು ಶಹಾಪೂರ ಘಟಕಗಳಿಂದ 13 ಅನುಸೂಚಿಗಳು ಕಾರ್ಯಾಚರಣೆಯಲ್ಲಿದ್ದು, ಅವುಗಳ ಆದಾಯ ತೃಪ್ತಿದಾಯಕವಾಗಿರುವುದಿಲ್ಲ. ಈ ಹಿನ್ನಲೆಯಲ್ಲಿ, ವಡಗೇರಾ ನೂತನ ತಾಲೂಕು ಕೇಂದ್ರದಲ್ಲಿ ಬಸ್ ಘಟಕ ಪ್ರಾರಂಭಿಸುವುದು ಸಂಚಾರ ದಟ್ಟಣೆ ಮತ್ತು ಸಂಸ್ಥೆಯ ಆರ್ಥಿಕ ಹಿತದೃಷ್ಟಿಯಿಂದ ಸದ್ಯದ ಪರಿಸ್ಥಿತಿಯಲ್ಲಿ ಸೂಕ್ತವಾಗಿರುವುದಿಲ್ಲ.

ಸಂಖ್ಯೆ: ಟಿಡಿ 82 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1644
ಸದಸ್ಯರ ಹೆಸರು	:	ಡಾ: ರಂಗನಾಥ್ ಹೆಚ್.ಡಿ. (ಕುಣಿಗಲ್)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	10-03-2021

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಅಂಗನವಾಡಿ ಕೇಂದ್ರ ನಡೆಸಲು ಕಟ್ಟಡಕ್ಕೆ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಬಂದಿದೆ.</td></tr>
<tr><td>ಆ</td><td>ಕಳೆದ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನ ಎಷ್ಟು;</td><td>2019-20ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಈ ಕೆಳಗಿನಂತೆ ಅನುದಾನ ಬಿಡುಗಡೆಯಾಗಿದೆ.
<table>
<tr><th>ಕ್ರ.ಸಂ.</th><th>ಯೋಜನೆ</th><th>ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ)</th><th>ಕಟ್ಟಡಗಳ ಸಂಖ್ಯೆ</th></tr>
<tr><td>1.</td><td>ವಿಶೇಷ ಅಭಿವೃದ್ಧಿ ಯೋಜನೆ</td><td>3597.50</td><td>206</td></tr>
<tr><td>2.</td><td>ನರೇಗಾ ಒಗ್ಗೂಡಿಸುವಿಕೆ</td><td>375.00</td><td>75</td></tr>
<tr><td></td><td>ಒಟ್ಟು</td><td>3972.50</td><td>281</td></tr>
</table>
2019-20ನೇ ಸಾಲಿನಲ್ಲಿ ಮಳೆಹಾನಿಯಿಂದ ಶಿಥಿಲಗೊಂಡ 18 ಜಿಲ್ಲೆಗಳ ಒಟ್ಟು 842 ಅಂಗನವಾಡಿ ಕಟ್ಟಡಗಳನ್ನು ರೂ. 13778.00 ಲಕ್ಷಗಳ ವೆಚ್ಚದಲ್ಲಿ ಮರುನಿರ್ಮಾಣ ಮಾಡಲು ಸರ್ಕಾರದ ಆದೇಶ ದಿನಾಂಕ:11.03.2020ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 2020-21ನೇ ಸಾಲಿನಲ್ಲಿ ರೂ.5000.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.</td></tr>
<tr><td>ಇ</td><td>ಈ ಅನುದಾನದಲ್ಲಿ ಎಷ್ಟು ಕಟ್ಟಡವನ್ನು ನಿರ್ಮಾಣವಾಗಿದೆ? (ವಿವರ ನೀಡುವುದು)</td><td>ನಿರ್ಮಾಣಗೊಂಡ ಕಟ್ಟಡಗಳ ವಿವರಗಳು ಈ ಕೆಳಗಿನಂತಿದೆ
<table>
<tr><th>ಕ್ರ.ಸಂ.</th><th>ಯೋಜನೆ</th><th>ಪೂರ್ಣ</th><th>ಪ್ರಗತಿ</th><th>ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.</th></tr>
<tr><td>1.</td><td>ವಿಶೇಷ ಅಭಿವೃದ್ಧಿ ಯೋಜನೆ</td><td>24</td><td>126</td><td>56</td></tr>
<tr><td>2.</td><td>ನರೇಗಾ ಒಗ್ಗೂಡಿಸುವಿಕೆ</td><td>11</td><td>39</td><td>25</td></tr>
<tr><td></td><td>ಒಟ್ಟು</td><td>35</td><td>165</td><td>81</td></tr>
</table>
842 ಅಂಗನವಾಡಿ ಕೇಂದ್ರಗಳನ್ನು ಆರ್.ಐ.ಡಿ.ಎಫ್-25 ಟ್ರಂಚ್‌ರಡಿಯಲ್ಲಿ ನಿರ್ಮಾಣ ಮಾಡಲು 2020-21ನೇ ಸಾಲಿನಲ್ಲಿ ಬಿಡುಗಡೆಯಾದ ರೂ.50.00ಕೋಟಿಗಳಲ್ಲಿ, 636 ಅಂಗನವಾಡಿ ಕಟ್ಟಡಗಳ ನಿರ್ಮಾಣವು ಪ್ರಗತಿಯಲ್ಲಿದೆ.</td></tr>
</table>

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ: ಮಮಇ 76 ಐಸಿಡಿ 2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1645

ಸದಸ್ಯರ ಹೆಸರು : ಡಾ॥ ರಂಗನಾಥ್ ಹೆಚ್.ಡಿ.(ಕುಣಿಗಲ್)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 10/03/2021

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಕುಣಿಗಲ್ ತಾಲ್ಲೂಕಿನಾದ್ಯಂತ ಅಂಗನವಾಡಿ ಮಕ್ಕಳಿಗೆ ಆಹಾರ ತಯಾರು ಮಾಡಿ ಸರಬರಾಜು ಮಾಡುತ್ತಿರುವ ಮಹಿಳಾ ಪೂರಕ ಪೌಷ್ಠಿಕ ಆಹಾರ ತಯಾರಿಕಾ ಘಟಕ (ಎಂ.ಎಸ್.ಪಿ.ಟಿ.ಸಿ.) ಹಾವಾಳ ಗ್ರಾಮ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಕುಣಿಗಲ್ ತಾಲ್ಲೂಕು ಹಾಗೂ ತುರುವೇಕೆರೆ ತಾಲ್ಲೂಕಿನ ಅಂಗನವಾಡಿ ಮಕ್ಕಳಿಗೆ ಅಪೌಷ್ಠಿಕ ಆಹಾರ ಪೂರೈಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ. ತುರುವೇಕೆರೆ ಮತ್ತು ಕುಣಿಗಲ್ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ. ಯು ಕುಣಿಗಲ್ ಮತ್ತು ತುರುವೇಕೆರೆ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ತಯಾರಿಸಿ ಸರಬರಾಜು ಮಾಡುತ್ತಿದೆ.
ಆ.	ಸದರಿ ಆಹಾರ ತಯಾರಿಸುವ ಘಟಕವು ಅವೈಜ್ಞಾನಿಕತೆಯಿಂದ ಕೂಡಿದ್ದು, ಈ ಗೋದಾಮಿನಲ್ಲಿ ಶೇಖರಿಸಿರುವ ಅಕ್ಕಿ, ಬೇಳೆ, ಕಾಳುಗಳು ಸಂಪೂರ್ಣವಾಗಿ ಹಾಳಾಗಿರುವ ಬಗ್ಗೆ ಸಾರ್ವಜನಿಕರು ನೀಡಿರುವ ದೂರಿನ ಮೇರೆಗೆ ಇಲ್ಲಿ ಅವ್ಯವಸ್ಥೆಯ ಕುರಿತು ಫೋಟೋ ಸಮೇತ ದೂರುಗಳನ್ವಯ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ವರದಿ ಮಾಡಲಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ತುರುವೇಕೆರೆ ಮತ್ತು ಕುಣಿಗಲ್ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ. ಯು ಕಳಪೆ ಗುಣಮಟ್ಟದ ಪೂರಕ ಪೌಷ್ಠಿಕ ಆಹಾರವನ್ನು ಸರಬರಾಜು ಮಾಡುತ್ತಿರುವ ಬಗ್ಗೆ ಬಂದಂತಹ ದೂರಿನ ಕುರಿತು ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸಲು ಉಪ ನಿರ್ದೇಶಕರು, ತುಮಕೂರು ಜಿಲ್ಲೆ ಇವರಿಗೆ ಸೂಚಿಸಲಾಗಿತ್ತು. ಸದರಿಯವರು ಈ ಬಗ್ಗೆ ಪರಿಶೀಲಿಸಿ ತುರುವೇಕೆರೆ ಮತ್ತು ಕುಣಿಗಲ್ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ಸಮಜಾಯಿಷಿ ಪಡೆದಿರುತ್ತಾರೆ. ಮುಂದುವರೆದು, ಉಪ ನಿರ್ದೇಶಕರು, ಎಂ.ಎಸ್.ಪಿ.ಟಿ.ಸಿ. ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಘಟಕದಲ್ಲಿನ ಆಹಾರ ಪದಾರ್ಥಗಳು ಉತ್ತಮ ಗುಣಮಟ್ಟದಿಂದ ಕೂಡಿರುತ್ತವೆ. ಅಕ್ಕಿಯನ್ನು ಪರಿಶೀಲಿಸಲಾಗಿ, ಕೆಲವು ಚೀಲಗಳಲ್ಲಿ ಕಪ್ಪು ಹುಳುಗಳು ಕಂಡು ಬಂದಿದ್ದು, ಎಫ್.ಸಿ.ಐ. ನಿಂದ ತುರುವೇಕೆರೆ ಗೋದಾಮಿಗೆ ಬಂದಾಗಲೇ ಹುಳುಗಳು ಇರುವುದಾಗಿ ತಿಳಿಸಿದ್ದು, ಕೂಡಲೇ ಅವುಗಳನ್ನು ಸ್ವಚ್ಛಗೊಳಿಸಿ ಹಾಗೂ ಗೋದಾಮನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಉಪ ನಿರ್ದೇಶಕರು ತಮ್ಮ ಭೇಟಿ ವೇಳೆಯಲ್ಲಿ ಸೂಚಿಸಿರುತ್ತಾರೆ.
ಇ.	ಕುಣಿಗಲ್ ತಾಲ್ಲೂಕಿಗೆ ಪ್ರತ್ಯೇಕವಾಗಿ ಮಹಿಳಾ ಪೂರಕ ಆಹಾರ ತಯಾರಿಕಾ ಘಟಕ (ಎಂ.ಎಸ್.ಪಿ.ಟಿ.ಸಿ.) ಮಂಜೂರು ಮಾಡುವಂತೆ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಗಿದ್ದು, ಈ ಘಟಕ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಘಟಕವನ್ನು ಯಾವಾಗ ಮಂಜೂರು ಮಾಡಲಾಗುವುದು ?	ಕುಣಿಗಲ್ ತಾಲ್ಲೂಕಿಗೆ ಪ್ರತ್ಯೇಕವಾಗಿ ಮಹಿಳಾ ಪೂರಕ ಆಹಾರ ತಯಾರಿಕಾ ಘಟಕ (ಎಂ.ಎಸ್.ಪಿ.ಟಿ.ಸಿ.) ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಸಂಖ್ಯೆ: ಮಮಇ 81 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1655
2)	ಸದಸ್ಯರ ಹೆಸರು	:	ಶ್ರೀ. ಸಂಜೀವ ಮಠಂದೂರ್
3)	ಉತ್ತರಿಸಬೇಕಾದ ದಿನಾಂಕ	:	10.03.2021
4)	ಉತ್ತರಿಸುವವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯಿಂದ ಪುತ್ತೂರು ಕೃಷಿ ಉತ್ಪನ್ನು ಮಾರುಕಟ್ಟೆಗೆ ಹೋಗುವ ರಸ್ತೆಯಲ್ಲಿ ಬರುವ ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕಬಕಪುತ್ತೂರು ಸ್ಟೇಷನ್ ಯಾರ್ಡ್‌ರಲ್ಲಿನ ಎಲ್.ಸಿ ಸಂಖ್ಯೆ: 105ರ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರವು ದಿನಾಂಕ: 31.10.2014ರಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. ಆದರೆ, ನೈರುತ್ಯ ರೈಲ್ವೆ ರವರಿಂದ ಮತ್ತೊಮ್ಮೆ ಹೊಸದಾಗಿ ತಾತ್ವಿಕ ಒಪ್ಪಿಗೆ ನೀಡುವಂತೆ ಕೋರಿ ದಿನಾಂಕ: 23.02.2021ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಕ್ರಮವಹಿಸಲಾಗುತ್ತಿದೆ.
ಆ	ಇದ್ದಲ್ಲಿ, ಈ ಬಗ್ಗೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	ಸದರಿ ಯೋಜನೆಗೆ ರೈಲ್ವೆ ಮಂಡಳಿಯಿಂದ ನೈರುತ್ಯ ರೈಲ್ವೆಯು ಅನುಮೋದನೆಯನ್ನು ಪಡೆದು ವಿಸ್ತೃತ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ, ಈ ಯೋಜನೆಗಾಗಿ ರಾಜ್ಯ ಸರ್ಕಾರದಿಂದ ನೀಡಬೇಕಾಗಿರುವ ಅನುದಾನಕ್ಕಾಗಿ ನಿಖರ ಕೋರಿಕೆಯನ್ನು ಸಲ್ಲಿಸಿದ ನಂತರ ಪರಿಶೀಲಿಸಲಾಗುವುದು.

ಸಂಖ್ಯೆ: ಮೂಅಇ 50 ರಾರಾಹೆ 2021/ಇ

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1658
ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ)	ಪುತ್ತೂರು ವಿಧಾನ ಸಭಾ ಕ್ಷೇತ್ರದ 2ನೇ ಅತಿ ದೊಡ್ಡ ಪಟ್ಟಣವಾದ ಉಪ್ಪಿನಂಗಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ನೂತನ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಪ್ರಸ್ತುತ ಉಪ್ಪಿನಂಗಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ನಿವೇಶನವನ್ನು ಹೊಂದಿರುವುದಿಲ್ಲ. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸೂಕ್ತ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದ್ದು, ಸೂಕ್ತ ನಿವೇಶನವನ್ನು ಮಂಜೂರು ಮಾಡುವಂತೆ ಜಿಲ್ಲಾಡಳಿತವನ್ನು ಕೋರಲಾಗಿದೆ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಪಿಡುಗಿನಿಂದಾಗಿ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತುಂಬಾ ಕಷ್ಟಕರವಾಗಿದೆ. ಆದಾಗ್ಯೂ ಕ.ರಾ.ರ.ಸಾ.ನಿಗಮಕ್ಕೆ ನಿವೇಶನ ದೊರೆತ ನಂತರ ನಿಗಮದ ಆರ್ಥಿಕ ಲಭ್ಯತೆ ಹಾಗೂ ಸಾರಿಗೆ ಅವಶ್ಯಕತೆಯನ್ನು ಆಧರಿಸಿ ಸಂಸ್ಥೆಯು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ:01/2015-16, ದಿ:06.06.2015ರ ಪ್ರಕಾರ ಪರಿಶೀಲಿಸಿ ಈ ಬಗ್ಗೆ ಕ್ರಮ ಜರುಗಿಸಲಾಗುವುದು.
ಆ)	ಇದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು? (ವಿವರ ಒದಗಿಸುವುದು)	

ಸಂಖ್ಯೆ: ಟಿಡಿ 83 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1659

ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರು (ಪುತ್ತೂರು)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ.	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ;	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 2104 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ 1884 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.
ಆ.	ಅವುಗಳಲ್ಲಿ ಎಷ್ಟು ಕಟ್ಟಡಗಳು ಹಳೆಯದಾಗಿವೆ;	ಒಟ್ಟು 1884 ಸ್ವಂತ ಕಟ್ಟಡಗಳ ಪೈಕಿ 333 ಅಂಗನವಾಡಿ ಕಟ್ಟಡಗಳು ಹಳೆಯದಾಗಿವೆ.
ಇ.	ಹಳೆಯದಾದ ಅಂಗನವಾಡಿ ಕಟ್ಟಡಗಳಿಗೆ ಹೊಸ ಕಟ್ಟಡವನ್ನು ನಿರ್ಮಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು? (ಮಾಹಿತಿ ನೀಡುವುದು)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 333 ಅಂಗನವಾಡಿ ಕೇಂದ್ರಗಳು ಹಳೆಯದಾಗಿದ್ದರೂ ಸುಸ್ಥಿತಿಯಲ್ಲಿರುವುದರಿಂದ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ. ಹಳೆಯ ಕಟ್ಟಡಗಳನ್ನು ದುರಸ್ಥಿಗೊಳಿಸಲು ಅಂಗನವಾಡಿ ಕಟ್ಟಡಗಳ ದುರಸ್ಥಿ ಯೋಜನೆಯಡಿ ಅಂದಾಜು ಗರಿಷ್ಠ ವೆಚ್ಚ ರೂ.50,000/-ದಂತೆ ಅನುದಾನವನ್ನು ತಾಲ್ಲೂಕು ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಸಂ: ಮಮಇ 83 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1660

ಸದಸ್ಯರ ಹೆಸರು : ಶ್ರೀ. ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡುತ್ತಿರುವ ಯೋಜನೆಗಳು ಯಾವುವು; ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ; (ವರ್ಷವಾರು ಜಿಲ್ಲಾವಾರು ವಿವರ ಒದಗಿಸುವುದು)	ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ-1A ರಲ್ಲಿ ಒದಗಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಅಂದರೆ 2017-18 ರಿಂದ 2019-20ರವರೆಗೆ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-1B ರಲ್ಲಿ ಒದಗಿಸಲಾಗಿದೆ.
ಆ)	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಕಳೆದ ಮೂರು ವರ್ಷಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳು ಮತ್ತು ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು; (ಯೋಜನೆ ಮತ್ತು ಲೆಕ್ಕ ಶೀರ್ಷಿಕೆವಾರು ವಿವರ ಒದಗಿಸುವುದು)	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಕಳೆದ ಮೂರು ವರ್ಷಗಳಲ್ಲಿ ಅಂದರೆ 2017-18 ರಿಂದ 2019-20ರವರೆಗೆ ಯೋಜನೆ ಮತ್ತು ಲೆಕ್ಕ ಶೀರ್ಷಿಕೆವಾರು ಬಿಡುಗಡೆ ಮಾಡಿದ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಯೋಜನೆಯಡಿ ಸಹಾಯಧನ ಪಡೆದ ವೈಯಕ್ತಿಕ ಫಲಾನುಭವಿಗಳು ಯಾರು ಯಾರು? (ಫಲಾನುಭವಿ ವಿವರದೊಂದಿಗೆ ವರ್ಷವಾರು, ಯೋಜನೆವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಯೋಜನೆಯಡಿ ಸಹಾಯಧನ ಪಡೆದ ಫಲಾನುಭವಿಗಳ ವಿವರಗಳನ್ನು ವರ್ಷವಾರು, ಯೋಜನೆವಾರು ಮಾಹಿತಿಯನ್ನು CDಯಲ್ಲಿ ಒದಗಿಸಲಾಗಿದೆ.

ಸಂಖ್ಯೆ: HORTI 109 HGM 2021

(ಸಹಿ)

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1661

ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)

ಉತ್ತರಿಸುವ ದಿನಾಂಕ: : 10/03/2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೈಂದೂರು ವಿಧಾನಸಭಾ ಕ್ಷೇತ್ರದ ಬೈಂದೂರು ಹೊಸ ತಾಲ್ಲೂಕಿನಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಇನ್ನು ಕಾರ್ಯಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ 2017-18ನೇ ಸಾಲಿನಲ್ಲಿ ಸೃಜನೆಯಾದ ಹೊಸ ತಾಲ್ಲೂಕುಗಳಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ರಚಿಸಲು ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಸಾಧ್ಯವಿರುವುದಿಲ್ಲವೆಂದು ಇಂತಹ ಪ್ರಸ್ತಾವನೆಗಳನ್ನು ಮುಂದೂಡುವಂತೆ ಆರ್ಥಿಕ ಇಲಾಖೆಯು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಸ್ತಾವನೆಯನ್ನು ಮುಂದೂಡಲಾಗಿದೆ.
ಆ)	ಬಂದಿದ್ದಲ್ಲಿ, ಕಛೇರಿ ತೆರೆಯುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	
ಇ)	ಯಾವ ಕಾಲಮಿತಿಯಲ್ಲಿ ಕಾರ್ಯಾರಂಭಗೊಳ್ಳುವುದು?	

ಸಂಖ್ಯೆ: AGRI-AGS-50/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1662

ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಓಡಾಡುತ್ತಿರುವ ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ಸ್ಥಗಿತಗೊಳಿಸಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿನ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೋವಿಡ್-19ರ ಸೋಂಕು ಹರಡುವಿಕೆಯಿಂದ ರಾಷ್ಟ್ರವ್ಯಾಪಿ ಲಾಕ್‌ಡೌನ್ ಘೋಷಿಸಿದ ಹಿನ್ನೆಲೆಯಲ್ಲಿ, ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಭಾಗಗಳಿಗೆ ಕಾರ್ಯಾಚರಣೆಯಲ್ಲಿದ್ದ 39 ಸಾಮಾನ್ಯ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ಸಡಿಲಗೊಂಡ ನಂತರ ಸಾರ್ವಜನಿಕರು/ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಯಾಣಿಕರ ಲಭ್ಯತೆ/ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು ಪ್ರಾರಂಭವಾಗದಿರುವುದರಿಂದ, ಪ್ರಯಾಣಿಕರು/ವಿದ್ಯಾರ್ಥಿಗಳ ಲಭ್ಯತೆಗೆ/ಅವಶ್ಯಕತೆಗೆ ಮತ್ತು ದಟ್ಟಣೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 32 ಸಾಮಾನ್ಯ ಸಾರಿಗೆಗಳನ್ನು ಮನರಾರಂಭಿಸಿದ್ದು, ಇದು ಪ್ರಸ್ತುತ ಇರುವ ಅವಶ್ಯಕತೆಗೆ ಅನುಗುಣವಾಗಿದ್ದು, ಇದರ ಉಪಯೋಗವನ್ನು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದಾರೆ.
ಆ)	ಬಂದಿದ್ದಲ್ಲಿ, ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದೆ ಓಡಾಡುತ್ತಿರುವ ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿನ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪುನಃ ಒದಗಿಸಲು ಕೈಗೊಂಡ ಕ್ರಮಗಳೇನು?	

ಸಂಖ್ಯೆ: ಟಿಡಿ 84 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1668
ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	10.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	2019-20ನೇ ಸಾಲಿನಲ್ಲಿ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ 5054ಲೆಕ್ಕ ಶೀರ್ಷಿಕೆಯಲ್ಲಿ ಮಳೆಯಿಂದ ಹಾನಿಗೀಡಾಗಿರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ರೂ.150.00 ಅನುದಾನವನ್ನು ಬಿಡುಗಡೆ ಮಾಡಿರುವುದು ನಿಜವೇ;	2019-20ನೇ ಸಾಲಿನಲ್ಲಿ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ 5054 ಲೆಕ್ಕ ಶೀರ್ಷಿಕೆಯಲ್ಲಿ ಮಳೆಯಿಂದ ಹಾನಿಗೀಡಾಗಿರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ರೂ.70.83 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.
ಆ.	ಮಳೆಯಿಂದ ಹಾನಿಗೀಡಾಗಿರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ಮಾರ್ಚ್ 2020ನೇ ಸಾಲಿನಲ್ಲಿಯೇ ಪೂರ್ಣ ಪ್ರಮಾಣ ದಲ್ಲಿ ಪೂರ್ಣಗೊಂಡಿದ್ದರೂ ಸಹ ಮಾರ್ಚ್ ತಿಂಗಳ ಅಂತ್ಯದಲ್ಲಿ ಅನುದಾನದ ಕೊರತೆ ಯಿಂದ ಶೇಕಡ 50 ರಷ್ಟು ಹಣ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಬಾಕಿ ಇರುವ ಶೇಕಡಾ 50ರಷ್ಟು ಹಣ ರೂ.75.00ಲಕ್ಷಗಳ ಅನುದಾನದ ಬಿಡುಗಡೆಗೆ ಸರ್ಕಾರ ಕೈಗೊಂಡಿ ರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ಬಂದಿದೆ 2019-20 ನೇ ಸಾಲಿನಲ್ಲಿ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೀಡಾಗಿರುವ ಗ್ರಾಮೀಣ ರಸ್ತೆಗಳ ದುರಸ್ತಿಗಾಗಿ ರೂ.260.00 ಲಕ್ಷಗಳ ಅನುದಾನ ನಿಗಧಿಗೊಳಿಸಲಾಗಿದೆ. ಈ ಪೈಕಿ 2019-20ನೇ ಸಾಲಿನಲ್ಲಿ ರೂ.95.27 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ರೂ.54.44 ಲಕ್ಷಗಳು ವೆಚ್ಚವಾಗಿರುತ್ತದೆ. ಬಾಕಿ ರೂ.205.56 ಲಕ್ಷಗಳು ಬಿಡುಗಡೆಗೆ ಬಾಕಿ ಇರುತ್ತದೆ. ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಂಡಿದ್ದು, ಆರ್ಥಿಕ ಇಲಾಖೆಯು ಒದಗಿಸುವ ಅನುದಾನದ ಲಭ್ಯತೆಯನ್ನಾಧರಿಸಿ ಬಿಡುಗಡೆಗೆ ಕ್ರಮ ವಹಿಸಬೇಕಿದೆ.

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/01:ಆರ್‌ಆರ್‌ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1673

ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ)</td><td>ನೆಲಮಂಗಲದಲ್ಲಿ ಹೈಟೆಕ್ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭ ಮಾಡಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಪರಿಹಾರಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ;</td><td rowspan="4">ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ನೆಲಮಂಗಲದಲ್ಲಿ ಬಸ್ ನಿಲಾಣಕ್ಕಾಗಿ ಒಟ್ಟು 2 ಎಕರೆ 23 ಗುಂಟೆ ಪ್ರದೇಶವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 1998ರಲ್ಲಿ ಹಂಚಿಕೆ ಮಾಡಲಾಗಿರುತ್ತದೆ. ಈ ಪ್ರದೇಶದಲ್ಲಿ ಆಧುನಿಕ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ನಿವೇಶನದಲ್ಲಿ 01 ಎಕರೆ 15 ಗುಂಟೆ ನಿವೇಶನವನ್ನು ಕರ್ನಾಟಕ ವಕ್ಫ್ ಮಂಡಳಿಯಿಂದ ಪಡೆಯಲಾಗಿದ್ದು, ಅದರ ಖಾತಾ ಮತ್ತು ಋಣಭಾರ ದಾಖಲೆಗಳು ಸಾರಿಗೆ ನಿಗಮಕ್ಕೆ ವರ್ಗಾವಣೆಯಾಗಿರುತ್ತದೆ. ನೆಲಮಂಗಲ ಪುರಸಭೆಗೆ ಸೇರಿದ 1 ಎಕರೆ 8 ಗುಂಟೆ ವಿಸ್ತೀರ್ಣದ ನಿವೇಶನವನ್ನು ಸಾರಿಗೆ ನಿಗಮಕ್ಕೆ ಉಚಿತವಾಗಿ ಹಸ್ತಾಂತರಿಸಲಾಗಿದೆ. ಆದರೆ, ಈವರೆಗೂ ಈ ನಿವೇಶನಕ್ಕೆ ಸಂಬಂಧಿಸಿದ ಖಾತಾ ಮತ್ತು ಋಣಭಾರ ದಾಖಲೆಗಳು ಸಾರಿಗೆ ನಿಗಮಕ್ಕೆ ವರ್ಗಾವಣೆಯಾಗಿರುವುದಿಲ್ಲ.

ಕ.ರಾ.ರ.ಸಾ.ನಿಗಮದಿಂದ ನಿರ್ಮಿಸುವ ಆಧುನಿಕ ಬಸ್ ನಿಲ್ದಾಣದಿಂದ ಬರುವ ವಾಣಿಜ್ಯ ಆದಾಯವನ್ನು ಸಾರಿಗೆ ನಿಗಮಗಳು ಮತ್ತು ನಗರಸಭೆ ಹಂಚಿಕೆ ಮಾಡಿಕೊಳ್ಳುವ ಬಗ್ಗೆ ಒಡಂಬಡಿಕೆ (MOU) ಮಾಡಿಕೊಂಡು ಖಾತಾ ಮತ್ತು ಋಣಭಾರ ದಾಖಲೆಗಳನ್ನು ಸಾರಿಗೆ ನಿಗಮಕ್ಕೆ ವರ್ಗಾವಣೆ ಮಾಡುವಂತೆ ತೀರ್ಮಾನಿಸಲಾಗಿರುತ್ತದೆ. ಅದರಂತೆ, ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು ಹಾಗೂ ಖಾತಾ ಮತ್ತು ಋಣಭಾರ ದಾಖಲೆಗಳನ್ನು ಸಾರಿಗೆ ನಿಗಮಕ್ಕೆ ವರ್ಗಾವಣೆ ಮಾಡುವ ಕುರಿತು ಪ್ರಸ್ತಾವನೆಯನ್ನು ನೆಲಮಂಗಲ ನಗರಸಭೆಗೆ ಸಲ್ಲಿಸಲಾಗಿರುತ್ತದೆ.

ಸಹಮತ ದೊರೆತು ಒಡಂಬಡಿಕೆ ಮಾಡಿಕೊಂಡ ನಂತರ ಬಸ್ ನಿಲ್ದಾಣ ನಿರ್ಮಾಣ ಕೆಲಸವನ್ನು ಪ್ರಾರಂಭಿಸಲಾಗುವುದು.</td></tr>
<tr><td>ಆ)</td><td>ಹೈಟೆಕ್ ಬಸ್ ನಿಲ್ದಾಣಕ್ಕೆ ಅನುದಾನ ಮಂಜೂರಾಗಿ ಟೆಂಡರ್ ಪ್ರಕ್ರಿಯೆ ಮುಗಿದಿದ್ದರೂ ಬಸ್ ನಿಲ್ದಾಣದ ಕಾಮಗಾರಿಗೆ ಇರುವ ಸಮಸ್ಯೆಗಳೇನು; ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು;</td></tr>
<tr><td>ಇ)</td><td>ನೆಲಮಂಗಲದಲ್ಲಿರುವ ಬಸ್ ನಿಲ್ದಾಣ ಜಾಗದ ಸಮಸ್ಯೆಗೆ ಸಾರಿಗೆ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಇದರ ಪರಿಹಾರಕ್ಕಾಗಿ ಯಾವ ತೀರ್ಮಾನವನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)</td></tr>
<tr><td>ಈ)</td><td>ಹೈಟೆಕ್ ಬಸ್ ನಿಲ್ದಾಣದ (MOU) ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)</td></tr>
</table>

ಸಂಖ್ಯೆ: ಟಿಡಿ 86 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

with C.D

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ : 1782

ಸದಸ್ಯರ ಹೆಸರು : ಶ್ರೀ. ರಾಜೇಗೌಡ ಟಿ.ಡಿ., (ಶೃಂಗೇರಿ)
ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತುರೇಷ್ಮೆ ಸಚಿವರು
ಉತ್ತರಿಸುವ ದಿನಾಂಕ : 10/03/2021.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸರ್ಫಾಸಿ ಕಾಯಿದೆಯ ಕಾಫಿ ಪ್ಲಾಂಟೇಷನ್‌ಗಳಿಗೆ ಮಾರಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಕಾಫಿ ಪ್ಲಾಂಟೇಷನ್‌ಗಳನ್ನು ಸರ್ಫಾಸಿ ಕಾಯಿದೆಯಿಂದ ಕೈಬಿಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;	ಹೌದು. ಕಾಫೀ ಮಂಡಳಿ ವತಿಯಿಂದ ಕ್ರಮಕೈಗೊಳ್ಳಲಾಗಿರುತ್ತದೆ.
ಇ)	ಸರ್ಫಾಸಿ ಕಾಯಿದೆಯ ಉದ್ದೇಶ, ನಿಯಮ / ಮಾರ್ಗಸೂಚಿಗಳಾವುವು; (ಆದೇಶ ಪ್ರತಿಯೊಂದಿಗೆ ವಿವರ ನೀಡುವುದು).	ಲಗತ್ತಿಸಿದೆ.
ಈ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ಎಸ್ಟೇಟ್ ಮಾಲೀಕರು ಸರ್ಫಾಸಿ ಕಾಯಿದೆಯಿಂದ ಕಾಫಿ ತೋಟವನ್ನು ಕಳೆದುಕೊಂಡಿದ್ದಾರೆ? (ಜಿಲ್ಲಾವಾರು ಮಾಹಿತಿ ನೀಡುವುದು).	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಎಸ್ಟೇಟ್ ಮಾಲೀಕರು ಸರ್ಫಾಸಿ ಕಾಯಿದೆಯಿಂದ ಕಾಫಿ ತೋಟವನ್ನು ಕಳೆದುಕೊಂಡಿರುವವರ ವಿವರಗಳನ್ನು ವಿವಿಧ ಆರ್ಥಿಕ ಸಂಸ್ಥೆಗಳಿಂದ ಕೇಂದ್ರ ಕಾಫಿ ಮಂಡಳಿಯು ಮಾಹಿತಿ ಪಡೆಯಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: HORTI 113 HGM 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

with CD

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1784

ಸದಸ್ಯರ ಹೆಸರು : ಶ್ರೀ. ವೀರಭದ್ರಯ್ಯ ಎಂ.ವಿ.(ಮಧುಗಿರಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಿಂದ ಮಧುಗಿರಿ ಕ್ಷೇತ್ರಕ್ಕೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಲ್ಲಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ;	ಕಳೆದ ಮೂರು ವರ್ಷಗಳಿಂದ ಅಂದರೆ 2017-18 ರಿಂದ 2019-20ನೇ ಸಾಲಿನವರೆಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ರೂ.1110.36 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
ಆ)	ಇದರಿಂದ ಎಷ್ಟು ರೈತರಿಗೆ ಅನುಕೂಲವಾಗಿರುತ್ತದೆ? (ರೈತರ ಹೆಸರು ಮತ್ತು ವಿಳಾಸದೊಂದಿಗೆ ಸಂಪೂರ್ಣ ವಿವರ ನೀಡುವುದು)	ಇದರಿಂದ 1194 ರೈತರಿಗೆ ಅನುಕೂಲವಾಗಿರುತ್ತದೆ. ರೈತರ ಹೆಸರು ಮತ್ತು ವಿಳಾಸ, ಸಂಪೂರ್ಣ ವಿವರವನ್ನು ಸಿ.ಡಿ.ಯಲ್ಲಿ ಒದಗಿಸಿದೆ.

ಸಂಖ್ಯೆ: HORTI 106 HGM 2021

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1414

ಸದಸ್ಯರ ಹೆಸರು : ಶ್ರೀ ವೇದವ್ಯಾಸ ಕಾಮತ್ ಡಿ.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ನರ್ಮ್ ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕೆ.ಎಸ್.ಆರ್.ಟಿ.ಸಿ. ಸಿಟಿ ಬಸ್ಸುಗಳನ್ನು ಒದಗಿಸಲು ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ನರ್ಮ್ ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಿಟಿ ಬಸ್ಸುಗಳನ್ನು ಕಾರ್ಯಾಚರಿಸಲು ಈ ಹಿಂದೆ ಕೆ.ಎಸ್.ಆರ್.ಟಿ.ಸಿ. ಸಿಟಿ ಬಸ್ಸುಗಳನ್ನು ಒದಗಿಸಲು ಸಲ್ಲಿಸಿದ್ದ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ, ಈ ಹಿಂದೆ 2013-14ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ಜೆ.ಎನ್.ನರ್ಮ್-2/ಅಮೃತ್ ಯೋಜನೆ ಅಡಿಯಲ್ಲಿ ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿ ಬರುವ 13 ನಗರಗಳಿಗೆ 487 ನಗರ ಸಾರಿಗೆ ವಾಹನಗಳನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ 65 ವಾಹನಗಳನ್ನು ಮಂಗಳೂರು+ಉಡುಪಿ ನಗರಕ್ಕೆ ನೀಡಲು ಮಂಜೂರಾಗಿದ್ದು, ಸದರಿ 65 ನಗರ ಸಾರಿಗೆ ವಾಹನಗಳನ್ನು ಮಂಗಳೂರು+ಉಡುಪಿ ನಗರಕ್ಕೆ ನಿಯೋಜಿಸಲಾಗಿದೆ.
ಆ)	ಬಂದಿದ್ದಲ್ಲಿ, ಮಹಾನಗರ ಪಾಲಿಕೆಯ ವ್ಯಾಪ್ತಿಯ ಸಿಟಿ ಬಸ್ಸುಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಕ.ರಾ.ರ.ಸಾ.ನಿಗಮದ ವತಿಯಿಂದ ಮಂಗಳೂರು ನಗರಕ್ಕೆ 35 ನರ್ಮ್ ನಗರ ಸಾರಿಗೆಗಳು ಹಂಚಿಕೆಯಾಗಿರುತ್ತದೆ. ಅದರಲ್ಲಿ ಮಂಗಳೂರು ನಗರದಲ್ಲಿ 21 ನರ್ಮ್ ಬಸ್ಸುಗಳಿಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಲಭ್ಯವಾದ ಪರವಾನಿಗೆಗಳನ್ನು ಉಪಯೋಗಿಸಿಕೊಂಡು ಕೋವಿಡ್-19 ಮುನ್ನ ಸಾರಿಗೆಗಳನ್ನು ಕಾರ್ಯಾಚರಿಸಲಾಗುತ್ತಿತ್ತು. ಬಾಕಿ ಉಳಿದ 14 ಬಸ್ಸುಗಳ ಕಾರ್ಯಾಚರಣೆಗೆ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿರುತ್ತದೆ. ಈ ಸಂಬಂಧ ಕ.ರಾ.ರ.ಸಾ.ನಿಗಮದ ವತಿಯಿಂದ ತಡೆಯಾಜ್ಞೆ ತೆರವುಗೊಳಿಸುವ ಪ್ರಕ್ರಿಯೆ ನಡೆಯುತ್ತಿದ್ದು, ತಡೆಯಾಜ್ಞೆ ತೆರವುಗೊಂಡ ನಂತರ ಸದರಿ ಮಾರ್ಗಗಳಿಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಪರವಾನಿಗೆಗಳು ನಿಗಮಕ್ಕೆ ಮಂಜೂರು ಮಾಡಬೇಕಾಗಿರುತ್ತದೆ. ಅಲ್ಲದೆ, ಮಂಗಳೂರು ನಗರ ವ್ಯಾಪ್ತಿಯಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ವಿವಿಧ ಪ್ರದೇಶಗಳಿಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರಿಂದ ಪರವಾನಿಗೆಗಳನ್ನು ಪಡೆದು 15 ನಗರ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿರುತ್ತದೆ.

...2

		ಕೋವಿಡ್-19ರ ಕಾರಣದಿಂದಾಗಿ ನಿಗಮದ ಸಾರಿಗೆಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾದ ಪರಿಣಾಮವಾಗಿ ಹಾಗೂ ಜನದಟ್ಟಣೆ ವಿರಳವಾಗಿದ್ದರಿಂದ ನಗರ ಸಾರಿಗೆಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಇನ್ನೂ ಹಲವಾರು ಶಾಲೆಗಳು ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಾಗೂ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗೆ ಅನುಸಾರವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. 15 ನಗರ ಸಾರಿಗೆಗಳ ಪೈಕಿ 14 ನಗರ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ವಿರಳ ಜನಸಂದಣಿಯಿಂದ 21 ನರ್ಮ್ ಸಾರಿಗೆಗಳ ಪೈಕಿ 9 ಸಾರಿಗೆಗಳನ್ನು ಪ್ರಸ್ತುತ ಕಾರ್ಯಾಚರಣೆ ಮಾಡಲಾಗುತ್ತಿದೆ.
ಇ)	ನರ್ಮ್ ಯೋಜನೆಯಡಿಯಲ್ಲಿ 2018 ರಿಂದ ಪ್ರಸ್ತುತ ಸಾಲಿನವರೆಗೆ ಮಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿರುವ ಒಟ್ಟು ಬಸ್ಸುಗಳೆಷ್ಟು;	ನರ್ಮ್ ಯೋಜನೆಯಡಿಯಲ್ಲಿ 2018 ರಿಂದ ಪ್ರಸ್ತುತ ಸಾಲಿನವರೆಗೆ ಮಂಗಳೂರು ಮಹಾನಗರ ಪಾಲಿಕೆಗೆ ಬಸ್ಸುಗಳನ್ನು ಒದಗಿಸಿರುವುದಿಲ್ಲ. ನರ್ಮ್ ಯೋಜನೆಯು ದಿನಾಂಕ:31.03.2017ಕ್ಕೆ ಮುಕ್ತಾಯ ಗೊಂಡಿರುತ್ತದೆ.
ಈ)	ಈ ಯೋಜನೆಯಡಿ ಒಟ್ಟು ಎಷ್ಟು ಬಸ್ಸುಗಳನ್ನು ಮಹಾನಗರ ಪಾಲಿಕೆಗೆ ಒದಗಿಸಬಹುದು; ಹಾಗೂ ಬಸ್ಸುಗಳ ಕೊರತೆಯನ್ನು ನೀಗಿಸುವಲ್ಲಿ ಸರ್ಕಾರದ ವಿಫಲತೆಗೆ ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ: ಟಿಡಿ 66 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1422
ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್
ಉತ್ತರಿಸಬೇಕಾದ ದಿನಾಂಕ	:	10.03.2021
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಬುದ್ಧಿಮಾಂದ್ಯ ಹಾಗೂ ವಿಕಲ ಚೇತನ ಮಕ್ಕಳಿಗಾಗಿ ಶಾಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳ ಸಂಖ್ಯೆಯೆಷ್ಟು;	ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾವತಿಯಿಂದ ಹಾಗೂ ಸ್ವಯಂ ಸೇವಾ ಸಂಸ್ಥೆಗಳಮೂಲಕ ಈ ಕೆಳಗಿನಂತೆ ಬುದ್ಧಿಮಾಂದ್ಯ ಹಾಗೂ ವಿಕಲಚೇತನರ ಮಕ್ಕಳಿಗಾಗಿ ಶಾಲೆಗಳು ಇರುತ್ತದೆ. 1. ಸರ್ಕಾರಿ ವಿಶೇಷ ಶಾಲೆಗಳು – 08 2. ಶಿಶು ಕೇಂದ್ರೀಕೃತ ಯೋಜನೆ ದೃಷ್ಟಿದೋಷವುಳ್ಳ ಮಕ್ಕಳ ಶಾಲೆ – 17 ಶ್ರವಣದೋಷವುಳ್ಳ ಮಕ್ಕಳ ಶಾಲೆ – 42 ಬುದ್ಧಿಮಾಂದ್ಯ ಮಕ್ಕಳ ಶಾಲೆ – 82 3. 1982ರ ರಾಜ್ಯ ಅನುದಾನಿತ ವಿಶೇಷ ಶಾಲೆಗಳು – 34
ಆ)	ಬೆಳಗಾವಿ ನಗರದಲ್ಲಿ ಮಾಹೇಶ್ವರಿ ಅಂಧ ಮಕ್ಕಳ ಶಾಲೆ ಹಾಗೂ ಬೈಲಹೊಂಗಲ ನಗರದಲ್ಲಿ ಕಾರ್ಮೆಲ್ ವಿದ್ಯಾ ವಿಕಾಸ ಕೇಂದ್ರ ಇದ್ದು ಈ ಶಾಲೆಗಳ ಶಿಕ್ಷಕರಿಗೆ ವೇತನ ಸರಿಯಾಗಿ ಪಾವತಿ ಆಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ನಗರದಲ್ಲಿ 1982ರ ರಾಜ್ಯ ಅನುದಾನ ಸಂಹಿತೆಯಡಿ ಜಿಲ್ಲಾ ಪಂಚಾಯತ್ ಅನುದಾನ ಪಡೆದು ಎರಡು ವಿಶೇಷ ಶಾಲೆಗಳು ಅಂದರೆ ಮಾಹೇಶ್ವರಿ ಅಂಧ ಮಕ್ಕಳ ಶಾಲೆ ಹಾಗೂ ಆರಾಧನ ಬುದ್ಧಿಮಾಂದ್ಯ ಮಕ್ಕಳ ಶಾಲೆ ನಡೆಯುತ್ತಿವೆ. ಈ ಶಾಲೆಗಳು ಜಿಲ್ಲಾ ಪಂಚಾಯತ್ ಮೂಲಕ ಅನುದಾನ ಪಡೆಯುತ್ತಿವೆ. ಶಿಕ್ಷಕರಿಗೆ ವೇತನ ಸರಿಯಾಗಿ ಪಾವತಿ ಆಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಅಂಗವಿಕಲರ ಮಕ್ಕಳ ಶಿಶುಕೇಂದ್ರಿಕೃತ ಯೋಜನೆಯಡಿ ಕಾರ್ಮೆಲ್ ವಿದ್ಯಾವಿಕಾಸ ಕೇಂದ್ರ, ಬೈಲಹೊಂಗಲ ಸಂಸ್ಥೆಯವರು ಬುದ್ಧಿಮಾಂದ್ಯ ಮಕ್ಕಳ ಶಾಲೆಯನ್ನು ನಡೆಸುತ್ತಿದ್ದು, ಆಯಾ ವರ್ಷದಲ್ಲಿದ್ದ ಮಕ್ಕಳ ಹಾಗೂ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಸಹಾಯಾನುದಾನವನ್ನು ನೀಡಲಾಗುತ್ತಿದೆ. ಶಿಕ್ಷಕರಿಗೆ ಗೌರವಧನವನ್ನು ಸರಿಯಾಗಿ ಪಾವತಿ ಮಾಡಲಾಗುತ್ತಿದೆ.
ಇ)	ಈ ಶಾಲೆಯವರು ಹುದ್ದೆ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರತಿ ವರ್ಷ ಪ್ರಸ್ತಾವನೆಯನ್ನು ಕಳುಹಿಸುತ್ತಿರುವುದು ನಿಜವೇ;	ಸದರಿ ಶಾಲೆಯ ಹುದ್ದೆ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರತಿ ವರ್ಷ ಪ್ರತ್ಯೇಕ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಆದರೆ 1982 ರಾಜ್ಯ ಅನುದಾನ ಸಂಹಿತೆಯಡಿ ಕಾರ್ಯ ನಿರ್ವಹಿಸುತ್ತಿರುವ 27 ವಿಶೇಷ ಶಾಲೆಗಳಲ್ಲಿನ ಹುದ್ದೆಗಳನ್ನು ಸರ್ಕಾರದಲ್ಲಿ ವಿಲೀನಗೊಳಿಸುವ ವಿಷಯವು ಪರಿಶೀಲನೆಯಲ್ಲಿದ್ದು, ಈ 27 ಶಾಲೆಗಳ ಪೈಕಿ ಸದರಿ ಶಾಲೆಯೂ ಸಹ ಒಂದಾಗಿರುತ್ತದೆ.

..2

ಈ)	ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಶಾಲೆಗಳ ಶಿಕ್ಷಕರಿಗೆ ವೇತನ ಬಿಡುಗಡೆ ಮಾಡಲು ಹಾಗೂ ಹುದ್ದೆ ತುಂಬಲು ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದೇ?	ಪ್ರಸ್ತುತ ವಿಷಯವು ಪರಿಶೀಲನಾ ಹಂತದಲ್ಲಿರುತ್ತದೆ.

ಸಂಖ್ಯೆ: ಮಮಇ 72 ಪಿಹೆಚ್‌ಪಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1440
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	:	10-03-2021.
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಅಲ್ಪಸಂಖ್ಯಾತರ ಧಾರ್ಮಿಕ ಕೇಂದ್ರಗಳ ಮಸೀದಿ, ಚರ್ಚ್ ಇತರೆ ಕಾಲೋನಿಗಳ ಅಭಿವೃದ್ಧಿಗೆ ಬೇಡಿಕೆ ಇರುವುದು ನಿಜವೇ;</td><td><u>ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ</u>
ಬೆಳಗಾವಿ ಜಿಲ್ಲೆಯ ಕಿತ್ತೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಅಲ್ಪಸಂಖ್ಯಾತರ ಧಾರ್ಮಿಕ ಚರ್ಚ್‌ಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆಗೆ ಮಾನ್ಯ ಶಾಸಕರಿಂದ ದಿನಾಂಕ:05-01-2021 ರಲ್ಲಿ ಬೇಡಿಕೆ ಸಲ್ಲಿಸಿದ್ದು ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ.

<u>ಕರ್ನಾಟಕ ರಾಜ್ಯ ವಕ್ಫ್ ಮಂಡಳಿ</u>
ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರು ಮಸೀದಿಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಪ್ರಸ್ತುತ ಯಾವುದೇ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ.</td></tr>
<tr><td>ಆ</td><td>ಹಾಗಿದ್ದಲ್ಲಿ; ಅಲ್ಪಸಂಖ್ಯಾತರ ಧಾರ್ಮಿಕ ಕೇಂದ್ರಗಳ ಮತ್ತು ಕಾಲೋನಿಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಗೆ ಸರ್ಕಾರದ ಕ್ರಮವೇನು?</td><td>ಅಲ್ಪಸಂಖ್ಯಾತರ ಧಾರ್ಮಿಕ ಕೇಂದ್ರಗಳ ಪೈಕಿ ಚರ್ಚುಗಳ ದುರಸ್ಥಿ/ನವೀಕರಣಕ್ಕಾಗಿ ಅನುದಾನವನ್ನು ಚರ್ಚುಗಳ ಕಟ್ಟಡ ನಿರ್ಮಾಣದ ವರ್ಷಗಳಗನುಸಾರವಾಗಿ ಕೆಳಕಂಡಂತೆ ಬಿಡುಗಡೆ ಮಾಡಲಾಗುವುದು.
<table><tr><th>ಕ್ರ.ಸಂ</th><th>ವಿಷಯ</th><th>ಬಿಡುಗಡೆ ಮಾಡಬಹುದಾದ ಅನುದಾನ</th></tr><tr><td>1</td><td>100 ವರ್ಷ ಮೇಲ್ಪಟ್ಟು</td><td>ರೂ.50.00 ಲಕ್ಷ ಅಥವಾ ಅಂದಾಜು ವೆಚ್ಚದ ಶೇ. 90 ಪ್ರತಿಶತ ಯಾವುದು ಕಡಿಮೆಯೋ ಆ ಮೊತ್ತ.</td></tr><tr><td>2</td><td>76-100 ವರ್ಷ</td><td>ರೂ.40.00 ಲಕ್ಷ ಅಥವಾ ಅಂದಾಜು ವೆಚ್ಚದ ಶೇ. 60 ಪ್ರತಿಶತ ಯಾವುದು ಕಡಿಮೆಯೋ ಆ ಮೊತ್ತ.</td></tr><tr><td>3</td><td>51-75 ವರ್ಷ</td><td>ರೂ.30.00 ಲಕ್ಷ ಅಥವಾ ಅಂದಾಜು ವೆಚ್ಚದ ಶೇ. 50 ಪ್ರತಿಶತ ಯಾವುದು ಕಡಿಮೆಯೋ ಆ ಮೊತ್ತ.</td></tr><tr><td>4</td><td>26-50 ವರ್ಷ</td><td>ರೂ. 25.00 ಲಕ್ಷ ಅಥವಾ ಅಂದಾಜು ವೆಚ್ಚದ ಶೇ. 40 ಪ್ರತಿಶತ ಯಾವುದು ಕಡಿಮೆಯೋ ಆ ಮೊತ್ತ.</td></tr><tr><td>5</td><td>11-25 ವರ್ಷ</td><td>ರೂ. 10.00 ಲಕ್ಷ.</td></tr><tr><td>6</td><td>1 ರಿಂದ 10 ವರ್ಷ</td><td>ಯಾವುದೇ ಅನುದಾನ ಇರುವುದಿಲ್ಲ.</td></tr></table>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಿಂದ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ಅನುದಾನ ಲಭ್ಯತೆ ಅನುಸಾರ ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಲಾಗುವುದು.</td></tr>
</table>

		ಬೆಂಗಳೂರು ಸೇರಿದಂತೆ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಅಧಿಸೂಚಿತವಲ್ಲದ ಅಲ್ಪಸಂಖ್ಯಾತರ ಕೊಳಗೇರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ 2020-21ನೇ ಸಾಲಿನಲ್ಲಿ ರೂ.200.00ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದ್ದು ಪರಿಷ್ಕೃತ ಆಯವ್ಯಯದಲ್ಲಿ ಸದರಿ ಯೋಜನೆಗೆ ರೂ.48.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಸಂಖ್ಯೆ: **MWD 58 LMQ 2021**

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1442
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	10-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರವಾಹದಿಂದ ಅಂಗನವಾಡಿ ಕೇಂದ್ರಗಳು ಶಿಥಿಲಾವಸ್ಥೆಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ.	ಬಂದಿದ್ದಲ್ಲಿ, ಅಂಗನವಾಡಿ ಕೇಂದ್ರಗಳ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರದ ಕ್ರಮವೇನು?	2019-20 ನೇ ಸಾಲಿನಲ್ಲಿ ಕಿತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಹ ಹಾಗೂ ಮಳೆಯಿಂದ 65 ಕಟ್ಟಡಗಳು ಹಾನಿಗೊಳಗಾಗಿದ್ದು, ಈ ಪೈಕಿ 56 ಕಟ್ಟಡಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿ ರೂ.57.35 ಲಕ್ಷ ಅನುದಾನದಲ್ಲಿ ದುರಸ್ತಿ ಮಾಡಿಸಲಾಗಿದೆ. ಮುಂದುವರೆದು, 9 ಕಟ್ಟಡಗಳು ಸಂಪೂರ್ಣ ಹಾನಿಗೊಳಗಾಗಿದ್ದು ಆರ್.ಐ.ಡಿ.ಎಫ್.-25 ರಡಿ ತಲಾ ರೂ.17.00 ಲಕ್ಷ ಘಟಕ ವೆಚ್ಚದಂತೆ ಒಟ್ಟು ರೂ.153.00 ಲಕ್ಷ ಅನುದಾನ ಅಂಗನವಾಡಿ ಕಟ್ಟಡಗಳ ಪುನರ್ ನಿರ್ಮಾಣಕ್ಕೆ ಈಗಾಗಲೇ ಬಿಡುಗಡೆಯಾಗಿರುತ್ತದೆ. ಕಟ್ಟಡ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. (ವಿವರ ಅನುಬಂಧದಲ್ಲಿ ಒದಗಿಸಲಾಗಿದೆ)

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ: ಮಮಇ 89 ಐಸಿಡಿ 2021

ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ್ (ಕಿತ್ತೂರು) ವಿಧಾನ ಸಭಾ ಸದಸ್ಯರು ಇವರ ಪ್ರಶ್ನೆ ಸಂ:1442 ಕ್ಕೆ ಅನುಬಂಧ

2019-20 ನೇ ಸಾಲಿನಲ್ಲಿ ಮಳೆಯಿಂದ ಹಾನಿಗೊಳಗಾದ ಅಂಗನವಾಡಿ ಕಟ್ಟಡಗಳನ್ನು ಆರ್ ಐ ಡಿ ಎಫ್ -25 ರಡಿ ಪುನರ್ ನಿರ್ಮಾಣದ ಪ್ರಗತಿ ವಿವರ

ಕ್ರಸಂ	ಶಿಶು ಅಭಿವೃದ್ಧಿ ಯೋಜನೆ	ಗ್ರಾಮ ಪಂಚಾಯತಿ ಹೆಸರು	ಗ್ರಾಮದ ಹೆಸರು	ಅಂಗನವಾಡಿ ಕೇಂದ್ರ	ಅಂದಾಜು ಮೊತ್ತ	ಪ್ರಗತಿ ಹಂತ
1	ಬೈಲಹೊಂಗಲ	ಸುತಗಟ್ಟಿ	ಮತ್ತಿಕೊಪ್ಪ	ಮತ್ತಿಕೊಪ್ಪ-266	17.00	ತಳಪಾಯ
2	ಬೈಲಹೊಂಗಲ	ಚಿಕ್ಕಬಾಗೇವಾಡಿ	ಬೆಣಚಿನಮರಡಿ	ಬಣಚಿನಮರಡಿ-30	17.00	ಆರ್.ಸಿ.ಸಿ ಆಗಿದೆ
3	ಬೈಲಹೊಂಗಲ	ನಾಗನೂರ	ಪಾಂಡುರಂಗನಗರ	ಪಾಂಡುರಂಗನಗರ-404	17.00	ಲಿಂಟಲ್ ಹಂತ
4	ಬೈಲಹೊಂಗಲ	ಭಾಂವಿಹಾಳ	ಲಕ್ಕುಂಡಿ	ಲಕ್ಕುಂಡಿ-224	17.00	ಲಿಂಟಲ್ ಹಂತ
5	ಬೈಲಹೊಂಗಲ	ಭಾಂವಿಹಾಳ	ಲಕ್ಕುಂಡಿ	ಲಕ್ಕುಂಡಿ-225	17.00	ಲಿಂಟಲ್ ಹಂತ
6	ಬೈಲಹೊಂಗಲ	ಮುರಕಿಬಾವಿ	ಮುರಕಿಬಾವಿ	ಮುರಕಿಬಾವಿ-254	17.00	ಪ್ರಗತಿ
7	ಬೈಲಹೊಂಗಲ	ದೇವಗಾಂವ	ದೇವಗಾಂವ	ದೇವಗಾಂವ-111	17.00	ಆರ್.ಸಿ.ಸಿ ಹಂತ
8	ಬೈಲಹೊಂಗಲ	ಕಿತ್ತೂರ	ಕಿತ್ತೂರ	ಕಿತ್ತೂರ-195	17.00	ಪ್ರಗತಿ
9	ಬೈಲಹೊಂಗಲ	ಕಿತ್ತೂರ	ಕಿತ್ತೂರ	ಕಿತ್ತೂರ-194	17.00	ಪ್ರಗತಿ
	ಒಟ್ಟು				153.00	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1447
ಸದಸ್ಯರ ಹೆಸರು	:	ಶ್ರೀ ಐಹೊಳೆ .ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಉತ್ತರಿಸಬೇಕಾದ ದಿನಾಂಕ	:	10-03-2021

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಅಂಗನವಾಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಸರ್ಕಾರ ನಿಗದಿಪಡಿಸಿರುವ ಮಾಸಿಕ ವೇತನವೆಷ್ಟು;</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ, ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರಿಗೆ ಈ ಕೆಳಕಂಡಂತೆ ಮಾಸಿಕ ಗೌರವಧನವನ್ನು ನಿಗದಿಪಡಿಸಲಾಗಿದೆ.
<table><tr><th>ಕ್ರ.ಸಂ.</th><th>ವಿವರ</th><th>ನಿಗದಿಪಡಿಸಿರುವ ಗೌರವಧನ (ರೂ.ಗಳಲ್ಲಿ)</th></tr><tr><td>1.</td><td>ಅಂಗನವಾಡಿ ಕಾರ್ಯಕರ್ತೆ</td><td>10,000/-</td></tr><tr><td>2.</td><td>ಮಿನಿ ಅಂಗನವಾಡಿ ಕಾರ್ಯಕರ್ತೆ</td><td>6,250/-</td></tr><tr><td>3.</td><td>ಅಂಗನವಾಡಿ ಸಹಾಯಕಿ</td><td>5,250/-</td></tr></table></td></tr>
<tr><td>ಆ</td><td>ಈ ಕನಿಷ್ಠ ಮಾಸಿಕ ವೇತನದಲ್ಲಿ ಅವರ ಜೀವನ ಮತ್ತು ಸಂಸಾರ ನಿರ್ವಹಣೆ ಮಾಡುವುದು ಕಷ್ಟದಾಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಗೌರವಧನದೊಂದಿಗೆ ಈ ಸೌಲಭ್ಯಗಳನ್ನು ಸಹ ನೀಡಲಾಗುತ್ತಿದೆ.
• ವೈದ್ಯಕೀಯ ವೆಚ್ಚ ಮರುಪಾವತಿ ಗರಿಷ್ಠ ರೂ. 50,000/-
• ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ಮತ್ತು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗ ಳನ್ನು ನೊಂದಾಯಿಸಿದ್ದಲ್ಲಿ ಪ್ರೋತ್ಸಾಹ ಧನ
• ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರನ್ನು ಎನ್.ಪಿ.ಎಸ್. ಲೈಟ್ ಯೋಜನೆಯಡಿ ನೊಂದಾಯಿಸಲಾಗಿದೆ.
• ಸೇವೆಯಲ್ಲಿರುವಾಗಲೇ ಮೃತಪಟ್ಟ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಕುಟುಂಬದ ಅವಲಂಬಿತರಿಗೆ ರೂ. 50,000/- ಮರಣ ಪರಹಾರ ನಿಧಿಯನ್ನು ಸಹ ನೀಡಲಾಗುತ್ತಿದೆ.</td></tr>
<tr><td>ಇ</td><td>ಈ ಅಂಗನವಾಡಿಗಳ ನೌಕರರು ತಮ್ಮ ವೇತನವನ್ನು ಪರಿಷ್ಕರಿಸಿ ಹೆಚ್ಚಳ ಮಾಡುವಂತೆ ಸರ್ಕಾರದ ಗಮನ ಸೆಳೆಯಲು ಬೃಹತ್ ಸಂಖ್ಯೆಯಲ್ಲಿ ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
</table>

ಈ	ಬಂದಿದ್ದಲ್ಲಿ, ಮೇಲಿನ ಈ ಅಂಶಗಳನ್ನು ಸರ್ಕಾರ ಪರಿಗಣಿಸಿ ಅವರುಗಳ ಕಷ್ಟಕ್ಕೆ ಸ್ಪಂದಿಸುವ ನಿಟ್ಟಿನಲ್ಲಿ ಅಂಗನವಾಡಿ ನೌಕರರುಗಳು ವೇತನವನ್ನು ಪರಿಷ್ಕರಿಸಿ ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ?	ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ರೂ.4,500/-ಗಳ ಗೌರವಧನ ನಿಗಧಿಪಡಿಸಲಾಗಿದೆ. ಇದರಲ್ಲಿ ಕೇಂದ್ರ ಪಾಲು 2,700/- ರಾಜ್ಯದ ಪಾಲು ರೂ.1,800/- ಆಗಿರುತ್ತದೆ. ಆದಾಗ್ಯೂ ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯವರ ಕಾರ್ಯನಿರ್ವಹಣೆಯನ್ನು ಪರಿಗಣಿಸಿ ಹೆಚ್ಚುವರಿಯಾಗಿ ರೂ.5,500/-ಗಳ ಗೌರವಧನದೊಂದಿಗೆ ಮಾಸಿಕ ರೂ.1,000/-ಗಳನ್ನು ಪಾವತಿಸಲಾಗುತ್ತಿದೆ. ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ರೂ.3,500/-ಗಳ ಗೌರವಧನ ನಿಗಧಿಪಡಿಸಲಾಗಿದೆ. ಇದರಲ್ಲಿ ಕೇಂದ್ರ ಪಾಲು 2,100/- ರಾಜ್ಯದ ಪಾಲು ರೂ.1,400/- ಆಗಿರುತ್ತದೆ. ಆದಾಗ್ಯೂ ರಾಜ್ಯ ಸರ್ಕಾರವು ಮಿನಿ ಅಂಗನವಾಡಿ ಕಾರ್ಯಕರ್ತೆಯವರ ಕಾರ್ಯ ನಿರ್ವಹಣೆಯನ್ನು ಪರಿಗಣಿಸಿ ಹೆಚ್ಚುವರಿಯಾಗಿ ರೂ.2,750/-ಗಳ ಗೌರವಧನದೊಂದಿಗೆ ಮಾಸಿಕ ರೂ.6,250/-ಗಳನ್ನು ಪಾವತಿಸಲಾಗುತ್ತಿದೆ. ಅಂಗನವಾಡಿ ಸಹಾಯಕಿಯರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ರೂ.2,500/-ಗಳ ಗೌರವಧನ ನಿಗಧಿಪಡಿಸಲಾಗಿದೆ. ಇದರಲ್ಲಿ ಕೇಂದ್ರ ಪಾಲು 1,500/- ರಾಜ್ಯದ ಪಾಲು ರೂ.1,000/- ಆಗಿರುತ್ತದೆ. ಆದಾಗ್ಯೂ ರಾಜ್ಯ ಸರ್ಕಾರವು ಮಿನಿ ಅಂಗನವಾಡಿ ಕಾರ್ಯಕರ್ತೆಯವರ ಕಾರ್ಯ ನಿರ್ವಹಣೆಯನ್ನು ಪರಿಗಣಿಸಿ ಹೆಚ್ಚುವರಿಯಾಗಿ ರೂ.2,750/-ಗಳ ಗೌರವಧನದೊಂದಿಗೆ ಮಾಸಿಕ ರೂ.5,250/-ಗಳನ್ನು ಪಾವತಿಸಲಾಗುತ್ತಿದೆ. ರಾಜ್ಯ ಸರ್ಕಾರವು ಇತ್ತೀಚೆಗೆ ಅಂದರೆ ದಿನಾಂಕ:12.07.2019ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.500/- ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.250/- ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ.250/-ರಂತೆ ಗೌರವಧನ ಹೆಚ್ಚಳ ಮಾಡಿರುವುದರಿಂದ ಗೌರವಧನ ಪರಿಷ್ಕರಿಸುವ ಪ್ರಸ್ತಾವನೆ ಇರುವುದಿಲ್ಲ.
ಉ.	ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು: ಇಲ್ಲದಿದ್ದಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು? (ಸಂಪೂರ್ಣ ವಿವರ ನೀಡುವುದು)	ಕಳೆದ ಸಾಲಿನಲ್ಲಷ್ಟೇ ಗೌರವಧನ ಹೆಚ್ಚಳ ಮಾಡಿರುವುದರಿಂದ, ಗೌರವಧವನನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಮಮಇ 75 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1451
ಸದಸ್ಯರ ಹೆಸರು	:	ಶ್ರೀ.ಅಶೋಕ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ಸಚಿವರು	:	ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	10.03.2021

ಪ್ರಶ್ನೆ	ಉತ್ತರ
ಅ) 2018-19 ರಿಂದ 2020-21 ನೇ ಸಾಲಿನಲ್ಲಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಾಮಾನ್ಯ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಷ್ಟು ರೈತ ಫಲಾನುಭವಿಗಳಿಗೆ ಟ್ರಾಕ್ಟರ್ ಮತ್ತು ಮಿನಿ ಟ್ರಾಕ್ಟರ್ ವಾಹನಗಳು ಹಾಗೂ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ.	2018-19 ರಿಂದ 2020-21 ನೇ ಸಾಲಿನಲ್ಲಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಾಮಾನ್ಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ ಟ್ರಾಕ್ಟರ್ ಮತ್ತು ಮಿನಿ ಟ್ರ್ಯಾಕ್ಟರ್ ವಾಹನಗಳು ಹಾಗೂ ಸಾಧನ ಸಲಕರಣೆಗಳನ್ನು ವಿತರಿಸಿರುವ ವಿವರಗಳನ್ನು ಕೆಳಗೆ ಒದಗಿಸಲಾಗಿದೆ.

ವರ್ಷ	ಸಹಾಯಧನ ವಿತರಿಸಿರುವ ಫಲಾನುಭವಿಗಳ ಸಂಖ್ಯೆ			
	ಸಾಮಾನ್ಯ	ಪ.ಜಾ	ಪ.ಪಂ	ಒಟ್ಟು
2018-19	101	58	36	195
2019-20	232	64	47	343
2020-21	71	39	19	129
ಒಟ್ಟು	404	161	102	667

ಆ) ಟ್ರಾಕ್ಟರ್ ಮತ್ತು ಮಿನಿ ಟ್ರಾಕ್ಟರ್ ವಾಹನಗಳು ಹಾಗೂ ಸಾಧನ ಸಲಕರಣೆಗಳನ್ನು ವಿತರಿಸಲು ಬಾಕಿ ಇರುವ ರೈತ ಫಲಾನುಭವಿಗಳೆಷ್ಟು: (ವಿವರ ನೀಡುವುದು)	ಟ್ರಾಕ್ಟರ್ ಮತ್ತು ಮಿನಿ ಟ್ರಾಕ್ಟರ್ ವಾಹನಗಳು ಹಾಗೂ ಸಾಧನ ಸಲಕರಣೆಗಳನ್ನು ವಿತರಿಸಲು ಯಾವುದೇ ರೈತ ಫಲಾನುಭವಿಗಳು ಬಾಕಿ ಇರುವುದಿಲ್ಲ. ವಿವರ ಕೆಳಕಂಡಂತಿದೆ; 2018-19ನೇ ಸಾಲಿನಲ್ಲಿ 195 ರೈತ ಫಲಾನುಭವಿಗಳಿಗೆ, 2019-20ನೇ ಸಾಲಿನಲ್ಲಿ 343 ರೈತ ಫಲಾನುಭವಿಗಳಿಗೆ ಹಾಗೂ 2020-21ನೇ ಸಾಲಿನಲ್ಲಿ 129 ರೈತ ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದು, ಈ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗಿದೆ.
ಇ) ಬಾಕಿ ಇರುವ ರೈತ ಫಲಾನುಭವಿಗಳಿಗೆ ಯಾವಾಗ ವಿತರಿಸಲಾಗುವುದು (ವಿವರ ನೀಡುವುದು)	ಅನುದಾನದ ಲಭ್ಯತೆಯನುಸಾರ ಫಲಾನುಭವಿಗಳಿಗೆ ವಿತರಿಸಲಾಗುವುದು.

ಸಂಖ್ಯೆ: HORTI 121 HGM 2021

(ಆರ್. ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1499
ಸದಸ್ಯರ ಹೆಸರು	:	ಶ್ರೀ ಲಿಂಗೇಶ್ ಕೆ.ಎಸ್. (ಬೇಲೂರು)
ಉತ್ತರಿಸಬೇಕಾದ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	10-03-2021

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಸಾರಿಗೆ ಇಲಾಖೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತನಿಖಾ ಠಾಣೆಗಳನ್ನು ವಾಣಿಜ್ಯ ತೆರಿಗೆ ಇಲಾಖೆಯು ರದ್ದುಪಡಿಸಿದ ರೀತಿಯಲ್ಲಿ; ತನಿಖಾ ಠಾಣೆಗಳನ್ನು ರದ್ದುಪಡಿಸಲಾಗುವುದೇ; ತನಿಖಾ ಠಾಣೆಗಳಲ್ಲಿ, ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ದಿನಂಪ್ರತಿ ವಾಹನ ಮಾಲೀಕರಿಂದ ದೂರುಗಳು ಮತ್ತು ಮಾಧ್ಯಮಗಳಲ್ಲಿ ಮೋಟಾರ್ ವಾಹನ ತನಿಖಾಧಿಕಾರಿಗಳ ಬಗ್ಗೆ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; ತನಿಖಾ ಠಾಣೆಗಳನ್ನು ಮುಚ್ಚುವುದಿದ್ದರೆ, ಯಾವ ಕಾಲಮಿತಿಯಲ್ಲಿ ಮುಚ್ಚಲಾಗುವುದು; ಸರ್ಕಾರಕ್ಕೆ ಭ್ರಷ್ಟಾಚಾರ ನಿಲ್ಲಿಸುವ ಇಚ್ಛಾಶಕ್ತಿ ಇದೆಯೇ ಎಂಬುದರ ಬಗ್ಗೆ ಸಂಪೂರ್ಣ ವಿವರಣೆ ನೀಡುವುದು;	ತನಿಖಾ ಠಾಣೆಗಳಲ್ಲಿ, ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ವಾಹನ ಮಾಲೀಕರಿಂದ ದೂರುಗಳು ಮತ್ತು ಮಾಧ್ಯಮಗಳಲ್ಲಿ ಮೋಟಾರ್ ವಾಹನ ತನಿಖಾಧಿಕಾರಿಗಳ ಬಗ್ಗೆ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಾರಿಗೆ ಇಲಾಖೆಯ ತನಿಖಾ ಠಾಣೆಗಳನ್ನು ಮುಚ್ಚುವ ಪ್ರಸ್ತಾವನೆ ಇರುವುದಿಲ್ಲ. ಸಾರಿಗೆ ಇಲಾಖೆಯ ತನಿಖಾ ಠಾಣೆಗಳು ಪ್ರತಿನಿತ್ಯ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಸೇವೆ ನೀಡುವ ಕಛೇರಿಗಳಾಗಿರುತ್ತವೆ ಹಾಗೂ ಹೊರ ರಾಜ್ಯಗಳಿಂದ ಆಗಮಿಸುವ ವಾಹನಗಳಿಂದ ಕರ್ನಾಟಕ ರಾಜ್ಯಕ್ಕೆ ಸಂದಾಯವಾಗ ಬೇಕಾದ ತೆರಿಗೆ ಮತ್ತು ಶುಲ್ಕಗಳನ್ನು ಹಾಗೂ ಕಾನೂನು ಉಲ್ಲಂಘಿಸುವ ವಾಹನಗಳಿಂದ ದಂಡ ಸಂಗ್ರಹಿಸುವ ಕಾರ್ಯವನ್ನು ಮಾಡುತ್ತಿದ್ದು ಇದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಗಣನೀಯ ಮೊತ್ತದ ರಾಜಸ್ವ ಸಂಗ್ರಹವಾಗುತ್ತಿದೆ. ತನಿಖಾ ಠಾಣೆಗಳನ್ನು ತೆರವುಗೊಳಿಸಿದಲ್ಲಿ ರಾಜ್ಯದ ಬೊಕ್ಕಸಕ್ಕೆ ರಾಜ್ಯಸ್ವ ಸಂಗ್ರಹದಲ್ಲಿ ಕುಂಠಿತವಾಗುವುದಲ್ಲದೆ ಕಾನೂನು ಉಲ್ಲಂಘಿಸಿ ಸಂಚರಿಸುವ ವಾಹನಗಳ ವಿರುದ್ಧ ಕ್ರಮ ಜರುಗಿಸುವುದು ಕಷ್ಟಸಾಧ್ಯವಾಗುವುದರಿಂದ ಗಡಿಭಾಗದಲ್ಲಿ ಸ್ಥಾಪಿಸಲಾಗಿರುವ ತನಿಖಾ ಠಾಣೆಗಳನ್ನು ಮುಂದುವರೆಸುವುದು ಸೂಕ್ತವಾಗಿರುತ್ತದೆ. ತನಿಖಾ ಠಾಣೆಗಳಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಎಲ್ಲಾ ತನಿಖಾ ಠಾಣೆಗಳಲ್ಲಿ CC ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ. ಭ್ರಷ್ಟಾಚಾರದ ದೂರುಗಳು ಬಂದ ಪ್ರಕರಣಗಳಲ್ಲಿ ಸಂಬಂಧಿಸಿದ ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಭ್ರಷ್ಟಾಚಾರ ತಡೆಗಟ್ಟುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

--2

ಆ.	ಅಂತರ ರಾಜ್ಯ ವಾಹನಗಳಿಗೆ e-Permit ಜಾರಿಗೆ ತಂದು ಭ್ರಷ್ಟಾಚಾರವನ್ನು ನಿಯಂತ್ರಿಸಿ, ಸರ್ಕಾರಕ್ಕೆ ರಾಜಸ್ವ ಸಂಗ್ರಹಣವನ್ನು ಹೆಚ್ಚಿಸಬಹುದಲ್ಲವೇ ಮತ್ತು ಯಾವ ಕಾಲಮಿತಿಯಲ್ಲಿ e-Permit ಜಾರಿಗೆ ತರಲಾಗುವುದು;	ಅಂತರ ರಾಜ್ಯ ವಾಹನಗಳಿಗೆ ಆನ್‌ಲೈನ್ ಇ-ಪರ್ಮಿಟ್ ತಂತ್ರಾಂಶವನ್ನು ಜಾರಿಗೆ ತರಲಾಗಿರುತ್ತದೆ. ರಾಜ್ಯದ ತನಿಖಾ ಠಾಣೆಗಳಲ್ಲಿ ಗಣಕೀಕರಣ ಯಂತ್ರಗಳನ್ನು ಮತ್ತು ನೆಟ್‌ವರ್ಕ್ ವ್ಯವಸ್ಥೆಯನ್ನು ನವೀಕರಿಸುವ ಕಾರ್ಯವು ಪ್ರಗತಿಯಲ್ಲಿರುವುದರಿಂದ, ಸಧ್ಯಕ್ಕೆ ತನಿಖಾ ಠಾಣೆಗಳಲ್ಲಿ ಇ-ಪರ್ಮಿಟ್ ನೀಡುವ ವ್ಯವಸ್ಥೆಯು ಜಾರಿಯಲ್ಲಿರುವುದಿಲ್ಲ. ಆದರೆ, ಅರ್ಜಿದಾರರು ಅನ್‌ಲೈನ್ ಮುಖಾಂತರ ನೇರವಾಗಿ ವಾಹನ್-4 ತಂತ್ರಾಂಶದಡಿಯಲ್ಲಿ ಇ-ಪರ್ಮಿಟ್ ಪಡೆದು ಕೊಳ್ಳಬಹುದಾಗಿದ್ದು, ಮುಂದಿನ ದಿನಗಳಲ್ಲಿ ತನಿಖಾ ಠಾಣೆಗಳಲ್ಲಿ ವಾಹನ್-4 ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಇ-ಪರ್ಮಿಟ್ ನೀಡುವ ವ್ಯವಸ್ಥೆಯನ್ನು ಜಾರಿ ಮಾಡಲಾಗುವುದು.
ಇ.	ಸಾರಿಗೆ ಇಲಾಖೆಯಲ್ಲಿ ವಾಹನಗಳ ತಪಾಸಣೆಗಾಗಿ ಮೋಟಾರ್ ವಾಹನ ತನಿಖಾಧಿಕಾರಿಗಳು ಉಪಯೋಗಿಸುವ ಜೀಪುಗಳಿಗೆ ತನಿಖಾಧಿಕಾರಿಗಳ ಭ್ರಷ್ಟಾಚಾರ ನಿಯಂತ್ರಿಸುವ ಸಲುವಾಗಿ ಮತ್ತು ಸರ್ಕಾರದ ರಾಜಸ್ವ ಸಂಗ್ರಹಣೆ ಹಿತದೃಷ್ಟಿಯಿಂದ ಜೀಪುಗಳಿಗೆ ಜಿ.ಪಿ.ಆರ್.ಎಸ್ ಸಿಸ್ಟಂ ಅನ್ನು ಅಳವಡಿಸಿ ಕೇಂದ್ರ ಕಛೇರಿಯಲ್ಲಿ Monitoring ಮಾಡುವ ಕಾರ್ಯವನ್ನು ಮಾಡಲಾಗುತ್ತಿದೆಯೇ; ಯಾವ ಕಾಲಮಿತಿಯಲ್ಲಿ ಈ ಕಾರ್ಯವನ್ನು ಮಾಡಲಾಗುವುದು (ಪೂರ್ಣ ಮಾಹಿತಿಯನ್ನು ನೀಡುವುದು);	ಸಾರಿಗೆ ಇಲಾಖೆಯ ಮೋಟಾರು ವಾಹನ ತನಿಖಾಧಿಕಾರಿಗಳು ಪ್ರವರ್ತನ ಕಾರ್ಯಕ್ಕೆ ಉಪಯೋಗಿಸುವ ವಾಹನಗಳಿಗೆ ಜಿ.ಪಿ.ಆರ್.ಎಸ್ ಸಿಸ್ಟಂ ಅನ್ನು ಅಳವಡಿಸಿರುವುದಿಲ್ಲ. ಈ ವಾಹನಗಳಿಗೆ ಜಿ.ಪಿ.ಆರ್.ಎಸ್. ಅಳವಡಿಸುವ ಅವಶ್ಯಕತೆ ಇರುವುದಿಲ್ಲವಾದ್ದರಿಂದ ಅಳವಡಿಸುವ ಯೋಜನೆ ಇರುವುದಿಲ್ಲ.
ಈ.	ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರ ಹಣ ದುರುಪಯೋಗ ಮಾಡಿದಂತಹ ಇಲಾಖಾ ನೌಕರರುಗಳ ಕಡ್ಡಾಯ ನಿವೃತ್ತಿ ಮಾಡಲು ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಭ್ರಷ್ಟಾಚಾರ ತಡೆಗಟ್ಟುವ ನಿಟ್ಟಿನಲ್ಲಿ ಯಾವ ಕಾಲಮಿತಿಯಲ್ಲಿ ಕಡ್ಡಾಯ ನಿವೃತ್ತಿಗೊಳಿಸಲಾಗುವುದು? (ಪೂರ್ಣ ವಿವರ ನೀಡುವುದು);	ಸಾರಿಗೆ ಇಲಾಖೆಯೂ ಸೇರಿದಂತೆ ರಾಜ್ಯ ಸಿವಿಲ್ ಸೇವೆಗೆ ಸೇರಿದ ಅಧಿಕಾರಿ / ನೌಕರರುಗಳ ವಿರುದ್ಧದ ಭ್ರಷ್ಟಾಚಾರ ರುಜುವಾತಾಗುವ ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-8(vi) ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿ / ನೌಕರರುಗಳನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಅದೇ ರೀತಿ ಹಣ ದುರುಪಯೋಗ ರುಜುವಾತಾಗುವ ಪ್ರಕರಣಗಳಲ್ಲಿಯೂ ಸಹ ಸಕ್ಷಮ ಪ್ರಾಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ ಸೇರಿದಂತೆ ವಿವಿಧ ರೀತಿಯ ದಂಡನೆಗಳನ್ನು ವಿಧಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಟಿಡಿ 32 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1503
ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಡಿ. ಶೇಖರ್(ಹೊಸದುರ್ಗ)
ಉತ್ತರಿಸುವ ದಿನಾಂಕ	:	10-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಂಥಪಾಲಕರುಗಳ ಸಂಖ್ಯೆ ಎಷ್ಟು; ಈ ಗ್ರಂಥಪಾಲಕರುಗಳು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ; ಇವರನ್ನು ಯಾವ ಮಾನದಂಡದಲ್ಲಿ ಆಯ್ಕೆ ಮಾಡಲಾಗಿದೆ. ಇವರಿಗೆ ನೀಡುವ ಕನಿಷ್ಠ ವೇತನವೆಷ್ಟು; ಇವರ ಸೇವಾ ಭದ್ರತೆ ಏನು; ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಇರುವ ಮಾನದಂಡವೇನು;	ರಾಜ್ಯದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಗ್ರಂಥಾಲಯ ಮೇಲ್ವಿಚಾರಕರ ಸಂಖ್ಯೆ:5622. ಗ್ರಂಥಾಲಯ ಮೇಲ್ವಿಚಾರಕರು 32 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 273 ಎಲ್‌ಐಬಿ 2006. ದಿನಾಂಕ:27-11-2006ರ ಸರ್ಕಾರದ ಆದೇಶದಲ್ಲಿನ ಮಾನದಂಡದಂತೆ ಗ್ರಂಥಾಲಯ ಮೇಲ್ವಿಚಾರಕರನ್ನು ಆಯ್ಕೆ ಮಾಡಲಾಗಿದೆ. ಪ್ರಸ್ತುತ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರಿಗೆ ಮಾಸಿಕವಾಗಿ ರೂ. 7000/- ಗಳ ಗೌರವ ಸಂಭಾವನೆ ನೀಡಲಾಗುತ್ತಿದೆ. ಇವರ ಸೇವಾ ಭದ್ರತೆ ಏನು ಇರುವುದಿಲ್ಲ. ಗ್ರಂಥಾಲಯ ಮೇಲ್ವಿಚಾರಕರು ಗೌರವ ಧನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವುದರಿಂದ ಸರ್ಕಾರಿ ನೌಕರರೆಂದು ಪರಿಗಣಿಸಲು ಯಾವುದೇ ಮಾನದಂಡಗಳಿರುವುದಿಲ್ಲ.
(ಆ) ಮತ್ತು (ಉ)	ರಾಜ್ಯದಲ್ಲಿರುವ ಪಿಡಿಓ ಗಳ ಸಂಖ್ಯೆ ಎಷ್ಟು; ಆಯ್ಕೆಯಾದ ಸಂದರ್ಭದಲ್ಲಿ ಗ್ರೂಪ್ ಸಿ ಹುದ್ದೆಯಲ್ಲಿ ಆಯ್ಕೆ ಮಾಡಲಾಗಿದ್ದು, ಇವರುಗಳಿಗೆ ಮುಂಬಡ್ತಿ ನೀಡಿರುವ ಸಂದರ್ಭದಲ್ಲಿ ಪಿಡಿಓ ಹುದ್ದೆಯನ್ನು ಗ್ರೂಪ್ ಬಿ ದರ್ಜೆಗೇರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; ಪಿಡಿಓ ರವರ ಹುದ್ದೆಯನ್ನು ಗ್ರೇಡ್-2 ಮಾಡಲು ಸರ್ಕಾರ ಕೈಗೊಂಡ ಕ್ರಮ ಯಾವ ಹಂತದಲ್ಲಿದೆ;	ರಾಜ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ 6021 ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 5275 ಹುದ್ದೆಗಳಲ್ಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು 6ನೇ ಕರ್ನಾಟಕ ರಾಜ್ಯ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು. 6ನೇ ರಾಜ್ಯ ವೇತನ ಆಯೋಗವು ತನ್ನ ವರದಿಯ 2ನೇ ಸಂಪುಟವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಗ್ರಾಮ ಪಂಚಾಯತಿಗಳ ಮೇಲ್ದರ್ಜೆಗೇರಿಸುವಿಕೆ ವಿಷಯವು ಸರ್ಕಾರದ ಹಂತದಲ್ಲಿ ಅದರ ಕಾರ್ಯನಿರ್ವಹಣೆಯ ಅಗತ್ಯತೆಗಳನ್ನು ಮತ್ತು ಇತರೆ ತತ್ಸಬಂಧ ಅಂಶಗಳನ್ನು ತೀರ್ಮಾನಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ.

		ರಾಜ್ಯದ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.
(ಇ)	ರಾಜ್ಯದಲ್ಲಿ ನೇರ ನೇಮಕಾತಿಗೊಂಡ ಒಟ್ಟು ಪಿಡಿಓ ಗಳು ಹಾಗೂ ಪದೋನ್ನತಿಯಿಂದ ನೇಮಕಾತಿಯಾದ ಒಟ್ಟು ಪಿಡಿಓಗಳೆಷ್ಟು;	ರಾಜ್ಯದಲ್ಲಿ ನೇರ ನೇಮಕಾತಿಗೊಂಡ ಒಟ್ಟು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ:4668. (ಈ ಪೈಕಿ ನೇರ ನೇಮಕಾತಿಗೊಂಡ ಕೆಲವು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮುಂಬಡ್ತಿ ಹೊಂದಿರುತ್ತಾರೆ ಮತ್ತು ಕೆಲವರು ರಾಜೀನಾಮೆ ನೀಡಿರುತ್ತಾರೆ.) ಪದೋನ್ನತಿಯಿಂದ ನೇಮಕಾತಿಯಾದ ಒಟ್ಟು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ: 1920. (ಈ ಪೈಕಿ ನೇರ ನೇಮಕಾತಿಗೊಂಡ ಕೆಲವು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮುಂಬಡ್ತಿ ಹೊಂದಿರುತ್ತಾರೆ.)
(ಈ)	ಖಾಲಿಯಿರುವ ಪಿಡಿಓ ಹುದ್ದೆಗಳೆಷ್ಟು ಹಾಗೂ ಭರ್ತಿ ಮಾಡಲು ಕೈಗೊಂಡ ಕ್ರಮವೇನು;	ಖಾಲಿ ಇರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ:746. ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇಮಕಾತಿ ಪ್ರಾಧಿಕಾರ ಆಗಿದ್ದು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ವೃಂದದ ಅರ್ಹ ನೌಕರರು ಲಭ್ಯವಾದಂತೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ಮೂಲಕ ಭರ್ತಿ ಮಾಡಲು ಸರ್ಕಾರದಿಂದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಸಂ. ಗ್ರಾಅಪ 96 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1507

ಸದಸ್ಯರ ಹೆಸರು : ಶ್ರೀ ರಘುಪತಿ ಭಟ್.ಕೆ (ಉಡುಪಿ)

ಉತ್ತರಿಸುವ ದಿನಾಂಕ: : 10/03/2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕ್ಷೇತ್ರ ಮಟ್ಟದಲ್ಲಿ ಕೃಷಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಹಾಯಕ ಕೃಷಿ ಅಧಿಕಾರಿಗಳ ಸೇವೆ ಅತ್ಯವಶ್ಯಕವಾಗಿರುವುದರಿಂದ ಸಹಾಯಕ ಕೃಷಿ ಅಧಿಕಾರಿಗಳ ನೇಮಕವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಹಾಯಕ ಕೃಷಿ ಅಧಿಕಾರಿಗಳ ಖಾಲಿಯಿರುವ ಹುದ್ದೆಗಳ ಜಿಲ್ಲಾವಾರು ಪಟ್ಟಿ ನೀಡುವುದು)	ಸರ್ಕಾರದ ಗಮನಕ್ಕೆ ಬಂದಿದೆ. (ಸಹಾಯಕ ಕೃಷಿ ಅಧಿಕಾರಿಗಳ ಖಾಲಿಯಿರುವ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಿದೆ)
ಆ)	ನೇಮಕಾತಿ ಮಾಡುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಕೃಷಿ ಇಲಾಖೆಯಲ್ಲಿ 2018-19 ಸಾಲಿನಲ್ಲಿ ಗ್ರೂಪ್-ಎ ಮತ್ತು ಬಿ ವೃಂದದಲ್ಲಿ ಸಹಾಯಕ ಕೃಷಿ ನಿರ್ದೇಶಕರು-66 ಹುದ್ದೆ, ಕೃಷಿ ಅಧಿಕಾರಿಗಳು 350 ಹುದ್ದೆ, ಸಹಾಯಕ ಕೃಷಿ ಅಧಿಕಾರಿಗಳು 157 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ 153 ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮವಹಿಸಲಾಗಿದೆ ಮತ್ತು ಕೃಷಿ ಸಹಾಯಕ ಹುದ್ದೆಯಿಂದ ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ ಉನ್ನತೀಕರಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಸಂಖ್ಯೆ: AGRI-AGS-49/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

ಸಹಾಯಕ ಕೃಷಿ ಅಧಿಕಾರಿ ಜಿಲ್ಲಾವಾರು ಖಾಲಿ ಹುದ್ದೆ ವಿವರ
(ದಿ:01.02.2021ರಲ್ಲಿದ್ದಂತೆ)

ಕ್ರ. ಸಂ.	ಜಿಲ್ಲೆ	ಮಂಜೂರು	ಭರ್ತಿ	ಖಾಲಿ
1	ಬೆಂಗಳೂರು	68	25	43
2	ಬಾಗಲಕೋಟೆ	79	40	39
3	ಬೆಳಗಾವಿ	218	109	109
4	ಬಳ್ಳಾರಿ	85	42	43
5	ಬೀದರ್	79	50	29
6	ಚಾಮರಾಜನಗರ	44	7	37
7	ಚಿಕ್ಕಬಳ್ಳಾಪುರ	66	8	58
8	ಚಿತ್ರದುರ್ಗ	75	29	46
9	ಚಿಕ್ಕಮಗಳೂರು	81	18	63
10	ಧಾರವಾಡ	72	30	42
11	ದಾವಣಗೆರೆ	100	32	68
12	ದಕ್ಷಿಣ ಕನ್ನಡ	54	15	39
13	ಗದಗ	50	25	25
14	ಹಾಸನ	100	14	86
15	ಹಾವೇರಿ	83	17	66
16	ಕೋಲಾರ	56	16	40
17	ಕೊಪ್ಪಳ	61	37	24
18	ಕಲಬುರಗಿ	102	57	45
19	ಕೊಡಗು	30	5	25
20	ಮಂಡ್ಯ	93	24	69
21	ಮೈಸೂರು	96	16	80
22	ರಾಮನಗರ	55	9	46
23	ರಾಯಚೂರು	85	52	33
24	ತುಮಕೂರು	134	35	99
25	ಶಿವಮೊಗ್ಗ	103	28	75
26	ವಿಜಯಪುರ	114	65	49
27	ಉಡುಪಿ	47	13	34
28	ಉತ್ತರ ಕನ್ನಡ	86	30	56
29	ಯಾದಗಿರಿ	54	24	30
	ಒಟ್ಟು	2370	872	1498

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1517
ಸದಸ್ಯರ ಹೆಸರು	ಶ್ರೀಮತಿ ಲಕ್ಷ್ಮೀ ಆರ್ ಹೆಬ್ಬಾಳ್ಕರ್
ಉತ್ತರಿಸುವ ದಿನಾಂಕ	10/03/2021
ಉತ್ತರಿಸುವವರು	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ರೇಷ್ಮೆ ಬೆಳೆ / ಸಾಕಾಣಿಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:	ರಾಜ್ಯದಲ್ಲಿ ರೇಷ್ಮೆ ಬೆಳೆ / ಸಾಕಾಣಿಕೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರೇಷ್ಮೆ ಇಲಾಖೆಯು ರೇಷ್ಮೆ ಬೆಳೆಗಾರರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಸಹಾಯಧನ ಹಾಗೂ ಪ್ರೋತ್ಸಾಹಧನ ಸೌಲಭ್ಯಗಳನ್ನು ನೀಡಲಾಗುತ್ತಿದೆ. 1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. 2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ – ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. 3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಸಹಾಯಧನ. 4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ. 5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ. 6. ರೇಷ್ಮೆ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ. 7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. 8. ರೋಟರಿ ಚಂದ್ರಿಕೆಗಳ ಖರೀದಿಗೆ ಸಹಾಯಧನ 9. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ. 10. ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆಗೆ / ಸಲಕರಣೆಗಳಿಗೆ ಖರೀದಿಗೆ ಸಹಾಯಧನ. 11. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ. 12. ರೇಷ್ಮೆ ಗೂಡಿನ ಧಾರಣೆ ಕುಸಿತ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರಿಗೆ ರಕ್ಷಣಾತ್ಮಕ ದರ ನೀಡಲಾಗುತ್ತಿದೆ. 13. ದ್ವಿತಳಿ ಬಿತ್ತನೆ ಬೆಳೆಗಾರರು ಹಾಗೂ ಮೈಸೂರು ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ. 14. ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 15. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. ಮುಂದುವರೆದು, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಹಿಪ್ಪುನೇರಳೆ ನರ್ಸರಿ / ತೋಟ ಸ್ಥಾಪನೆ, ತೋಟ ನಿರ್ವಹಣೆ ಮತ್ತು ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, ರೈತರಿಗೆ ಕೂಲಿ / ಸಾಮಗ್ರಿ ವೆಚ್ಚವನ್ನು ಭರಿಸುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗವಕಾಶವನ್ನು ಕಲ್ಪಿಸಿ ಆರ್ಥಿಕ ಸದೃಢತೆಯನ್ನು ಒದಗಿಸಲಾಗುತ್ತಿದೆ.

ಆ)	ರಾಜ್ಯದಲ್ಲಿ ರೇಷ್ಮೆ ಉತ್ಪನ್ನಗಳನ್ನು ರಿಯಾಯಿತಿ ದರದಲ್ಲಿ ದೊರೆಯುವಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮವು (ಕೆ.ಎಸ್.ಐ.ಸಿ) ಉತ್ಪಾದಿಸುವ ಮೈಸೂರು ರೇಷ್ಮೆ ಸೀರೆಗಳನ್ನು ನಿಗಮವು ಸ್ಥಾಪಿಸಿರುವ ಮಾರಾಟ ಮಳಿಗೆಗಳಲ್ಲಿ ವಿಶೇಷ ಹಬ್ಬದ ಸಂದರ್ಭಗಳಲ್ಲಿ ಗ್ರಾಹಕರನ್ನು ಆಕರ್ಷಿಸುವ ಉದ್ದೇಶದಿಂದ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.
ಇ)	ರೇಷ್ಮೆ ಉತ್ಪಾದನೆಗಾಗಿ ರೇಷ್ಮೆ ಹುಳುಗಳು ದೊರೆಯುವ ಬಗ್ಗೆ ಹಾಗೂ ಉತ್ಪಾದನೆಗೆ ಸಂಬಂಧಿಸಿದಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇದರ ಮಾಹಿತಿಯನ್ನು ಪಡೆಯುವುದರ ಬಗ್ಗೆ ಮಾಹಿತಿಯನ್ನು ಒದಗಿಸುವುದು?	ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಗಾಗಿ ರೇಷ್ಮೆ ಬೆಳೆಗಾರರಿಗೆ ನೋಂದಾಯಿತ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳ ಮೂಲಕ ರೇಷ್ಮೆ ಹುಳುಗಳನ್ನು ಪೂರೈಸಲು ಅನುವು ಮಾಡಿಕೊಡಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 247 ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ರೇಷ್ಮೆ ಹುಳುಗಳ ಸರಬರಾಜು ಬಗ್ಗೆ ಆಯಾ ಹೋಬಳಿ /ತಾಲ್ಲೂಕು /ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೇಷ್ಮೆ ಇಲಾಖೆಯ ಕಚೇರಿಗಳನ್ನು ಸಂಪರ್ಕಿಸಿ ರೇಷ್ಮೆ ಬೆಳೆಗಾರರು ಮಾಹಿತಿ ಪಡೆಯುತ್ತಿದ್ದಾರೆ.

ಸಂಖ್ಯೆ: ರೇಷ್ಮೆ 51 ರೇಕೃವಿ 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1580
ಸದಸ್ಯರ ಹೆಸರು	:	ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ(ಗಂಗಾವತಿ)
ಉತ್ತರಿಸುವ ದಿನಾಂಕ	:	10.03.2021
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯಲ್ಲಿ ಮಂಜೂರಾದ ಹುದ್ದೆಗಳು ಎಷ್ಟು; ಖಾಲಿ ಇರುವ ಹುದ್ದೆಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)	ಕೊಪ್ಪಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತ್ ಕಛೇರಿ, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಕಛೇರಿಗಳಲ್ಲಿ ಮಂಜೂರಾದ ಹಾಗೂ ಖಾಲಿ ಹುದ್ದೆಗಳವಿವರ ಕೆಳಕಂಡಂತಿದೆ:-

ಕ್ರ.ಸಂ	ತಾಲ್ಲೂಕು	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	ಜಿ.ಪಂ. ಕೊಪ್ಪಳ	106	65
2	ತಾ.ಪಂ.ಕೊಪ್ಪಳ	117	24
3	ತಾ.ಪಂ.ಗಂಗಾವತಿ	70	13
4	ತಾ.ಪಂ.ಕಾರಟಗಿ	48	20
5	ತಾ.ಪಂ.ಕನಕಗಿರಿ	40	17
6	ತಾ.ಪಂ.ಕುಷ್ಟಗಿ	111	36
7	ತಾ.ಪಂ.ಯಲಬುರ್ಗಾ	75	25
8	ತಾ.ಪಂ.,ಕುಕನೂರು	49	19
	ಒಟ್ಟು	616	219

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ:
ಕೊಪ್ಪಳ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಗೂ ಉಪ ವಿಭಾಗಗಳಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ:

ತಾಲ್ಲೂಕು/ಕಛೇರಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಪಂ.ರಾ.ಇಂ.ವಿಭಾಗ ಕೊಪ್ಪಳ	19	06
ಪಂ.ರಾ.ಇಂ.ಉಪ ವಿಭಾಗ, ಕೊಪ್ಪಳ	11	02
ಪಂ.ರಾ.ಇಂ.ಉಪ ವಿಭಾಗ, ಕುಷ್ಟಗಿ	11	01
ಪಂ.ರಾ.ಇಂ.ಉಪ ವಿಭಾಗ, ಗಂಗಾವತಿ	11	02
ಪಂ.ರಾ.ಇಂ.ಉಪ ವಿಭಾಗ, ಯಲಬುರ್ಗಾ	11	02
ಒಟ್ಟು	**63**	**13**

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ:-

ತಾಲ್ಲೂಕು/ಕಛೇರಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಯೋಜನಾ ವಿಭಾಗ ಕೊಪ್ಪಳ	7	2
ಯೋಜನಾ ಉಪ ವಿಭಾಗ, ಕೊಪ್ಪಳ	12	04
ಒಟ್ಟು	**19**	**06**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ:-

ತಾಲ್ಲೂಕು/ಕಛೇರಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಗ್ರಾ.ಕು.ನೀ.& ನೈ.ವಿಭಾಗ, ಕೊಪ್ಪಳ	24	09
ಗ್ರಾ.ಕು.ನೀ.& ನೈ.ಉಪ ವಿಭಾಗ, ಕೊಪ್ಪಳ	11	04
ಗ್ರಾ.ಕು.ನೀ.& ನೈ.ಉಪ ವಿಭಾಗ, ಕುಷ್ಟಗಿ	11	06
ಗ್ರಾ.ಕು.ನೀ.& ನೈ.ಉಪ ವಿಭಾಗ,ಗಂಗಾವತಿ	11	05
ಗ್ರಾ.ಕು.ನೀ.& ನೈ.ಉಪ ವಿಭಾಗ,ಯಲಬುರ್ಗಾ	11	04
ಒಟ್ಟು	**68**	**28**

ಆ	ಗಂಗಾವತಿ ಮತಕ್ಷೇತ್ರ ವ್ಯಾಪ್ತಿ ಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಸಹಾಯಕ ಅಭಿಯಂತರರು/ ಕಿರಿಯ ಅಭಿಯಂತರರು ಹಾಗೂ ಇನ್ನಿತರ ಹುದ್ದೆಗಳು ಖಾಲಿ ಇರುವುದರಿಂದ ಅಭಿವೃದ್ಧಿ ಕಾಮಗಾರಿಗಳು ಕುಂಠಿತ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಗಂಗಾವತಿ ಇಲ್ಲಿ ಸಹಾಯಕ ಇಂಜಿನಿಯರ್/ ಕಿರಿಯ ಇಂಜಿನಿಯರ್ ಹಾಗೂ ಇನ್ನಿತರ ಹುದ್ದೆಗಳು ಸೇರಿದಂತೆ ಒಟ್ಟು 5 ಹುದ್ದೆಗಳು ಖಾಲಿ ಇದ್ದು, ಸದರಿ ಖಾಲಿ ಹುದ್ದೆಗಳಿಗೆ ಎದುರಾಗಿ ಇಲಾಖೆಯ ಇನ್ನಿತರ ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ಉಪ ವಿಭಾಗದ ಅಭಿವೃದ್ಧಿ ಕಾಮಗಾರಿಗಳಿಗೆ ಯಾವುದೇ ತೊಂದರೆಯಾಗದಂತೆ ನಿರ್ವಹಿಸಲಾಗುತ್ತಿದೆ.
ಇ	ಈ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು (ವಿವರ ನೀಡುವುದು)?	ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 160 ಸೇಶಿಕಾ 2019 ದಿ: 27.11.2020 ಹಾಗೂ ಗ್ರಾಅಪ 09 ಸೇಶಿಕಾ 2020 ದಿ: 08.12.2020ಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವಿವಿಧ ವೃಂದದ ಒಟ್ಟು 408 ಇಂಜಿನಿಯರ್ ಗಳನ್ನು ಶಾಶ್ವತವಾಗಿ ವಿಲೀನಾತಿಗೊಳಿಸಿದ್ದು, ಸದರಿಯವರುಗಳಿಗೆ ಸ್ಥಳನಿಯುಕ್ತಿಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಅಲ್ಲದೆ ತಾಂತ್ರಿಕೇತರ ಹುದ್ದೆಗಳನ್ನೂ ಸಹ ಶಾಶ್ವತವಾಗಿ ವಿಲೀನಾತಿಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಉಳಿದಂತೆ ಇಲಾಖೆಯಲ್ಲಿ ಮುಂಬಡ್ತಿಗೆ ಲಭ್ಯ ವಿರುವ ಹುದ್ದೆಗಳನ್ನು ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಕಡತ ಸಂಖ್ಯೆ: ಗ್ರಾಅಪ/01/ಸ್ವೀಮರ/2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1582
ಸದಸ್ಯರ ಹೆಸರು : ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಗಂಗಾವತಿ ನಗರದಿಂದ ಬೆಂಗಳೂರಿಗೆ ಸಂಚರಿಸುತ್ತಿರುವ ಸ್ಲೀಪರ್ ಬಸ್ ಹಳೆಯದಾಗಿದ್ದು ಮಾರ್ಗ ಮಧ್ಯದಲ್ಲಿ ಕೆಟ್ಟು ನಿಂತು ಪ್ರಯಾಣಿಕರಿಗೆ ತೊಂದರೆ ಆಗುತ್ತಿದ್ದು ಸಂಚಾರಕ್ಕೆ ಯೋಗ್ಯವಲ್ಲದ ಬಸ್ ಹಿಂಪಡೆದು ಹೊಸ ಬಸ್ ಸಂಚಾರಕ್ಕೆ ಬಿಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	**ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ** ಅಶೋಕ ಲೀಲ್ಯಾಂಡ, ಟಾಟಾ ಹಾಗೂ ತತ್ಸಮಾನ ಮಾದರಿಯ ಸಾಮಾನ್ಯ ಬಸ್ಸುಗಳ ಜೀವಮಾನವನ್ನು 9.00 ಲಕ್ಷ ಕಿ.ಮೀ. ಹಾಗೂ ಕರೋನಾ ಹವಾನಿಯಂತ್ರಿತ ಬಸ್ಸುಗಳ ಜೀವಮಾನವನ್ನು 11.00 ಲಕ್ಷ ಕಿ.ಮೀ.ಗೆ ನಿಗದಿಪಡಿಸಲಾಗಿರುತ್ತದೆ. ನಿಗದಿಪಡಿಸಿದ ಕಿ.ಮೀ. ಕ್ರಮಿಸಿದ ನಂತರ ಆ ಬಸ್ಸಿನ ಭೌತಿಕ ಮತ್ತು ತಾಂತ್ರಿಕ ಸ್ಥಿತಿಗತಿ ಆಧಾರದ ಮೇಲೆ ನಿಷ್ಕ್ರಿಯೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಗಂಗಾವತಿಯಿಂದ ಬೆಂಗಳೂರಿಗೆ 02 ಹವಾ ನಿಯಂತ್ರಣ ರಹಿತ ಸ್ಲೀಪರ್ ವಾಹನಗಳ ಸಂಖ್ಯೆ: ಕೆಎ-37/ಎಫ್-772 ಹಾಗೂ ಕೆಎ-37/ಎಫ್-773 ವಾಹನಗಳು ಸಂಚರಿಸುತ್ತಿವೆ. ಎರಡು ವಾಹನಗಳು ಕ್ರಮವಾಗಿ 3,85,813 ಕಿ.ಮೀ. ಮತ್ತು 4,11,441 ಕಿ.ಮೀ. ಕ್ರಮಿಸಿದ್ದು, ಉತ್ತಮ ಸ್ಥಿತಿಯಲ್ಲಿರುತ್ತವೆ ಹಾಗೂ ಮಾರ್ಗ ಮಧ್ಯದಲ್ಲಿ ಅವಘಡಗಳಾಗಿರುವ ಕುರಿತು ಯಾವುದೇ ವರದಿಗಳಾಗಿರುವುದಿಲ್ಲ. ಸದರಿ ವಾಹನಗಳು ಇನ್ನು ಕಡಿಮೆ ಕಿ.ಮೀ. ಕ್ರಮಿಸಿರುವ ಉತ್ತಮ ಸ್ಥಿತಿಯಲ್ಲಿರುವ ವಾಹನಗಳಾಗಿದ್ದು, ಅವುಗಳ ಸ್ಥಿತಿಗತಿಯ ಬಗ್ಗೆ ಮೇಲಿಂದ ಮೇಲೆ ಪರಿಶೀಲಿಸಿ ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸಮರ್ಪಕವಾಗಿ ಕಾರ್ಯಾಚರಿಸಲು ಕ್ರಮ ಕೈಕೊಳ್ಳಲಾಗುವುದು. **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ** ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-1ರಿಂದ ಮಾರ್ಗ ಸಂಖ್ಯೆ 41/42ರಲ್ಲಿ ಬೆಂಗಳೂರಿನಿಂದ ಗಂಗಾವತಿ ಮಾರ್ಗದಲ್ಲಿ ವಾಹನ ಸಂಖ್ಯೆ ಕೆಎ-57 ಎಫ್-3298 – ಒಂದು ದುಂಡು ಸುತ್ತುವಳಿ ಐರಾವತ ಕ್ಲಬ್ ಕ್ಲಾಸ್ (ಎ.ಸಿ. ಮಲ್ಟಿ ಆಕ್ಸೆಲ್ ಸೆಮಿ ಸ್ಲೀಪರ್) ಮತ್ತು ಕೆಎ-57ಎಫ್-3299– ಒಂದು ದುಂಡು ಸುತ್ತುವಳಿ ನಾನ್-ಎಸಿ ಲೈಲ್ಯಾಂಡ್ ಸ್ಲೀಪರ್ ಕಾರ್ಯಾಚರಣೆಯಾಗುತ್ತಿರುತ್ತವೆ. ಸದರಿ ಎರಡೂ ವಾಹನಗಳು ದಿನಾಂಕ 05.03.2018ರಿಂದ ಕಾರ್ಯಾಚರಣೆಯಾಗುತ್ತಿದ್ದು, ಕ್ರಮವಾಗಿ 3,46,177 ಕಿ.ಮೀ. ಮತ್ತು 3,57,904 ಕಿ.ಮೀ. ಕ್ರಮಿಸಿರುತ್ತವೆ ಹಾಗೂ ಸುಸ್ಥಿತಿಯಲ್ಲಿರುತ್ತದೆ. ಸಾರ್ವಜನಿಕರಿಗೆ ತೊಂದರೆಯಾಗುವ ಯಾವುದೇ ಅವಘಡಗಳು ಘಟಕದಲ್ಲಿ ದಾಖಲಾಗಿರುವುದಿಲ್ಲ. ನಿಗಮದಲ್ಲಿ ವಾಹನಗಳಿಗೆ ಅಗತ್ಯವಿರುವ ದುರಸ್ಥಿ ಹಾಗೂ ನಿರ್ವಹಣೆಗಳನ್ನು ಕಾಲಕಾಲಕ್ಕೆ ಮಾಡಲಾಗುತ್ತಿರುತ್ತದೆ. ಅಂತೆಯೇ ಹಳೆಯ ವಾಹನಗಳನ್ನು ವಾರ್ಷಿಕ ಕ್ರಿಯಾ ಯೋಜನೆಯ ಪ್ರಕಾರ ನಿರುಪಯುಕ್ತಗೊಳಿಸಲಾಗಿರುತ್ತದೆ.

...2

ಆ)	ಗಂಗಾವತಿ ನಗರದಿಂದ ಬೆಂಗಳೂರಿಗೆ ವೋಲ್ವೋ ಎ.ಸಿ. ಸ್ಲೀಪರ್/ಮಲ್ಟಿ ಆಕ್ಸೆಲ್ ಸೆಮಿ ಸ್ಲೀಪರ್ ಬಸ್ ಸಂಚಾರಕ್ಕೆ ಬೇಡಿಕೆ ಇದೆಯೇ;	ಗಂಗಾವತಿ-ಬೆಂಗಳೂರು ಮಾರ್ಗದಲ್ಲಿ ಎ.ಸಿ. ಸ್ಲೀಪರ್ ವಾಹನಗಳ ಕಾರ್ಯಾಚರಣೆ ಮಾಡಲು ಬೇಡಿಕೆ ಬಂದಿರುತ್ತದೆ.
ಇ)	ಹಾಗಿದ್ದಲ್ಲಿ, ಎರಡು ಎ.ಸಿ. ಸ್ಲೀಪರ್ ಹೊಸ ಬಸ್ ಯಾವಾಗ ಸಂಚಾರಕ್ಕೆ ಅನುಮತಿ ನೀಡಲಾಗುವುದು (ಮಾಹಿತಿ ನೀಡುವುದು)?	ಗಂಗಾವತಿ-ಬೆಂಗಳೂರು ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವ ಐರಾವತ ಕ್ಲಬ್ ಕ್ಲಾಸ್ (ಮಲ್ಟಿ ಆಕ್ಸಲ್) ಸಾರಿಗೆಯು ಕಾರ್ಯಚರಣೆಯಲ್ಲಿರುವುದರಿಂದ, ಸದರಿ ಮಾರ್ಗದಲ್ಲಿ ಎಸಿ ಸ್ಲೀಪರ್ ಸಾರಿಗೆಯನ್ನು ಕಾರ್ಯಾಚರಣೆ ಮಾಡುವುದು ಸಂಸ್ಥೆಯ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ.

ಸಂಖ್ಯೆ: ಟಿಡಿ 75 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1591
ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಹುಣಸೂರು ತಾಲ್ಲೂಕಿನ ಗ್ರಾಮೀಣ ಭಾಗದ ಕಾಡಂಚಿನ ಗ್ರಾಮಗಳಿಗೆ ಸರಿಯಾದ ಸಮಯಕ್ಕೆ KSRTC ಬಸ್ಸುಗಳು ಬರದೆ ಆ ಭಾಗದ ವಿದ್ಯಾರ್ಥಿಗಳು, ಸಾರ್ವಜನಿಕರು, ರೋಗಿಗಳು ತೊಂದರೆ ಅನುಭವಿಸುತ್ತಿದ್ದು, ಅನೇಕ ಬಾರಿ ಆಕ್ರೋಶ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹುಣಸೂರು ತಾಲ್ಲೂಕಿನಲ್ಲಿ ಒಟ್ಟು 195 ಗ್ರಾಮಗಳಿದ್ದು, ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ಕ.ರಾ.ರ.ಸಾ.ನಿಗಮದ ವತಿಯಿಂದ ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಒದಗಿಸಲಾಗಿರುತ್ತದೆ. ಈ ಹಿಂದೆ ಕೋವಿಡ್-19ನ ಹಿನ್ನೆಲೆಯಲ್ಲಿ ಹಲವು ಸಾರಿಗೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಗೆ ಅನುಸಾರವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಸರ್ಕಾರ ಈ ಕಾಡಂಚಿನ ಭಾಗದ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಬಸ್ಸುಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಪ್ರಸ್ತುತ ಕ.ರಾ.ರ.ಸಾ.ನಿಗಮದ ಹುಣಸೂರು ಘಟಕದಿಂದ 103 ಅನುಸೂಚಿಗಳನ್ನು ಕಾರ್ಯಾಚರಿಸುತ್ತಿದ್ದು, ಈ ಪೈಕಿ 46 ಅನುಸೂಚಿಗಳಿಂದ 502 ಸುತ್ತುವಳಿಗಳನ್ನು ಹಾಗೂ ಇತರೆ ಘಟಕಗಳಿಂದ 18 ಅನುಸೂಚಿಗಳಿಂದ 60 ಸುತ್ತುವಳಿಗಳನ್ನು ಹುಣಸೂರು ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯಾಚರಿಸಲಾಗುತ್ತಿದೆ. ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಸಾರಿಗೆ ಸೌಲಭ್ಯ ಒದಗಿಸಲಾಗಿರುತ್ತದೆ. ಮುಂದುವರೆದು, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು ಪ್ರಾರಂಭವಾಗದಿರುವುದರಿಂದ ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
ಇ)	ಕರೋನಾ ಹರಡುವುದಕ್ಕೂ ಮುನ್ನ ಈ ಭಾಗಗಳಿಗೆ ಎಷ್ಟು ಸಂಖ್ಯೆ ಬಸ್ಸುಗಳು ಸಂಚರಿಸುತ್ತಿದ್ದವು; ಪ್ರಸ್ತುತ ಎಷ್ಟು ಬಸ್ಸುಗಳು ಸಂಚರಿಸುತ್ತಿವೆ; (ವಿವರ ನೀಡುವುದು)	ಕರೋನಾ ಹರಡುವುದಕ್ಕೂ ಮುನ್ನ ಹುಣಸೂರು ತಾಲ್ಲೂಕಿನ ಗ್ರಾಮಾಂತರ ಭಾಗಗಳಿಗೆ 55 ಅನುಸೂಚಿಗಳಿಂದ 514 ಸುತ್ತುವಳಿಗಳನ್ನು ಹಾಗೂ ಅಕ್ಕಪಕ್ಕದ ಘಟಕಗಳಿಂದ 20 ಅನುಸೂಚಿಗಳಿಂದ 70 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಪ್ರಸ್ತುತ ಹುಣಸೂರು ಘಟಕದ 46 ಅನುಸೂಚಿಗಳಿಂದ 502 ಸುತ್ತುವಳಿಗಳನ್ನು ಹಾಗೂ ಅಕ್ಕಪಕ್ಕದ ಘಟಕಗಳಿಂದ 18 ಅನುಸೂಚಿಗಳಿಂದ 60 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

...2

ಈ)	ಹುಣಸೂರು ಬಸ್ ಡಿಪೋದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು; ಈ ಪೈಕಿ ಎಷ್ಟು ಬಸ್ಸುಗಳು ತುಂಬಾ ಹಳೆಯ ಬಸ್ಸುಗಳಾಗಿವೆ;	ಹುಣಸೂರು ಘಟಕದಲ್ಲಿ ಒಟ್ಟು 100 ವಾಹನಗಳು ಕಾರ್ಯಚರಣೆಯಲ್ಲಿದ್ದು, ಅದರಲ್ಲಿ 33 ವಾಹನಗಳು 9 ಲಕ್ಷ ಕಿ.ಮೀ.ಗಿಂತ ಹೆಚ್ಚು ಕ್ರಮಿಸಿರುತ್ತದೆ. ಸದರಿ ವಾಹನಗಳು ಸಹ ಸುಸ್ಥಿತಿಯಲ್ಲಿರುತ್ತದೆ. ಹಳೆಯ ಮತ್ತು ದೋಷಪೂರಿತ ವಾಹನಗಳನ್ನು ಗುರುತಿಸಿ ಆಗಿಂದಾಗ್ಗೆ ನಿರುಪಯುಕ್ತಗೊಳಿಸಲು ಕ್ರಮ ಕೈಗೊಂಡು ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲಾಗುತ್ತಿರುತ್ತದೆ.
ಉ)	ಹೊಸ ಬಸ್ಸುಗಳನ್ನು ನೀಡುವಂತೆ ಇಲಾಖೆಯಿಂದ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಬಸ್ಸುಗಳಿಗೆ ಪ್ರಸ್ತಾವನೆ ಬಂದಿರುತ್ತದೆ; ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮೈಸೂರು ಗ್ರಾಮಾಂತರ ವಿಭಾಗಕ್ಕೆ ಸೇರಿದ ಹುಣಸೂರು ಘಟಕಕ್ಕೆ ಕಳೆದ 3 ವರ್ಷಗಳಿಂದ 35 ಹೊಸ ವಾಹನಗಳನ್ನು ನೀಡಲಾಗಿದೆ. ಪ್ರಸ್ತುತ ಹುಣಸೂರು ಘಟಕಕ್ಕೆ ಹೊಸ ವಾಹನಗಳನ್ನು ನೀಡುವ ಪ್ರಸ್ತಾವನೆ ಇರುವುದಿಲ್ಲ. ಅವಶ್ಯವಿದ್ದಲ್ಲಿ, ಅಗತ್ಯತೆಗನುಗುಣವಾಗಿ ನಿಗಮದ ನಿಯಮಾವಳಿ ಅನುಸಾರ ಹೊಸ ವಾಹನಗಳನ್ನು ನಿಯೋಜಿಸಿ ಸುಗಮ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 76 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1593
ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್(ಗೌರಿಬಿದನೂರು)
ಉತ್ತರಿಸುವ ದಿನಾಂಕ : 10-03-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯತಿಗಳಲ್ಲಿ ಒಂದು ಎಕರೆ ಒಳಗಡೆ ಲೇಔಟ್ ಅನುಮೋದನೆ ಮಾಡುವ ಅಧಿಕಾರಿ ಪಂಚಾಯತಿಗೆ ಇರುವುದು ನಿಜವಲ್ಲವೇ;	ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಭೂ ಪರಿವರ್ತಿತ ಜಮೀನುಗಳಲ್ಲಿನ ಒಂದು ಎಕರೆಗಿಂತ ಕಡಿಮೆ ಇರುವ ಪ್ರದೇಶಕ್ಕೆ ವಿನ್ಯಾಸ ಅನುಮೋದನೆ ನೀಡಲು ತಾಲ್ಲೂಕು ಪಂಚಾಯತಿಗೆ ಅಧಿಕಾರವಿರುತ್ತದೆ.
(ಆ)	ಗೌರಿಬಿದನೂರು ಮತಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನುಮೋದನೆಗೊಂಡಿರುವ ಲೇಔಟ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಗೌರಿಬಿದನೂರು ಮತಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನುಮೋದನೆಗೊಂಡಿರುವ ಲೇಔಟ್‌ಗಳ ಸಂಖ್ಯೆ: 26. ಲೇಔಟ್‌ಗಳ ವಿವರ ಈ ಕೆಳಕಂಡಂತಿದೆ. (ಕೆಳಗಿನ ಪಟ್ಟಿ)
(ಇ)	ಪ್ರತಿಯೊಂದು ಲೇಔಟ್‌ಗಳಲ್ಲಿ ಸಿಎ ಮತ್ತು ಪಾರ್ಕ್ ನಿವೇಶನಗಳನ್ನು ಗುರುತಿಸಿ, ಬೋರ್ಡ್‌ಗಳನ್ನು ಅಳವಡಿಸಲಾಗಿದೆಯೇ;	ಲೇಔಟ್‌ಗಳಲ್ಲಿ ಸಿಎ ಮತ್ತು ಪಾರ್ಕ್ ನಿವೇಶನಗಳನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರಿಸಿಕೊಂಡು ಬೋರ್ಡ್‌ಗಳನ್ನು ಅಳವಡಿಸಲಾಗುತ್ತಿದೆ.

ಕ್ರ.ಸಂ.	ಗ್ರಾಮ ಪಂಚಾಯತಿ	ಲೇಔಟ್‌ಗಳ ಸಂಖ್ಯೆ
1	ನಗರಗೆರೆ	1
2	ಹುದುಗೂರು	2
3	ಅಲಕಾಪುರ	1
4	ತರಿದಾಳು	1
5	ಹೊಸೂರು	2
6	ಬೈಚಾಪುರ	2
7	ಗಂಗಸಂದ್ರ	2
8	ಇಡಗೂರು	1
9	ಕಾದಲವೇಣಿ	1
10	ಹಾಲಗಾನಹಳ್ಳಿ	1
11	ದೊಡ್ಡಕುರುಗೋಡು	8
12	ಚಿಕ್ಕಕುರುಗೋಡು	4

(ಈ)	ಅನುಮೋದನೆಗೊಂಡ ನಿವೇಶನಗಳಿಗೆ ನಿಯಮಾನುಸಾರ ಶುಲ್ಕ ವಿಧಿಸುವ ಕ್ರಮ ಮಾಡಲಾಗುತ್ತಿದೆಯೇ;	ಹೌದು.
(ಉ)	ಯುಜಿಡಿಗೆ ಎಂದು ಕಟ್ಟಿಸಿಕೊಳ್ಳುವ ಶುಲ್ಕ ಎಲ್ಲಿ ಡೆಪಾಸಿಟ್ ಮಾಡಲಾಗುತ್ತದೆ:	ಮಾಲೀಕರೆ ಅಭಿವೃದ್ಧಿಪಡಿಸಿರುವುದರಿಂದ ಠೇವಣಿ ಪಡೆದಿರುವುದಿಲ್ಲ.
(ಊ)	ಕಾಯ್ದಿರಿಸಿರುವ ನಿವೇಶನಗಳು ಯಾವುದಾದರೂ ಗ್ರಾಮ ಪಂಚಾಯತಿಗಳಲ್ಲಿ ಅನಧಿಕೃತವಾಗಿ ಮಂಜೂರು ಮಾಡಿರುವ ಪ್ರಕರಣಗಳು ಇವೆಯೇ; ಇದ್ದರೆ, ಅಂತಹ ಪ್ರಕರಣಗಳಲ್ಲಿ ತೆಗೆದುಕೊಂಡ ಕ್ರಮಗಳೇನು;	ಇಲ್ಲ.

ಸಂ. ಗ್ರಾಅಪ 102 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1600
ಸದಸ್ಯರ ಹೆಸರು	: ಶ್ರೀ ಸುರೇಶ್‌ಗೌಡ (ನಾಗಮಂಗಲ)
ಉತ್ತರಿಸುವ ದಿನಾಂಕ	: 10.03.2021
ಉತ್ತರಿಸುವ ಸಚಿವರು	: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖಾ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಾಗಮಂಗಲ ವಿಧಾನಸಭಾ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ನಿಯಮಾನುಸಾರ ಇಲಾಖಾ ಪದೋನ್ನತಿ ಹಾಗೂ ವರ್ಗಾವಣೆ ಮಾಡಲಾಗಿದೆಯೇ;	ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕಿಯರ ಹುದ್ದೆಗಳು ಗೌರವಧನ ಆಧಾರದ ಮೇಲೆ ನೇಮಕ ಮಾಡಿಕೊಂಡ ಸೇವೆಗಳಾಗಿದ್ದು, ಈ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು ಅನ್ವಯಿಸುವುದಿಲ್ಲವಾದ್ದರಿಂದ ಪದೋನ್ನತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ, ಮಹಿಳಾ ಮೇಲ್ವಿಚಾರಕಿಯರ ಹುದ್ದೆಗೆ ನೇರ ನೇಮಕಾತಿ ಮಾಡುವಾಗ 5 ವರ್ಷ ಸೇವೆ ಸಲ್ಲಿಸಿ ಪಧವೀದರರಾದ ಅಂಗನವಾಡಿ ಕಾರ್ಯಕರ್ತೆಯರಿಗೆ ಶೇ 50ರಷ್ಟು ಹುದ್ದೆಗಳನ್ನು ಹಾಗೂ 10 ವರ್ಷ ಸೇವೆ ಸಲ್ಲಿಸಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವ ಅಂಗನವಾಡಿ ಸಹಾಯಕಿಯರಿಗೆ ಶೇ 25%ರಷ್ಟು ಹುದ್ದೆಗಳನ್ನು ಮೀಸಲಿಡಲಾಗಿದೆ. ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿ ಇರುವ /. ಹೊಸ ಕೇಂದ್ರ ಪ್ರಾರಂಭಿಸುತ್ತಿರುವ ಗ್ರಾಮದ ಯೋಜನಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಮಿನಿ ಅಂಗನವಾಡಿ ಕಾರ್ಯಕರ್ತೆಯರಿದ್ದಲ್ಲಿ 50 ವರ್ಷ ವಯೋಮಿತಿಯೊಳಗಿದ್ದು, ಕನಿಷ್ಠ 3 ವರ್ಷ ಸೇವೆ ಸಲ್ಲಿಸಿದ್ದು, ಅವರು ಅಂಗನವಾಡಿ ಕೇಂದ್ರದಿಂದ 3 ಕಿ.ಮೀ. ವ್ಯಾಪ್ತಿಯೊಳಗೆ ವಾಸಿಸುತ್ತಿದ್ದು, ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಆ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹುದ್ದೆಗೆ ಬೇರೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸದೇ ಆದ್ಯತೆ ಮೇರೆಗೆ ಸದರಿ ಮಿನಿ ಅಂಗನವಾಡಿ ಕಾರ್ಯಕರ್ತೆಯನ್ನು ಸಾಮಾನ್ಯ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಆಯ್ಕೆ ಮಾಡಿಕೊಳ್ಳಲಾಗುವುದು ಹಾಗೂ ಹುದ್ದೆ ಖಾಲಿ ಇರುವ ಅಂಗನವಾಡಿ ಕೇಂದ್ರದ ಯೋಜನಾ ವ್ಯಾಪ್ತಿಯಲ್ಲಿ 3 ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಕನಿಷ್ಠ 3 ವರ್ಷ ಸೇವೆ ಸಲ್ಲಿಸಿದ್ದು, 50 ವರ್ಷ ವಯೋಮಿತಿಯೊಳಗಿರುವ ಸಾಮಾನ್ಯ ಅಂಗನವಾಡಿ ಕೇಂದ್ರದ ಅರ್ಹ ಸಹಾಯಕಿಯರಿದ್ದಲ್ಲಿ 2ನೇ ಆದ್ಯತೆ ನೀಡಲಾಗುವುದು.
ಆ)	ಮಾಡಿದ್ದಲ್ಲಿ, 2018-19ನೇ ಸಾಲಿನಿಂದ ಇಲ್ಲಿಯವರೆಗಿನ ಮಾಹಿತಿ ನೀಡುವುದು.	ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಇ)	2018-19 ರಿಂದ ಇಲ್ಲಿಯವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ, ಎಷ್ಟು ಅರ್ಜಿಗಳನ್ನು ಪುರಸ್ಕರಿಸಲಾಗಿದೆ; ಎಷ್ಟು ಬಾಕಿ ಇದೆ (ವಿವರ ನೀಡುವುದು)?	• 2018-19 ರಿಂದ ಇಲ್ಲಿಯವರೆಗೆ ಸ್ವೀಕೃತವಾದ ಅರ್ಜಿಗಳ ಸಂಖ್ಯೆ-30. • ಪುರಸ್ಕರಿಸಲಾದ ಅರ್ಜಿಗಳ ಸಂಖ್ಯೆ-22. • ಬಾಕಿ ಇರುವ ಅರ್ಜಿಗಳ ಸಂಖ್ಯೆ-08. ಬಾಕಿ ಇರುವ 08 ಅರ್ಜಿಗಳಲ್ಲಿ 07 ಅರ್ಜಿಗಳು ನಾಗಮಂಗಲ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ ಬಾಕಿ ಇರುತ್ತವೆ. ಮದ್ದೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿ 01 ಅರ್ಜಿ ಬಾಕಿ ಇರುತ್ತದೆ.

ಸಂ: ಮಮಇ 85 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸುರೇಶ್ ಗೌಡ(ನಾಗಮಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1600 ಕ್ಕೆ ಅನುಬಂಧ

ಕ್ರ.ಸಂ	ನಾಗಮಂಗಲ ವಿಧಾನ ಸಭಾ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಇಲಾಖಾ ಪದೋನ್ನತಿ ಹಾಗೂ ವರ್ಗಾವಣೆ ಮಾಡಿರುವ ವಿವರ (ಶ್ರೀಮತಿಯರಾದ)
1	ರಜಿನಿ ಎನ್.ಆರ್. ಅಂಗನವಾಡಿ ಸಹಾಯಕಿ ಇವರನ್ನು ಅಂಚೆಚಟ್ಟನಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
2	ಎ.ಎಸ್.ಸಾಕಮ್ಮ, ಅಂಗನವಾಡಿ ಸಹಾಯಕಿ ಇವರನ್ನು ತೆಂಗಿನಭಾಗ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
3	ಶಕುಂತಲ ಬಿ.ಆರ್, ಅಂಗನವಾಡಿ ಸಹಾಯಕಿ ಇವರನ್ನು ದೇವರ ಮಾದ ಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
4	ಪುಷ್ಪಾವತಿ ಡಿ.ಕೆ ,ಅಂಗನವಾಡಿ ಸಹಾಯಕಿ ಇವರನ್ನು ಚಿಕ್ಕಯಗಟ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
5	ವೀಣಾ ಬಿ.ಎಸ್, ಅಂಗನವಾಡಿ ಸಹಾಯಕಿ ಇವರನ್ನು ಎ. ನಾಗತಿಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
6	ಎಂ.ಟಿ.ಮಂಗಳ, ಅಂಗನವಾಡಿ ಸಹಾಯಕಿ ಇವರನ್ನು ಮೇಟಿ ಮೆಳ್ಳಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
7	ಗೌರಮ್ಮ ಬಿ.ಡಿ, ಅಂಗನವಾಡಿ ಸಹಾಯಕಿ ಇವರನ್ನು ಬೋಗಾದಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
8	ಎ.ಆರ್.ನಾಗಮ್ಮ, ಮಿನಿ ಅಂಗನವಾಡಿ ಕಾರ್ಯಕರ್ತೆ ಕರಿಕ್ಯಾತನಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
9	ರಾಧ ಹೆಚ್.ಜಿ, ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಲ್ತಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
10	ಪವಿತ್ರ ಮಿನಿ ಅಂಗನವಾಡಿ ಕಾರ್ಯಕರ್ತೆ ಎಂ.ಮೇಳ್ಳಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
11	ಮಂಜುಳ ಎನ್.ಎನ್ ಮಿನಿ ಅಂಗನವಾಡಿ ಕಾರ್ಯಕರ್ತೆ ಚೀಣ್ಯ-I ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
12	ಯಶೋದ ಕೆ.ಎಂ, ಮಿನಿ ಅಂಗನವಾಡಿ ಕಾರ್ಯಕರ್ತೆ ಹುರುಳಿಗಂಗನ ಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
13	ಸುಮ ಪಿ, ಮಿನಿ ಅಂಗನವಾಡಿ ಕಾರ್ಯಕರ್ತೆ ಬ್ಯಾಡರಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
14	ಕಮಲ ಕೆ.ಜಿ, ಮಿನಿ ಅಂಗನವಾಡಿ ಕಾರ್ಯಕರ್ತೆ ಬೆಟ್ಟದ ಮಲ್ಲೇಹಳ್ಳಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
15	ಪುಷ್ಪ ಬಿ.ವಿ, ಮಿನಿ ಅಂಗನವಾಡಿ ಕಾರ್ಯಕರ್ತೆ ಎಲೆಕೊಪ್ಪ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
16	ವರಲಕ್ಷ್ಮಿ ಎಂ.ಎಸ್, ಮಿನಿ ಅಂಗನವಾಡಿ ಕಾರ್ಯಕರ್ತೆ ಬೀಚನಹಳ್ಳಿ ಅಂಗನವಾಡಿ ಕಾರ್ಯಕರ್ತೆನೇಮಕ ಮಾಡಿಕೊಳ್ಳಲಾಗಿದೆ.
17	ಎಂ.ಆರ್.ತ್ರೋಜಿ, ಅಂಗನವಾಡಿ ಕಾರ್ಯಕರ್ತೆ ನರಗಲು ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ವರ್ಗಾವಣೆ ನೀಡಲಾಗಿದೆ
18	ಕಲ್ಪನ ಹೆಚ್.ಜಿ, ಮಿನಿ ಅಂಗನವಾಡಿ ಕಾರ್ಯಕರ್ತೆ ಬಾಲಾಜಿ ಲೇ-ಔಟ್ (ಬೆಂಗಳೂರು ಉತ್ತರ) ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
19	ಭಾಗ್ಯ ಅಂಗನವಾಡಿ ಸಹಾಯಕಿ ಕುಂಬಾರಕೊಪ್ಪಲು ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
20	ಮಂಗಳಗೌರಮ್ಮ, ಹಳೇಹಳ್ಳಿ ಅಂಗನವಾಡಿ ಸಹಾಯಕಿ ತರಿಕೇರೆ ಕಾಲೋನಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
21	ಸುಜಾತ ಎಸ್.ಕೆ, ಅಂಗನವಾಡಿ ಸಹಾಯಕಿ ಬೋಳಾರೆ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ.
22	ಡಿ.ಎನ್.ವೆಂಕಟನರಸಮ್ಮ, ಅಂಗನವಾಡಿ ಕಾರ್ಯಕರ್ತೆ ಇವರು ಬೆಂಗಳೂರು ಉತ್ತರ ಜಿಲ್ಲೆಯ ಕಚೋಹಳ್ಳಿ ಕಾಲೋನಿಗೆ ಅಂತರಜಿಲ್ಲಾ ವರ್ಗಾವಣೆ ಕೋರಿದ್ದು, ಇವರ ಪ್ರಸ್ತಾವನೆಯನ್ನು ದಿ:26-02-2021ರಂದು ಪ್ರಧಾನ ಕಚೇರಿಗೆ ಸಲ್ಲಿಸಲಾಗಿದ್ದು, ಪರಿಶೀಲನಾ ಹಂತದಲ್ಲಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	1602
ಸದಸ್ಯರ ಹೆಸರು	:	ಶ್ರೀ. ಖಾದರ್ ಯು.ಟಿ. (ಮಂಗಳೂರು)
ಉತ್ತರಿಸುವ ಸಚಿವರು	:	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	10.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳನ್ನು ಹೆಚ್ಚು ಬೆಳೆಯುವಂತೆ ಉತ್ತೇಜಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ (ಸಂಪೂರ್ಣ ವಿವರ ನೀಡುವುದು);	ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳನ್ನು ಹೆಚ್ಚು ಬೆಳೆಯುವಂತೆ ಉತ್ತೇಜಿಸಲು ಸರ್ಕಾರವು ಕೈಗೊಂಡ ಸಂಪೂರ್ಣ ವಿವರ ಈ ಕೆಳಗಿನಂತಿದೆ: 1. ಉತ್ತಮ ಬೀಜ/ಸಸಿಗಳ ವಿತರಣೆ: ತೆಂಗಿನ ಸಸಿಗಳ ದೃಢೀಕರಣ, ಉತ್ತಮ ಗುಣಮಟ್ಟದ ಕಸಿ ಸಸಿಗಳ ವಿತರಣೆ, ಅಂಗಾಂಶ ಕೃಷಿ ಹಾಗೂ ಸಂರಕ್ಷಿತ ಬೇಸಾಯ ಪದ್ಧತಿಯ ಅಳವಡಿಕೆಯನ್ನು ಉತ್ತೇಜಿಸಲಾಗುತ್ತಿದೆ. 2. ತೋಟಗಾರಿಕೆಯಲ್ಲಿ ಕೃಷಿ ಯಾಂತ್ರೀಕರಣ ಉಪ ಯೋಜನೆಯಡಿ (SMAM) ಯಂತ್ರೋಪಕರಣಗಳ ಖರೀದಿಗೆ ಸಹಾಯಧನ ವಿತರಣೆ ಹಾಗೂ ಸಾಮೂಹಿಕ ಬಾಡಿಗೆ ಕೇಂದ್ರ (CHC)ಗಳ ಮೂಲಕ ಯಂತ್ರೋಪಕರಣಗಳ ಬಳಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ. 3. ಇಲಾಖಾ ಪ್ರಯೋಗಶಾಲೆಗಳಲ್ಲಿ ಕೈಗೊಂಡು ನೀರು ಮತ್ತು ಮಣ್ಣು ಮಾದರಿಗಳ ವಿಶ್ಲೇಷಣೆಯ ತಾಂತ್ರಿಕ ಸಲಹೆ ನೀಡಲಾಗುತ್ತಿದೆ. 4. ಪ್ರತಿ ವರ್ಷ ಸರಾಸರಿ 60,000 ಹೆಕ್ಟೇರ್ ಪ್ರದೇಶದಲ್ಲಿ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡುವ ಮೂಲಕ ತೋಟಗಾರಿಕಾ ಬೆಳೆಗಳ ಉತ್ಪಾದನೆಯ ಹೆಚ್ಚಳವನ್ನು ಪ್ರೋತ್ಸಾಹಿಸಲಾಗುತ್ತಿದೆ.

		5. ಕಾರ್ಯಕ್ರಮಗಳನ್ನು ಗುಚ್ಛಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವುದರಿಂದ ಸಮಗ್ರ ತೋಟಗಾರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಲಾಗುತ್ತಿದೆ. 6. ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪಿಸಿ ಅವುಗಳ ಬಲವರ್ಧನೆಯನ್ನು ಕೈಗೊಳ್ಳಲಾಗುತ್ತಿದೆ. 7. ಕೊಯ್ಲೋತ್ತರ ನಷ್ಟವನ್ನು ತಗ್ಗಿಸುವ ಸಲುವಾಗಿ ಕೊಯ್ಲೋತ್ತರ ನಿರ್ವಹಣಾ ಚಟುವಟಿಕೆಗಳಿಗೆ (ಹಣ್ಣು ಮಾಗಿಸುವ ಘಟಕಗಳು, ಪ್ರಾಥಮಿಕ ಸಂಸ್ಕರಣಾ ಘಟಕಗಳು, ಈರುಳ್ಳಿ ಶೇಕರಣಾ ಘಟಕಗಳು, ಪ್ಲಾಸ್ಟಿಕ್ ಕ್ರೇಟ್ಸ್ ಗಳ ವಿತರಣೆ) ಪ್ರೋತ್ಸಾಹ ನೀಡಲಾಗುತ್ತಿದೆ.
ಆ)	ಕೈಗೊಂಡಿದ್ದಲ್ಲಿ, ತೋಟಗಾರಿಕಾ ಕ್ಷೇತ್ರವು ಹೆಚ್ಚಳಗೊಂಡಿದೆಯೇ;	ಹೌದು
ಇ)	ನೀರಾವರಿ ಪಂಪ್‌ಗಳಿಗೆ ಸೌರಶಕ್ತಿಯನ್ನು ಬಳಸಲು ಇಲಾಖೆ ಪ್ರೋತ್ಸಾಹ ನೀಡುತ್ತಿದೆಯೇ?	ನೀಡುತ್ತಿಲ್ಲ.

ಸಂಖ್ಯೆ: HORTI 119 HGM 2021

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1603
ಸದಸ್ಯರ ಹೆಸರು	:	ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸಬೇಕಾದ ದಿನಾಂಕ	:	10-03-2021.
ಉತ್ತರಿಸುವ ಸಚಿವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯದ ವಕ್ಫ್ ಸಂಸ್ಥೆಗಳ ದಫನ್ ಭೂಮಿ ಒತ್ತುವರಿಯಾಗದಂತೆ ಆವರಣ ಗೋಡೆ ನಿರ್ಮಿಸಲು ಸರ್ಕಾರದಿಂದ ಅಗತ್ಯ ನೆರವು ನೀಡುವ ಉದ್ದೇಶವಿದೆಯೇ;	ರಾಜ್ಯ ಸರ್ಕಾರದಿಂದ ವಕ್ಫ್ ಸಂಸ್ಥೆಗಳ ದಫನ್ ಭೂಮಿ ಒತ್ತುವರಿಯಾಗದಂತೆ ಕಾಂಪೌಂಡ್ ಗೋಡೆ ನಿರ್ಮಿಸಲು ಸರ್ಕಾರದಿಂದ ಅಗತ್ಯ ನೆರವು ನೀಡಲಾಗುತ್ತಿದೆ.
ಆ.	ಹಾಗಿದ್ದಲ್ಲಿ, ಜಿಲ್ಲಾವಾರು ಗುರಿ ನಿಗದಿಪಡಿಸಲಾಗಿದೆಯೇ (ಸಂಪೂರ್ಣ ವಿವರ ನೀಡುವುದು)?	ಜಿಲ್ಲಾವಾರು ಸರ್ಕಾರದಿಂದ ಮಂಜೂರಾಗಿರುವ ಹಾಗೂ ಬಿಡುಗಡೆಯಾಗಿರುವ ಅನುದಾನದ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಸಂಖ್ಯೆ: **MWD 64 LMQ 2021**

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಅನುಬಂಧ-1

Protection of Waqf Properties

Sl. No.	District	2018-19			2019-20			2020-21		
		Sanctioned	Released	Balance	Sanctioned	Released	Balance	Sanctioned	Released	Balance
1	Bagalkote	100.00	20.00	80.00	178.50	164.50	14.00	18.00	0.00	15.00
2	Ballari	0.00	0.00	0.00	91.50	66.50	25.00	2.00	2.00	0.00
3	Belagavi	5.00	5.00	0.00	93.00	93.00	0.00	53.00	20.00	33.00
4	Bengaluru Rural	0.00	0.00	0.00	21.00	15.00	6.00	0.00	0.00	0.00
5	Bengaluru Urban	0.00	0.00	0.00	70.00	42.00	28.00	19.00	5.00	14.00
6	Bidar	15.00	15.00	0.00	329.50	208.50	121.00	211.00	0.00	211.00
7	Chamarajnagar	0.00	0.00	0.00	49.00	44.00	5.00	0.00	0.00	0.00
8	Chickballapur	5.00	5.00	0.00	48.50	38.50	10.00	2.00	0.00	2.00
9	Chikkamagaluru	0.00	0.00	0.00	42.50	34.50	8.00	33.00	0.00	33.00
10	Chitradurga	0.00	0.00	0.00	64.00	64.00	0.00	0.00	0.00	0.00
11	Dakshina Kannada	0.00	0.00	0.00	171.00	148.00	23.00	214.00	5.00	209.00
12	Davangere	0.00	0.00	0.00	126.00	106.00	20.00	17.00	0.00	17.00
13	Dharwad	0.00	0.00	0.00	33.00	33.00	0.00	5.00	0.00	5.00
14	Gadag	0.00	0.00	0.00	13.00	11.00	2.00	20.00	5.00	15.00
15	Hassan	102.00	80.00	22.00	125.50	120.50	5.00	32.50	0.00	32.50
16	Haveri	0.00	0.00	0.00	166.00	117.00	49.00	80.50	0.00	80.50
17	Kalaburagi	0.00	0.00	0.00	69.00	59.00	10.00	6.00	0.00	6.00
18	Kodagu	5.00	5.00	0.00	160.00	152.50	7.50	70.00	5.00	65.00
19	Kolar	50.00	10.00	40.00	126.00	99.00	27.00	4.00	0.00	4.00
20	Koppal	0.00	0.00	0.00	33.00	33.00	0.00	34.00	0.00	34.00
21	Mandya	0.00	0.00	0.00	39.00	39.00	0.00	4.00	0.00	4.00
22	Mysuru	0.00	0.00	0.00	40.00	35.00	5.00	4.00	0.00	4.00
23	Raichur	5.00	5.00	0.00	341.00	155.00	186.00	8.00	0.00	8.00
24	Ramanagara	5.00	5.00	0.00	112.00	80.00	32.00	0.00	0.00	0.00
25	Shivamogga	0.00	0.00	0.00	217.00	140.00	77.00	108.00	5.00	103.00
26	Tumakuru	10.00	0.00	10.00	45.00	35.00	10.00	7.00	0.00	7.00
27	Udupi	0.00	0.00	0.00	46.00	36.00	10.00	23.00	0.00	23.00
28	Uttara Kannada	0.00	0.00	0.00	54.00	37.00	17.00	15.00	5.00	10.00
29	Vijayapura	10.00	0.00	10.00	32.00	32.00	0.00	23.00	0.00	23.00
30	Yadgir	5.00	0.00	5.00	104.00	96.00	8.00	30.00	0.00	30.00
	TOTAL	317.00	150.00	167.00	3040.00	2334.50	705.50	1043.00	52.00	991.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1611
ಸದಸ್ಯರ ಹೆಸರು	:	ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	:	10-03-2021

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಡಿಸೆಂಬರ್-2020 ರಿಂದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ವಲಯವಾರು ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಪೂರೈಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ.	ಬಸವನ ಬಾಗೇವಾಡಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ಸರ್ಕಾರವು ಆಹಾರ ಸಾಮಗ್ರಿಗಳನ್ನು ಪೂರೈಸಲು ಒದಗಿಸಿರುವ ಅನುದಾನ ಎಷ್ಟು;	ಬಸವನ ಬಾಗೇವಾಡಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಪೂರೈಸಲು 2020-21ನೇ ಸಾಲಿನಲ್ಲಿ ಒದಗಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ. <table><tr><th>ಯೋಜನೆ ಹೆಸರು</th><th>ಸಾಮಾನ್ಯ ವೆಚ್ಚ</th><th>ಎಸ್.ಸಿ.ಎಸ್.ಪಿ.</th><th>ಟಿ.ಎಸ್.ಪಿ.</th><th>ಒಟ್ಟು (ರೂ.ಲಕ್ಷಗಳಲ್ಲಿ)</th></tr><tr><td>ಬಸವನ ಬಾಗೇವಾಡಿ</td><td>1462.00</td><td>354.00</td><td>23.00</td><td>1839.00</td></tr></table>
ಇ.	ಸರ್ಕಾರದ ನಿಯಮದಂತೆ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ವಲಯವಾರು ರೂಟ್ ಮ್ಯಾಪ್ ಅನ್ನು ಪ್ರತಿ ಅಂಗನವಾಡಿ ಕೇಂದ್ರಕ್ಕೆ ಆಹಾರ ಸಾಮಗ್ರಿಗಳನ್ನು ವಿತರಿಸದೇ ಇರುವುದಕ್ಕೆ ಕಾರಣಗಳೇನು:	ಬಸವನ ಬಾಗೇವಾಡಿ ಶಿಶು ಅಭಿವೃದ್ಧಿ ಯೋಜನಾ ಕಛೇರಿಯ ಪೂರಕ ಪೌಷ್ಠಿಕ ಆಹಾರ ಸಾಮಗ್ರಿಗಳ ಪೂರೈಕೆಯ ವಿಷಯ ನಿರ್ವಾಹಕರು ಮತ್ತು ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಇವರನ್ನು ಗ್ರಾಮ ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದ್ದರ ಪ್ರಯುಕ್ತ ಡಿಸೆಂಬರ್-2020ರ ಮಾಹೆಯಲ್ಲಿ ಬಸವನಬಾಗೇವಾಡಿ ಯೋಜನೆಯಲ್ಲಿ ಪೂರಕ ಪೌಷ್ಠಿಕ ಆಹಾರ ವಿತರಣೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈಗಾಗಲೇ ಸದರಿ ಮಾಹೆಯ ಪೂರಕ ಪೌಷ್ಠಿಕ ಆಹಾರವನ್ನು ವಿತರಣೆ ಮಾಡಲಾಗಿದೆ. ಉಳಿದಂತೆ, ಸರ್ಕಾರದ ನಿಯಮದಂತೆ ಬಸವನ ಬಾಗೇವಾಡಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ವಲಯವಾರು ಸಿದ್ಧಪಡಿಸಿದ ರೂಟ್ ಮ್ಯಾಪ್‌ಗೆ ಅನುಗುಣವಾಗಿಯೇ ಆಹಾರ ಸಾಮಗ್ರಿಗಳನ್ನು ವಿತರಿಸಲಾಗುತ್ತಿದೆ.

ಈ.	ಬಸವನ ಬಾಗೇವಾಡಿ ತಾಲ್ಲೂಕಿನ ಬೇರೆ-ಬೇರೆ ಅಂಗನವಾಡಿ ಕೇಂದ್ರಗಳಿಗೆ ಪೂರೈಸಬೇಕಾದ ಆಹಾರ ಸಾಮಗ್ರಿಗಳನ್ನು ಒಂದೇ ಅಂಗನವಾಡಿ ಕೇಂದ್ರದಲ್ಲಿ ಸಂಗ್ರಹಿಸಿ, ಇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಇದರ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?	ಬಸವನಬಾಗೇವಾಡಿ ಯೋಜನೆಯ ಇಂಗಳೇಶ್ವರ ಗ್ರಾಮದಲ್ಲಿ 6 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಗ್ರಾಮದಲ್ಲಿ ಇಕ್ಕಟ್ಟಾದ ರಸ್ತೆಗಳು ಇರುವುದರಿಂದ ದೊಡ್ಡ ವಾಹನಗಳು ಎಲ್ಲಾ ಅಂಗನವಾಡಿ ಕೇಂದ್ರಗಳ ಸಮೀಪ ಹೋಗಲು ತೊಂದರೆ ಇರುವುದರಿಂದ ಇಂಗಳೇಶ್ವರ ಗ್ರಾಮದ ಒಂದೇ ಅಂಗನವಾಡಿ ಕೇಂದ್ರದಲ್ಲಿ ಆಹಾರ ಸಾಮಗ್ರಿಗಳನ್ನು ಇಳಿಸಿ, ಉಳಿದ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರು ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಈ ಗ್ರಾಮವನ್ನು ಹೊರತುಪಡಿಸಿ ಬಸವನಬಾಗೇವಾಡಿ ಯೋಜನೆಯ ಇನ್ನುಳಿದ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ನೇರವಾಗಿ ಪೂರಕ ಪೌಷ್ಠಿಕ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ.

ಸಂಖ್ಯೆ: ಮಮಇ 82 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **1627**

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಮೋಟಾರ್ ವಾಹನ ನಿರೀಕ್ಷಕರ ಹುದ್ದೆಗಳನ್ನು ಲೋಕಸೇವಾ ಆಯೋಗದ ಮುಖೇನ ಆಯ್ಕೆ ಮಾಡಲು ಸರ್ಕಾರವು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;	ಹೌದು, 150 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
(ಆ)	ಲೋಕಸೇವಾ ಆಯೋಗದ ಕೆಲವು ಅಧಿಕಾರಿಗಳು ಪ್ರಭಾವಕ್ಕೊಳಗಾಗಿ ನಕಲಿ ಅಂಕಪಟ್ಟಿಗಳನ್ನು ಹೊಂದಿರುವ ಅಭ್ಯರ್ಥಿಗಳು ಮತ್ತು ಅರ್ಹತಾ ಪತ್ರಗಳನ್ನು ಪರಿಗಣಿಸಿ ಆಯ್ಕೆ ಮಾಡಲು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);	ಈ ರೀತಿಯ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ. ಮುಂದುವರೆದು, ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ 150 ಮೋಟಾರು ವಾಹನ ನಿರೀಕ್ಷಕರುಗಳ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಾಸೇವಾ ಆಯೋಗವು ದಿನಾಂಕ: 18-01-2020ರ ಪತ್ರದಲ್ಲಿ ನೇಮಕಾತಿ ಕುರಿತು ಕೈಗೊಳ್ಳಬೇಕಾದ ಕ್ರಮದ ಕುರಿತು ಸರ್ಕಾರದ ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿತ್ತು. ಅದರಂತೆ, ಸರ್ಕಾರದ ದಿನಾಂಕ: 19-03-2020ರ ಪತ್ರದಲ್ಲಿ ಮೋಟಾರು ವಾಹನ ನಿರೀಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವ ಸೇವಾನುಭವ ಪ್ರಮಾಣ ಪತ್ರದ ಕುರಿತಂತೆ ನೇರನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಎಲ್ಲಾ ಅಭ್ಯರ್ಥಿಗಳು ಸಲ್ಲಿಸಿರುವ ಸೇವಾನುಭವ ಪ್ರಮಾಣ ಪತ್ರಗಳನ್ನು ಅರ್ಹವೆಂದು ಪರಿಗಣಿಸಿ ಹಾಗೂ ನಿಯಮಾನುಸಾರ ನಿಗಧಿಪಡಿಸಿರುವ ಇತರೆ ಅರ್ಹತೆಗಳಿಗನುಸಾರವಾಗಿ ನೇರನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಕರ್ನಾಟಕ ಲೋಕಾಸೇವಾ ಆಯೋಗಕ್ಕೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ.
(ಇ)	ಬಂದಿದ್ದಲ್ಲಿ, ಈ ಬಗ್ಗೆ ಸಮಗ್ರವಾಗಿ ತನಿಖೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಬೇರೆ ರಾಜ್ಯದ ವಿಶ್ವವಿದ್ಯಾನಿಲಯಗಳಿಂದ ನಕಲಿ ಅಂಕಪಟ್ಟಿಗಳನ್ನು ಹಾಗೂ ಅರ್ಹತಾ ಪತ್ರಗಳನ್ನು ತಂದು ಸಂದರ್ಶನಕ್ಕೆ ಹಾಜರ್‌ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)?	

		ಮೋಟಾರು ವಾಹನ ನಿರೀಕ್ಷಕರ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅರ್ಜಿದಾರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:4161-62/2019ನ್ನು ಸಲ್ಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಮಂಡಳಿಯು ದಿನಾಂಕ:19-03-2020 ರಂದು ನೀಡಿರುವ ಅಂತಿಮ ತೀರ್ಪಿನ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 9739/2020 (ಎಸ್-ಕೆ.ಎ.ಟಿ.) ಯನ್ನು ದಾಖಲಿಸಲಾಗಿರುತ್ತದೆ. ಮುಂದುವರೆದು, ಈ ಪ್ರಕರಣದಲ್ಲಿ ಹಲವು ಅರ್ಜಿದಾರರುಗಳು ಸಹ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರತ್ಯೇಕ ರಿಟ್ ಅರ್ಜಿಗಳನ್ನು ಸಲ್ಲಿಸಿಕೊಂಡಿದ್ದು, ಪ್ರಕರಣಗಳು ಪ್ರಸ್ತುತ ಮಾನ್ಯ ನ್ಯಾಯಾಲಯದ ವಿಚಾರಣೆಗೆ ಬಾಕಿ ಇರುತ್ತವೆ.

ಟಿಡಿ 37 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1634
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	10.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಕೈಮಗ್ಗ ನೇಕಾರರ ಸಂಖ್ಯೆ ಎಷ್ಟು; ಯಾವ ಯಾವ ಪದ್ಧತಿಯಲ್ಲಿ ಮತ್ತು ಯಾವ ಅಡಿಯಲ್ಲಿ ನೇಕಾರಿಕೆ ಮಾಡುತ್ತಿದ್ದಾರೆ; (ಸಂಪೂರ್ಣ ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ನಡೆದ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಒಟ್ಟು ಸಂಖ್ಯೆ: 54791. ಸದರಿ ಕೈಮಗ್ಗ ನೇಕಾರರು ತುಂಡು ಗುತ್ತಿಗೆ ಆಧಾರದ ಮೇಲೆ ಪ್ರತಿ ಮೀಟರ್/ ಉತ್ಪನ್ನಗಳ (ಸೀರೆ, ಟವಲ್, ಇತ್ಯಾದಿ) ನೇಯ್ಗೆ ಪ್ರಮಾಣ ಆಧರಿಸಿ ಮಜೂರಿ ಹಾಗೂ ಸ್ವತಃ ಮಾಲೀಕತ್ವದ ನೇಕಾರಿಗೆ ಚಟುವಟಿಕೆಗಳ ಪದ್ಧತಿಯಲ್ಲಿ ನೇಕಾರಿಕೆಯನ್ನು ಮಾಡುತ್ತಿದ್ದಾರೆ ಮತ್ತು ನೇಕಾರರು ಸಂಘಟಿತ (ಸಹಕಾರಿ/ ನಿಗಮ/NGOs) ಮತ್ತು ಸ್ವತಃ ಮಾಲೀಕತ್ವದ (ಅಸಂಘಟಿತ) ಅಡಿಯಲ್ಲಿ ನೇಕಾರಿಕೆ ಮಾಡುತ್ತಿದ್ದಾರೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಪ್ರಸ್ತುತ 5581 ನೋಂದಾಯಿತ ನೇಕಾರರು ನಿಗಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹತ್ತಿ ಯೋಜನೆಯಡಿಯಲ್ಲಿ 5200 ನೇಕಾರರು ಹತ್ತಿ ಮತ್ತು ಪಾಲಿಸ್ಟರ್ ಬಟ್ಟೆ ಉತ್ಪನ್ನಗಳಲ್ಲಿ ಹಾಗೂ 318 ನೇಕಾರರು ರೇಷ್ಮೆ ಉತ್ಪನ್ನಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.
ಆ)	ಆಯಾ ಕ್ಷೇತ್ರದ ಸಂಘದಡಿ ಕೆಲಸ ಮಾಡುವ ಮತ್ತು ಕೆ.ಹೆಚ್.ಡಿ.ಸಿ. ಯಲ್ಲಿ ಕೆಲಸ ಮಾಡುವ ನೇಕಾರರಿಗೆ ಯಾವ ರೀತಿ ಕೂಲಿ ಕೊಡಲಾಗುವುದು ಮತ್ತು ಅವರುಗಳ ತಿಂಗಳ ವೇತನವೆಷ್ಟು; (ಪೂರ್ಣ ಮಾಹಿತಿ ನೀಡುವುದು)	ಸಹಕಾರ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರಿಗೆ ಕಚ್ಚಾ ಮಾಲು ಪೂರೈಸಿ ಮಜೂರಿ ಆಧಾರದಲ್ಲಿ ಪ್ರತಿ ಮೀಟರ್ ಉತ್ಪಾದನೆ ಅಥವಾ ಉತ್ಪನ್ನ (ಸೀರೆ, ಟವಲ್, ಇತ್ಯಾದಿ)ಗಳ ಆಧಾರದಲ್ಲಿ ಪರಿವರ್ತನಾ ಶುಲ್ಕ ನೀಡಲಾಗುತ್ತಿದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಕಚ್ಚಾ ನೂಲು ವಿತರಣೆ ಮಾಡಿ ಅವರಿಂದ ಬಟ್ಟೆ ನೇಯ್ಗೆ ಮಾಡಿಸಲಾಗುತ್ತದೆ. ಈ ರೀತಿ ನೇಯ್ಗೆ ಮಾಡಿದ ಬಟ್ಟೆಗಳಿಗೆ ಪರಿವರ್ತನಾ ದರಗಳನ್ನು ನಿಗದಿ ಪಡಿಸಲಾಗಿದೆ. ಪ್ರಸ್ತುತ ನಿಗಮದ ಬಹುತೇಕ ನೇಕಾರರು ವಿದ್ಯಾ ವಿಕಾಸ ಯೋಜನೆ ಯಡಿಯಲ್ಲಿ ನೇಯ್ಗೆ ಮಾಡುತ್ತಿದ್ದು, ಸದರಿ ಬಟ್ಟೆಗಳಿಗೆ ಈ ಕೆಳಕಂಡಂತೆ ಪರಿವರ್ತನಾ ದರಗಳನ್ನು ನಿಗದಿಪಡಿಸಲಾಗಿದೆ.

		ವಿದ್ಯಾ ವಿಕಾಸ ಯೋಜನೆ ಉತ್ಪನ್ನಗಳಿಗೆ ತಗಲುವ ಪರಿವರ್ತನಾ ಶುಲ್ಕಗಳು:- 1. ಸೂಟಿಂಗ್ ಬಟ್ಟೆ-ಪ್ರತಿ ಮೀಟರ್ ಗೆ – ರೂ.30.00 2. ಶರ್ಟಿಂಗ್ ಬಟ್ಟೆ – ಪ್ರತಿ ಮೀಟರ್ ಗೆ – ರೂ.28.00 3. ಸ್ಕರ್ಟ ಬಟ್ಟೆ- ಪ್ರತಿ ಮೀಟರ್ ಗೆ – ರೂ.19.00 ರೇಷ್ಮೆ ಉತ್ಪಾದನೆಗಳಿಗೆ ತಗಲುವ ಅಂದಾಜು ಪರಿವರ್ತನಾ ಶುಲ್ಕಗಳು:- 1. ಸಾದಾ ರೇಷ್ಮೆ ಬಟ್ಟೆಗೆ ಪ್ರತಿ ಮೀಟರ್ ಗೆ ರೂ.71.00 2. ರೇಷ್ಮೆ ಸೀರೆಗಳ ಪ್ರತಿ ಮೀಟರ್‌ಗೆ ರೂ.164.00 (ಪ್ರತಿ 5.50 ಮೀಟರ್ ಸೀರೆಗೆ)ಗಳಿದ್ದು, ಅದರಂತೆ ನೇಯ್ಗೆ ಮಾಡಿದ ಬಟ್ಟೆ ಅಳತೆಯ ಆಧಾರದ ಮೇಲೆ ಪರಿವರ್ತನಾ ಶುಲ್ಕ ಪಡೆಯುತ್ತಾರೆ. ಪ್ರತಿ ನೇಕಾರರ ಸರಾಸರಿ ತಿಂಗಳ ವೇತನ ರೂ.3000/- ರಿಂದ ರೂ.3500/- ಗಳಷ್ಟಿರುತ್ತದೆ.
ಇ)	ಕೆ.ಹೆಚ್.ಡಿ.ಸಿ. ನಿಗಮದಲ್ಲಿ ನೇಯ್ಗೆ ಮಾಡುವ ನೇಕಾರರ ಸಂಖ್ಯೆ ಎಷ್ಟು; ಯಾವ ಯಾವ ತರಹದ ಬಟ್ಟೆಗಳನ್ನು ಅವರಿಂದ ನೇಯಿಸಲಾಗುತ್ತಿದೆ?	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಪ್ರಸ್ತುತ 5581 ನೊಂದಾಯಿತ ನೇಕಾರರು ಕಾರ್ಯನಿರ್ವಹಿಸುತ್ತಿದ್ದು, ಸದರಿ ನೇಕಾರರಿಂದ ಈ ಕೆಳಕಂಡ ಬಟ್ಟೆಗಳನ್ನು ನೇಯಿಸಲಾಗುತ್ತಿದೆ:- 1. ಪಾಲಿಯಸ್ಟರ್ / ವಿಸ್ಕೋಸ್ ಶರ್ಟಿಂಗ್ 2. ಪಾಲಿಯಸ್ಟರ್ / ಕಾಟನ್ ಸೂಟಿಂಗ್ 3. ಪಾಲಿಯಸ್ಟರ್ / ವಿಸ್ಕೋಸ್ ಸ್ಕರ್ಟ 4. ಸಾದಾ ರೇಷ್ಮೆ ಬಟ್ಟೆ 5. ಸಾಂಪ್ರದಾಯಿಕ ರೇಷ್ಮೆ ಸೀರೆಗಳು 6. ಪಂಚೆ / ಶಲ್ಯೆ ಇತ್ಯಾದಿ.

ಸಂ: CI 54 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1635
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	10.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೆ.ಹೆಚ್.ಡಿ.ಸಿ ನಿಗಮದಡಿ ಕೆಲಸ ಮಾಡುವ ಸುಮಾರು 5 ಸಾವಿರ ನೇಕಾರ ಕುಟುಂಬಗಳು ತೀವ್ರ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಆಯಾ ಕುಟುಂಬಗಳ ತಿಂಗಳ ಆದಾಯವೆಷ್ಟು;	ಬಂದಿದೆ. ಪ್ರಸ್ತುತ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ 5581 ನೋಂದಾಯಿತ ನೇಕಾರರು ಕಾರ್ಯನಿರ್ವಹಿಸುತ್ತಿದ್ದು, ಸದರಿ ನೇಕಾರರ ಪ್ರತಿ ತಿಂಗಳ ಆದಾಯ ಸರಾಸರಿ ರೂ.3000/- ರಿಂದ ರೂ.3500/-ಗಳವರೆಗೆ ಇರುತ್ತದೆ.
ಆ)	ನಿಗಮವು ತೀವ್ರ ನಷ್ಟದಲ್ಲಿದ್ದು, ಅದನ್ನು ಪುನಶ್ಚೇತನ ಮಾಡುವ ಆಲೋಚನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇಷ್ಟೊಂದು ತೊಂದರೆಯಲ್ಲಿ ಸದರಿ ನಿಗಮವು ಇರಲು ಬಲವಾದ ಕಾರಣಗಳಾವುವು (ಸಂಪೂರ್ಣ ಮಾಹಿತಿ ನೀಡುವುದು).	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಪುನಃಶ್ಚೇತನ ಮತ್ತು ಪುನರ್ ರಚನೆಗಾಗಿ ಕ್ರಮಕೈಗೊಂಡಿದ್ದು, ಸರ್ಕಾರದ ಆದೇಶ ಸಂಖ್ಯೆ: ವಾಕೈ 22 ಜಕೈಯೋ 2016, ದಿನಾಂಕ:30.01.2018ರ ಆದೇಶದನ್ವಯ ರೂ.50.00 ಕೋಟಿ ಅನುದಾನ ಬಿಡುಗಡೆ ಯಾಗಿದ್ದು, ಇದರಲ್ಲಿ ರೂ.45.73 ಕೋಟಿಗಳನ್ನು ಸಾಲದ ರೂಪದಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. 1. ವಿದ್ಯುತ್ ಮಗ್ಗದಲ್ಲಿ ಉತ್ಪನ್ನಗಳ ದರಗಳಿಗೆ ಹೋಲಿಸಿದಾಗ ಕೈಮಗ್ಗದಲ್ಲಿ ತಯಾರಾದ ಉತ್ಪನ್ನಗಳ ದರಗಳು ಹೆಚ್ಚಾಗಿದ್ದು ಮಾರುಕಟ್ಟೆಯಲ್ಲಿ ಪೈಪೋಟಿ ನೀಡಲು ಸಾಧ್ಯವಾಗುತ್ತಿಲ್ಲ. 2. ಪ್ರಸ್ತುತ ನಿಗಮದಡಿ ಇರುವ ಬಹುತೇಕ ನೇಕಾರರು ಮಹಿಳೆಯರು ಹಾಗೂ ವೃದ್ಧ ನೇಕಾರರು ಆಗಿರುವುದರಿಂದ ಮಾರುಕಟ್ಟೆ ಅನುಗುಣವಾಗಿ ಹೊಸ ಹೊಸ ನಮೂನೆಯ ಬಟ್ಟೆಗಳನ್ನು ತಯಾರಿಸಲು ಸಾಧ್ಯವಾಗುತ್ತಿಲ್ಲ. ಈಗಿನ ಯುವ ಪೀಳಿಗೆ ಕೂಡ ಕೈಮಗ್ಗ ನೇಯ್ಗೆ ವೃತ್ತಿಗೆ ಆಸಕ್ತಿ ತೋರಿಸುತ್ತಿಲ್ಲ. 3. ಕಳೆದ 06 ವರ್ಷಗಳಲ್ಲಿ 500 ನೌಕರರು ವಯೋನಿವೃತ್ತಿ ಹೊಂದಿದ್ದು ಇವರುಗಳಿಗೆ ನಿವೃತ್ತಿ ಸೌಲಭ್ಯ ನೀಡಲು ಅಂದಾಜು ರೂ.32.00 ಕೋಟಿಗಳಷ್ಟು ವಿನಿಯೋಗಿಸ ಲಾಗಿದ್ದು ಇದು ಕೂಡ ನಿಗಮಕ್ಕೆ ನಷ್ಟವಾಗಲು ಒಂದು ಕಾರಣ. 4. ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಮಾಡುವ ಸಮವಸ್ತ್ರಗಳಿಂದ ನಿಗಮಕ್ಕೆ ಯಾವುದೇ ಹೆಚ್ಚಿನ ಆದಾಯ ಬರುವುದಿಲ್ಲ.

..2

ಇ)	ನಿಗಮದಲ್ಲಿ ಇರುವ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ನೌಕರರ ಸಂಖ್ಯೆ ಎಷ್ಟು; ಪ್ರತಿ ವರ್ಷ ಎಷ್ಟು ಜನ ನಿವೃತ್ತರಾಗುತ್ತಿದ್ದಾರೆ; ಕಳೆದ ಮೂರು ವರ್ಷಗಳಲ್ಲಿ ನಿವೃತ್ತರಾದವರ ಸಂಖ್ಯೆ ಎಷ್ಟು; ಅವರ ನಿವೃತ್ತಿ ಸೌಲಭ್ಯ ನೀಡುವ ಶಕ್ತಿ ಇದೆಯೇ; ಇದ್ದಲ್ಲಿ, ಯಾವ ರೀತಿ ಪಾವತಿಸ ಲಾಗುವುದು(ವಿವರ ಒದಗಿಸುವುದು)?	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆಯ ವಿವರ ಈ ಕೆಳಗಿನಂತಿದೆ. (ಫೆಬ್ರವರಿ-2021ರ ಅಂತ್ಯಕ್ಕೆ) 1. ನಿಗಮದ ಒಟ್ಟು ಖಾಯಂ ನೌಕರರ ಸಂಖ್ಯೆ-235. 2. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ-122 3. ನಿಗಮದಲ್ಲಿ ಕಳೆದ ಮೂರು ವರ್ಷಗಳಲ್ಲಿ 181 ನೌಕರರು ನಿವೃತ್ತಿ ಹೊಂದಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ವಾಕೈ 26 ಜಕೈಯೋ 2016, ದಿನಾಂಕ: 30-01-2018ರನ್ವಯ ಕೆ.ಹೆಚ್.ಡಿ.ಸಿ ನಿಗಮದ ಪುನಃಶ್ಚೇತನ ಮತ್ತು ಪುನರ್ ರಚನೆಗಾಗಿ ರೂ.50 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.45.73 ಕೋಟಿಗಳನ್ನು ಸಾಲದ ರೂಪದಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಮೊತ್ತದಲ್ಲಿ ಈಗಾಗಲೇ 91 ನೌಕರರಿಗೆ ನಿವೃತ್ತಿ ಸೌಲಭ್ಯವನ್ನು ಪಾವತಿಸಲಾಗಿದ್ದು, ಉಳಿದ 90 ನೌಕರರಿಗೆ ನಿಗಮದ ಮಾರುಕಟ್ಟೆ ಆದಾಯವನ್ನು ವೃದ್ಧಿಗೊಳಿಸಿ ಅದರಿಂದ ಬರುವ ಮೊತ್ತದಲ್ಲಿ ಬಾಕಿ ಉಳಿದ ನಿವೃತ್ತ ನೌಕರರಿಗೆ ನಿವೃತ್ತಿ ನಂತರದ ಸೌಲಭ್ಯವನ್ನು ಪಾವತಿಸಲು ಕ್ರಮಕೈಗೊಳ್ಳಲಾಗುತ್ತದೆ.

ಸಂ: CI 59 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1651
ಸದಸ್ಯರ ಹೆಸರು	ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)
ಉತ್ತರಿಸುವ ದಿನಾಂಕ	10/03/2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರಸಗೊಬ್ಬರಗಳನ್ನು ರೈತರಿಗೆ ನಿಗಧಿತ ವೇಳೆಯಲ್ಲಿ ಹಾಗೂ ಸಮರ್ಪಕವಾಗಿ ಎಂ.ಆರ್.ಪಿ. ದರದಲ್ಲಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ 2020-21ನೇ ಸಾಲಿನ ಮುಂಗಾರಿನಲ್ಲಿ 10 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರದ ಬೇಡಿಕೆ ಬಂದಿರುತ್ತದೆ. ಅದರಂತೆ ರಸಗೊಬ್ಬರದ ಸರಬರಾಜನ್ನು ಪಡೆದು ಸಮರ್ಪಕವಾಗಿ ವಿತರಣೆಯನ್ನು ಮಾಡಲು ಕ್ರಮವಹಿಸಲಾಗಿದೆ.
ಆ)	ರಾಜ್ಯದಲ್ಲಿ ರಸಗೊಬ್ಬರಗಳನ್ನು ಶೇಕಡಾ 70ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಖಾಸಗಿಯವರಿಂದ ಮಾರಾಟವಾಗುತ್ತಿದ್ದು, ಖಾಸಗಿಯವರು ರೈತರಿಗೆ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ರಸಗೊಬ್ಬರಗಳನ್ನು ಸಹಕಾರ ಸಂಘಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	➢ ರಾಜ್ಯದ ರೈತರಿಗೆ ಸಕಾಲದಲ್ಲಿ ಸಮರ್ಪಕವಾಗಿ ರಸಗೊಬ್ಬರ ವಿತರಣೆ ಕೈಗೊಳ್ಳುವ ಉದ್ದೇಶದಿಂದ 2009 ಮುಂಗಾರು ಹಂಗಾಮಿನಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಸಂಸ್ಥೆಗೆ ಸರ್ಕಾರದ ವತಿಯಿಂದ ಬ್ಯಾಂಕ್ ಸಾಲ ಸೌಲಭ್ಯ ನೀಡಿ ರಸಗೊಬ್ಬರದ ಕಾಪು ದಾಸ್ತಾನು ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ವಿವಿಧ ರಸಗೊಬ್ಬರಗಳನ್ನು ತುರ್ತು/ಅತ್ಯವಶ್ಯಕ ಪರಿಸ್ಥಿತಿಗಳಲ್ಲಿ ರೈತರಿಗೆ ರಸಗೊಬ್ಬರ ವಿತರಿಸಲು ಅನುವಾಗುವಂತೆ ಇಲಾಖೆಯ ನಿರ್ದೇಶನದಂತೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿರವರ ಮುಖಾಂತರ ಜಿಲ್ಲೆಗಳ ರಸಗೊಬ್ಬರ ಬೇಡಿಕೆಯ ಅಂದಾಜು ಶೇ. 10 ರಷ್ಟು ಪ್ರಮಾಣದ ರಸಗೊಬ್ಬರವನ್ನು ರಸಗೊಬ್ಬರ ಕಾಪು ದಾಸ್ತಾನಿನಡಿ ದಾಸ್ತಾನು ಮಾಡಲಾಗುತ್ತದೆ. ➢ ರಾಜ್ಯಕ್ಕೆ ಬರುವ ರಸಗೊಬ್ಬರಗಳನ್ನು ಪಾಯಿಂಟ್ ಆಫ್ ಸೇಲ್ (Point of Sale device-POS) ಉಪಕರಣದ ಮೂಲಕ ಮಾರಾಟ ಮಾಡಿದಲ್ಲಿ ಮಾತ್ರ ರಸಗೊಬ್ಬರ ಸರಬರಾಜುದಾರರಿಗೆ ರಸಗೊಬ್ಬರದ ಸಹಾಯಧನ ದೊರೆಯುತ್ತದೆ. ಹಾಗೂ ತಂತ್ರಾಂಶದ ಮೂಲಕ ಪ್ರತಿದಿನ ಜಿಲ್ಲೆ/ತಾಲ್ಲೂಕಿಗೆ ಸರಬರಾಜಾಗುವ ರಸಗೊಬ್ಬರಗಳ ವಿವರವನ್ನು ಪಡೆದು ಉಸ್ತುವಾರಿ ಮಾಡಲಾಗುತ್ತಿದೆ ➢ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಾಪು ದಾಸ್ತಾನು ಯೋಜನೆಯಡಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿರವರ ಮೂಲಕ ರಸಗೊಬ್ಬರಗಳ ವಿತರಣೆ ಮಾಡಲಾಗುತ್ತದೆ. ➢ ಪ್ರತಿ ಜಿಲ್ಲೆಯಲ್ಲಿಯೂ ಸಹಾಯಕ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ವಿಜಿಲೆನ್ಸ್ ತಂಡಗಳನ್ನು ರಚಿಸಲಾಗಿದ್ದು, ತಂಡದ ಸದಸ್ಯರು ಮತ್ತು ರಾಜ್ಯದಲ್ಲಿ ಅಧಿಸೂಚಿಸಿರುವ ರಸಗೊಬ್ಬರ ಪರಿವೀಕ್ಷಕರು ಅವರ ವ್ಯಾಪ್ತಿಯಲ್ಲಿನ

12	ಎ-ಗ್ರೂಪ್ ಅಧಿಕಾರಿ (ಆರೋಗ್ಯ)	1	1	0
13	ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	103	27	76
14	ಕಾನೂನು ಅಧಿಕಾರಿ	1	1	0
15	ಸಹಾಯಕ ಕಾನೂನು ಅಧಿಕಾರಿ	2	1	1
16	ಸಾಂಖ್ಯಿಕ ಸಹಾಯಕ ನಿರ್ದೇಶಕರು (ನಿಯೋಜನೆ ಹುದ್ದೆ)	1	1	0
17	ಆರ್ಥಿಕ ಸಲಹೆಗಾರರು (ನಿಯೋಜನೆ ಹುದ್ದೆ)	2	1	1
18	ಲೆಕ್ಕಾಧಿಕಾರಿಗಳು (ನಿಯೋಜನೆ ಹುದ್ದೆ)	6	0	6
19	ಸಿಸ್ಟಮ್ ಮ್ಯಾನೇಜರ್ (ನಿಯೋಜನೆ ಹುದ್ದೆ)	1	0	1
20	ಸಿಸ್ಟಮ್ ಅನಲಿಸ್ಟ್ (ನಿಯೋಜನೆ ಹುದ್ದೆ)	2	0	2
21	ಹಿರಿಯ ಪ್ರೋಗ್ರಾಮರ್ (ನಿಯೋಜನೆ ಹುದ್ದೆ)	2	0	2
22	ಕಿರಿಯ ಪ್ರೋಗ್ರಾಮರ್ (ನಿಯೋಜನೆ ಹುದ್ದೆ)	7	0	7
23	ಕನ್ಸೋಲ್ ಆಪರೇಟರ್	2	1	1
24	ಕೇ.ಸ್ಥಾ.ಸ/ತೆ.ಖ.ಅ/ಸಹಾಯಕ ಕಾರ್ಯದರ್ಶಿ	15	12	3
25	ಹಿರಿಯ ಮೋಟಾರು ವಾಹನ ನಿರೀಕ್ಷಕರು	214	93	121
26	ಮೋಟಾರು ವಾಹನ ನಿರೀಕ್ಷಕರು	430	123	307
27	ಅಧೀಕ್ಷಕರು	160	147	13
28	ಲೆಕ್ಕಾಧೀಕ್ಷಕರು (ನಿಯೋಜನೆ ಹುದ್ದೆ)	26	22	4
29	ಸಹಾಯಕ ಸಾಂಖ್ಯಿಕ ಅಧಿಕಾರಿ (ನಿಯೋಜನೆ ಹುದ್ದೆ)	3	3	0
30	ಲೆಕ್ಕ ಸಹಾಯಕರು (ನಿಯೋಜನೆ ಹುದ್ದೆ)	36	18	18
31	ಶೀಘ್ರಲಿಪಿಗಾರರು	49	25	24
32	ಪ್ರಥಮ ದರ್ಜೆ ಸಹಾಯಕರು	436	281	155
33	ದ್ವಿತೀಯ ದರ್ಜೆ ಸಹಾಯಕರು	546	192	354
34	ಬೆರಳಚ್ಚುಗಾರರು	116	35	81
35	ಚಾಲಕರು	165	91	74
36	ಅಟೆಂಡರ್/ಪ್ರೊಸೆಸ್ ಸರ್ವರ್/ದಫೇದಾರ್	31	7	24
37	ಖಜಾನೆ ರಕ್ಷಕ	40	9	31
38	ದಲಾಯತ್/ಕಾವಲುಗಾರ/ಜವಾನ ಕಮ್ ರಕ್ಷಕ/ಸ್ವೀಪರ್	345	151	194
	ಒಟ್ಟು	**2812**	**1304**	**1508**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1502
ಸದಸ್ಯರ ಹೆಸರು	ಶ್ರೀ ಗೂಳಿಹಟ್ಟಿ.ಡಿ.ಶೇಖರ್ (ಹೊಸದುರ್ಗ)
ಉತ್ತರಿಸುವ ದಿನಾಂಕ	10-03-2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೃಷಿ ಇಲಾಖೆಯಿಂದ ಸವಳು/ಜವಳು ಭೂಮಿ ಪುನಶ್ಚೇತನಕ್ಕೆ ಕೈಗೊಂಡಿರುವ ಕಾರ್ಯಕ್ರಮಗಳೇನು; ಇದಕ್ಕೆ ನಿಗದಿಪಡಿಸಿರುವ ಅನುದಾನವೆಷ್ಟು; ಯಾವ ಯಾವ ಜಿಲ್ಲೆಗಳು ಮತ್ತು ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹೆಕ್ಟೇರ್ ಪ್ರದೇಶದ ಸವಳು/ ಜವಳು ಜಮೀನು ಇರುತ್ತದೆ;	ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಮಳೆಯಾಶ್ರಿತ ಜಲಾನಯನ ಪ್ರದೇಶದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಉಪ ಯೋಜನೆ- ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಅಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಶೇ.60:40ರ ಅನುಪಾತದಲ್ಲಿ ಆಯ್ದ ಜಿಲ್ಲೆಗಳಲ್ಲಿ ಸವಳು -ಜವಳು ಜಮೀನನ್ನು ಉಪಚರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದಡಿ ಮಣ್ಣಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಲವಣಾಂಶಗಳನ್ನು ಅಂತರ ಬಸಿಕಾಲುವೆ (sub surface drainage) ಮೂಲಕ ಹೊರಹಾಕಿ ಮಣ್ಣಿನ ಗುಣಧರ್ಮವನ್ನು ಸುಧಾರಿಸುವ ಚಟುವಟಿಕೆಯನ್ನು ಒಳಗೊಂಡಿರುತ್ತದೆ. ಪ್ರತಿ ಹೆಕ್ಟೇರಿಗೆ ರೂ. 60000.00 ಗಳ ವೆಚ್ಚದಲ್ಲಿ ಅಂತರ ಬಸಿ ಕಾಲುವೆ ನಿರ್ಮಿಸುವ ಘಟಕವಿದ್ದು, ಇದರೊಂದಿಗೆ ಮಣ್ಣಿನ ಗುಣ ಧರ್ಮ ಸುಧಾರಿಸಲು ಇತರೆ ಯೋಜನೆಗಳ ಸಹಯೋಗದೊಂದಿಗೆ ರಿಯಾಯಿತಿ ದರದಲ್ಲಿ ಮಣ್ಣು ಸುಧಾರಣಾ ಪರಿಕರಗಳು, ಹಸಿರೆಲೆ ಗೊಬ್ಬರ ಬೀಜಗಳ ವಿತರಣೆಯಂತಹ ಘಟಕಗಳನ್ನೂ ಒಗ್ಗೂಡಿಸಿ ಅನುಷ್ಠಾನಗೊಳಿಸಲಾಗುತ್ತದೆ. 2020-21 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಉಪ ಯೋಜನೆ- ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಅಡಿ ರೂ.1000.00 ಲಕ್ಷಗಳ ಅನುದಾನದೊಂದಿಗೆ 1667 ಹೆ ಸವಳು- ಜವಳು ಜಮೀನನ್ನು ಉಪಚರಿಸುವ ಕಾರ್ಯಕ್ರಮಕ್ಕೆ ಅನುಮೋದನೆ ದೊರೆತ್ತಿದ್ದು, ಆರು ಜಿಲ್ಲೆಗಳ (ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ ಮತ್ತು ವಿಜಯಪುರ) ಒಟ್ಟು 12 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಯೋಜನೆಯಡಿ 2016-17 ನೇ ಸಾಲಿನಿಂದ ಆಯ್ದ ಜಿಲ್ಲೆಗಳಲ್ಲಿ (ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ಚಿಕ್ಕಮಗಳೂರು, ಮೈಸೂರು, ರಾಯಚೂರು ಮತ್ತು ವಿಜಯಪುರ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದು 2019-20 ನೇ ಸಾಲಿನವರೆಗೆ ಒಟ್ಟು 1984.5 ಹೆಕ್ಟೇರ್ ಪ್ರದೇಶದಲ್ಲಿ ರೂ.1108.69 ಲಕ್ಷಗಳ ವೆಚ್ಚದೊಂದಿಗೆ ಉಪಚಾರ ಕೈಗೊಳ್ಳಲಾಗಿದೆ.

		ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತಾಲ್ಲೂಕುವಾರು ಸವಳು ಜವಳು ಜಮೀನಿನ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ)	ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸವಳು/ಜವಳು ಜಮೀನು ಇದೆ; ಕಳೆದ ಮೂರು ವರ್ಷಗಳಲ್ಲಿ ಈ ಜಮೀನಿನ ಪುನಶ್ಚೇತನಕ್ಕೆ ಕೈಗೊಂಡಿರುವ ಕ್ರಮಗಳೇನು; ಈ ಜಮೀನುಗಳ ಪುನಶ್ಚೇತನಕ್ಕಾಗಿ ಹೆಚ್ಚಿನ ಅನುದಾನ ನೀಡಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು)	ಹೊಸದುರ್ಗ ತಾಲ್ಲೂಕಿನಲ್ಲಿ ಒಟ್ಟು 3628.2 ಹೆ. ಸವಳು/ಜವಳು ಜಮೀನು ಇದ್ದು, ಈ ಜಮೀನಿನ ಪುನಶ್ಚೇತನಕ್ಕಾಗಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಉಪ ಯೋಜನೆ- ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಅಡಿ ಪಿ.ವಿ.ಸಿ ಮತ್ತು ಟೆರಾಕೋಟಾ ಪೈಪುಗಳನ್ನು ಅಳವಡಿಸಿ ಸಬ್ ಸರ್ಫೇಸ್ ಡ್ರೈನೇಜ್ ಮಾಡಲಾಗಿದೆ. ಮುಂದುವರೆದು, ಯೋಜನಾ ಪ್ರದೇಶದ ರೈತರ ಜಮೀನಿನಲ್ಲಿ ಹಸಿರೆಲೆ ಗೊಬ್ಬರ ಬೀಜವನ್ನು ಬಿತ್ತನೆ ಮಾಡಿ ಹೂವಾಡುವ ಹಂತದಲ್ಲಿ ಹಸಿರೆಲೆ ಗೊಬ್ಬರವನ್ನು ಉಳುಮೆ ಮಾಡಿ ಮಣ್ಣಿಗೆ ಸೇರಿಸುವುದು ಮತ್ತು ಜಿಪ್ಸಂ ಬಳಕೆಗೆ ಅರಿವು ಮೂಡಿಸಲಾಗಿದೆ. ಯೋಜನೆಯಡಿ ಹೊಸದುರ್ಗ ತಾಲ್ಲೂಕಿನಲ್ಲಿ 2016-17ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ಒಟ್ಟು 302 ಹೆ ಪ್ರದೇಶವನ್ನು ಉಪಚರಿಸಿ ರೂ.158.96 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ. 2020-21 ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ರೂ.101.99 ಲಕ್ಷಗಳ ವೆಚ್ಚದಲ್ಲಿ 170 ಹೆ ಪ್ರದೇಶವನ್ನು ಉಪಚರಿಸಲು ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿರುತ್ತದೆ.
ಇ)	ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಯಶಸ್ವಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಡೆದಿರುವುದಕ್ಕೆ ಕಾರಣಗಳೇನು; ಯಾವಾಗ ಅನುಷ್ಠಾನವಾಗುವುದು? (ಮಾಹಿತಿ ಒದಗಿಸುವುದು)	2015-16ನೇ ಸಾಲಿನಿಂದ ರಾಜ್ಯದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯ ಅಭಿವೃದ್ಧಿ ಘಟಕ ಕಾರ್ಯಕ್ರಮದಡಿ ಸಮಗ್ರ ಜಲಾನಯನ ಅಭಿವೃದ್ಧಿ ಕಾರ್ಯಕ್ರಮದ ಯೋಜನೆಗಳ ಮಂಜೂರಾತಿಯನ್ನು ಕೇಂದ್ರ ಭೂ-ಸಂಪನ್ಮೂಲ ಇಲಾಖೆಯು ಸ್ಥಗಿತಗೊಳಿಸಿರುತ್ತದೆ. ಮುಂದುವರೆದು ಕೇಂದ್ರ ಸರ್ಕಾರವು ಹೊಸದಾಗಿ ಮುಂದಿನ ಸಾಲುಗಳಲ್ಲಿ ಅನುಷ್ಠಾನ ಮಾಡಲಾಗುವ ಹೊಸ ಪೀಳಿಗೆಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮದಡಿ ಪ್ರಸ್ತಾವನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ಸಲ್ಲಿಸಲಾಗಿದೆ. ಆದರೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು ಕಾರ್ಯಕ್ರಮದಡಿ ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳ ಅನುಷ್ಠಾನದ ಯೋಜನೆಯು 2016-17 ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಮಳೆಯಾಶ್ರಿತ ಪ್ರದೇಶದಲ್ಲಿ ವೈಜ್ಞಾನಿಕ ಸ್ಥಳ ಸೂಕ್ತತೆಯ ಲಭ್ಯತೆಯ ಅಧಾರದ ಮೇಲೆ ಅನುಷ್ಠಾನ ಮಾಡಲಾಗುತ್ತಿದೆ.

ಸಂಖ್ಯೆ: AGRI-ACT/35/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸವಳು- ಜವಳು ಪ್ರದೇಶದ ವಿವರ (ಹೆಕ್ಟೇರ್ ಗಳಲ್ಲಿ)

(Generated using IRS-RS2 LISS-III Satellite Images)

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಕ್ಷೇತ್ರ (ಹೆ)
1	ಬಾಗಲಕೋಟೆ	ಜಮಖಂಡಿ	665.2
2		ಬೀಳಗಿ	103.5
3		ಬಾದಾಮಿ	42.3
	ಒಟ್ಟು		**810.9**
4	ಬಳ್ಳಾರಿ	ಹೊಸಪೇಟೆ	242.5
5		ಬಳ್ಳಾರಿ	269.4
6		ಸಂಡೂರು	389.8
7		ಹಗರಿಬೊಮ್ಮನಹಳ್ಳಿ	2258.6
8		ಹಡಗಲಿ	802.6
9		ಕೂಡ್ಲಿಗಿ	4831.2
	ಒಟ್ಟು		**8794.1**
10	ಬೆಳಗಾವಿ	ಅಥಣಿ	1151.5
11		ಚಿಕ್ಕೋಡಿ	72.5
12		ರಾಯಭಾಗ	239.8
13		ಗೋಕಾಕ	30.3
14		ರಾಮದುರ್ಗ	44.8
15		ಸವದತ್ತಿ	113.9
	ಒಟ್ಟು		**1652.9**
16	ಚಾಮರಾಜನಗರ	ಕೊಳ್ಳೇಗಾಲ	219.4
17		ಚಾಮರಾಜನಗರ	488.8
18		ಗುಂಡ್ಲುಪೇಟೆ	380.1
	ಒಟ್ಟು		**1088.3**
19	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	79.9
20		ಚಿಂತಾಮಣಿ	35.7
21		ಶಿಡ್ಲಘಟ್ಟ	42.6
	ಒಟ್ಟು		**158.3**
23	ಚಿಕ್ಕಮಗಳೂರು	ಕಡೂರು	39.0
	ಒಟ್ಟು		**39.0**
24	ಚಿತ್ರದುರ್ಗ	ಮೊಳಕಾಲ್ಮೂರು	1640.6
25		ಚಳ್ಳಕೆರೆ	3427.3
26		ಚಿತ್ರದುರ್ಗ	245.5
27		ಹೊಳಲ್ಕೆರೆ	431.6
28		ಹಿರಿಯೂರು	702.8
29		ಹೊಸದುರ್ಗ	3628.2
	ಒಟ್ಟು		**10076.1**
30	ದಾವಣಗೆರೆ	ಹರಪನಹಳ್ಳಿ	3065.9
31		ಜಗಳೂರು	1760.2
32		ಹರಿಹರ	0.0
33		ದಾವಣಗೆರೆ	221.2
	ಒಟ್ಟು		**5047.3**
34	ಹಾಸನ	ಹೊಳೆನರಸೀಪುರ	38.0
	ಒಟ್ಟು		**38.0**
35	ಕೋಲಾರ	ಶ್ರೀನಿವಾಸಪುರ	17.7
	ಒಟ್ಟು		**17.7**
36	ಕೊಪ್ಪಳ	ಕುಷ್ಟಗಿ	1670.3
37		ಯಲಬುರ್ಗ	2101.5

38		ಗಂಗಾವತಿ	163.0
39		ಕೊಪ್ಪಳ	159.8
	ಒಟ್ಟು		**4094.7**
40	ಮಂಡ್ಯ	ನಾಗಮಂಗಲ	0.4
	ಒಟ್ಟು		**0.4**
41	ಮೈಸೂರು	ನಂಜನಗೂಡು	151.0
	ಒಟ್ಟು		**151.0**
42	ರಾಯಚೂರು	ದೇವದುರ್ಗ	607.7
43		ರಾಯಚೂರು	82.4
44		ಲಿಂಗಸುಗೂರು	2717.8
45		ಮಾನ್ವಿ	961.7
46		ಸಿಂಧನೂರು	723.6
	ಒಟ್ಟು		**5093.3**
47	ತುಮಕೂರು	ಪಾವಗಡ	842.7
48		ಸಿರಾ	741.6
49		ಮಧುಗಿರಿ	171.1
50		ಚಿಕ್ಕನಾಯಕನಹಳ್ಳಿ	225.0
51		ಕೊರಟಗೆರೆ	29.2
52		ಗುಬ್ಬಿ	34.1
53		ತುಮಕೂರು	39.4
54		ತಿಪಟೂರು	95.2
55		ತುರುವೇಕೆರೆ	52.7
56		ಕುಣಿಗಲ್	20.0
	ಒಟ್ಟು		**2250.9**
57	ವಿಜಯಪುರ	ಸಿಂದಗಿ	173.4
58		ಮುದ್ದೆಬಿಹಾಳ	70.9
	ಒಟ್ಟು		**244.3**
59	ಯಾದಗಿರಿ	ಯಾದಗಿರಿ	71.0
60		ಶಹಾಪುರ	961.1
61		ಶೋರಪುರ	1227.3
	ಒಟ್ಟು		**2259.4**
	ಮಹಾ ಒಟ್ಟು		**41816.8**

ಮಾಹಿತಿಯನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು ಇವರಿಂದ ಪಡೆಯಲಾಗಿದೆ.

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1504
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	10.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಳೆದ 03 ವರ್ಷಗಳಿಂದ ರಾಜ್ಯದಲ್ಲಿ ಯಾವ ಯಾವ ಭಾಗಗಳಲ್ಲಿ ಹೊಸ ಜವಳಿ ಪಾರ್ಕ್ ನಿರ್ಮಿಸಲಾಗಿದೆ;	ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ಹೊಸ ಜವಳಿ ಪಾರ್ಕ್ ನಿರ್ಮಿಸಿರುವುದಿಲ್ಲ.
ಆ	ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು: ಇವರಲ್ಲಿ ಕೈಮಗ್ಗ ನೇಕಾರರು (ಅಸಂಘಟಿತ) ಕೆ.ಹೆಚ್.ಡಿ.ಸಿ ನೇಕಾರರೆಷ್ಟು; ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ ಎಷ್ಟು: ಇವರುಗಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯ ಗಳೇನು.	ರಾಜ್ಯದಲ್ಲಿ ಒಟ್ಟು 1,85,864 ನೇಕಾರರಲ್ಲಿ 2019-20ನೇ ಸಾಲಿನಲ್ಲಿ ನಡೆದ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ 54,791 ಕೈಮಗ್ಗ ನೇಕಾರರು ಇದ್ದು, ಇದರಲ್ಲಿ 5581 ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೈಮಗ್ಗ ನೇಕಾರರು ಹಾಗೂ 1995-96ನೇ ಸಾಲಿನ ವಿದ್ಯುತ್ ಮಗ್ಗದ ಗಣತಿ ಪ್ರಕಾರ 1,31,073 ವಿದ್ಯುತ್ ಮಗ್ಗ ನೇಕಾರರು ಇರುತ್ತಾರೆ. **ಸರ್ಕಾರದಿಂದ ಸಿಗುವ ಸೌಲಭ್ಯಗಳು ಈ ಕೆಳಕಂಡಂತಿವೆ:-** • ಕೈಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆ • ನೇಕಾರರ ಕಲ್ಯಾಣಕ್ಕಾಗಿ ಗುಂಪು ವಿಮಾ ಯೋಜನೆ, ವೈದ್ಯಕೀಯ ವೆಚ್ಚ ಮರುಪಾವತಿ, ನೇಕಾರರ ಅಂತ್ಯ ಸಂಸ್ಕಾರಕ್ಕಾಗಿ ಸಹಾಯಧನ, ಕೈಮಗ್ಗ ನೇಕಾರರಿಗೆ ತರಬೇತಿ (ಸ್ಟೈಫಂಡ್), ಬಡ್ಡಿ ಸಹಾಯಧನ, ಹೊಸ ವಿನ್ಯಾಸ ಮತ್ತು ಪ್ರವೃತ್ತಿ (ಪ್ರವಾಸ), ಉಣ್ಣೆ ವಲಯ ಅಭಿವೃದ್ಧಿ ಯೋಜನೆ, ವಸತಿ ವ ಕಾರ್ಯಾಗಾರ • ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರೋತ್ಸಾಹನಕ್ಕಾಗಿ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ (20% ರಿಬೇಟ್), ಜಿಲ್ಲಾ ಮಟ್ಟದ ಕೈಮಗ್ಗ ಮೇಳಗಳು, ಕಚ್ಚಾನೂಲು ಖರೀದಿಗೆ ಪ್ರತಿ ಕೆ.ಜಿ ಗೆ ರೂ.15/-ರ ಸಹಾಯಧನ • ಪೂರಕ ಉಳಿತಾಯ ಯೋಜನೆಯಾದ ಕೈಮಗ್ಗ ನೇಕಾರರಿಗೆ ಮಿತವ್ಯಯ ನಿಧಿ ಯೋಜನೆ • ಮೂಲಭೂತ ಸೌಕರ್ಯಕ್ಕಾಗಿ ಕೈಮಗ್ಗ ವಿಕಾಸ ಯೋಜನೆ, 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ, ಎಲೆಕ್ಟ್ರಾನಿಕ್, ಜಕಾರ್ಡ್ ಹಾಗೂ ನ್ಯೂಮ್ಯಾಟಿಕ್ ಸೌಲಭ್ಯ ಒದಗಿಸುವುದು, ಸಾಮಾನ್ಯ ಸೌಲಭ್ಯ ಕೇಂದ್ರ, ಮಿನಿ ಪವರ್‌ಲೂಮ್ ಪಾರ್ಕ್, ನಿಧಿ ಯೋಜನೆ, ನೇಕಾರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಮತ್ತು ಎಕ್ಸ್‌ಪ್ರೆಸ್ ಫೀಡರ್. • ವಿದ್ಯುತ್‌ಮಗ್ಗ ಘಟಕಗಳಿಗೆ ಪ್ರತಿ ಯೂನಿಟ್‌ಗೆ ರೂ.1.25/- ರಂತೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ • ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ. • ನೇಕಾರರ ಸಾಲ ಮನ್ನಾ ಯೋಜನೆ, ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದಿರುವ ಅರ್ಹ ನೇಕಾರರ ಸಾಲಮನ್ನಾ.

		• ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ಕಚ್ಚಾ ನೂಲು ಪೂರೈಸಿ, ಅವರಿಂದ ನೇಯ್ದು ಬಟ್ಟೆಗಳನ್ನು ಪಡೆದು ಅವರಿಗೆ ಪರಿವರ್ತನಾ ಶುಲ್ಕವನ್ನು ಪಾವತಿಸಲಾಗುತ್ತಿದೆ. • ನಿಗಮದಲ್ಲಿರುವ ವಸತಿ ಹಾಗೂ ನಿವೇಶನ ರಹಿತ ನೇಕಾರರಿಗೆ ರಾಜ್ಯಾದ್ಯಂತ ಸರ್ಕಾರದ ವಿವಿಧ ಯೋಜನೆಗಳಡಿ 3914 ವಸತಿ ಹಾಗೂ ಕಾರ್ಯಾಗಾರಗಳನ್ನು ಒದಗಿಸಲಾಗಿದೆ. • ನೇಕಾರರು ನೇಯ್ದ ಬಟ್ಟೆಗಳಿಗೆ ನಿಗಮವು ಮಾರುಕಟ್ಟೆಯನ್ನು ಒದಗಿಸುತ್ತಿದೆ. • ನಿಗಮವು ರಾಜ್ಯಾದ್ಯಂತ 23 ನೇಕಾರರ ಕಾಲೋನಿಗಳನ್ನು ಸ್ಥಾಪಿಸಿದ್ದು, ಸದರಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.
ಇ	ಕೆ.ಹೆಚ್.ಡಿ.ಸಿ ನಿಗಮದ ಕಾರ್ಯ ಚಟುವಟಿಕೆಗಳೇನು: ಇದರಲ್ಲಿರುವ ನೇಕಾರರ ಸಂಖ್ಯೆ ಎಷ್ಟು: ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಈ ನಿಗಮದ ನೇಕಾರರಿಂದ ಎಷ್ಟು ಮೀಟರ್ ಶಾಲಾ ಸಮವಸ್ತ್ರ ನೇಯ್ಗೆ ಮಾಡಲಾಗುವುದು ಅಥವಾ ಈ ನಿಗಮವು ಬೇರೆಯವರಿಂದ ಖರೀದಿಸಿ ಸರಬರಾಜು ಮಾಡುವುದೇ:	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ಕಚ್ಚಾ ನೂಲು ವಿತರಣೆ ಮಾಡಿ ಅವರಿಂದ ಬಟ್ಟೆ ನೇಯ್ಗೆ ಮಾಡಿಸಲಾಗುತ್ತಿದ್ದು, ಈ ರೀತಿ ನೇಯ್ಗೆ ಮಾಡಿದ ಬಟ್ಟೆಗಳಿಗೆ ಪರಿವರ್ತನಾ ದರಗಳನ್ನು ಪಾವತಿಸಿ, ಮಾರುಕಟ್ಟೆಯನ್ನೂ ಸಹ ಒದಗಿಸಲಾಗುತ್ತಿದೆ. ಪ್ರಸ್ತುತ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ 5581 ನೋಂದಾಯಿತ ನೇಕಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ 3 ವರ್ಷಗಳಲ್ಲಿ ವಿದ್ಯಾ ವಿಕಾಸ ಯೋಜನೆಯಡಿ ಉತ್ಪಾದಿಸಿದ ವಿವರ ಈ ಕೆಳಗಿನಂತಿದೆ:- 2018-19ನೇ ಸಾಲಿನಲ್ಲಿ 45.66 ಲಕ್ಷ ಮೀಟರ್ 2019-20ನೇ ಸಾಲಿನಲ್ಲಿ 34.20 ಲಕ್ಷ ಮೀಟರ್ 2020-21ನೇ ಸಾಲಿನಲ್ಲಿ 34.61 ಲಕ್ಷ ಮೀಟರ್ (ಫೆಬ್ರುವರಿ-2021 ರ ಅಂತ್ಯಕ್ಕೆ) ನಿಗಮವು ವಿದ್ಯಾ ವಿಕಾಸ ಯೋಜನೆಯಡಿ ಬೆಂಗಳೂರು ಮತ್ತು ಕಲಬುರಗಿ ವಿಭಾಗಗಳಿಗೆ ಸಮವಸ್ತ್ರವನ್ನು ಸರಬರಾಜು ಮಾಡಲಾಗುತ್ತಿದ್ದು, ನಿಗಮವು ವಿದ್ಯಾ ವಿಕಾಸ ಯೋಜನೆಯಡಿ ಬೇರೆಯವರಿಂದ ಬಟ್ಟೆಯನ್ನು ಖರೀದಿ ಮಾಡುತ್ತಿಲ್ಲ.
ಈ	ಕರ್ನಾಟಕ ಜವಳಿ ಮೂಲ ಸೌಕರ್ಯ ನಿಗಮದ ಕಾರ್ಯ ಚಟುವಟಿಕೆಗಳೇನು: ಹೊಸದುರ್ಗ ಜವಳಿ ಮಿನಿ ಪಾರ್ಕ್ ಯಾವಾಗ ಪ್ರಾರಂಭವಾಗಿದೆ ಹಾಗೂ ಯಾವಾಗ ಚಾಲನೆ ನೀಡಲಾಗುವುದು: ವಿಳಂಬಕ್ಕೆ ಕಾರಣಗಳೇನು?	• ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮವು ಜವಳಿ ಕ್ಷೇತ್ರಕ್ಕೆ ಅವಶ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾರ್ಯನಿರ್ವಹಿಸುತ್ತಿರುತ್ತದೆ. • ಈ ನಿಗಮದಲ್ಲಿ ಒಟ್ಟು 671 ವಿದ್ಯುತ್ ಮಗ್ಗ ನೇಕಾರ ಘಟಕ/ ಸಹಕಾರ ಸಂಘಗಳು ನೊಂದಣಿಯಾಗಿದ್ದು, ಸಹಕಾರ ಸಂಘಗಳ ಎಲ್ಲಾ ಸದಸ್ಯರು ಸುಮಾರು 30000 ವಿದ್ಯುತ್ ಮಗ್ಗಗಳನ್ನು ಹೊಂದಿರುತ್ತಾರೆ. • ಪ್ರತಿ ವರ್ಷ ಶಿಕ್ಷಣ ಇಲಾಖೆಗೆ ಅವಶ್ಯವಿರುವ ಸಮವಸ್ತ್ರ ಬಟ್ಟೆಯನ್ನು ನಿಗಮದ ಸದಸ್ಯ ಘಟಕಗಳ ಮುಖಾಂತರ ಉತ್ಪಾದಿಸಿ ಶಿಕ್ಷಣ ಇಲಾಖೆಗೆ ಸರಬರಾಜು ಮಾಡಲಾಗುತ್ತಿದೆ. • ವಿದ್ಯುತ್ ಮಗ್ಗ ನೇಕಾರರ ಅನುಕೂಲಕ್ಕಾಗಿ ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ವಿಮಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. • ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ "ಸಮರ್ಥ್" ಯೋಜನೆಯಡಿ ಜವಳಿ ವಲಯದ ವಿವಿಧ ಚಟುವಟಿಕೆಗಳಲ್ಲಿ ತರಬೇತಿಯನ್ನು ಆಯೋಜಿಸಿ ಜವಳಿ ಕೈಗಾರಿಕೆಗಳಿಗೆ ಅಗತ್ಯವಿರುವ ನುರಿತ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

		• ನಿಗಮದ ಅಧೀನ ಸಂಸ್ಥೆಗಳಾದ ವಿದ್ಯುತ್ ಮಗ್ಗ ಸೇವಾ ಕೇಂದ್ರ, ಬೆಂಗಳೂರು /ದೊಡ್ಡಬಳ್ಳಾಪುರ/ ಗದಗ್-ಬೆಟಗೇರಿ/ಬೆಳಗಾವಿ, ಸಿದ್ಧ ಉಡುಪು ತರಬೇತಿ ಹಾಗೂ ವಿನ್ಯಾಸ ಅಭಿವೃದ್ಧಿ ಕೇಂದ್ರ, ಬಳ್ಳಾರಿ, ಗಾರ್ಮೆಂಟ್ ಟ್ರೈನಿಂಗ್ ಇನ್ಸಿಟ್ಯೂಟ್, ದೊಡ್ಡಬಳ್ಳಾಪುರ ಈ ಕೇಂದ್ರಗಳಲ್ಲಿ ನೇಯ್ಗೆ / ಸಿದ್ಧ ಉಡುಪು ತಯಾರಿಕೆಯಲ್ಲಿ ತರಬೇತಿ ಹಾಗೂ ವಿನ್ಯಾಸಾಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ. • ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಜವಳಿ ಪಾರ್ಕ್, ಸಿಲ್ಕ್ ಕ್ಲಸ್ಟರ್‌ನಂತಹ ಮೂಲ ಸೌಲಭ್ಯ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. • ಹೊಸದುರ್ಗ ಜವಳಿ ಮಿನಿ ಪಾರ್ಕ್‌ನ್ನು ಸ್ಥಳೀಯ ಎಸ್.ಪಿ.ವಿ. (Special Purpose Vehicle) ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ದಿನಾಂಕ:07-02-2018 ರಂದು ಮಂಜೂರಾತಿ ನೀಡಿ ಪ್ರಾರಂಭಿಸಲಾಗಿದೆ. ಯೋಜನೆಯ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಯಂತ್ರೋಪಕರಣಗಳನ್ನು ಸ್ಥಾಪಿಸಲಾಗುತ್ತಿದೆ. ಮಿನಿ ಜವಳಿ ಪಾರ್ಕ್ ಸ್ಥಾಪನೆಗೆ ಮಂಜೂರಾತಿ ನೀಡಲಾಗಿರುವ ಎಸ್.ಪಿ.ವಿ ಸಂಸ್ಥೆಯು ರೇಪಿಯರ್ ವಿದ್ಯುತ್ ಮಗ್ಗಗಳನ್ನು ಖರೀದಿಸಿ ಸ್ಥಾಪಿಸಿದ್ದು, ಇವುಗಳ ಚಾಲನೆಗೆ ಅಗತ್ಯವಿರುವ ವಾರ್ಪಿಂಗ್ ಯಂತ್ರವನ್ನು ಖರೀದಿಸಲು ವಿಳಂಬವಾಗಿರುತ್ತದೆ. ವಾರ್ಪಿಂಗ್ ಯಂತ್ರ ಇಲ್ಲದೆ ಮಗ್ಗಗಳಲ್ಲಿ ಉತ್ಪಾದನೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಈ ತಾಂತ್ರಿಕ ಕಾರಣಗಳಿಂದ ಉತ್ಪಾದನಾ ಚಟುವಟಿಕೆ ವಿಳಂಬವಾಗಿರುತ್ತದೆ. ವಾರ್ಪಿಂಗ್ ಯಂತ್ರ ಖರೀದಿಸಿ ಶೀಘ್ರವಾಗಿ ಉತ್ಪಾದನಾ ಚಟುವಟಿಕೆ ಪ್ರಾರಂಭಿಸುವಂತೆ ಎಸ್.ಪಿ.ವಿ ಸಂಸ್ಥೆಗೆ ಸೂಚಿಸಲಾಗಿದೆ. ವಾರ್ಪಿಂಗ್ ಯಂತ್ರ ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದರಿ ಯಂತ್ರೋಪಕರಣಗಳನ್ನು ಸ್ಥಾಪಿಸಿದ ಕೂಡಲೇ ಉತ್ಪಾದನಾ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು.

ಸಂಖ್ಯೆ: CI 57 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1515
ಸದಸ್ಯರ ಹೆಸರು	ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
ಉತ್ತರಿಸುವ ದಿನಾಂಕ	10-03-2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ "ಸಾವಯವ ಕೃಷಿ" ಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸಲು ಸರ್ಕಾರದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರೈತ ಸಿರಿ ಯೋಜನೆ : 2019-20 ನೇ ಸಾಲಿನ ಆಯವ್ಯಯ ಘೋಷಣಾ ಕಾರ್ಯಕ್ರಮವಾಗಿದ್ದು ಸಾವಯವ ಮತ್ತು ಸಾಂಪ್ರದಾಯಿಕವಾಗಿ ಬೆಳೆಯುವ ಸಿರಿಧಾನ್ಯಗಳಾದ ನವಣೆ, ಹಾರಕ ಸಾಮೆ, ಕೊರಲೆ, ಬರಗು ಮತ್ತು ಊದಲು ಬೆಳೆಗಳ ವಿಸ್ತೀರ್ಣವನ್ನು 50000 ಹೆಕ್ಟೇರ್ ಗಳಿಗೆ ಹೆಚ್ಚಿಸಲು ರೈತ ಸಿರಿ ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿ ಸಿರಿಧಾನ್ಯ ಬೆಳೆ ಬೆಳೆಯುವ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್ ಗೊಳಪಟ್ಟು ಪ್ರತಿ ಹೆಕ್ಟೇರ್ ಗೆ ರೂ.10000ಗಳಂತೆ ಪ್ರೋತ್ಸಾಹಧನ ನೀಡಲಾಗಿದ್ದು, ರಾಜ್ಯದ ಸಿರಿಧಾನ್ಯ ಪ್ರದೇಶವನ್ನು 42000ಹೆಕ್ಟೇರ್ ಗೆ ವಿಸ್ತರಿಸಲಾಗಿದೆ. 2020-21ನೇ ಸಾಲಿನಲ್ಲಿಯೂ ಯೋಜನೆಯು ಮುಂದುವರೆಯುತ್ತಿದೆ. ನೈಸರ್ಗಿಕ ಕೃಷಿ ಕಾರ್ಯಕ್ರಮ: 2018-19ನೇ ಸಾಲಿನ ಆಯವ್ಯಯ ಘೋಷಣಾ ಕಾರ್ಯಕ್ರಮವಾದ ನೈಸರ್ಗಿಕ ಕೃಷಿ ಯೋಜನೆಯಡಿ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯ ವೈಜ್ಞಾನಿಕ ಮೌಲ್ಯೀಕರಣವನ್ನು ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮುಖಾಂತರ. Operational Research Project (ORP) ಮಾದರಿಯಲ್ಲಿ ವಿವಿಧ ಬೆಳೆಗಳ ಮೇಲೆ ಪ್ರಾಯೋಗಿಕ ಪ್ರಯೋಗಗಳ ರೂಪದಲ್ಲಿ ರಾಜ್ಯದ ಎಲ್ಲಾ 10 ಹವಾಮಾನ ವಲಯಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳ ಸಂಶೋಧನಾ ಕೇಂದ್ರಗಳು ಹಾಗೂ ರೈತರ ತಾಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಪ್ರಯೋಗಗಳು ಪ್ರಗತಿಯಲ್ಲಿರುತ್ತದೆ. ಸಾವಯವ ಕೃಷಿ ಅಳವಡಿಕೆ ಮತ್ತು ಪ್ರಮಾಣೀಕರಣ ಕಾರ್ಯಕ್ರಮ: 2018-19ನೇ ಸಾಲಿನ ಆಯವ್ಯಯ ಘೋಷಣಾ ಕಾರ್ಯಕ್ರಮವಾದ ಈ ಕಾರ್ಯಕ್ರಮವು ರಾಜ್ಯದ ಸಾವಯವ ಪ್ರಮಾಣೀಕೃತ ಪ್ರದೇಶವನ್ನು 1.0ಲಕ್ಷ ಹೆಕ್ಟೇರ್ ಗಳಿಂದ 1.50ಲಕ್ಷ ಹೆಕ್ಟೇರ್ ಗಳಿಗೆ ಹೆಚ್ಚಿಸುವ ಉದ್ದೇಶದಿಂದ ಪ್ರಾರಂಭಿಸಲಾಗಿರುತ್ತದೆ. ಈ

ಕ್ರ.ಸಂ.	ಪ್ರಶ್ನೆ	ಉತ್ತರ
		ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತವಾಗಿದ್ದು ಅರ್ಹ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳಿಗೆ ಸಾವಯವ ಪ್ರಮಾಣೀಕರಣ ಶುಲ್ಕ ಭರಿಸುವುದರ ಜೊತೆಯಲ್ಲಿ ಸಾವಯವ ಕೃಷಿ ಪೂರಕ ಘಟಕಗಳಾದ ಎರೆಹುಳುಗೊಬ್ಬರ ಉತ್ಪಾದನಾ ಘಟಕ, ಬಯೋ ಡೈಜೆಸ್ಟರ್ ನಿರ್ಮಾಣ ಹಾಗೂ ನೆಲಹಾಸು ನಿರ್ಮಾಣಕ್ಕೆ ಶೇ.75ರ ಸಹಾಧನವನ್ನು ಒದಗಿಸಲಾಗುತ್ತಿದೆ. ಪ್ರಸ್ತುತ 270 ಗುಂಪು ಮತ್ತು 397 ವ್ಯಕ್ತಿಗತ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಪ್ರಮಾಣೀಕರಣ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ರಾಜ್ಯದಲ್ಲಿ ಹೆಚ್ಚುವರಿಯಾಗಿ ಸುಮಾರು 21000 ಹೆಕ್ಟೇರ್ ರಷ್ಟು ಪ್ರದೇಶವನ್ನು ಸದರಿ ಯೋಜನೆಯಡಿ ಪ್ರಮಾಣೀಕರಣಕ್ಕಾಗಿ ಒಳಪಡಿಸಲಾಗಿದ್ದು, ಪ್ರಸ್ತುತ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ. **ಬೆಂಗಳೂರು ಕೃಷಿ ವಿಶ್ವವಿದ್ಯಾಲಯ:-** ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸಾವಯವ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದು, ಕೃ.ವಿ.ವಿ, ಬೆಂಗಳೂರು ಸಾವಯವ ಕೃಷಿ ಸಂಶೋಧನಾ ಸಂಸ್ಥೆಯ ಅಡಿಯಲ್ಲಿ ದಕ್ಷಿಣ ಕರ್ನಾಟಕದ ಎರಡು ವಿಭಿನ್ನ ಕೃಷಿ ಹವಾಮಾನ ವಲಯಗಳಲ್ಲಿ (5&6) 09 ಸಂಶೋಧನಾ ಕೇಂದ್ರಗಳನ್ನು ಸಾವಯವ ಕೃಷಿ ಅಧ್ಯಯನಕ್ಕೆ ತೊಡಗಿಸಿಕೊಂಡಿದೆ. ಈ ಕೇಂದ್ರಗಳಲ್ಲಿ ಸಾವಯವ ಕೃಷಿ ಬಗ್ಗೆ ಕ್ಷೇತ್ರ ಪ್ರಯೋಗಗಳು ಮತ್ತು ಪ್ರಾತ್ಯಕ್ಷತೆಗಳನ್ನು ನಡೆಸಲು ಪ್ರತ್ಯೇಕ ಸಾವಯವ ಬ್ಲಾಕ್‌ಗಳನ್ನು ನಿಗದಿಪಡಿಸಲಾಗಿದ್ದು, ಸಾವಯವ ಕೃಷಿಕರು ಅಳವಡಿಸಿಕೊಳ್ಳಲು ಅನುವಾಗುವಂತೆ ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರಿಸಲು ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ. ಸಾವಯವ ಕೃಷಿ ಸಂಶೋಧನಾ ಸಂಸ್ಥೆ ಜಿ.ಕೆ.ವಿ.ಕೆ ಯಲ್ಲಿ 5 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಕೃಷಿಯಲ್ಲಿ ಸಂಶೋಧನೆ ಮತ್ತು ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗುತ್ತಿದೆ. ಕೃಷಿ ಸಂಶೋಧನಾ ಕೇಂದ್ರ ನಾಗೇನಹಳ್ಳಿಯನ್ನು 2005ರಿಂದ ಸಂಪೂರ್ಣ ಸಾವಯವ ಕೃಷಿಗೆ ಪರಿವರ್ತಿಸಲಾಗಿದೆ. ಕೃ.ವಿ.ವಿ (ಬೆಂ.) ಅಡಿಯಲ್ಲಿ ಸಾವಯವ ಕೃಷಿ ಸಂಶೋಧನೆ ಮತ್ತು ಪ್ರಾತ್ಯಕ್ಷಿಕೆಗೆ ಲಭ್ಯವಿರುವ ಒಟ್ಟು ವಿಸ್ತೀರ್ಣ 34 ಹೆಕ್ಟೇರ್. • ಸಾವಯವ ಕೃಷಿ ಸಂಶೋಧನಾ ಸಂಸ್ಥೆ ಜಿ.ಕೆ.ವಿ.ಕೆ ಮತ್ತು ಸಾವಯವ ಕೃಷಿ ಸಂಶೋಧನಾ ಕೇಂದ್ರ ನಾಗೇನಹಳ್ಳಿಯಲ್ಲಿ ರೈತರಿಗೆ ಜೈವಿಕ ಗೊಬ್ಬರಗಳು ಮತ್ತು ಜೈವಿಕ ನಿಯಂತ್ರಣಗಳನ್ನು ಒದಗಿಸಲು ಸಾಮೂಹಿಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು ರೈತರಿಗೆ ಉಪಯೋಗವಾಗುವಂತಹ ವಿಸ್ತರಣ ಲೇಖನಗಳನ್ನು ಪ್ರಕಟಿಸಲಾಗಿದೆ. • ಸಂಸ್ಥೆಗೆ ಭೇಟಿ ನೀಡುವ ರೈತರಿಗೆ ಮತ್ತು ಸಾವಯವ ಕೃಷಿಯ ಬಗ್ಗೆ ನಿರಂತರವಾಗಿ ತಾಂತ್ರಿಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.

ಕ್ರ.ಸಂ.	ಪ್ರಶ್ನೆ	ಉತ್ತರ
		ಕೃಷಿ ವಿಶ್ವವಿದ್ಯಾಲಯ, ಧಾರವಾಡ:- ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಾವಯವ ಕೃಷಿ ಸಂಸ್ಥೆಯು 2006ರಲ್ಲಿ ಸ್ಥಾಪಿತವಾಗಿ ವಿಶ್ವವಿದ್ಯಾಲಯದ ವಲಯಕ್ಕೆ ಸಂಬಂಧಪಟ್ಟ 17 ಬೆಳೆಗಳಾದ ಹಿಂಗಾರಿ ಜೋಳ, ಭತ್ತ, ಗೋವಿನಜೋಳ, ಗೋಧಿ, ಕಡಲೆ, ಸೋಯಾಅವರೆ, ಹೆಸರು, ತೊಗರಿ, ಕುಸುಬೆ, ಶೇಂಗಾ, ಕಬ್ಬು, ಮೆಣಸಿನಕಾಯಿ, ಹತ್ತಿ ಮತ್ತು ಆಲೂಗಡ್ಡೆ ಬೆಳೆಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡಲಾಗುವುದು. ಅಲ್ಲದೇ ಈ ಎಲ್ಲಾ ಬೆಳೆಗಳ ಬೇಸಾಯ ಪದ್ಧತಿಗಳ ಕೈಪಿಡಿಯನ್ನು ರೈತರ ಅನುಕೂಲಕ್ಕಾಗಿ ಬಿಡುಗಡೆ ಮಾಡಲಾಗಿದೆ. ಇದರ ಜೊತೆ ರೈತರಿಗೆ ಅಗತ್ಯವಿರುವ ಅಣುಜೀವಿ ಗೊಬ್ಬರ, ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ ಹಾಗೂ ಜೈವಿಕ ಪೀಡೆನಾಶಕಗಳ ಕುರಿತು ತರಬೇತಿಯನ್ನು ನೀಡಲಾಗುತ್ತದೆ. ಮತ್ತು ವಿವಿಧ ಜಿಲ್ಲೆಗಳಲ್ಲಿ "ರೈತರ ಕೂಟ" ವನ್ನು ರಚಿಸಿ, ರೈತರಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಹಾಗೂ ಸಾವಯವ ಕೃಷಿ ಸಂಘಗಳು ಪ್ರತಿ ಗುರುವಾರ ಮತ್ತು ರವಿವಾರ "ಸಾವಯವ ಸಂತೆ" ಯನ್ನು ನಡೆಸುತ್ತಿದೆ. "ಕೃಷಿ ಮೇಳ" ಧಾರವಾಡದಲ್ಲಿ ಸಾವಯವ ಮಳಿಗೆಗಳನ್ನು ಹಾಕಿ, ರೈತರಿಗೆ ಮಾಹಿತಿ ಒದಗಿಸಲಾಗುತ್ತಿದೆ. **ಕೃಷಿ ವಿಶ್ವವಿದ್ಯಾಲಯ, ರಾಯಚೂರು:-** ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸಲು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯಿಂದ ಸಾವಯವ ಕೃಷಿಗೆ ಮತ್ತು ಸಾವಯವ ಕೃಷಿಯಲ್ಲಿ ತೊಡಗಿಕೊಂಡಿರುವ ರೈತರಿಗೆ ಸಾವಯವ ಕೃಷಿಯಲ್ಲಿ ಅಳವಡಿಸಬಹುದಾದ ಹಲವಾರು ಸಂಶೋಧನೆಗಳನ್ನು ಕೈಗೊಂಡು ರೈತರ ಕ್ಷೇತ್ರಗಳಲ್ಲಿ ಪ್ರಾತ್ಯಕ್ಷಿತೆಗಳನ್ನು ಅಳವಡಿಸಿ ರೈತರಿಗೆ ಸಾವಯವ ಕೃಷಿಯ ಮಹತ್ವವನ್ನು ತಿಳಿಸಲಾಗುತ್ತಿದೆ. ಅದಲ್ಲದೆ ಸಾವಯವ ಕೃಷಿಗೆ ಪೂರಕವಾದ ವಿವಿಧ ಸಾವಯವ ಪರಿಕರಗಳಾದ ಜೈವಿಕ ಗೊಬ್ಬರಗಳು (ರೈಝೋಬಿಯಂ, ಪಿಎಸ್‌ಬಿ, ಅಜಟೋಬ್ಯಾಕ್ಟರ್ ಮತ್ತು ಅಜೋಸ್ಪೈರಿಲಂ) ಮತ್ತು ಜೈವಿಕ ಪೀಡೆನಾಶಕಗಳ (ಟ್ರೈಕೊಡರ್ಮಾ, ಸುಡೊಮೊನಸ್, ಮೆಟರಿಜಿಯಂ, ಬೆವೇರಿಯಾ ಮತ್ತು ನುಮೋರಿಯಾ)ನ್ನು ರೈತರಿಗೆ ತಲುಪಿಸಲಾಗುತ್ತಿದೆ. ಅದಲ್ಲದೇ ಸಾವಯವ ಗೊಬ್ಬರಗಳಾದ ಎರೆಗೊಬ್ಬರ ಮತ್ತು ಕಾಂಪೋಷ್ಟ್‌ಗಳನ್ನು ಉತ್ಪಾದಿಸಿ ರೈತರಿಗೆ ತಲುಪಿಸಲಾಗುತ್ತಿದೆ. ಅದಲ್ಲದೇ ಶೂನ್ಯ ಬಂಡವಾಳ ಸಹಜ ಕೃಷಿ ಯೋಜನೆಯನ್ನು, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಿ, ಲಭ್ಯವಿರುವ ಪರಿಕರಗಳನ್ನು ಬಳಸಿ, ಪ್ರಮುಖ ಪದ್ಧತಿಗಳಾದ ದ್ರವರೂಪದ ಸಾವಯವ ಗೊಬ್ಬರ (ಬೀಜಾಮೃತ ಮತ್ತು ಜೀವಾಮೃತ) ಬಳಕೆ, ಬೆಳೆಗಳ ಹೊದಿಕೆ, ವಾಫಾಸ (ಮಣ್ಣಿನ ಹ್ಯೂಮಸ್‌ನ್ನು ವೃದ್ಧಿಸಿ) ಮುಂತಾದ

ಕ್ರ.ಸಂ.	ಪ್ರಶ್ನೆ	ಉತ್ತರ
		ವಿಷಯಗಳ ಬಗ್ಗೆ ಒತ್ತುಕೊಟ್ಟ ಯಶಸ್ವಿ ಕೃಷಿಯನ್ನು ಕೈಗೊಳ್ಳಲು ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ. **ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ:-** ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಸಾವಯವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕಳೆದ ಹತ್ತು ವರ್ಷಗಳಿಂದ ಸುಮಾರು 120 ಟನ್ ಗಳಷ್ಟು ಜೈವಿಕಗೊಬ್ಬರ ಹಾಗೂ ಜೈವಿಕ ನಿಯಂತ್ರಕಗಳನ್ನು ಉತ್ಪಾದಿಸಿ ರೈತರಿಗೆ ನೀಡಲಾಗಿದೆ. ಸಾವಯವ ಕೃಷಿ ಯಲ್ಲಿ ರೋಗ ಮತ್ತು ಕೀಟಗಳ ನಿರ್ವಹಣೆ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಸಾವಯವ ಸಂಶೋಧನಾ ಕೇಂದ್ರದಲ್ಲಿ ವಾರ್ಷಿಕವಾಗಿ ಸಾವಯವ ತೊಗರಿ, ಅವರೆ, ಅಲಸಂದೆ,ರಾಗಿ ಭತ್ತ, ಬದನೆ, ಬೆಂಡೆ, ಮೆಣಸು, ಸಿರಿಧಾನ್ಯಗಳು, ಶೇಂಗಾ, ಸೂರ್ಯಕಾಂತಿ, ಕುರುಪಣಟ ಮುಂತಾದ ಬೆಳೆಗಳ ಉತ್ಪಾದನಾ ತಾಕುಗಳ ಪ್ರದರ್ಶನಗೊಳಿಸುವುದು. ಭತ್ತ, ತೊಗರಿ, ರಾಗಿ, ಅವರೆ, ಟೊಮೆಟೋ, ಮೂಲಂಗಿ, ಬೆಂಡೆ, ಬದನೆ ಸಾವಯವ ಗೊಬ್ಬರದ ಪ್ರಮಾಣ ನಿರ್ಧರಿಸುವ ಪ್ರಯೋಗಗಳನ್ನು ಕೈಗೊಂಡಿದ್ದು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬೆಳೆಯುವ ಪ್ರಮುಖ ಕೃಷಿ ಬೆಳೆಗಳಿಗೆ ಸುಧಾರಿತ ಸಾವಯವ ಕೃಪಿಡಿಯನ್ನು ರಚಿಸಲಾಗಿದೆ.
ಆ)	ಪ್ರತಿ ವರ್ಷವೂ ರಾಜ್ಯದಲ್ಲಿ "ಕೃಷಿ ಮೇಳ"ವನ್ನು ಆಯೋಜಿಸಲಾಗುತ್ತಿದೆಯೇ; ಹಾಗಿದ್ದಲ್ಲಿ ವರ್ಷದಲ್ಲಿ ಎಷ್ಟು ಭಾರಿ "ಕೃಷಿ ಮೇಳ"ವನ್ನು ಆಯೋಜಿಸಲಾಗುತ್ತದೆ.	ಹೌದು. **ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು:-** ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ. ಆವರಣದಲ್ಲಿ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಕೃಷಿ ಮೇಳವನ್ನು ಆಯೋಜಿಸುತ್ತಿದೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಆಡಳಿತ ವ್ಯಾಪ್ತಿಗೆ ಒಳಪಡುವ ವಿ.ಸಿ.ಫಾರಂ, ಮಂಡ್ಯ ಜಿಲ್ಲೆಯಲ್ಲಿ ಪ್ರತಿ ವರ್ಷ ಕೃಷಿ ಮೇಳವನ್ನು ಆಯೋಜಿಸಲಾಗುತ್ತಿದೆ. ಮುಂದುವರೆದು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 13 ಕೃಷಿ ಸಂಶೋದನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತೀ ವರ್ಷ ಎಲ್ಲಾ ಕೃಷಿ ಸಂಶೋದನಾ ಕೇಂದ್ರಗಳಲ್ಲಿ ವಿವಿಧ ಬೆಳೆಗಳಲ್ಲಿ ಕ್ಷೇತ್ರೋತ್ಸವವನ್ನು ಆಯೋಜಿಸಲಾಗುತ್ತಿದೆ. **ಕೃಷಿ ವಿಶ್ವವಿದ್ಯಾಲಯ, ಧಾರವಾಡ:-** ಕೃಷಿ ವಿಶ್ವವಿದ್ಯಾಲಯ ಆವರಣ ಮತ್ತು ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ ಆವರಣದಲ್ಲಿ ವರ್ಷದಲ್ಲಿ ಒಂದು ಬಾರಿ "ಕೃಷಿ ಮೇಳ"ವನ್ನು ಆಯೋಜಿಸಲಾಗುತ್ತದೆ. **ಕೃಷಿ ವಿಶ್ವವಿದ್ಯಾಲಯ, ರಾಯಚೂರು:-** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ವತಿಯಿಂದ ಪ್ರತಿ ವರ್ಷವೂ ನವೆಂಬರ್/ಡಿಸೆಂಬರ್ ತಿಂಗಳಲ್ಲಿ 'ಕೃಷಿ ಮೇಳ'ವನ್ನು ಕೃವಿವಿ, ರಾಯಚೂರು ಮುಖ್ಯ ಆವರಣದಲ್ಲಿ ಆಯೋಜಿಸಲಾಗುತ್ತದೆ.

ಕ್ರ.ಸಂ.	ಪ್ರಶ್ನೆ	ಉತ್ತರ
		ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ:- ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಮತ್ತು ವಿಶ್ವವಿದ್ಯಾಲಯದ ಸುಪರ್ದಿಯಲ್ಲಿ ಬರುವ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಗಳಲ್ಲಿ ಪ್ರತಿ ವರ್ಷವೂ ಒಂದು ಬಾರಿ ಕೃಷಿ ಮೇಳವನ್ನು ಆಯೋಜಿಸಲಾಗುವುದು. ಅಲ್ಲದೇ, ಇತರೆ ಕೇಂದ್ರಗಳಲ್ಲೂ ಹವಾಮಾನ ಬೆಳೆ ಪರಿಸ್ಥಿತಿಗೆ ಅನುಗುಣವಾಗಿ ಪ್ರಾತ್ಯಕ್ಷಿಕೆ, ಕ್ಷೇತ್ರೋತ್ಸವ ಅಥವಾ ಕೃಷಿ ಮೇಳವನ್ನು ವರ್ಷಕ್ಕೆ ಒಂದು ಬಾರಿ ಆಯೋಜಿಸಲಾಗುವುದು
ಇ)	ಮುಂಬರುವ ದಿನಗಳಲ್ಲಿ ಯಾವಾಗ "ಕೃಷಿ ಮೇಳ" ವನ್ನು ಆಯೋಜಿಸಲಾಗುವುದು? (ಸೂಕ್ತ ಮಾಹಿತಿಯನ್ನು ನೀಡುವುದು)	ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕೃಷಿಮೇಳವನ್ನು 2021ರ ಅಕ್ಟೋಬರ್/ನವೆಂಬರ್ ತಿಂಗಳಲ್ಲಿ ಆಯೋಜಿಸಲಾಗುವುದು. ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ 2021-22ನೇ ಸಾಲಿನಲ್ಲಿ (ಸೆಪ್ಟೆಂಬರ್ / ಅಕ್ಟೋಬರ್ ತಿಂಗಳಿನಲ್ಲಿ) "ಕೃಷಿ ಮೇಳ" ವನ್ನು ಆಯೋಜಿಸಲಾಗುವುದು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ 2021-22ನೇ ಸಾಲಿನಲ್ಲಿ ಕೃಷಿಮೇಳವನ್ನು ನವೆಂಬರ್/ಡಿಸೆಂಬರ್ ತಿಂಗಳಲ್ಲಿ ಆಯೋಜಿಸಲಾಗುವುದು. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ 2021-22ನೇ ಸಾಲಿನ ಅಕ್ಟೋಬರ್ ತಿಂಗಳಲ್ಲಿ ಕೃಷಿ ಮೇಳವನ್ನು ಆಯೋಜಿಸಲಾಗುವುದು.

ಸಂಖ್ಯೆ: AGRI-ACT/31/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1521

ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)

ಉತ್ತರಿಸಬೇಕಾದ ದಿನಾಂಕ : 10-03-2021.

ಉತ್ತರಿಸುವ ಸಚಿವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕಳೆದ 3 ವರ್ಷಗಳಿಂದ ಮಂಡ್ಯ ಜಿಲ್ಲೆಯಲ್ಲಿ ವಕ್ಫ್ ಮಂಡಳಿಯ ವತಿಯಿಂದ ಯಾವುದೇ ಕಾರ್ಯಕ್ರಮ/ಕಾಮಗಾರಿ ಕೆಲಸಗಳು ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಳೆದ ಮೂರು ವರ್ಷಗಳಿಂದ ಸರ್ಕಾರದ ವತಿಯಿಂದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮೂಲಕ ಮಂಡ್ಯ ಜಿಲ್ಲೆಗೆ ಮಂಜೂರಾಗಿರುವ ಕಾರ್ಯಕ್ರಮಗಳು/ಕಾಮಗಾರಿಗಳ ವಿವರ ಅನುಬಂಧ 1, 2 ಮತ್ತು 3 ರಲ್ಲಿ ನೀಡಲಾಗಿದೆ.
ಆ.	ಬಂದಿದ್ದಲ್ಲಿ, ಕಾಮಗಾರಿಗಳು ನಡೆಯದಿರಲು ಕಾರಣಗಳೇನು? (ವಿವರ ನೀಡುವುದು)	ಅನ್ವಯಿಸುವುದಿಲ್ಲ

ಸಂಖ್ಯೆ: MWD 61 LMQ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

1521

ಪ್ರಶ್ನೆ ಸಂಖ್ಯೆ: 1521

ಅನುಬಂಧ - 1

Repair & Renovation

Year 2018-19

Sl. No	District	Taluk	Amount Sanctioned (Rs. in lakhs)	Amount Released (Rs. in lakhs)
1	Mandya	Malavalli	5.00	-
2	Mandya	Malavalli	3.00	3.00
3	Mandya	Mandya Tq	3.00	-

Year 2019-20

Sl. No	District	Taluk	Amount Sanctioned (Rs. in lakhs)	Amount Released (Rs. in lakhs)
1	Mandya	Maddur	2.50	0.00

Year 2020-21

Sl. No	District	Taluk	Amount Sanctioned (Rs. in lakhs)	Amount Released (Rs. in lakhs)
NIL				

ಅನುಬಂಧ-2

Protection of Wakf Property Scheme

Year 2018-19				
Sl. No	District	Taluk	Amount Sanctioned (Rs. in lakhs)	Amount Released (Rs. in lakhs)
NIL				

Year 2019-20				
Sl. No	District	Taluk	Amount Sanctioned (Rs. in lakhs)	Amount Released (Rs. in lakhs)
1	Mandya	Srirangapatna	10.00	10.00
2	Mandya	Maddur	5.00	5.00
3	Mandya	K.R.Pet	5.00	5.00
4	Mandya	Nagmangala	5.00	5.00
5	Mandya	Maddur	5.00	5.00
6	Mandya	Mandya	3.00	3.00
7	Mandya	Maddur	3.00	3.00
8	Mandya	Srirangapatna	3.00	3.00

Year 2020-21				
Sl. No	District	Taluk	Amount Sanctioned (Rs. in lakhs)	Amount Released (Rs. in lakhs)
1	Mandya	Maddur	2.00	-
2	Mandya	Malavalli	2.00	-

ಪ್ರಶ್ನೆ ಸಂಖ್ಯೆ : 1521 1521

ಅನುಬಂಧ-3

2018-19 ರಿಂದ 2020-21 ನೇ ಸಾಲಿನವರೆಗೆ ಅಲ್ಪಸಂಖ್ಯಾತರ ಖಬರಸ್ಥಾನ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರದಿಂದ ಮಂಡ್ಯ ಜಿಲ್ಲೆಗೆ ಮಂಜೂರು ಹಾಗೂ ಬಿಡುಗಡೆಯಾದ ಅನುದಾನದ ವಿವರ			
ಕ್ರ.ಸಂ	ತಾಲ್ಲೂಕು	ಸರ್ಕಾರದಿಂದ ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
1	ಮಂಡ್ಯ	25.00	25.00
2	ಶ್ರೀರಂಗಪಟ್ಟಣ	15.00	15.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1584

ಸದಸ್ಯರ ಹೆಸರು : ಶ್ರೀ. ರಾಜೇಶ್ ನಾಯಕ್ ಯು. (ಬಂಟ್ವಾಳ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ತೋಟಗಾರಿಕಾ ಇಲಾಖೆಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು; (ಯೋಜನೆ ವಿವರ ನೀಡುವುದು)	ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ತೋಟಗಾರಿಕಾ ಇಲಾಖೆಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ-1 ಒದಗಿಸಿದೆ.
ಆ)	ಈ ಯೋಜನೆಗಳಲ್ಲಿ ಫಲಾನುಭವಿಗಳಿಗಾಗಿ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳ/ ಮಾನದಂಡಗಳೇನು; (ಮಾಹಿತಿ ನೀಡುವುದು)	ಯೋಜನೆಗಳಡಿ ಫಲಾನುಭವಿಗಳಾಗಿ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳ/ ಮಾನದಂಡಗಳನ್ನು ಅನುಬಂಧ-2 ರಲ್ಲಿ ನೀಡಿದೆ
ಇ)	ಈ ಯೋಜನೆಗಳಲ್ಲಿ ಈವರೆಗೆ ಸಾಧಿಸಿದ ಪ್ರಗತಿ ಯಾವುದು (ವಿವರ ನೀಡುವುದು)?	ಈ ಯೋಜನೆಗಳಲ್ಲಿ ಈವರೆಗೆ ಸಾಧಿಸಿದ ಪ್ರಗತಿಯ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಸಂಖ್ಯೆ: HORTI 118 HGM 2021

(ಆರ್. ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

LAQ-1584

ಅನುಬಂಧ-3

ತೋಟಗಾರಿಕೆ ಇಲಾಖೆಯಲ್ಲಿ ಜಾರಿಗೊಳಿಸಲಾಗುತ್ತಿರುವ ಪ್ರಮುಖ ಯೋಜನೆ/ಕಾರ್ಯಕ್ರಮಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅನುಸರಿಸುತ್ತಿರುವ ಮಾನದಂಡಗಳ ವಿವರ

ಸಾಮಾನ್ಯ ಷರತ್ತುಗಳು:

- ಅರ್ಹ ಫಲಾನುಭವಿಗಳ ಆಯ್ಕೆಗೆ ವಿವಿಧ ಸ್ಥಳೀಯ ಮಾಧ್ಯಮಗಳ ಮೂಲಕ ಸೂಕ್ತ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗುವುದು.
- ಈ ಹಿಂದೆ ಇಲಾಖೆಯಿಂದ ಯಾವುದೇ ಸಹಾಯಧನ ಪಡೆಯದ ಹೊಸ ಫಲಾನುಭವಿಗಳಿಗೆ ಆದ್ಯತೆ ನೀಡುವುದು.
- ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಆಯ್ಕೆಗೆ ಪರಿಗಣಿಸಿದ ನಂತರ ದೊಡ್ಡ ರೈತರನ್ನು ಸಹಾಯಧನಕ್ಕಾಗಿ ಪರಿಗಣಿಸುವುದು.
- ಈ ಹಿಂದೆ ಇಲಾಖೆಯಿಂದ ಸಹಾಯಧನ ಪಡೆದ ಫಲಾನುಭವಿಗಳು ಕಾರ್ಯಕ್ರಮದ ಸಮರ್ಪಕ/ಸದ್ಬಳಕೆ ಮಾಡದಿದ್ದಲ್ಲಿ ಅಂತಹ ಫಲಾನುಭವಿಗಳನ್ನು ಹೊಸ ಘಟಕ/ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಆಯ್ಕೆಗೆ ಪರಿಗಣಿಸಬಾರದು.
- ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಾಧಿಕಾರಿಯಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದ ನಂತರದಲ್ಲಿ ಫಲಾನುಭವಿಯ ಹೆಸರಿನಲ್ಲಿ ಅರ್ಜಿಪಡೆಯುವುದು.
- ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದಲ್ಲಿ, ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಲಾಗುವುದು.
- ತಾಲ್ಲೂಕು ಮಟ್ಟದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ವಿಕಲಚೇತನರು, ಅಲ್ಪಸಂಖ್ಯಾತರು, ಸಣ್ಣ, ಅತಿ ಸಣ್ಣ ರೈತರು ವರ್ಗವಾರು ವಿಂಗಡಿಸುವುದು.
- ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ನಿಗಧಿತ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಇನ್ನೂ ಹೆಚ್ಚಿನ ಪ್ರಚಾರ ನೀಡಿ ಗುರಿ ಸಾಧಿಸಲು ಪ್ರಯತ್ನಿಸುವುದು

- ತಾಲ್ಲೂಕುಗಳಲ್ಲಿ ರೈತರು ಸಲ್ಲಿಸಿರುವ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರ ಹೆಸರುಗಳನ್ನು ಜೇಷ್ಠತಾ ವಹಿಯನ್ನು ನಿರ್ವಹಿಸಿ ಜೇಷ್ಠತೆ ಆಧಾರದ ಮೇಲೆ ಸಹಾಯಧನಕ್ಕೆ ಪರಿಗಣಿಸಲಾಗುವುದು.
- ರೈತ ಫಲಾನುಭವಿಯು ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST)ಕ್ಕೆ ಸೇರಿದವರಾದಲ್ಲಿ ನಿಗಧಿತ ದಾಖಲಾತಿಗಳೊಂದಿಗೆ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ
- ಪೂರಕ ಘಟಕಗಳು ಒಂದೇ ವರ್ಷದಲ್ಲಿ ಒದಗಿಸಲು ಸಾದ್ಯವಾಗದಿದ್ದಲ್ಲಿ ಅಂತಹ ಘಟಕಗಳನ್ನು ಮುಂದಿನ ವರ್ಷದಲ್ಲಿ ಒದಗಿಸಲು ಪರಿಗಣಿಸಬಹುದು
- ಒಬ್ಬ ಫಲಾನುಭವಿ ಒಂದಕ್ಕಿಂತ ಹೆಚ್ಚು ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಿದ್ದು, ಅವನು ಸಲ್ಲಿಸಿದ ಸೌಲಭ್ಯಗಳಿಗೆ ಸಾಕಷ್ಟು ಸಂಖ್ಯೆಯ ಇತರೆ ಫಲಾನುಭವಿಗಳು ಸಿಗದೆ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಸದರಿ ಫಲಾನುಭವಿಗಳಿಗೆ ಎರಡಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳಿಗೆ ಸಹಾಯಧನವನ್ನು ನೀಡಬಹುದಾಗಿದೆ.
- ಫಲಾನುಭವಿ ರೈತರು ಸಹಾಯಧನವನ್ನು ಪಡೆದ ನಂತರ ತೋಟದ ಮುಂಭಾಗದಲ್ಲಿ ಯೋಜನೆಯಡಿಯಲ್ಲಿ ಸಹಾಯಧನವನ್ನು ಪಡೆಯಲಾಗಿದೆ ಎಂಬ ನಾಮಫಲಕವನ್ನು ಕಡ್ಡಾಯವಾಗಿ ಹಾಕುವುದು.

ತೋಟಗಾರಿಕೆ ಜಂಟಿ ನಿರ್ದೇಶಕರು

(ಯೋಜನೆ)

LAQ-1584

ಅನುಬಂಧ-1

2020-21ನೇ ಸಾಲಿನಲ್ಲಿ ತೋಟಗಾರಿಕಾ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ರಾಜ್ಯ ಹಾಗೂ ಕೇಂದ್ರ ನೆರವಿನ ಯೋಜನೆಗಳು ಹಾಗೂ ಫೆಬ್ರವರಿ ಮಾಹೆಯ ಅಂತ್ಯಕ್ಕೆ ಯೋಜನಾವಾರು ಸಾಧಿಸಲಾದ ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ವಾರ್ಷಿಕ ಗುರಿ (ಸಂಪುಟ-3ರನ್ವಯ)	ಬಿಡುಗಡೆಯಾದ ಅನುದಾನದ ವಿವರ	ಸಾದಿಸಿದ ಪ್ರಗತಿ
I	ಕೇಂದ್ರ ನೆರವಿನ ಯೋಜನೆಗಳು			
1	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)	26400.00	26400.00	24086.46
2	ರಾಷ್ಟ್ರೀಯ ತೋಟಗಾರಿಕೆ ಮಿಷನ್	17481.20	17263.98	12431.86
3	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	7046.40	3617.10	3185.41
4	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ	1596.00	1596.00	1233.58
5	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಬಿಯಾನ ಯೋಜನೆ	1000.00	607.64	527.73
6	ಪರಂಪರಾಗತ ಕೃಷಿ ವಿಕಾಸ ಯೋಜನೆ	680.00	265.00	17.31
	ಉಪ ಮೊತ್ತ	**54203.60**	**49749.72**	**41482.35**
II	ರಾಜ್ಯವಲಯ ಯೋಜನೆಗಳು			
1	ಸಮಗ್ರ ತೋಟಗಾರಿಕಾ ಅಭಿವೃದ್ಧಿ	12644.90	12595.20	11364.69
2	ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು	1500.00	1500.00	945.51
3	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	793.00	735.50	503.04
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ	750.00	750.00	540.10
5	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ	800.00	600.00	600.00
6	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ	785.00	785.00	505.24
7	ತೋಟಗಾರಿಕೆ ಕಟ್ಟಡಗಳು	200.00	200.00	197.65
8	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ	500.00	500.00	326.35
9	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ	130.00	130.00	63.00
10	ತೋಟಗಾರಿಕೆ ಮೂಲ ಸೌಲಭ್ಯ ಅಭಿವೃದ್ಧಿ	406.00	406.00	42.00
11	ಬಾಗಲಕೋಟೆಯಲ್ಲಿ ತೋಟಗಾರಿಕ ವಿಶ್ವ ವಿದ್ಯಾಲಯದ ಬಂಡವಾಳ	36.00	36.00	18.00
	ಉಪ ಮೊತ್ತ	**18544.90**	**18237.70**	**15105.58**

ಅನುಬಂಧ-1

2020-21ನೇ ಸಾಲಿನಲ್ಲಿ ತೋಟಗಾರಿಕಾ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ರಾಜ್ಯ ಹಾಗೂ ಕೇಂದ್ರ ನೆರವಿನ ಯೋಜನೆಗಳು ಹಾಗೂ ಫೆಬ್ರವರಿ ಮಾಹೆಯ ಅಂತ್ಯಕ್ಕೆ ಯೋಜನಾವಾರು ಸಾಧಿಸಲಾದ ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ವಾರ್ಷಿಕ ಗುರಿ (ಸಂಪುಟ-3ರನ್ವಯ)	ಬಿಡುಗಡೆಯಾದ ಅನುದಾನದ ವಿವರ	ಸಾಧಿಸಿದ ಪ್ರಗತಿ
III	**ಜಿಲ್ಲಾವಲಯ ಯೋಜನೆಗಳು**			
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ	1095.09	1056.99	815.67
2	ತೋಟಗಾರಿಕೆ ಕಟ್ಟಡಗಳು	499.98	385.72	231.99
3	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	312.20	312.20	209.17
4	ಜೇನು ಸಾಕಾಣಿಕೆ	250.95	247.72	169.64
5	ಪ್ರಚಾರ ಮತ್ತು ಸಾಹಿತ್ಯ	221.27	221.27	97.69
6	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ	165.27	158.97	107.67
7	ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ	69.86	69.86	41.96
8	ರೈತರಿಗೆ ತರಬೇತಿ	62.00	49.56	15.13
	ಉಪ ಮೊತ್ತ	**2676.62**	**2502.29**	**1688.92**
	ಒಟ್ಟು (I+II+III)	**75425.12**	**70489.71**	**58276.85**

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1592

ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)

ಉತ್ತರಿಸುವ ದಿನಾಂಕ : 10-03-2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಹುಣಸೂರು ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಕೃಷಿ ಇಲಾಖೆಯಿಂದ SCP/TSP ಯೋಜನೆಯಡಿಯಲ್ಲಿ ಮಂಜೂರಾದ ಅನುದಾನ ಎಷ್ಟು; (ಸಂಪೂರ್ಣ ವಿವರ ನೀಡುವುದು)	ಅನುದಾನ ವಿವರಗಳನ್ನು ಅನುಬಂಧ-1 (ಅ) ಮತ್ತು (ಆ) ರಲ್ಲಿ ನೀಡಿದೆ.
ಆ.	ಬಿಡುಗಡೆಯಾಗಿರುವ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; (ಕಾಮಗಾರಿಗಳ ಹೆಸರು ಸಹಿತ ಸಂಪೂರ್ಣ ವಿವರ ನೀಡುವುದು)	ಈ ಯೋಜನೆಗಳಲ್ಲಿ ಕೈಗೊಂಡಿರುವ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
ಇ.	ಸದರಿ ಯೋಜನೆಯಿಂದ ಕೈಗೊಂಡ ಕಾಮಗಾರಿಗಳಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಗಳಾವುವು; ಅಪೂರ್ಣಗೊಳ್ಳಲು ಕಾರಣಗಳೇನು;(ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಈ.	ಈ ಇಲಾಖೆಯಿಂದ ನಿರ್ಮಿಸಲಾಗುತ್ತಿರುವ ಕೃಷಿ ಹೊಂಡಗಳಿಗೆ ಮಕ್ಕಳು ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮೃತ ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಉ.	ಹಾಗಿದ್ದಲ್ಲಿ, ಇಂತಹ ಅವಘಡಗಳು ಸಂಭವಿಸದಂತೆ ಸರ್ಕಾರ ಮುಂಜಾಗ್ರತವಾಗಿ ಕೈಗೊಂಡ ಕ್ರಮಗಳೇನು?	ಇಂತಹ ಅವಘಡಗಳು ಸಂಭವಿಸದಂತೆ ಸರ್ಕಾರ ಮುಂಜಾಗ್ರತ ಕ್ರಮವಾಗಿ ಕ್ಷೇತ್ರ ಮಟ್ಟದಲ್ಲಿ ರೈತರಿಗೆ ತಿಳುವಳಿಕೆ ನೀಡಿ, ಕೃಷಿ ಹೊಂಡದ ಸುತ್ತಲೂ supporting stone with GI wire fencing ಹಾಗೂ ನೆರಳು ಪರದೆ ಘಟಕ ಅಳವಡಿಸಲು ಎಲ್ಲಾ ವರ್ಗದ

		ರೈತರಿಗೆ ಶೇ.50 ರ ಸಹಾಯಧನ ನಿಗಧಿಪಡಿಸಲಾಗಿದೆ. ಸುರಕ್ಷಿತ ಕ್ರಮವಾಗಿ ಕೃಷಿ ಹೊಂಡದ ಹತ್ತಿರ ಸೂಚನಾ ಫಲಕವನ್ನು ಹಾಗೂ ಹೊಂಡಗಳಲ್ಲಿ ಹಗ್ಗದೊಂದಿಗೆ ಟೈರ್ ಟ್ಯೂಬ್ ನ್ನು ಇಳಿ ಬಿಡಲು ಸಹ ತಿಳಿಸಲಾಗಿದೆ. ಕೃಷಿ ಹೊಂಡಗಳ ಸುತ್ತ ಸುರಕ್ಷತಾ ಬೇಲಿ ನಿರ್ಮಿಸಿಕೊಳ್ಳುವಂತೆ ಇಲಾಖಾವತಿಯಿಂದ ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ನೀಡಲಾಗಿರುತ್ತದೆ.

ಸಂಖ್ಯೆ: AGRI-AML/61/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

LAQ 1592 ಅನುಬಂಧ-1

ಹುಣಸೂರು ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಕೃಷಿ ಇಲಾಖೆಯಿಂದ SCP/TSP ಯೋಜನೆಯಡಿಯಲ್ಲಿ ಮಂಜೂರಾದ ಅನುದಾನದ ವಿವರ

ಕ್ರ. ಸಂ	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ	2017-18				2018-19				2019-20				2020-21			
		ಪ.ಜಾತಿ		ಪ.ಪಂ		ಪ.ಜಾತಿ		ಪ.ಪಂ		ಪ.ಜಾತಿ		ಪ.ಪಂ		ಪ.ಜಾತಿ		ಪ.ಪಂ	
		ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ
1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ (2401-00-[illegible])	19.50	19.44	11.50	11.43	0.00	0.00	0.00	0.00	1.70	1.66	0.00	0.00	0.83	0.83	0.00	0.00
2	ಕೃಷಿ ಭಾಗ್ಯ 2401-00-102-0-27	40.00	39.94	32.00	31.94	30.93	30.93	7.83	6.54	58.16	58.16	13.26	13.23	0.00	0.00	0.00	0.00
3	ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ (2401-00-103-0-[illegible])																
ಅ	ಬೀಜಗಳ ಪೂರೈಕೆ (ಕ್ವಿಂಟಾಲ್)	3.30	3.30	1.70	0.79	4.13	4.12	3.21	3.17	0.92	0.92	0.22	0.22	0.00	0.00	3.10	2.95
ಆ	ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣೆ	4.84	4.30	1.26	1.21	25.64	25.42	11.80	11.68	36.62	36.62	11.75	11.68	46.81	46.81	21.68	21.68
ಇ	ಮಣ್ಣಿನ ಸತ್ವ ಹೆಚ್ಚಿಸುವಿಕೆ (ಹ)	7.30	7.29	1.81	1.57	9.55	9.53	1.69	1.69	4.63	4.63	2.23	2.20	1.82	1.72	1.41	1.41
	ಉಪ ಮೊತ್ತ	**15.44**	**14.89**	**4.77**	**3.57**	**39.32**	**39.07**	**16.70**	**16.54**	**42.17**	**42.17**	**14.20**	**14.10**	**48.63**	**48.53**	**26.19**	**26.04**
4	ಕೃಷಿ ವಿಸ್ತರಣೆ ಮತ್ತು ತರಬೇತಿ (2401-00-109-0-21)																
ಅ	ಭೂಚೇತನ	2.30	2.30	1.08	1.08	0.44	0.35	0.32	0.30	0.00	0.00	0.00	0.00	0.00	0.00	0.00	0.00
5	ರಾಷ್ಟ್ರೀಯ ಆಹಾರ ಸುರಕ್ಷತೆ ಮಿಶನ್ (2401-00-102-0-08)-CSS	10.57	10.56	4.28	4.16	3.96	3.73	1.55	1.31	12.60	11.10	6.97	6.70	11.86	11.86	6.36	6.36
6	ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) (CSS) (60:40)	64.57	64.49	14.08	14.07	47.86	47.83	79.96	76.48	109.00	108.94	63.97	63.85	17.95	17.95	15.64	15.31
7	ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ (2401-00-108-1-16)-CSS																
ಅ	ಮಳೆಯಾಶ್ರಿತ ಪ್ರದೇಶಾಭಿವೃದ್ಧಿ	0.00	0.00	0.00	0.00	0.00	0.00	0.00	0.00	4.36	4.36	1.21	1.21	0.00	0.00	0.00	0.00
ಇ	ಪರಂಪರಾಗತ ವಿಕಾಸ ಯೋಜನೆ	0.00	0.00	0.00	0.00	1.00	1.00	0.32	0.32	0.00	0.00	0.00	0.00	0.00	0.00	0.00	0.00
	ಉಪ ಮೊತ್ತ	**0.00**	**0.00**	**0.00**	**0.00**	**1.00**	**1.00**	**0.32**	**0.32**	**4.36**	**4.36**	**1.21**	**1.21**	**0.00**	**0.00**	**0.00**	**0.00**
8	ರಾಷ್ಟ್ರೀಯ ಕೃಷಿ ವಿಸ್ತರಣೆ & ತಾಂತ್ರಿಕ ಅಭಿಯಾನ 2401-00-800-1-53)-CSS																
ಅ	ಕೃಷಿ ಯಾಂತ್ರೀಕರಣ ಉಪ ಅಭಿಯಾನ	29.75	29.17	15.25	15.24	41.98	41.84	12.94	12.93	33.63	33.61	34.48	32.64	22.59	22.44	7.96	7.01
9	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57) (CSS)	0.00	0.00	-0.00	0.00	5.21	5.20	2.69	2.68	1.65	1.65	0.62	0.62	0.00	0.00	0.00	0.00
	ರಾಜ್ಯ & ಕೇಂದ್ರ ವಲಯ ಒಟ್ಟು	**182.13**	**180.79**	**82.96**	**81.49**	**170.70**	**169.95**	**122.31**	**117.10**	**263.27**	**261.65**	**134.71**	**132.35**	**101.86**	**101.61**	**56.15**	**54.72**
ಜಿಲ್ಲಾ ವಲಯ																	
1	ಇತರೆ ಕೃಷಿ ಯೋಜನೆಗಳು(ಕೃಷಿ ಯಾಂತ್ರೀಕರಣ)(2435-00-101-0-29)	1.67	1.67	0.25	0.25	1.80	1.79	0.40	0.27	2.25	2.25	0.50	0.50	0.00	0.00	0.00	0.00
2	ಸಾವಯವ ಗೊಬ್ಬರಗಳು (2435-00-101-0-34)	0.40	0.38	0.12	0.12	0.35	0.34	0.19	0.19	0.50	0.50	0.23	0.23	0.00	0.00	0.00	0.00
3	ರೈತರಿಗೆ ಸಹಾಯ-ಸಸ್ಯ ಸಂರಕ್ಷಣೆ (2435-00-101-0-63)	0.43	0.43	0.26	0.26	0.57	0.57	0.42	0.42	0.47	0.47	0.30	0.30	0.00	0.00	0.00	0.00
	ಜಿಲ್ಲಾ ವಲಯ ಒಟ್ಟು	**2.50**	**2.48**	**0.63**	**0.63**	**2.72**	**2.70**	**1.01**	**0.88**	**3.22**	**3.22**	**1.03**	**1.03**	**0.00**	**0.00**	**0.00**	**0.00**
	ಮಹಾಮೊತ್ತ (ರಾಜ್ಯ+ಜಿಲ್ಲಾ ವಲಯ)	**184.63**	**183.27**	**83.59**	**82.11**	**173.42**	**172.65**	**123.32**	**117.97**	**266.49**	**264.87**	**135.74**	**133.38**	**101.86**	**101.61**	**56.15**	**54.72**

ಅನುಬಂಧ -1(ಅ)

ಹುಣಸೂರು ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಕೃಷಿ ಇಲಾಖೆಯಿಂದ SCP/TSP ಯೋಜನೆಯಡಿಯಲ್ಲಿ ಮಂಜೂರಾದ ಅನುದಾನದ ವಿವರ (LAQ-1592)

ರೂ. ಲಕ್ಷಗಳಲ್ಲಿ

ಯೋಜನೆ	ವರ್ಷ	ಪ.ಜಾತಿ			ಪ.ಪಂ		
		ಬಿಡುಗಡೆ	ವೆಚ್ಚ	ಕಾಮಗಾರಿ ವಿವರ	ಬಿಡುಗಡೆ	ವೆಚ್ಚ	ಕಾಮಗಾರಿ ವಿವರ
ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	2017-18	16.150	16.140	ನಾಲಾಬದು - 4 ಸಂಖ್ಯೆ	4.250	4.250	ನಾಲಾಬದು - 1 ಸಂಖ್ಯೆ
ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ - ತಡೆಅಣೆ		4.020	4.020	ತಡೆಅಣೆ - 1 ಸಂಖ್ಯೆ			
ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	2018-19	11.000	10.940	ನಾಲಾಬದು - 3 ಸಂಖ್ಯೆ	10.255	10.000	ನಾಲಾಬದು - 2 ಸಂಖ್ಯೆ
ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	2019-20	25.000	24.987	ನಾಲಾಬದು - 5 ಸಂಖ್ಯೆ	2.710	2.000	ನಾಲಾಬದು - 1 ಸಂಖ್ಯೆ
ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು	2020-21	6.680	6.673	ನಾಲಾಬದು - 3 ಸಂಖ್ಯೆ			

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	1595
ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ಸಚಿವರು	:	ಕೃಷಿ ಸಚಿವರು
ಉತ್ತರಿಸುವ ದಿನಾಂಕ	:	10-03-2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವೃಂದವಾರು ಮಾಹಿತಿ ಒದಗಿಸುವುದು)	ಕೃಷಿ ಇಲಾಖೆಯಲ್ಲಿ 4293 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ವೃಂದವಾರು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಿದೆ.
ಆ)	ಕೃಷಿ ಇಲಾಖೆಯಲ್ಲಿ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡದ ಕಾರಣ ಇಲಾಖಾ ಯೋಜನೆಗಳ ಅನುಷ್ಠಾನದಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲಾಖಾ ಯೋಜನೆಗಳ ಅನುಷ್ಠಾನದಲ್ಲಿ ಕೃಷಿ ಚಟುವಟಿಕೆಗಳಲ್ಲಿ ಸಮರ್ಪಕವಾಗಿ ಸಕಾಲದಲ್ಲಿ ಕಾರ್ಯನಿರ್ವಹಿಸಲು ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವ ಸಲುವಾಗಿ ಹೊರಗುತಿಗೆ ಆಧಾರದ ಮೇಲೆ 2255 ಸಿಬ್ಬಂದಿಯನ್ನು ಪಡೆದು ಕಾರ್ಯ ನಿರ್ವಹಿಸಲಾಗುತ್ತಿದೆ.
ಇ)	ಬಂದಿದ್ದಲ್ಲಿ, ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ?	ಕೃಷಿ ಇಲಾಖೆಯಲ್ಲಿ 2018-19ನೇ ಸಾಲಿನಲ್ಲಿ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ಒಟ್ಟು 589 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ ಹಾಗೂ 153 ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮವಹಿಸಲಾಗಿದೆ. ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂಬಡಿ ಕೋಟಾದಲ್ಲಿ ಖಾಲಿ ಇರುವ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: AGRI-AGS/48/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

1595.

ಅನುಬಂಧ

AS ON 01.03.2021

Sl. No	Name of the Post	Sanctioned Posts		Total Sanctioned	Filled	Vacant	Male	Fe-male	SC	ST
		As per merger order	Encadred/ Deputation posts							
	Group – A									
1	Commissioner	2	0	2	2	0	2	0	0	0
2	Director of Agriculture	2	1	3	3	0	2	1	1	2
3	Joint Director (Administration)	1	0	1	1	0	1	0	0	0
4	Additional Director of Agriculture	4	4	8	8	0	8	0	1	0
5	Joint Director of Agriculture	43	8	51+1	52	0	35	17	7	2
6	Deputy Director of Agriculture	81	4	85	85	0	59	26	11	3
7	Chief Accounts Officer	1	0	1	0	1	0	0	0	0
8	Law Officer	1	0	1	0	1	0	0	0	0
9	Executive Engineer	1	0	1	1	0	0	1	0	0
10	Assistant Director of Agriculture	361	24	385	333	52	248	85	56	12
11	Deputy Director of Statistics (FM)	1	0	1	1	0	0	1	0	0
12	Assistant Director of Agriculture(FW)	46	0	46	43	3	0	43	8	3
13	Administrative Officer	25	0	25	20	5	17	3	7	1
14	Assistant Executive Engineer	2	0	2	2	0	2	0	0	0
	TOTAL - A	**571**	**41**	**612**	**551**	**62**	**374**	**177**	**91**	**23**
	Group – B									
15	Agriculture Officer/Agriculture Officer(FW)	1589	0	1589	970	619	607	363	161	33
16	Chief Artist -cum - Audio Visual Specialist (Post Shifted to Dharwad)	1	0	1	1	0	1	0	0	0
17	Assistant Director (Statistics)	1	0	1	1	0	0	0	0	0
18	Administrative Assistant	41	0	41	10	31	28	3	0	0
19	Assistant Agriculture Officer /Assistant Agriculture Officer (Agriculture Engg & Water Management) **	2370	0	2370	872	1498	816	56	162	67
20	Assistant Engineer (Civil)	2	0	2	0	2	0	0	0	0
	TOTAL - B	**4004**	**0**	**4004**	**1854**	**2150**	**1452**	**422**	**323**	**100**

AS ON 01.03.2021

Sl. No	Name of the Post	Sanctioned Posts: As per merger order	Sanctioned Posts: Encadred/ Deputation posts	Total Sanctioned	Filled	Vacant	Male	Female	SC	ST
			Group - C							
21	Superintendent	365	0	364	277	87	186	21	42	9
22	Librarian	1	0	1	1	0	0	0	0	0
23	Draghtsman	4	0	1	1	0	1	0	0	0
24	Mechanical Foreman	4	0	2	2	0	2	0	0	0
25	Statistical Inspector	2	0	2	0	2	0	0	0	1
26	Agriculture Implement Supervisor	23	0	13	8	0	8	0	0	0
27	First Division Assistant	563	0	563	399	164	302	94	54	8
28	Stenographer	47	0	47	21	26	2	19	3	0
29	Senior Typist / Typist	367	0	367	96	331	72	23	16	0
30	Senior Driver / Driver	352	0	352	52	300	52	0	9	3
31	Tracer	74	0	34	34	0	33	1	0	0
32	Agriculture Assistant	48	0	27	27	0	27	0	11	4
33	Second Division Assistant	630	0	630	414	216	281	133	82	24
34	Library Assistant	1	0	1	0	1	0	0	0	0
35	Laboratory Assistant	65	0	65	26	39	4	22	6	0
36	Electrician	1	0	0	0	0	0	0	0	0
37	Compositor	5	0	1	1	0	1	0	0	0
38	Printer	4	0	2	2	0	2	0	0	0
39	Binder	2	0	1	0	0	0	0	0	0
40	Senior Artist/Artist	3	0	0	0	0	0	0	0	0
41	Project Operator	1	0	0	1	0	1	0	0	0
42	Carpenter cum smith	2	0	1	0	0	0	0	0	0
	TOTAL - C	**2564**	**0**	**2474**	**1362**	**1166**	**974**	**313**	**223**	**49**
			Group - D							
43	Attender	111	0	111	49	62	34	15	11	7
44	Cooks	23	0	23	12	11	6	6	6	1
45	Group – D	930	0	920	465	455	260	205	93	32
	TOTAL - D	**1064**	**0**	**1054**	**526**	**528**	**300**	**226**	**110**	**40**

ABSTRACT

Sl. No	Group	As per merger order	Encadred/ Deputation posts	Total Sanctioned	Filled up	Vacant	Male	Female	SC	ST
1	A	571	41	612	551	62	374	177	91	23
2	B	4004	0	4004-	1854	2150	1452	422	323	100
3	C	2564	0	2474	1362	1166	974	313	223	49
4	D	1064	2	1054	526	528	300	226	110	40
	GRAND TOTAL (A+B+C+D)	8203	43	8144	4293	3851	3100	1138	747	212

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1597
ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	:	10-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ರಾಜ್ಯದಲ್ಲಿನ ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವೃಂದವಾರು ಸಂಸ್ಥೆಗಳ ಮಾಹಿತಿ ನೀಡುವುದು)	ರಾಜ್ಯದಲ್ಲಿನ ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ: ಕ.ರಾ.ರ.ಸಾ.ನಿಗಮ: 37,346 ಬೆಂ.ಮ.ಸಾ.ಸಂಸ್ಥೆ: 32,495 ವಾ.ಕ.ರ.ಸಾ.ಸಂಸ್ಥೆ: 22,406 ಈ.ಕ.ರ.ಸಾ.ಸಂಸ್ಥೆ: 19,724 **ಒಟ್ಟು: 1,11,971** ವೃಂದವಾರು ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ.
ಆ)	ಸಾರಿಗೆ ಸಂಸ್ಥೆಗಳಲ್ಲಿ ನಿವೃತ್ತಿ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡದ ಕಾರಣ ಸಿಬ್ಬಂದಿ ಕೊರತೆಯಿಂದ ನಿಗದಿತ ಮಾರ್ಗಗಳಲ್ಲಿ ಬಸ್ ಸೌಲಭ್ಯವನ್ನು ಒದಗಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಾರಿಗೆ ಸಂಸ್ಥೆಗಳಲ್ಲಿ ನಿವೃತ್ತಿ/ಇತರೆ ಕಾರಣಗಳಿಂದ ಉದ್ಭವಿಸಿರುವ ಹುದ್ದೆಗಳನ್ನು ಅಗತ್ಯತೆಗನುಸಾರ ಮುಂಬಡ್ತಿಗೆ ಮೀಸಲಾದ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುತ್ತಿದೆ. ಕೋವಿಡ್-19 ಲಾಕ್‌ಡೌನ್ ನಂತರದಲ್ಲಿ ಪ್ರಯಾಣಿಕರಿಂದ ಕಡಿಮೆ ಬೇಡಿಕೆ ಇರುವ ಕಾರಣ ಪೂರ್ಣ ಪ್ರಮಾಣವಾಗಿ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ, ಪ್ರಯಾಣಿಕರ ದಟ್ಟಣೆ ಮತ್ತು ಅವಶ್ಯಕತೆ ಅನುಗುಣವಾಗಿ ಬಸ್ಸುಗಳ ಸಂಖ್ಯೆಯನ್ನು ಹಂತಹಂತವಾಗಿ ಹೆಚ್ಚಿಸಲಾಗುತ್ತಿದೆ. ಪ್ರಸ್ತುತ, ಚಾಲನಾ ಸಿಬ್ಬಂದಿಗಳ ಕೊರತೆ ಇರುವುದಿಲ್ಲ.
ಇ)	ಬಂದಿದ್ದಲ್ಲಿ, ಸಾರಿಗೆ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಕೋವಿಡ್-19 ಪಿಡುಗುನಿಂದಾಗಿ ಉಂಟಾದ ಆರ್ಥಿಕ ಪರಿಸ್ಥಿತಿನ್ನು ನಿಭಾಯಿಸಲು ಆರ್ಥಿಕ ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ 06.07.2020ರಲ್ಲಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ನಿರ್ದೇಶನವಿರುವುದರಿಂದ, ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ತಡೆಹಿಡಿದಿರುವ ನಿರ್ದೇಶನವನ್ನು ತೆರವುಗೊಳಿಸಿದ ನಂತರ ನಿಯಮಾನುಸಾರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಸಂಖ್ಯೆ: ಟಿಡಿ 77 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

1597

<u>ಅನುಬಂಧ</u>

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ		
ಕ್ರ ಸಂ	ದರ್ಜೆ/ಶ್ರೇಣಿ	ಒಟ್ಟು
1	ದರ್ಜೆ–1, ಆಯ್ಕೆ ಶ್ರೇಣಿ (ಅಧಿಕಾರಿ)	11
2	ದರ್ಜೆ–1, ಹಿರಿಯ (ಅಧಿಕಾರಿ)	44
3	ದರ್ಜೆ–1, ಕಿರಿಯ (ಅಧಿಕಾರಿ)	95
4	ದರ್ಜೆ–2 (ಅಧಿಕಾರಿ)	199
5	ದರ್ಜೆ–3 (ಮೇಲ್ವಿಚಾರಕ)	671
6	ದರ್ಜೆ–3 (ಮೇಲ್ವಿಚಾರಕೇತರ)	35783
7	ದರ್ಜೆ–4	543
	ಒಟ್ಟು	**37346**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	
ದರ್ಜೆ/ಶ್ರೇಣಿ	ಒಟ್ಟು
ದರ್ಜೆ–1, ಆಯ್ಕೆ ಶ್ರೇಣಿ	11
ದರ್ಜೆ–1, ಹಿರಿಯ	16
ದರ್ಜೆ–1, ಕಿರಿಯ	54
ದರ್ಜೆ–2	62
ದರ್ಜೆ–3 (ಮೇಲ್ವಿಚಾರಕ)	291
ದರ್ಜೆ–3 (ಮೇಲ್ವಿಚಾರಕೇತರ)	31976
ದರ್ಜೆ–4	85
ಒಟ್ಟು	**32495**

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	
ವೃಂದ	ಒಟ್ಟು
ಐ.ಎ.ಎಸ್	1
ದರ್ಜೆ–1, ಆಯ್ಕೆ ಶ್ರೇಣಿ	7
ದರ್ಜೆ–1, ಹಿರಿಯ	19
ದರ್ಜೆ–1, ಕಿರಿಯ	47
ದರ್ಜೆ–2	95
ದರ್ಜೆ–3 (ಮೇಲ್ವಿಚಾರಕ)	379
ದರ್ಜೆ–3 (ಮೇಲ್ವಿಚಾರಕೇತರ)	21540
ದರ್ಜೆ–4	318
ಒಟ್ಟು	**22406**

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	
ವೃಂದ	ಒಟ್ಟು
ಐ.ಎ.ಎಸ್ / ಕೆ.ಎ.ಎಸ್	1
ದರ್ಜೆ–1 (ಆಯ್ಕೆಶ್ರೇಣಿ) ಅಧಿಕಾರಿಗಳು	6
ದರ್ಜೆ–1 (ಹಿರಿಯ) ಅಧಿಕಾರಿಗಳು	23
ದರ್ಜೆ–1 (ಕಿರಿಯ) ಅಧಿಕಾರಿಗಳು	48
ದರ್ಜೆ–2 ರ ಅಧಿಕಾರಿಗಳು	81
ದರ್ಜೆ–3 ರ ಮೇಲ್ವಿಚಾರಕ ಸಿಬ್ಬಂದಿಗಳು	295
ದರ್ಜೆ–3 ರ ಮೇಲ್ವಿಚಾರಕೇತರ ಸಿಬ್ಬಂದಿಗಳು	18974
ದರ್ಜೆ–4 ರ ಸಿಬ್ಬಂದಿಗಳು	296
ಒಟ್ಟು	**19724**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1598
ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್
ಉತ್ತರಿಸಬೇಕಾದ ದಿನಾಂಕ	:	10.03.2021
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿರಿಯ ನಾಗರೀಕರಿಗೆ ಸರ್ಕಾರದ ವತಿಯಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳೇನು; (ವಿವರವಾದ ಮಾಹಿತಿಯನ್ನು ಒದಗಿಸುವುದು)	ರಾಜ್ಯದಲ್ಲಿ ಹಿರಿಯ ನಾಗರಿಕರಿಗೆ ಸರ್ಕಾರದ ವತಿಯಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಆ)	ಹಿರಿಯ ನಾಗರೀಕರಿಗೆ ಸರ್ಕಾರದ ವತಿಯಿಂದ ಯಾವ ರೀತಿಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ;	ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಸದರಿ ವೃದ್ಧಾಶ್ರಮಗಳಲ್ಲಿ ಉಚಿತ ಊಟ, ವಸತಿ ಸೌಲಭ್ಯದ ಜೊತೆಗೆ ಅಗತ್ಯವಿರುವ ವೈದ್ಯಕೀಯ ನೆರವು ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ರಾಜ್ಯದ 25 ಜಿಲ್ಲೆಗಳಲ್ಲಿ ಹಿರಿಯ ನಾಗರಿಕರಿಗಾಗಿ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಇಲ್ಲಿಯೂ ಸಹ ಹಿರಿಯ ನಾಗರಿಕರಿಗೆ ಅಗತ್ಯವಿರುವ ವೈದ್ಯಕೀಯ ನೆರವು ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ.
ಇ)	ಹಿರಿಯ ನಾಗರೀಕರಿಗೆ ಸಕಾಲದಲ್ಲಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಹಿರಿಯ ನಾಗರಿಕರಿಗಾಗಿ ಇಲಾಖೆಯಿಂದ ಅನುಷ್ಠಾನಗೊಳಿಸುವ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. • ಹಿರಿಯ ನಾಗರಿಕರಿಗಾಗಿ ರಾಜ್ಯದ 30 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುತ್ತಿದ್ದು, ಈ ಸಹಾಯವಾಣಿ ಕೇಂದ್ರಗಳ ಮೂಲಕ ಕಾನೂನಿನ ನೆರವು ನೀಡುವ ಜೊತೆಗೆ ಅವರುಗಳಿಗೆ ಇಲಾಖಾ ಯೋಜನೆಗಳ ಮಾಹಿತಿಯನ್ನು ನೀಡುವುದು ಅವುಗಳನ್ನು ಪಡೆಯಲು ಸಹಕರಿಸಲಾಗುವುದು. • ಹಿರಿಯ ನಾಗರಿಕರ ಯೋಜನೆಗಳನ್ನು ಹಿರಿಯ ನಾಗರಿಕರಿಗಾಗಿ ತಲುಪಿಸಲು ಪತ್ರಿಕಾ ಜಾಹಿರಾತು, ಆಕಾಶವಾಣಿ, ದೂರದರ್ಶನದ ಮೂಲಕ ಪ್ರಚಾರವನ್ನು ನೀಡಲಾಗಿದೆ. • ಇಲಾಖೆಯ ವೆಬ್‌ಸೈಟ್‌ನಲ್ಲಿ ಇಲಾಖೆಯ ಯೋಜನೆಗಳ ಮಾಹಿತಿಯನ್ನು ಸಹ ಒದಗಿಸಲಾಗಿದೆ.

..2

		• ಯೋಜನೆಗಳ ಮಾಹಿತಿ ಒಳಗೊಂಡ, ಕಿರುಹೊತ್ತಿಗೆ ಹೊಂಬೆಳಕು ಕೈಪಿಡಿಗಳನ್ನು ಸಹ ಮುದ್ರಿಸಿ ಹಿರಿಯ ನಾಗರಿಕರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ. • ಎಲ್ಲಾ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಮಾಹಿತಿ ಸಲಹಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಇಲಾಖಾ ಯೋಜನೆಗಳ ಮಾಹಿತಿಯನ್ನು ಸಹ ನೀಡಲಾಗುತ್ತಿದೆ. • ಸೇವಾ ಸಿಂಧು ಪೋರ್ಟಲ್ ಮೂಲಕ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಪಡೆಯಬಹುದಾಗಿದೆ.

ಸಂಖ್ಯೆ: ಮಮಇ 75 ಪಿಹೆಚ್‌ಪಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

1598-

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪುರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1598ಕ್ಕೆ ಅನುಬಂಧ

ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

1. **ಹಗಲು ಯೋಗಕ್ಷೇಮ ಕೇಂದ್ರಗಳು:**

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50-150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

2. **ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:**

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

3. **ಹಿರಿಯ ನಾಗರಿಕರ ವೃದ್ಧಾಶ್ರಮ:**

ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ಮಂಜೂರು ಮಾಡಲಾಗುತ್ತಿದೆ.

ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 8 ಕಂದಾಯ ಉಪ ವಿಭಾಗಕ್ಕೆ ವೃದ್ಧಾಶ್ರಮ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

4. **ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:**

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1599
ಉತ್ತರಿಸಬೇಕಾದ ದಿನಾಂಕ : 10.03.2021
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ. ಸಂ	ಪ್ರಶ್ನೆ	ಇಲಾಖೆಯ ಮಾಹಿತಿ
ಅ	ಬೀದರ್ ದಕ್ಷಿಣ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿ ವಿವಿಧ ಯೋಜನೆಯಗಳಿಗೆ ಒದಗಿಸಲಾದ ಅನುದಾನ ಎಷ್ಟು : (ಯೋಜನಾವಾರು ಅನುದಾನದ ಮಾಹಿತಿ ನೀಡುವುದು)	ಬೀದರ್ ದಕ್ಷಿಣ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿ ವಿವಿಧ ಯೋಜನೆಗಳಿಗೆ ಒದಗಿಸಲಾದ ಅನುದಾನದ ವಿವರವನ್ನು ಅನುಬಂಧ (1) ರಲ್ಲಿ ಒದಗಿಸಲಾಗಿದೆ.
ಆ	ಕಳೆದ ಮೂರು ವಷಗಳಲ್ಲಿ ವಿವಿಧ ಯೋಜನೆಗಳಡಿ ಒದಗಿಸಲಾದ ಅನುದಾನದಲ್ಲಿ ಬಿಡುಗಡೆ ಮಾಡಲಾದ ಮೊತ್ತವೆಷ್ಟು ಹಾಗೂ ಖರ್ಚು ಮಾಡಲಾದ ಮೊತ್ತವೆಷ್ಟು :	ಕಳೆದ ಮೂರು ವಷಗಳಲ್ಲಿ ವಿವಿಧ ಯೋಜನೆಗಳಡಿ ಒದಗಿಸಲಾದ ಅನುದಾನದಲ್ಲಿ ಬಿಡುಗಡೆ ಮಾಡಲಾದ ಮೊತ್ತ ಹಾಗೂ ಖರ್ಚು ಮಾಡಲಾದ ಮೊತ್ತದ ವಿವರವನ್ನು ಅನುಬಂಧ(1) ರಲ್ಲಿ ಒದಗಿಸಲಾಗಿದೆ.
ಇ	ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚು ಮಾಡದೆ ಉಳಿಕೆಯಿರುವ ಅನುದಾನವೆಷ್ಟು : ಅದನ್ನು ಯಾವ ಕಾಲಮಿತಿಯೊಳಗೆ ಬಳಸಲಾಗುವುದು ? (ವಿವರವಾದ ಮಾಹಿತಿಯನ್ನು ಒದಗಿಸುವುದು)	ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚು ಮಾಡದೆ ಉಳಿಕೆಯಿರುವ ಅನುದಾನ ವಿವರ ಹಾಗೂ ಉಳಿಕೆ ಅನುದಾನ ಬಳಸಲಾಗುವ ಕಾಲಮಿತಿ ವಿವರವನ್ನು ಅನುಬಂಧ (1) ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಗ್ರಾಅಪ 37 ಯೋಉಮಾ 2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

1599

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1599

ಅನುಬಂಧ-1

2017-18 ರಿಂದ 2019-20 ರವರೆಗೆ ಬೀದರ್ ಜಿಲ್ಲೆಯ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಬಿಡುಗಡೆ ಮಾಡಲಾದ ಅನುದಾನ ಹಾಗೂ ವೆಚ್ಚದ ವಿವರ

(ರೂ. ಲಕ್ಷಗಳಲ್ಲಿ)

ಕ್ರಸಂ	ಯೋಜನೆ	2017–18					2018–19					2019–20				
		ಮಂಜೂರಾದ ಅನುದಾದ	ಬಿಡುಗಡೆಯಾದ ಅನುದಾನ	ವೆಚ್ಚ	ಉಳಿಕೆ ಅನುದಾನ	ಉಳಿಕೆ ಅನುದಾನ ವನ್ನು ಬಳಸಲಾಗುವ ಕಾಲಮಿತಿ	ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಉಳಿಕೆ ಅನುದಾನ	ಉಳಿಕೆ ಅನುದಾನ ವನ್ನು ಬಳಸಲಾಗುವ ಕಾಲಮಿತಿ	ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಉಳಿಕೆ ಅನುದಾನ	ಉಳಿಕೆ ಅನುದಾನ ವನ್ನು ಬಳಸಲಾಗುವ ಕಾಲಮಿತಿ
1	2	3	4	5	6 (4–5)	7	8	9	10	11 (9–10)	12	13	14	15	16 (14–15)	17
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	1720.2	692.12	692.12	–	–	886.65	699.04	699.04	–	–	1386.97	1071.5	1071.5	–	–
2	ಸ್ವಚ್ಛ ಭಾರತ ಅಭಿಯಾನ	6051.51	6051.51	6037.42	14.09	–	12567.23	12567.23	12496.1	71.13	–	1888.18	1388.18	602.81	785.37	–
3	ಗ್ರಾಮೀಣ ನೀರು ಸರಬರಾಜು (ಎನ್.ಆರ್ .ಡಿ ಡಬ್ಲ್ಯೂ.ಪಿ	1087.56	411.02	411.02	–	–	936.00	355.00	355.00	–	–	756.00	400.00	400.00	–	–
4	ಆರ್.ಐ.ಡಿ.ಎಫ್ ನಬಾರ್ಡ	35.47	35.47	35.47	–	–	16.96	16.96	16.96	–	–	–	–	–	–	–
5	ನಮ್ಮ ಗ್ರಾಮ ನಮ್ಮ ರಸೆ (ಎಸ್.ಡಿ.ಪಿ ಎಸ್.ಸಿ.ಪಿ. ಓ ಎಸ್.ಪಿ ಒಳಗೊಂಡಂತೆ	–	263.25	263.25	–	–	–	135.36	135.36	–	–	–	252.69	252.69	–	–
6	ಸುವರ್ಣಗ್ರಾಮೋದಯ/ ಗ್ರಾಮ ವಿಕಾಸ/ಮುಖ್ಯಮಂತ್ರಿ ಗ್ರಾಮ ವಿಕಾಸ	1360.5	1078.15	800.5	31.3.21	31.03.21	1593.61	1357.91	1188.24	169.4	31.03.21	1547.9	1962.4	1829.78	132.62	31.03.21
7	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ	6.66	6.97	6.97	–	–	21.45	8.25	2.21	6.04	–	3.25	–	2.95	–	–
8	ಹಣಕಾಸು ಆಯೋಗದ ಅನುದಾನ	514.26	514.26	467.02	47.24	31.03.201	718.04	718.04	467.44	250.6	31.03.2021	1040.01	1040.01	947.11	92.9	31.03.2021.
9	ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನ	70.59	70.59	70.59	–	–	70.59	70.59	70.59	–	–	101.36	101.36	101.36	–	–
10	ತಾಲ್ಲೂಕ ಪಂಚಾಯಿತಿ ಅಭಿವೃದ್ಧಿ ಅನುದಾನ	166.40	166.24	90.85	4.39	31.3.21	173.00	173.00	108.39	0.61	31.3.21	231.70	94.70	94.56	1.86	31.3.21
	ಒಟ್ಟು	11013.15	9289.58	8875.21	65.72	–	16983.53	16101.38	15539.33	497.78	–	6955.37	6310.84	5302.76	1012.75	–

ವೆಚ್ಚ ಆರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1626

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಮಾಹಿತಿ ಆಯೋಗದ ಪ್ರಕಾರ ಸಾರಿಗೆ ಇಲಾಖೆಯ ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮರಾಗಳು, ಚೆಕ್‌ಪೋಸ್ಟ್ ಕಛೇರಿಗಳ ಒಳ ಹಾಗೂ ಹೊರಗಡೆ 360 ಕೋನದಿಂದ ಅಳವಡಿಸಿ, ಅದರ ಕಾರ್ಯಕ್ಷಮತೆ ಹೆಚ್ಚು ಮಾಡಲು ಹಾಗೂ ಕನಿಷ್ಠ ಪಕ್ಷ 1 ವರ್ಷದವರೆಗೆ ಸಂರಕ್ಷಿಸಿ ಕೇಂದ್ರ ಕಛೇರಿಯಲ್ಲಿ ಅದರ monitoring ಅನ್ನು ನಿರ್ವಹಿಸಲು ನೀಡಿದ ಆದೇಶ ಪಾಲನೆಯಾಗಿದೆಯೇ; ಪಾಲನೆ ಆಗದಿದ್ದಲ್ಲಿ, ಇಲಾಖಾ ಮುಖ್ಯಸ್ಥರು ಸಂಬಂಧಪಟ್ಟವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;	ಸಾರಿಗೆ ಇಲಾಖೆಯ ಎಲ್ಲಾ ತನಿಖಾ ಠಾಣೆಗಳಲ್ಲಿ ಸಿ.ಸಿ. ಟಿವಿ ಕ್ಯಾಮರಾಗಳ ಅಳವಡಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಮಾಹಿತಿ ಆಯೋಗದ ಪ್ರಕರಣ ಸಂಖ್ಯೆ: ಕಮಾಆ 2600, 2601, 2602, 2603, 2604, 2605, 2606, 2607, 2608, 2609 ಮತ್ತು ಎಪಿಎಲ್ 2018, ದಿನಾಂಕ:28-05-2018 ಗಳಲ್ಲಿ ಆದೇಶವಾಗಿರುತ್ತದೆ. ಈ ಕುರಿತಂತೆ, ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಅರ್ಜಿಗಳಲ್ಲಿ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ಮಧ್ಯಂತರ ಆದೇಶ ನೀಡಿರುತ್ತದೆ. "There shall be interim stay of further proceedings pending before respondent No.1 (Karnataka State Information Commission, Bangalore) and also there shall be stay of the operating of the order dated:28-05-2018 of Karnataka State Information Commission, Bangalore". ಕರ್ನಾಟಕ ಮಾಹಿತಿ ಆಯೋಗವು ದಿನಾಂಕ:24/01/2019 ರಂದು ಹೊರಡಿಸಿರುವ ತನ್ನ ಆದೇಶದಲ್ಲಿ "ಸದರಿ ಪ್ರಕರಣದಲ್ಲಿ ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ, ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಗೊಂಡ ನಂತರ ಪುನ: ಅಪೀಲನ್ನು ಸಲ್ಲಿಸುವಂತೆ ಅರ್ಜಿದಾರರಿಗೆ ನಿರ್ದೇಶಿಸುತ್ತಾ, ಸದರಿ ಪ್ರಕರಣವನ್ನು ವಿಲೇವಾರಿ ಮಾಡಿದೆ" ಎಂದು ಆದೇಶ ಹೊರಡಿಸಿದೆ. ಆದಾಗ್ಯೂ ಇಲಾಖೆಯ ಎಲ್ಲಾ ತನಿಖಾ ಠಾಣೆಗಳಲ್ಲಿ ಸಿ.ಸಿ ಟಿವಿ ಗಳನ್ನು ಅಳವಡಿಲಾಗಿದ್ದು, ಒಂದು ತಿಂಗಳ FOOTAGE ಅನ್ನು ಸಂರಕ್ಷಿಸಲು ಕ್ರಮವಹಿಸಲಾಗಿದೆ.

ಅ)	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಾರ್ಯಚಟುವಟಿಕೆಗಳನ್ನು ಹೆಚ್ಚಿಸುವ ಮೂಲಕ ಕೈಮಗ್ಗ ನೇಕಾರರಿಗೆ ಉದ್ಯೋಗ ಒದಗಿಸಿಕೊಡುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು;	ರಾಜ್ಯ ಸರ್ಕಾರವು ಪ್ರತಿ ವರ್ಷವೂ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಕಲಬುರಗಿ ಮತ್ತು ಬೆಂಗಳೂರು ವಿಭಾಗಗಳ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಪೂರೈಸಲು ಆದೇಶ ನೀಡುತ್ತಿದ್ದು, ಇದರಿಂದ ನೇಕಾರರಿಗೆ ನಿರಂತರ ಉದ್ಯೋಗ ನೀಡುವಲ್ಲಿ ನೆರವಾಗಿದೆ.
ಆ)	ಕೆ.ಹೆಚ್.ಡಿ.ಸಿ ವ್ಯಾಪ್ತಿಯಲ್ಲಿ ಪ್ರಸ್ತುತ ನೇಕಾರಿಕೆಯನ್ನು ಅವಲಂಬಿಸಿರುವ ನೇಕಾರರ ಜಿಲ್ಲಾವಾರು ಸಂಖ್ಯೆ ಎಷ್ಟು; ನಿಗಮದ ನೇಕಾರರ ಸದಸ್ಯರುಗಳಿಗೆ ಉದ್ಯೋಗ ಒದಗಿಸಿಕೊಡುವಲ್ಲಿ ಸರ್ಕಾರದ ಕ್ರಮಗಳೇನು;	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಪ್ರಸ್ತುತ 5581 ನೋಂದಾಯಿತ ನೇಕಾರರು ನೇಯ್ಗೆ ವೃತ್ತಿಯನ್ನು ಅವಲಂಬಿಸಿದ್ದು, ಜಿಲ್ಲಾವಾರು ನೇಕಾರರ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. ರಾಜ್ಯ ಸರ್ಕಾರದ ಆದೇಶದಂತೆ ಪ್ರತಿ ವರ್ಷವೂ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಕಲಬುರಗಿ ಮತ್ತು ಬೆಂಗಳೂರು ವಿಭಾಗಗಳ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಪೂರೈಸಲಾಗುತ್ತಿದ್ದು, ಇದರಿಂದ ನೇಕಾರರಿಗೆ ನಿರಂತರ ಉದ್ಯೋಗ ನೀಡುವಲ್ಲಿ ನೆರವಾಗಿದೆ.
ಇ)	ನಿಗಮವು ಹೊಂದಿರುವ ಚರಾಸ್ತಿ-ಸ್ಥಿರಾಸ್ತಿಗಳು ಹಾಗೂ ಮೂಲಸೌಲಭ್ಯಗಳನ್ನು ಬಳಸಿಕೊಂಡು ಕೈಮಗ್ಗ ಪರಂಪರೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರದ ಕ್ರಿಯಾ ಯೋಜನೆಗಳು ಯಾವುವು;	ನಿಗಮವು ರಾಜ್ಯಾದ್ಯಂತ 23 ಸ್ಥಳಗಳಲ್ಲಿ ಜಮೀನನ್ನು ಹೊಂದಿದ್ದು, ಇದರಲ್ಲಿ ನಿಗಮದ ವಸತಿ ಹಾಗೂ ನಿವೇಶನ ರಹಿತ ನೇಕಾರರಿಗೆ ಸರ್ಕಾರದ ವಿವಿಧ ಯೋಜನೆಗಳಲ್ಲಿ 3914 ವಸತಿ ಹಾಗೂ ಕಾರ್ಯಾಗಾರಗಳನ್ನು ಒದಗಿಸಿ ನೇಕಾರರ ಕಾಲೋನಿಗಳನ್ನು ಸ್ಥಾಪಿಸಿದೆ. ಸದರಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕೂಡಾ ಒದಗಿಸಲಾಗಿದೆ.

...2

ಈ)	ಕೈಮಗ್ಗ ಉತ್ಪನ್ನಗಳ ಬೇಡಿಕೆ ವೃದ್ಧಿಸುತ್ತಿರುವುದನ್ನು ಗಮನಿಸಿ ಕೆ.ಹೆಚ್.ಡಿ.ಸಿ ಹೊರತಾಗಿ ಖಾಸಗಿ ವಲಯದ ನೇಕಾರರಿಗೂ ಪ್ರೋತ್ಸಾಹ ನೀಡುವ ಮೂಲಕ ರಾಜ್ಯದಲ್ಲಿ ಕೈಮಗ್ಗ ವಲಯವನ್ನು ಅಭಿವೃದ್ಧಿ ಪಡಿಸುವ ಕುರಿತು ಸರ್ಕಾರದ ಕ್ರಮಗಳೇನು?	ಕೈಮಗ್ಗ ಉತ್ಪನ್ನಗಳ ಬೇಡಿಕೆ ವೃದ್ಧಿಸುತ್ತಿರುವುದನ್ನು ಗಮನಿಸಿ ಕೆ.ಹೆಚ್.ಡಿ.ಸಿ ಹೊರತಾಗಿ ಖಾಸಗಿ ವಲಯದ ನೇಕಾರರಿಗೂ ಪ್ರೋತ್ಸಾಹ ನೀಡುವ ಮೂಲಕ ರಾಜ್ಯದಲ್ಲಿ ಕೈಮಗ್ಗ ವಲಯದಲ್ಲಿ ಅಭಿವೃದ್ಧಿಪಡಿಸುವ ಕುರಿತು ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:- • ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇಕಡ 20ರಷ್ಟು ರಿಯಾಯಿತಿಗಳನ್ನು ನೀಡಲಾಗುತ್ತಿದೆ. • ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ(ಎನ್.ಹೆಚ್.ಡಿ.ಪಿ) ಯಡಿ ವಿಶೇಷ ಕೈಮಗ್ಗ ಮೇಳ (ಎಸ್.ಹೆಚ್.ಇ) ಗಳನ್ನು ಏರ್ಪಡಿಸಲಾಗುತ್ತಿದೆ. • ಕೈಮಗ್ಗ ಉತ್ಪನ್ನಗಳ ಬಳಕೆ ಹೆಚ್ಚಿಸುವ ಸಲುವಾಗಿ ಸ್ಮಾರ್ಟ್ ಹ್ಯಾಂಡ್ ಲೂಮ್ ಇನ್ನೋವೇಟಿವ್ ಸೆಂಟರ್ ಅನ್ನು ನ್ಯಾಷನಲ್ ಇನ್ಸ್ ಟಿಟ್ಯೂಬ್ ಆಫ್ ಡಿಸೈನ್ (ಎನ್.ಐ.ಡಿ) ಇವರ ಸಹಯೋಗದೊಂದಿಗೆ ಅನುಷ್ಠಾನ ಕೈಗೊಳ್ಳಲಾಗುತ್ತಿದೆ. • ರಾಜ್ಯದ ಸಾಂಪ್ರದಾಯಿಕ ಉತ್ಪನ್ನಗಳಾದ ಮೊಳಕಾಲ್ಮೂರು ರೇಷ್ಮೆ ಸೀರೆ, ಇಳಕಲ್ ಸೀರೆ, ಉಡುಪಿ ಸೀರೆ ಮತ್ತು ಗುಳೇದಗುಡ್ಡ ಖಣಗಳನ್ನು ಜಿಯೋಗ್ರಾಫಿಕಲ್ ಇಂಡಿಕೇಷನ್ ಆಕ್ಟ್ ನಡಿ ನೋಂದಾಯಿಸಲಾಗಿರುತ್ತದೆ.

ಸಂ: CI 56 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

1680

ಅನುಬಂಧ-1

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಪ್ರಧಾನ ಕಛೇರಿ ಹುಬ್ಬಳ್ಳಿ.
ಕೈಮಗ್ಗ ನಿಗಮದ ವ್ಯಾಪ್ತಿಯಲ್ಲಿರುವ ಜಿಲ್ಲಾವಾರು ಕಾರ್ಯನಿರತ ಮಗ್ಗಗಳ ವಿವರ

ಕ್ರ. ಸಂ	ಜಿಲ್ಲೆ	ಮಗ್ಗಗಳು
1	ಬಾಗಲಕೋಟೆ	1931
2	ವಿಜಯಪುರ	474
3	ಹಾವೇರಿ	303
4	ದಾವಣಗೇರೆ	43
5	ಬಳ್ಳಾರಿ	55
6	ಕಲಬುರ್ಗಿ	297
7	ಯಾದಗಿರಿ	411
8	ರಾಯಚೂರ	26
9	ಬೀದರ	386
10	ಗದಗ	544
11	ಕೊಪ್ಪಳ	123
12	ಧಾರವಾಡ	67
13	ಬೆಳಗಾವಿ	525
14	ದಕ್ಷಿಣ ಕನ್ನಡ	12
15	ಉಡುಪಿ	3
16	ಚಿಕ್ಕಬಳ್ಳಾಪುರ	5
17	ಜಿಲ್ಲೆ ಕೋಲಾರ	5
18	ತುಮಕೂರ	144
19	ಚಾಮರಾಜನಗರ	46
20	ಮಂಡ್ಯ	38
21	ಬೆಂಗಳೂರು (ನಗರ)	50
22	ಬೆಂಗಳೂರು (ಗ್ರಾ)	25
23	ಚಿತ್ರದುರ್ಗ	68

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 1681
ಉತ್ತರಿಸಬೇಕಾದ ದಿನಾಂಕ – 10-03-2021
ಸದಸ್ಯರ ಹೆಸರು – ಶ್ರೀ ಹ್ಯಾರಿಸ್ ಎನ್.ಎ.
ಉತ್ತರಿಸುವ ಸಚಿವರು – ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಯೋಜನಾನುಷ್ಠಾನಗಳ ಮೂಲಕ ಕೈಗೊಂಡ ಕ್ರಮಗಳು ಹಾಗೂ ಅವುಗಳ ಗುರಿ ಮತ್ತು ಸಾಧನೆಗಳ ವಿವರಗಳೇನು; (2019-20 ಮತ್ತು 2020-21 ನೇ ಸಾಲಿನ ವಿವಿರ ನೀಡುವುದು)</td><td>ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಯೋಜನಾವಾರು 2019-20 ಮತ್ತು 2020-21ನೇ ಸಾಲಿನ ಫೆಬ್ರವರಿ-2021ರವರೆಗಿನ ಅಂತ್ಯದವರೆಗೆ ಗುರಿ ಸಾಧನೆಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಅಲ್ಪಸಂಖ್ಯಾತರು ಗಣನೀಯ ಪ್ರಮಾಣದಲ್ಲಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಸೌಕರ್ಯಗಳನ್ನು ಒದಗಿಸಿಕೊಡುವ ಯೋಜನೆಗಳಿಗಾಗಿ ನಿಗದಿಪಡಿಸಿರುವ ಅನುದಾನ ಮತ್ತು ಬೇಡಿಕೆಯ ಪ್ರಮಾಣ ಕುರಿತು ವಿವರಗಳು ಯಾವುವು;</td><td>ಅಲ್ಪಸಂಖ್ಯಾತರು ಗಣನೀಯ ಪ್ರಮಾಣದಲ್ಲಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಯೋಜನೆಗಳಿಗಾಗಿ ನಿಗದಿಪಡಿಸಿರುವ ಅನುದಾನ ಮತ್ತು ಬೇಡಿಕೆಯ ಪ್ರಮಾಣದ ಮಾಹಿತಿಯು ಈ ಕೆಳಕಂಡಂತಿರುತ್ತದೆ.
(ರೂ.ಕೋಟಿಗಳಲ್ಲಿ)
<table>
<tr><th>ಕ್ರಮ ಸಂಖ್ಯೆ.</th><th>ವರ್ಷ</th><th>ವಿವರಗಳು</th><th>ನಿಗದಿಪಡಿಸಿದ ಅನುದಾನ</th><th>ಬೇಡಿಕೆಯ ಪ್ರಾಮಾಣ</th></tr>
<tr><td>1</td><td>2019-20</td><td>ಸಿ.ಎಂ.ಎಂ.ಡಿ.ಪಿ ಕಾರ್ಯಕ್ರಮ</td><td>400.00</td><td>400.00</td></tr>
<tr><td colspan="5">2020-21ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿರುವುದಿಲ್ಲ.</td></tr>
<tr><td>2</td><td>2020-21</td><td>ಅಲ್ಪಸಂಖ್ಯಾತರ ಕೊಳಗೇರಿ ಪ್ರದೇಶಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ</td><td>200.00</td><td>200.00</td></tr>
</table></td></tr>
</table>

<table>
<tr>
<td>ಇ)</td>
<td>ಅಲ್ಪಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿ ಮತ್ತು ವಿವಿಧ ವೃತ್ತಿಪರ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿಕೆ ಕುರಿತು ಹಮ್ಮಿಕೊಂಡ ಕ್ರಮಗಳು ಹಾಗೂ ಗುರಿ ಸಾಧನೆಗಳ ಕುರಿತು ವಿವರಗಳೇನು; ಕಳೆದ ಎರಡು ವರ್ಷಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಾಗಿ ಕೇಂದ್ರ ಸರ್ಕಾರದವರು ಮಂಜೂರು ಮಾಡಿರುವ ಅನುದಾನ ಮೊತ್ತವೆಷ್ಟು?</td>
<td>ಅಲ್ಪಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ಹಾಗೂ ಗುರಿ ಸಾಧನೆಗಳ ಕುರಿತು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಾಗಿ ಕೇಂದ್ರ ಸರ್ಕಾರದವರು ಮಂಜೂರು ಮಾಡಿದ ಅನುದಾನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)
<table>
<tr><td rowspan="2">ಕ್ರ ಸಂ</td><td rowspan="2">ಕಾರ್ಯಕ್ರಮ</td><td colspan="2">ಕೇಂದ್ರ ಸರ್ಕಾರದವರು ಮಂಜೂರು ಮಾಡಿದ ಅನುದಾನ</td></tr>
<tr><td>2018-19</td><td>2019-20</td></tr>
<tr><td>1</td><td>ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ</td><td>15712.02</td><td>21451.15</td></tr>
<tr><td>2</td><td>ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ</td><td>3600.00</td><td>2400.00</td></tr>
</table>
</td>
</tr>
</table>

MWD 75 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಅನುಬಂಧ-1

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1681ಕ್ಕೆ ಅನುಬಂಧ-1

ಕ್ರ. ಸಂ	ಕಾರ್ಯಕ್ರಮಗಳ ವಿವರ	2019-20		2020-21	
		ಬಿಡುಗಡೆಯಾದ ಅನುದಾನ (ಗುರಿ)	ವೆಚ್ಚ ಮಾಡಿದ ಅನುದಾನ (ಸಾಧನೆ)	ಬಿಡುಗಡೆಯಾದ ಅನುದಾನ (ಗುರಿ)	ವೆಚ್ಚ ಮಾಡಿದ ಅನುದಾನ (ಸಾಧನೆ)
1	ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ	6750.00	6739.59	3500.00	3476.85
2	ಮದರಸದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು	3000.00	3000.00	500.00	500.00
3	ಸಮುದಾಯಭವನ /ಶಾದಿಮಹಲ್ ನಿರ್ಮಾಣ	1500.00	1500.00	0	0
4	ಕೌಶಲ್ಯ ಅಭಿವೃದ್ಧಿ ಯೋಜನೆ	439.10	413.94	0	0
5	ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು	800.00	769.50	300.00	274.22
6	ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ	1800.00	1799.63	800.00	753.27
7	ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ ಮತ್ತು ಮೌಲಾನಾ ಆಜಾದ್ ಶಾಲೆ/ಕಾಲೇಜುಗಳ ನಿರ್ವಹಣೆ	7504.79	7457.70	1998.00	1467.57
8	ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ	960.90	693.40	500.00	312.24
9	ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ	3501.00	3254.07	10001.00	9874.15
10	ಅಲ್ಪಸಂಖ್ಯಾತರ ವಸತಿ ಶಾಲೆಗಳು	19588.47	17823.71	10275.43	9989.35
11	ಜೈನ್,ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ	3166.53	2540.52	3000.00	2219.38
12	ಬಿದಾಯಿ ಯೋಜನೆ	12979.00	12629.00	0	0
13	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ	2000.00	1999.25	238.00	0
14	ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಹಾಗೂ ವಸತಿ ಶಾಲೆ ಕಟ್ಟಡ ನಿರ್ಮಾಣ	22000.00	21999.99	7500.00	7269.00

15	ಮುಖ್ಯಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆ	40000.00	39999.99	0	0
16	11 ಕಾರ್ಪೋರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಮ್/ಕಾಲೋನಿ ಅಭಿವೃದ್ಧಿ ಯೋಜನೆ	0	0	4800.00	0
17	ಪ್ರಧಾನ ಮಂತ್ರಿ ಜನ ವಿಕಾಸ ಯೋಜನೆ	4000.00	3999.70	9500.00	9146.81
18	ಅಲ್ಪಸಂಖ್ಯಾತರಿಗಾಗಿ ಹಾಸ್ಟಲ್‌ಗಳು	8817.41	8789.19	7904.50	3862.48
19	ಅಲ್ಪಸಂಖ್ಯಾತರಗಾಗಿ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ	159.64	155.87	59.00	47.11
20	ಅಲ್ಪಸಂಖ್ಯಾತರಿಗಾಗಿ ಅನಾಥಾಲಯ-ಸಹಾಯಾನುದಾನ	250.00	247.00	250.00	77.98

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

ಅನುಬಂಧ-2

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1681ಕ್ಕೆ ಅನುಬಂಧ-2

ಅಲ್ಪಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ಹಾಗೂ ಗುರಿ ಸಾಧನೆಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾರ್ಯಕ್ರಮಗಳ ವಿವರ	2019-20		2020-21	
		ಬಿಡುಗಡೆಯಾದ ಅನುದಾನ (ಗುರಿ)	ವೆಚ್ಚ ಮಾಡಿದ ಅನುದಾನ (ಸಾಧನೆ)	ಬಿಡುಗಡೆಯಾದ ಅನುದಾನ (ಗುರಿ)	ವೆಚ್ಚ ಮಾಡಿದ ಅನುದಾನ (ಸಾಧನೆ)
1	ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು	800.00	769.50	300.00	274.22
2	ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ	1800.00	1799.63	800.00	753.27
3	ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ	3501.00	3254.07	10001.00	9874.15
4	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ	2000.00	1999.25	238.00	0
5	ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ	960.90	693.40	500.00	312.24
6	ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ ಮತ್ತು ಮೌಲಾನಾ ಆಜಾದ್ ಶಾಲೆ/ಕಾಲೇಜುಗಳ ನಿರ್ವಹಣೆ	7504.79	7457.70	1998.00	1467.57
7	ಅಲ್ಪಸಂಖ್ಯಾತರ ವಸತಿ ಶಾಲೆಗಳು	19588.47	17823.71	10275.43	9989.35
8	ಅಲ್ಪಸಂಖ್ಯಾತರಿಗಾಗಿ ಹಾಸ್ಟಲ್‌ಗಳು	8817.41	8789.19	7904.50	3862.48
9	ಅಲ್ಪಸಂಖ್ಯಾತರಗಾಗಿ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ	159.64	155.87	59.00	47.11

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1419

ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 10-03-2021

ಕ್ರ. ಸಂ	ಪ್ರಶ್ನೆ	ಉತ್ತರಗಳು
ಅ)	ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕೇರಳ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಗಡಿ ಪ್ರದೇಶವಾದ ಅಂತರಸಂತೆ ಹೋಬಳಿ ಕೇಂದ್ರ ಸ್ಥಾನದಲ್ಲಿ ಬಸ್ ನಿಲ್ದಾಣ ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕೇರಳ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಗಡಿ ಪ್ರದೇಶವಾದ ಅಂತರಸಂತೆ ಹೋಬಳಿ ಕೇಂದ್ರ ಸ್ಥಾನದಲ್ಲಿ ಬಸ್ ನಿಲ್ದಾಣ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಸದರಿ ಪ್ರಸ್ತಾವನೆಗೆ ಯಾವಾಗ ಅನುಮೋದನೆ ನೀಡಿ ಬಸ್ ನಿಲ್ದಾಣ ನಿರ್ಮಿಸಲು ಅನುದಾನ ಮಂಜೂರು ಮಾಡಲಾಗುವುದು; (ಸಂಪೂರ್ಣ ವಿವರ ನೀಡುವುದು)	ಪ್ರಸ್ತುತ ಕ.ರಾ.ರ.ಸಾ.ನಿಗಮವು ಅಂತರಸಂತೆ ಹೋಬಳಿ ಕೇಂದ್ರ ಸ್ಥಾನದಲ್ಲಿ ನಿವೇಶನ ಹೊಂದಿರುವುದಿಲ್ಲ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಪಿಡುಗಿನಿಂದಾಗಿ, ನಿಗಮದ ಆರ್ಥಿಕ ಸ್ಥಿತಿ ಉತ್ತಮ ವಾಗಿರುವುದಿದ ಕಾರಣ, ಯಾವುದೇ ಹೊಸ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿಗಮದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ನಂತರ ಸಾರಿಗೆ ಅವಶ್ಯಕತೆ ಹಾಗೂ ನಿಗಮವು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16, ದಿನಾಂಕ 06-06-2015ರ ಪ್ರಕಾರ, ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.
ಇ)	ಮೈಸೂರು ಗ್ರಾಮಾಂತರ ವಿಭಾಗದ ಹೆಗ್ಗಡೆದೇವನಕೋಟೆ ಘಟಕದಲ್ಲಿ 99 ಬಸ್‌ಗಳು ನಿತ್ಯ ಸಂಚರಿಸುತ್ತಿದ್ದು ಅದರಲ್ಲಿ 10 ಲಕ್ಷ ಕಿ.ಮೀ. ಕ್ರಮಿಸಲಾಗಿರುವ 50ಕ್ಕೂ ಹೆಚ್ಚು ಬಸ್‌ಗಳಿದ್ದು ಅವುಗಳು ಪದೇ ಪದೇ ಕೆಟ್ಟು ಹೋಗುತ್ತಿರುವುದರಿಂದ ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿರುವ ಮೈಸೂರು ಗ್ರಾಮಾಂತರ ವಿಭಾಗದ ಹೆಗ್ಗಡದೇವನಕೋಟೆ ಘಟಕದಲ್ಲಿ ಪ್ರಸ್ತುತ ಒಟ್ಟು 97 ವಾಹನಗಳಿರುತ್ತದೆ. ಅದರಲ್ಲಿ 30 ವಾಹನಗಳು ಮಾತ್ರ 10ಲಕ್ಷ ಕಿ.ಮೀ.ಗಿಂತ ಹೆಚ್ಚು ಕ್ರಮಿಸಿದ್ದು, ಸದರಿ ವಾಹನಗಳು ಸಹ ಸುಸ್ಥಿತಿಯಲ್ಲಿರುತ್ತದೆ. ದಿನಾಂಕ: 04.03.2021ರಲ್ಲಿದ್ದಂತೆ 92 ಅನುಸೂಚಿಗಳನ್ನು 97 ವಾಹನ ಬಲದಿಂದ ಕಾರ್ಯಾಚರಣೆ ಮಾಡುತ್ತಿದ್ದು, ಪ್ರಸ್ತುತ 5 ಹೆಚ್ಚುವರಿ ವಾಹನಗಳಿರುತ್ತವೆ ಮತ್ತು ಘಟಕದಲ್ಲಿ ಜನವರಿ-2020ರಿಂದ ಇಲ್ಲಿಯವರೆಗೆ 10 ವಾಹನಗಳನ್ನು ನಿರುಪಯುಕ್ತಗೊಳಿಸಿದ್ದು, ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಯಾವುದೇ ಅವಘಡಗಳು ಘಟಕದಲ್ಲಿ ದಾಖಲಾಗಿರುವುದಿಲ್ಲ. ವಾಹನಗಳಿಗೆ ಅಗತ್ಯವಿರುವ ದುರಸ್ಥಿ ಹಾಗೂ ನಿರ್ವಹಣೆಗಳನ್ನು ಕಾಲಕಾಲಕ್ಕೆ ಮಾಡಲಾಗುತ್ತಿದ್ದು, ಹಳೆಯ ವಾಹನಗಳನ್ನು ವಾರ್ಷಿಕ ಕ್ರಿಯಾ ಯೋಜನೆಯ ಪ್ರಕಾರ ನಿರುಪಯುಕ್ತಗೊಳಿಸಲಾಗಿರುತ್ತದೆ.
ಈ)	ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; 30 ಹೊಸ ಬಸ್‌ಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಪ್ರಸ್ತಾವನೆಯು ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು)	ಹೆಗ್ಗಡದೇವನಕೋಟೆ ಘಟಕಕ್ಕೆ ಕಳೆದ 3 ವರ್ಷಗಳಿಂದ 25 ಹೊಸ ವಾಹನಗಳನ್ನು ನೀಡಲಾಗಿದೆ. ಪ್ರಸ್ತುತ ಹೆಗ್ಗಡದೇವನಕೋಟೆ ಘಟಕಕ್ಕೆ ಹೊಸ ವಾಹನಗಳನ್ನು ನೀಡುವ ಪ್ರಸ್ತಾವನೆ ಇರುವುದಿಲ್ಲ. ದಟ್ಟಣೆ/ಅಗತ್ಯತೆಗನುಗುಣವಾಗಿ ನಿಗಮದ ನಿಯಮಾವಳಿ ಅನುಸಾರ ಹೊಸ ವಾಹನಗಳನ್ನು ನಿಯೋಜಿಸಿ ಸುಗಮ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಲಾಗುವುದು.

<table>
<tr>
<td>ಉ)</td>
<td>ಮೈಸೂರಿನಲ್ಲಿ ವಾಹನ ತಪಾಸಣೆ ಮತ್ತು ಪ್ರಮಾಣೀಕರಣ ಕೇಂದ್ರವನ್ನು ಸ್ಥಾಪಿಸಲು ಮಂಜೂರಾದ ಮತ್ತು ಬಿಡುಗಡೆಗೊಳಿಸಿದ ಅನುದಾನವೆಷ್ಟು; ಸದರಿ ಕೇಂದ್ರ ಸ್ಥಾಪನೆಯ ಕಾಮಗಾರಿಯನ್ನು ಕೈಗೊಂಡ ಗುತ್ತಿಗೆದಾರರ ವಿವರ, ಅಂದಾಜು ಪಟ್ಟಿ/ಕ್ರಿಯಾ ಯೋಜನೆಯ ಸಂಪೂರ್ಣ ವಿವರ ನೀಡುವುದು?</td>
<td>ಮೈಸೂರಿನಲ್ಲಿ ವಾಹನ ತಪಾಸಣೆ ಮತ್ತು ಪ್ರಮಾಣೀಕರಣ ಕೇಂದ್ರವನ್ನು ಸ್ಥಾಪಿಸಲು -
ಮಂಜೂರಾದ ಅನುದಾನ – ರೂ. 1578.21 ಲಕ್ಷಗಳು
ಬಿಡುಗಡೆಗೊಳಿಸಿದ ಅನುದಾನ – ರೂ. 1578.21 ಲಕ್ಷಗಳು
ಕಾಮಗಾರಿನ್ನು ಕೈಗೊಂಡ ಗುತ್ತಿಗೆದಾರರು – ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಸದರಿ ಕೇಂದ್ರವನ್ನು ನಿರ್ಮಿಸಲಾಗಿದೆ.

ಸದರಿ ಕೇಂದ್ರ ಸ್ಥಾಪನೆಯ ಕಾಮಗಾರಿಯನ್ನು ಕೈಗೊಂಡ ಗುತ್ತಿಗೆದಾರರ ವಿವರ, ಅಂದಾಜು ಪಟ್ಟಿ/ಕ್ರಿಯಾ ಯೋಜನೆಯ ಸಂಪೂರ್ಣ ವಿವರಗಳು ಈ ಕೆಳಕಂಡಂತ್ತಿದೆ:
(ರೂ.ಲಕ್ಷಗಳಲ್ಲಿ)
<table>
<tr><th>ಕ್ರಸಂ.</th><th>ಕೆಲಸದ ಹೆಸರು</th><th>ಅಂದಾಜು ಮೊತ್ತ</th><th>ಗುತ್ತಿಗೆದಾರರು</th></tr>
<tr><td>1</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರ ಕಟ್ಟಡವನ್ನು ನಿರ್ಮಿಸುವುದು.</td><td>570.00</td><td>ಮೆ॥ ಕೆ.ಬಿ.ಆರ್. ಇನ್ಫ್ರಾಟೆಕ್</td></tr>
<tr><td>2</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಕ್ಕೆ ತಪಾಸಣಾ ಯಂತ್ರಗಳನ್ನು ಅಳವಡಿಸುವುದು.</td><td>732.00</td><td>ಮೆ॥ ರೋಸ್‌ಮಾರ್ಟಾ ಟೆಕ್ನಾಲಜೀಸ್ ಲಿಮಿಟೆಡ್</td></tr>
<tr><td>3</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಕ್ಕೆ ಕಾಂಕ್ರೀಟ್ ಅಳವಡಿಸುವುದು.</td><td>75.00</td><td>ಶ್ರೀ ಬಿ.ಎಚ್. ರೇವಣಿಪ್ರಸಾದ್</td></tr>
<tr><td>4</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಕ್ಕೆ ಕ್ಯಾನೊಪಿ, ಸಂಪ್ ಟ್ಯಾಂಕ್ ಹಾಗೂ ಪಂಪ್‌ರೂಮ್ ನಿರ್ಮಿಸುವುದು.</td><td>50.00</td><td>ಶ್ರೀ. ಯಲರ್ಥಿ ದಾಮು</td></tr>
<tr><td>5</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಕ್ಕೆ ಅಗ್ನಿಶಾಮಕ ವ್ಯವಸ್ಥೆ ಕಲ್ಪಿಸುವುದು.</td><td>50.00</td><td>ಮೆ॥ ರಾಮ ಎಂಟರ್‌ಪ್ರೈಸಸ್</td></tr>
<tr><td>6</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಕ್ಕೆ ವಿದ್ಯುತ್ ದೀಪಗಳು, ಡಿ.ಜಿ.ಸೆಟ್‌ಗಳನ್ನು ಅಳವಡಿಸುವುದು ಹಾಗೂ ಇತರೆ ಕೆಲಸಗಳು.</td><td>64.00</td><td>ಮೆ॥ ರಾಮ ಎಂಟರ್‌ಪ್ರೈಸಸ್</td></tr>
<tr><td>7</td><td>ವಾಹನ ತಪಾಸಣಾ ಮತ್ತು ಪ್ರಮಾಣೀಕರಣ ಕೇಂದ್ರಕ್ಕೆ ಎಪಾಕ್ಸಿ ಫ್ಲೋರಿಂಗ್ ಅಳವಡಿಸುವುದು.</td><td>28.50</td><td>ಶ್ರೀ ವೈ.ನಾಗರಾಜ್</td></tr>
</table>
</td>
</tr>
</table>

ಸಂಖ್ಯೆ: ಟಿಡಿ 67 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1514
ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್
ಉತ್ತರಿಸಬೇಕಾದ ದಿನಾಂಕ : 10.03.2021
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ವೃದ್ಧಾಶ್ರಮಗಳು ಎಷ್ಟು (ವಿಳಾಸಗಳೊಂದಿಗೆ ಜಿಲ್ಲಾವಾರು ಮಾಹಿತಿಯನ್ನು ನೀಡುವುದು)	• ರಾಜ್ಯದ 30 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 26 ವೃದ್ಧಾಶ್ರಮಗಳು 25 ಜಿಲ್ಲೆಗಳಲ್ಲಿ ನಡೆಯುತ್ತಿವೆ (ವಿವರಗಳನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ). • ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 8 ಕಂದಾಯ ಉಪ ವಿಭಾಗದಲ್ಲಿ ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-02ರಲ್ಲಿ ಒದಗಿಸಲಾಗಿದೆ).
ಆ)	ಪ್ರಸ್ತುತ ವೃದ್ಧಾಶ್ರಮಗಳಲ್ಲಿ ಒಟ್ಟು ಎಷ್ಟು ಜನ ನಿರಾಶ್ರಿತರು ಅಥವಾ ಹಿರಿಯ ನಾಗರೀಕರು ಆಶ್ರಯ ಪಡೆಯುತ್ತಿದ್ದಾರೆ;	ಪ್ರಸ್ತುತ ಪ್ರತಿ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿರುತ್ತದೆ.
ಇ)	ವೃದ್ಧಾಶ್ರಮಗಳಲ್ಲಿ ಹಿರಿಯ ನಾಗರೀಕರಿಗೆ ಒದಗಿಸುತ್ತಿರುವ ಸೌಲಭ್ಯಗಳು ಹಾಗೂ ಸೌಕರ್ಯಗಳು ಯಾವುವು; (ಮಾಹಿತಿಯನ್ನು ನೀಡುವುದು)	ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00 ಲಕ್ಷಗಳ ಅನುದಾನವನ್ನು ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಬಿಡುಗಡೆ ಮಾಡಲಾಗುತ್ತಿದೆ.
ಈ)	ರಾಜ್ಯದಲ್ಲಿರುವ ಮಕ್ಕಳ ಸರ್ಕಾರಿ ಅನಾಥಾಶ್ರಮಗಳು ಎಷ್ಟು? (ವಿಳಾಸಗಳೊಂದಿಗೆ ಜಿಲ್ಲಾವಾರು ಮಾಹಿತಿಯನ್ನು ನೀಡುವುದು)	ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಮಕ್ಕಳ ಸರ್ಕಾರಿ ಅನಾಥಾಶ್ರಮಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಆದರೆ, ಮಕ್ಕಳ ರಕ್ಷಣಾ ನಿರ್ದೇಶನಾಲಯದ ಮೂಲಕ ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಒಟ್ಟು 59 ಬಾಲಮಂದಿರಗಳಿದ್ದು, ಇವುಗಳ ಪೈಕಿ 29 ಬಾಲಕರಿಗಾಗಿ ಹಾಗೂ 30 ಬಾಲಕಿಯರಿಗಾಗಿ ಮತ್ತು 1 ಶಿಶುಮಂದಿರ 6 ವರ್ಷದೊಳಗಿನ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಮಾಹಿತಿಯನ್ನು ವಿಳಾಸದೊಂದಿಗೆ ಅನುಬಂಧ-3ರಲ್ಲಿ ಒದಗಿಸಿದೆ.

ಸಂಖ್ಯೆ: ಮಮಇ 76 ಪಿಹೆಚ್‌ಪಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1514ಕ್ಕೆ ಅನುಬಂಧ-01

ರಾಜ್ಯ ಅನುದಾನಿತ ವೃದ್ಧಾಶ್ರಮಗಳ ಮಾಹಿತಿ

ಕ್ರ.ಸಂ.	ಜಿಲ್ಲೆಯ ಹೆಸರು	ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ)
1	ಬೆಂಗಳೂರು ನಗರ	ತುಂಗಭದ್ರ ವಿದ್ಯಾ ಸಂಸ್ಥೆ, (ರಿ) ನಂ 113, 2ನೇ ಕ್ರಾಸ್, 2ನೇ ಹಂತ ಮಹಾಲಕ್ಷಿಪುರಂ, ಬೆಂಗಳೂರು-17
2	ಬೆಂಗಳೂರು ನಗರ	ಚೆಶೈರ್ ಹೋಮ್ ಇಂಡಿಯಾ (ರಿ), ನಂ. 408, ಇಸಿಸಿ ರೋಡ್, ವಿಮಾನ ನಿಲ್ದಾಣ ರಸ್ತೆ ಮಣಿಪಾಲ ಆಸ್ಪತ್ರೆ ಎದುರು ಬೆಂಗಳೂರು-17
3	ಬಳ್ಳಾರಿ	ಎಡಯೂರು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠ, ರಾಮನಗರ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ
4	ಬೆಳಗಾವಿ	ಡಾ॥ ಬಿ.ಆರ್ ಅಂಬೇಡ್ಕರ್ ಹರಿಜನ ಸೊಸೈಟಿ, ಮುಚ್ಚಂಡಿ-590010, ಬೆಳಗಾಂ
5	ಬೀದರ್	ರಮಬಾಯಿ ಅಂಬೇಡ್ಕರ್ ಮಹಿಳಾ ಮಂಡಳ ಚೌರಾದ್ .ಬಿ, ಬೀದರ್
6	ಬಾಗಲಕೋಟೆ	ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ವೃದ್ಧಾಶ್ರಮ, ಬೀಳಗಿ ಬಾಗಲಕೋಟೆ
7	ವಿಜಯಪುರ	ಶ್ರೀ ಸಿದ್ಧೇಶ್ವರ ವಿದ್ಯಾಪೀಠ, (ರಿ) ತಾಳಿಕೋಟೆ, ಗುರುಪಾದೇಶ್ವರ ನಗರ, ಬಸವನ ಬಾಗೇವಾಡಿ ರೋಡ್, ಬಿಜಾಪುರ
8	ಚಿಕ್ಕಬಳ್ಳಾಪುರ	ಚೈತನ್ಯ ವೃದ್ಧಾಶ್ರಮ, ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಃಶ್ಚೇತನ ಸಂಸ್ಥೆ, ಕೈವಾರ, ಚಿಂತಾಮಣಿ ತಾ॥ ಚಿಕ್ಕಬಳ್ಳಾಪುರ
9	ಚಿಕ್ಕಮಗಳೂರು	ರೋಟರಿ ಅಂಡ್ ಇನ್ನರ್ ವ್ಹೀಲ್ ಟ್ರಸ್ಟ, ಜೀವನಸಂಧ್ಯಾ ವೃದ್ಧಾಶ್ರಮ ಕದ್ರಿಮಿದ್ರಿ, ಮುಕ್ತಿಹಳ್ಳಿ ಅಂಚೆ, ಚಿಕ್ಕಮಗಳೂರು
10	ಚಿತ್ರದುರ್ಗ	ಶ್ರೀ ಶಕ್ತಿ ಮಹಿಳಾ ಮಂಡಳಿ, ಚಿತ್ರದುರ್ಗ
11	ಧಾರವಾಡ	ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ, (ರಿ), ಎಸ್.ಜಿ. ಜಿಗಳೂರ ಬಿಲ್ಡಿಂಗ್, ಬಂಕಾಪುರ ಚೌಕ್, ಪಿ.ಬಿ ರೋಡ್, ಹುಬ್ಬಳ್ಳಿ ಅಂಡ್ ಬಿದ್ನಾಳ ಕ್ರಾಸ್, ಶಕ್ತಿನಗರ, ಹುಬ್ಬಳ್ಳಿ
12	ಗದಗ	ಜಿ.ಎಫ್ ಉಪನಾಳ ಪ್ರತಿಷ್ಠಾನ ಬೆಂಗಳೂರು ಶಾಖೆ: ಲಕ್ಷ್ಮೇಶ್ವರ ಶಾಂತಿಧಾಮ ವೃದ್ಧಾಶ್ರಮ, ಮುಕ್ತಿಮಂದಿರ ರೋಡ್ ಲಕ್ಷ್ಮೀಶ್ವರ
13	ಗುಲ್ಬರ್ಗಾ	ಮಹಾದೇವಿ ತಾಯಿ ಮಹಿಳಾ ವಿದ್ಯಾವರ್ಧಕ ಸಂಘ, ಕಲಬುರಗಿ
14	ಹಾಸನ	ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನ ಹಳ್ಳಿ, ಹಾಸನ ತಾ॥
15	ಹಾವೇರಿ	ಶ್ರೀ ಶಕ್ತಿ ಅಸೋಸಿಯೇಷನ್, ಗುತ್ತೂರು ಕಾಲೋನಿ, ಹರಿಹರ, ದಾವಣಗೆರೆ ಜಿಲ್ಲೆ ಇವರ ವತಿಯಿಂದ ನಾಗೇಂದ್ರ ಮಟ್ಟಿ ರೈಲ್ವೆ ಸ್ಟೇಷನ್ ಹತ್ತಿರ, ಹಾವೇರಿ.

..2

16	ಕೋಲಾರ	ದಿವ್ಯಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, (ರಿ), ಅರಿಶಿಣಕುಂಟೆ, ಮಾಣಿಗಾನ ಹಳ್ಳಿ ಅಂಚೆ ಶ್ರೀನಿವಾಸಪುರ ತಾ॥ ಕೋಲಾರ
17	ಕೊಪ್ಪಳ	ವಿದ್ಯಾನಂದ ಗುರುಕುಲ ವೃದ್ಧಾಶ್ರಮ, ಶಿಕ್ಷಣ ವಿಶ್ವಸ್ಥ ಮಂಡಲ, ಕೂಕನೂರು, ಕೊಪ್ಪಳ
18	ಮಂಡ್ಯ	ಸೇವಾಕಿರಣ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ, ಭಾಷ್ ನಗರ, ಮಂಡ್ಯ
19	ರಾಮನಗರ	ಶಾಂತಲಾ ಚಾರಿಟಬಲ್ ಟ್ರಸ್ಟ್, ರಾಮನಗರ ಸಂಸ್ಥೆ ವತಿಯಿಂದ ವಾರ್ಡ್ ಸಂ. 31, ಆರ್ಚಕರ ಹಳ್ಳಿ, ಬಿ.ಎಂ. ರಸ್ತೆಯಲ್ಲಿ ನಡೆಸುತ್ತಿರುವ ದಾರಿದೀಪ ವೃದ್ಧಾಶ್ರಮ
20	ಶಿವಮೊಗ್ಗ	ಜೀವನಕಿರಣ ವೃದ್ಧಾಶ್ರಮ, ಅಗರದ ಹಳ್ಳಿ, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ
21	ತುಮಕೂರು	ಶ್ರೀಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್, (ರಿ), ಶ್ರೀ ಸಾಯಿ ವೃದ್ಧಾಶ್ರಮ, ಕಣವೇನಹಳ್ಳಿಗೇಟ್, ಪಾವಗಡ ತಾ॥ ತುಮಕೂರು ಜಿಲ್ಲೆ
22	ಮಡಿಕೇರಿ	ಶ್ರೀ ಶಕ್ತಿ ಅಸೋಸಿಯೇಷನ್ (ರಿ), ಚರ್ಚ್‌ರಸ್ತೆ, ಕೂಡಿಗೆ, ಕುಶಾಲನಗರ, ಸೋಮವಾರಪೇಟೆ ತಾಲ್ಲೂಕು, ಕೊಡಗು
23	ಯಾದಗಿರಿ	ಅಕ್ಷತಾ ಮಹಿಳಾ ಮಂಡಳಿ, ಯಾದಗಿರಿ
24	ಚಾಮರಾಜನಗರ	ಜ್ಞಾನಸಿಂಧು ವೃದ್ಧಾಶ್ರಮ, ಜ್ಞಾನಸಿಂಧು ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಸಂತೇಮರಹಳ್ಳಿ, ಚಾಮರಾಜನಗರ
25	ದಕ್ಷಿಣ ಕನ್ನಡ	ಅಭಯ ಆಶ್ರಯ, (ರಿ) ಅಸ್ಸೈಗೋಳಿ, ಕೊಣಾಜಿ, ಮಂಗಳೂರು
26	ಮೈಸೂರು	ಜಗದ್ಗುರು ಶ್ರೀ ಶಿವರಾತ್ರಿಶ್ವರ ಮಹಾ ವಿದ್ಯಾಪೀಠ, (ಜೆಎಸ್‌ಎಸ್) ನಂ. 915, 5ನೇ ಮೈನ್, ಅರವಿಂದ ನಗರ ರಾಮಾನುಜ ರಸ್ತೆ, ಮೈಸೂರು-570004

❖ ಉತ್ತರ ಕನ್ನಡ, ದಾವಣಗೆರೆ, ಉಡುಪಿ, ಬೆಂಗಳೂರು ಗ್ರಾಮಾಂತರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ವೃದ್ಧಾಶ್ರಮಗಳು ನಡೆಯುತ್ತಿರುವುದಿಲ್ಲ.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1514ಕ್ಕೆ ಅನುಬಂಧ-02

ರಾಜ್ಯದಲ್ಲಿ ಕಂದಾಯ ಉಪ ವಿಭಾಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯಾಗಿರುವ ವೃದ್ಧಾಶ್ರಮಗಳ ಮಾಹಿತಿ

ಕ್ರ.ಸಂ.	ಉಪ ವಿಭಾಗದ ಹೆಸರು	ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ)
01	ಮೈಸೂರು	ಮೈಸೂರು ಜಿಲ್ಲೆಯ ಮೈಸೂರು ಕಂದಾಯ ಉಪವಿಭಾಗದಲ್ಲಿ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್, ಯಾಚೇನಹಳ್ಳಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್ ವೃದ್ಧಾಶ್ರಮ
02	ಹುಣಸೂರು	ಮೈಸೂರು ಜಿಲ್ಲೆಯ ಹುಣಸೂರು ಕಂದಾಯ ಉಪವಿಭಾಗದಲ್ಲಿ ಮಾತೃ ಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ (ರಿ), ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಮಾತೃ ಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ (ರಿ) ವೃದ್ಧಾಶ್ರಮ
03	ಬೀದರ್	ಬೀದರ್ ಜಿಲ್ಲೆಯ ಬೀದರ್ ಕಂದಾಯ ಉಪವಿಭಾಗದಲ್ಲಿ ಅಕ್ಕಮಹಾದೇವಿ ಯುವತಿ ಮಂಡಳಿ ಗಾದಗಿ (ರಿ), ಬೀದರ್ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಅಕ್ಕಮಹಾದೇವಿ ಯುವತಿ ಮಂಡಳಿ ಗಾದಗಿ (ರಿ), ವೃದ್ಧಾಶ್ರಮ
04	ಹಾಸನ	ಹಾಸನ ಜಿಲ್ಲೆಯ ಹಾಸನ ಕಂದಾಯ ಉಪವಿಭಾಗದಲ್ಲಿ ಶ್ವೇತ ವಿದ್ಯಾ ಸಂಸ್ಥೆ (ರಿ), ದಾಸರಕೊಪ್ಪಲು, ಹಾಸನ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ವೇತ ವಿದ್ಯಾ ಸಂಸ್ಥೆ (ರಿ) ವೃದ್ಧಾಶ್ರಮ
05	ಸಕಲೇಶಪುರ	ಹಾಸನ ಜಿಲ್ಲೆಯ ಸಕಲೇಶಪುರ ಕಂದಾಯ ಉಪವಿಭಾಗದಲ್ಲಿ ಮಧುಶ್ರೀ ಮಹಿಳಾ ಸಮಾಜ (ರಿ), ಅರಕಲಗೂಡು, ಹಾಸನ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಮಧುಶ್ರೀ ಮಹಿಳಾ ಸಮಾಜ (ರಿ) ವೃದ್ಧಾಶ್ರಮ
06	ಸಾಗರ	ಶಿವಮೊಗ್ಗ ಜಿಲ್ಲೆಯ ಸಾಗರ ಕಂದಾಯ ಉಪವಿಭಾಗದಲ್ಲಿ ನಂದಾದೀಪ ಅಂಗವಿಕಲ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ (ರಿ), ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ನಂದಾದೀಪ ಅಂಗವಿಕಲ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ (ರಿ) ವೃದ್ಧಾಶ್ರಮ
07	ಶಿವಮೊಗ್ಗ	ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಕಂದಾಯ ಉಪವಿಭಾಗದಲ್ಲಿ ಸಿದ್ದೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ), ಹಿರಿಯೂರು ಚಿತ್ರದುರ್ಗ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಸಿದ್ದೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ) ವೃದ್ಧಾಶ್ರಮ
08	ತುಮಕೂರು	ತುಮಕೂರು ಜಿಲ್ಲೆಯ ತುಮಕೂರು ಕಂದಾಯ ಉಪವಿಭಾಗದಲ್ಲಿ ಶ್ರೀ ಶಾರದಾಂಬ ಟ್ರಸ್ಟ್ (ರಿ), ತುಮಕೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ಶಾರದಾಂಬ ಟ್ರಸ್ಟ್ (ರಿ), ವೃದ್ಧಾಶ್ರಮ

***

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1514ಕ್ಕೆ ಅನುಬಂಧ–03

ಕ್ರ ಸಂ	ಜಿಲ್ಲೆಯ ಹೆಸರು	ಕ್ರ ಸಂ	ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ	ಸಂಸ್ಥೆಯ ಪೂರ್ಣ ವಿಳಾಸ
1	ಬೆಂಗಳೂರು (ನ)	1	ಬಾಲಕರ ಬಾಲಮಂದಿರ	ಡಾ. ಹೆಚ್, ಎಮ್, ಮರೀಗೌಡ ರಸ್ತೆ, ಹೊಸೂರು ರಸ್ತೆ, ಬೆಂಗಳೂರು-29
		2	ಮನೋವಿಕಲ ಬಾಲಕರ ಬಾಲಮಂದಿರ	ಡಾ. ಹೆಚ್, ಎಮ್, ಮರೀಗೌಡ ರಸ್ತೆ, ಹೊಸೂರು ರಸ್ತೆ, ಬೆಂಗಳೂರು-29
		3	ಬಾಲಕಿಯರ ಬಾಲಮಂದಿರ	ಡಾ. ಹೆಚ್, ಎಮ್, ಮರೀಗೌಡ ರಸ್ತೆ, ಹೊಸೂರು ರಸ್ತೆ, ಬೆಂಗಳೂರು-29
		4	ಶಿಶುಮಂದಿರ	ಡಾ. ಹೆಚ್, ಎಮ್, ಮರೀಗೌಡ ರಸ್ತೆ, ಹೊಸೂರು ರಸ್ತೆ, ಬೆಂಗಳೂರು-29
2	ಬಾಗಲಕೋಟೆ	5	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲ ಮಂದಿರ, ಎಪಿಎಮ್ ಸಿ ಹತ್ತಿರ, ನವನಗರ-587103, ಬಾಗಲಕೋಟೆ
		6	ಬಾಲಕಿಯರ ಬಾಲ ಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ, ಎಪಿಎಮ್ ಸಿ ಹತ್ತಿರ, ನವನಗರ-587103, ಬಾಗಲಕೋಟೆ
3	ಬಳ್ಳಾರಿ	7	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಶಾಂತಿಧಾಮ, ಕಂಟೋನ್ಮೆಂಟ್, ಬಳ್ಳಾರಿ
		8	ಬಾಲಕಿಯರ ಬಾಲಮಂದಿರ	ಬಾಲಕಿಯರ ಬಾಲಮಂದಿರ, ಶಾಂತಿಧಾಮ, ಕಂಟೋನ್ಮೆಂಟ್, ಬಳ್ಳಾರಿ
		9	ಮನೋವಿಕಲ ಬಾಲಕರ ಬಾಲಮಂದಿರ	ಶಾಂತಿಧಾಮ, ಕಂಟೋನ್ಮೆಂಟ್, ಬಳ್ಳಾರಿ
4	ಬಿಜಾಪುರ	10	ಬಾಲಕರ ಬಾಲಮಂದಿರ (ಹಿರಿಯ)	ಮನಗುಲಿ ರಸ್ತೆ, ವಿಜಯಪುರ
		11	ಬಾಲಕರ ಬಾಲಮಂದಿರ (ಕಿರಿಯ)	ತಕ್ಕೆ ರಸ್ತೆ, ವಿಜಯಪುರ
		12	ಬಾಲಕಿಯರ ಬಾಲಮಂದಿರ	ಮನಗುಲಿ ರಸ್ತೆ, ವಿಜಯಪುರ
5	ಬೆಳಗಾವಿ	13	ಬಾಲಕರ ಬಾಲಮಂದಿರ	ವೀಕ್ಷಣಾಲಯ ಕಾಂಪೌಂಡ್, 3ನೆ ಅಡ್ಡ ರಸ್ತೆ, ಶಿವಾಜಿನಗರ, ಬೆಳಗಾವಿ
		14	ಬಾಲಕರ ಬಾಲಮಂದಿರ (ಖಾನಾಪುರ)	ಜಂಬೂತಿ ಕ್ರಾಸ್, ಶಿವಾಜಿ ನಗರ, 3ನೇ ಅಡ್ಡ ರಸ್ತೆ, ಖಾನಾಪುರ
		15	ಬಾಲಕಿಯರ ಬಾಲಮಂದಿರ ಸವದತ್ತಿ	ಸ್ಪಿನ್ನಿಂಗ್ ಮಿಲ್ ಹತ್ತಿರ, ಯಲ್ಲಮ್ಮನ್ ಗುಡ್ ರಸ್ತೆ, ಸವದತ್ತಿ
		16	ಪುರುಷರ ಅನುಪಾಲನಾ ಗೃಹ	ವೀಕ್ಷಣಾಲಯ ಕಾಂಪೌಂಡ್, 3ನೆ ಅಡ್ಡ ರಸ್ತೆ, ಶಿವಾಜಿನಗರ, ಬೆಳಗಾವಿ
6	ಬೀದರ್	17	ಬಾಲಕಿಯರ ಬಾಲಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ, ಮೈಲೂರು, ಬೀದರ್
		18	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಮೈಲೂರು, ಬೀದರ್
7	ಚಿಕ್ಕಮಗಳೂರು	19	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಮಂದಿರ, ಹೌಸಿಂಗ್ ಬೋರ್ಡ್, ಚಿಕ್ಕಮಗಳೂರು
8	ಚಿತ್ರದುರ್ಗ	20	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಜಿಲ್ಲಾ ಪಂಚಾಯತ್ ರಸ್ತೆ, ಚಿತ್ರದುರ್ಗ -577501
		21	ಬಾಲಕಿಯರ ಬಾಲಮಂದಿರ	ಬಾಲಕಿಯರ ಬಾಲಮಂದಿರ, ವಿ.ಪಿ ಬಡಾವಣೆ 2ನೇ ಕ್ರಾಸ್ ಚಿತ್ರದುರ್ಗ- 577501
9	ಚಾಮರಾಜನಗರ	22	ಬಾಲಕರ ಬಾಲಮಂದಿರ	ಸರ್ಕಾರಿ ಬಾಲ ಮಂದಿರ, ಬಿ, ಡಿವಿಸನ್, ಕೋರ್ಟ್ ರಸ್ತೆ, ಕೆಹೆಚ್ ಬಿ ಕಾಲೋನಿ, ಚಾಮರಾಜನಗರ
		23	ಬಾಲಕಿಯರ ಬಾಲಮಂದಿರ	ಬಿ. ಡಿವಿಸನ್, ಸರ್ಕಾರಿ ಬಾಲ ಮಂದಿರ, ಬಿ, ಡಿವಿಸನ್, ಕೋರ್ಟ್ ರಸ್ತೆ, ಕೆಹೆಚ್ ಬಿ ಕಾಲೋನಿ, ಚಾಮರಾಜನಗರ
10	ಚಿಕ್ಕಬಳ್ಳಾಪುರ	24	ಬಾಲಕಿಯರ ಬಾಲಮಂದಿರ	ಬಿಸಿಎಮ್ ಪೋಸ್ಟ್, ಮೆಟ್ರಿಕ್ ಬಾಲಕಿಯರ ಹಾಸ್ಟೆಲ್ ಎದುರು, ನ್ಯೂ ಟೌನ್ ಗ್ರಾಮರ್ ಶಾಲೆ, ಗಂಗನಮಿದ್ದೆ ರಸ್ತೆ, ಚಿಕ್ಕಬಳ್ಳಾಪುರ-562101
		25	ಬಾಲಕಿಯರ ಬಾಲಮಂದಿರ	ಗಂಟಿಕೇರಿ, ಹುಬ್ಬಳ್ಳಿ

ಕ್ರ ಸಂ	ಜಿಲ್ಲೆಯ ಹೆಸರು	ಕ್ರ ಸಂ	ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ	ಸಂಸ್ಥೆಯ ಪೂರ್ಣ ವಿಳಾಸ
11	ಧಾರವಾಡ	26	ಬಾಲಕರ ಬಾಲಮಂದಿರ ಉಣಗಲ್	ಸರ್ಕಾರಿ ಬಾಲಕರ ಬಾಲಮಂದಿರ, ಉಣಕಲ್, ಹುಬ್ಬಳ್ಳಿ
		27	ಮನೋವಿಕಲ ಬಾಲಕಿಯರ ಬಾಲಮಂದಿರ	ಉಣಕಲ್, ಹುಬ್ಬಳ್ಳಿ
12	ದಾವಣಗೆರೆ	28	ಬಾಲಕರ ಬಾಲಮಂದಿರ	ಎಂ.ಸಿ.ಸಿ ಬಿ ಬ್ಲಾಕ್, 14ನೇ ಕ್ರಾಸ್ ಕುವೆಂಪು ನಗರ ದಾವಣಗೆರೆ
		29	ಬಾಲಕಿಯರ ಬಾಲಮಂದಿರ	ಬಾಲಕಿಯರ ಸರ್ಕಾರಿ ಬಾಲಮಂದಿರ,ಶ್ರೀ ರಾಮ ನಗರ , ಇಂಡಸ್ಟ್ರಿಯಲ್ ಏರಿಯಾ ದಾವಣಗೆರೆ
13	ದಕ್ಷಿಣ ಕನ್ನಡ	30	ಬಾಲಕರ ಬಾಲಮಂದಿರ	ಕೃಷ್ಣ ನಗರ ಬಾಂಡೆಲ್, ಮಂಗಳೂರು-575008
14	ಗುಲ್ಬರ್ಗಾ	31	ಬಾಲಕಿಯರ ಬಾಲಮಂದಿರ	ಬಾಲಕಿಯರ ಬಾಲಮಂದಿರ C/o ಸ್ಟೇಟ್ ಹೋಂ ಫಾರ್ ಉಮೆನ್, ಆಲಂದ ರಸ್ತೆ, ಕಲ್ಬುರ್ಗಿ-5851011
		32	ಬಾಲಕರ ಬಾಲಮಂದಿರ	ಬಾಲಕರ ಬಾಲಮಂದಿರ, ಪ್ರಗತಿ ಕಾಲೋನಿ, ಕಲ್ಬುರ್ಗಿ-5851025
		33	ಮನೋವಿಕಲ ಬಾಲಕರ ಬಾಲಮಂದಿರ	
15	ಗದಗ	34	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಸಂಕನೂರು ಆಸ್ಪತ್ರೆ ಎದುರು, ಬಸವ ಪೆಟ್ರೋಲ್ ಬಂಕ್ ಪಕ್ಕ, ಹೆಲ್ತ್ ಕ್ಯಾಂಪ್, ಬೆಟಗೇರಿ.
		35	ಬಾಲಕಿಯರ ಬಾಲಮಂದಿರ	ಹೆಡ್ ಪೋಸ್ಟ್ ಆಫೀಸ್ ಹಿಂಭಾಗ, ಗಾಂಧಿ ಸರ್ಕಲ್ ಹತ್ತಿರ, ಗದಗ-5820101
16	ಹಾವೇರಿ	36	ಬಾಲಕರ ಬಾಲಮಂದಿರ	ಅಧೀಕ್ಷಕ ದರ್ಜೆ-2, ಬಾಲಕರ ಬಾಲ ಮಂದಿರ, ರಾಣೆಬೆನ್ನೂರು.
		37	ಬಾಲಕಿಯರ ಬಾಲಮಂದಿರ	ಅಧೀಕ್ಷಕ ದರ್ಜೆ-2, ಬಾಲಕಿಯರ ಬಾಲ ಮಂದಿರ, ಅಶ್ವಿನಿ ನಗರ, 1ನೇ ಅಡ್ಡರಸ್ತೆ, ಮುಲುಗುಂದ ಕಟ್ಟಡ, ರಾಣೆಬೆನ್ನೂರು.
17	ಹಾಸನ	38	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಸೀತಾ ರಾಮಾಂಜನೇಯ ದೇವಸ್ಥಾನದ ಎದುರು, ಮಹಾರಾಜ ಪಾರ್ಕ್ ರಸ್ತೆ, ಹಾಸನ
		39	ಬಾಲಕಿಯರ ಬಾಲಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ, ಆಡುವಳ್ಳಿ ರಸ್ತೆ, ಕೆ.ಎಸ್.ಆರ್.ಟಿ.ಸಿ ವಿಭಾಗೀಯ ಕಛೇರಿ ಹಿಂಭಾಗ,ಹಾಸನ
18	ಕೊಪ್ಪಳ	40	ಬಾಲಕರ ಬಾಲಮಂದಿರ	ಅಧೀಕ್ಷಕರು, ಸರ್ಕಾರಿ ಬಾಲಕರ ಬಾಲಮಂದಿರ, ಕೊಪ್ಪಳ ಯುನಿಯನ್ ಬ್ಯಾಂಕ್ ಹಿಂದುಗಡೆ ಹೊಸಪೇಟೆ ರಸ್ತೆ, ಕೊಪ್ಪಳ
		41	ಬಾಲಕಿಯರ ಬಾಲಮಂದಿರ	ಅಧೀಕ್ಷಕರು, ಸರ್ಕಾರಿ ಬಾಲಕಿಯರ ಬಾಲಮಂದಿರ, ಕೊಪ್ಪಳ ಕೊಪ್ಪಳ ಅಡವಿ ಆಂಜನೇಯ ದೇವಸ್ಥಾನದ ಹತ್ತಿರ, ಕಿನ್ನಾಳ ರಸ್ತೆ, ಭಾಗ್ಯನಗರ
19	ಕೊಡಗು	42	ಬಾಲಕರ ಬಾಲಮಂದಿರ	ಎಲ್.ಐ.ಸಿ ಕಛೇರಿ ಹತ್ತಿರ, ಹೊಸ ಬಡಾವಣೆ, ಮಡಿಕೇರಿ
		43	ಬಾಲಕಿಯರ ಬಾಲಮಂದಿರ	ಮುಳಿಯಾ ಲೇಔಟ್, ಎಫ್.ಎಂ.ಸಿ ಕಾಲೇಜು ಹತ್ತಿರ, ಗಾಳಿಬೀಡು ರಸ್ತೆ, ಮಡಿಕೇರಿ.
20	ಕೋಲಾರ	44	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಮಸ್ಕಂ, ಅಂಡರ್ ಸನ್ ಪೇಟೆ ಅಂಚೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ-563 113
		45	ಬಾಲಕಿಯರ ಬಾಲಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ, ಮಸ್ಕಂ, ಅಂಡರ್ ಸನ್ ಪೇಟೆ ಅಂಚೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ-563 113

ಕ್ರ ಸಂ	ಜಿಲ್ಲೆಯ ಹೆಸರು	ಕ್ರ ಸಂ	ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ	ಸಂಸ್ಥೆಯ ಪೂರ್ಣ ವಿಳಾಸ
21	ಮಂಡ್ಯ	46	ಬಾಲಕರ ಬಾಲಮಂದಿರ	06ನೇ ಕ್ರಾಸ್, ಮರೀಗೌಡ ಬಡಾವಣೆ, ಮಂಡ್ಯ
		47	ಬಾಲಕಿಯರ ಬಾಲಮಂದಿರ	14ನೇ ಕ್ರಾಸ್, ಮೂರುಬೇಳ ನಿಲಯ, ಕಲ್ಲಹಳ್ಳಿ, ಮಂಡ್ಯ
22	ಮೈಸೂರು	48	ಬಾಲಕರ ಬಾಲಮಂದಿರ	ನಂ.15-17, ಅಂಜನಾದ್ರಿ ಮುಖ್ಯ ರಸ್ತೆ, 2ನೇ ಫೇಸ್, ವಿಜಯನಗರ 4ನೇ ಹಂತ, ಮೈಸೂರು
		49	ಬಾಲಕಿಯರ ಬಾಲಮಂದಿರ	ಲಲಿತ ಮಹಲ್ ರಸ್ತೆ, ಸಿದ್ಧಾರ್ಥನಗರ, ಮೈಸೂರು
23	ರಾಮನಗರ	50	ಬಾಲಕಿಯರ ಬಾಲಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ, ವಂದರಗುಪ್ಪೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
24	ರಾಯಚೂರು	51	ಬಾಲಕಿಯರ ಬಾಲಮಂದಿರ	#1-9-74, ಶೇಖ್ ಹಿಮಾಮ್ ರೆಸಿಡೆನ್ಸಿ, ಆಜಾದ್ ನಗರ, ರಾಯಚೂರು.
		52	ಬಾಲಕರ ಬಾಲಮಂದಿರ	#1-9-74, ಶೇಖ್ ಹಿಮಾಮ್ ರೆಸಿಡೆನ್ಸಿ, ಆಜಾದ್ ನಗರ, ರಾಯಚೂರು.
25	ಶಿವಮೊಗ್ಗ	53	ಬಾಲಕಿಯರ ಬಾಲಮಂದಿರ	ಮಹದಿ ನಗರ, 1ನೇ ತಿರುವು, ಟ್ಯಾಂಕ್ ಮೊಹಲ್ಲಾ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
		54	ಬಾಲಕರ ಬಾಲಮಂದಿರ	ಬಾಲಕರ ಬಾಲಮಂದಿರ ಕಟ್ಟಡ, 100 ಅಡಿ ರಸ್ತೆ, ಆಲ್ಕೊಳ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
26	ತುಮಕೂರು	55	ಬಾಲಕಿಯರ ಬಾಲಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ, ಅಮರಜ್ಯೋತಿ ನಗರ, ಕುಣಿಗಲ್ ರೋಡ್, ತುಮಕೂರು
		56	ಬಾಲಕರ ಬಾಲಮಂದಿರ	ಸರ್ಕಾರಿ ಬಾಲಕರ ಬಾಲಮಂದಿರ, ಅಶ್ವತ್ಥನಾರಾಯಣ ನಿಲಯ, ಗಾಂಧಿನಗರ, ರೈಲ್ವೇಸ್ಟೇಷನ್ ರೋಡ್, ತುಮಕೂರು
27	ಉಡುಪಿ	57	ಬಾಲಕಿಯರ ಬಾಲಮಂದಿರ	ರಾಜ್ಯ ಮಹಿಳಾ ನಿಲಯ ಹತ್ತಿರ, ನಿಟ್ಟೂರು, ಉಡುಪಿ
28	ಉತ್ತರ ಕನ್ನಡ	58	ಬಾಲಕರ ಬಾಲಮಂದಿರ	ಎಲ್.ಐ.ಸಿ. ಕಚೇರಿ ಹತ್ತಿರ ಕೋರ್ಟ್ ರಸ್ತೆ, ಶಿರಸಿ.
		59	ಬಾಲಕಿಯರ ಬಾಲಮಂದಿರ	ಯಶದೀಪ್ ಕಟ್ಟಡ ಮುರುಳೀಧರ ಮಠ ರೋಡ, ಬೆಣ್ಣೆ ಸೇಲ್ಸ್ ಕಾರ್ಪೊರೇಶನ್ ಎದುರುಗಡೆ ಕಾರವಾರ.
29	ಯಾದಗಿರಿ	60	ಬಾಲಕಿಯರ ಬಾಲಮಂದಿರ	ಸರ್ಕಾರಿ ಬಾಲಕಿಯರ ಬಾಲಮಂದಿರ ಜೈನ್ ಮಂದಿರ ಕಾಲೋನಿ ಶುಭಂ ಪೇಟ್ರೋಲ್ ಪಂಪ್ ಹಿಂದುಗಡೆ ಯಾದಗಿರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1587
ಮಾನ್ಯ ಸದಸ್ಯರ ಹೆಸರು : ಶ್ರೀ. ರಾಜೇಶ್ ನಾಯಕ್ ಯು. (ಬಂಟ್ವಾಳ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು
ಉತ್ತರಿಸಬೇಕಾದ ದಿನಾಂಕ : 10-03-2021.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು; (ಯೋಜನೆ ವಿವರ ನೀಡುವುದು)	ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ)	ಈ ಯೋಜನೆಗಳಲ್ಲಿ ಫಲಾನುಭವಿಗಳಾಗಿ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು/ಮಾನದಂಡಗಳೇನು; (ಮಾಹಿತಿ ನೀಡುವುದು)	ಈ ಯೋಜನೆಗಳಲ್ಲಿ ಫಲಾನುಭವಿಗಳಾಗಿ ಆಯ್ಕೆಯಾಗಲು ಇರುವ ಅರ್ಹತೆಗಳ/ ಮಾನದಂಡಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.
ಇ)	ಈ ಯೋಜನೆಗಳಲ್ಲಿ ಈವರೆಗೆ ಸಾಧಿಸಿದ ಪ್ರಗತಿಯ ಬಗ್ಗೆ ವಿವರ ಒದಗಿಸುವುದು?	ಯೋಜನೆಗಳಲ್ಲಿ ಈವರೆಗೆ ಸಾಧಿಸಿದ ಪ್ರಗತಿ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಿದೆ.

ಸಂ:ಮಮಇ 59 ಸ್ವೀಮರ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಅನುಬಂಧ-1

ಅ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ

- **ಸಮಗ್ರ ಶಿಶು ಅಭಿವೃದ್ಧಿ ಯೋಜನೆ:-**

ಮಕ್ಕಳಿಗೆ ಉತ್ತಮ ಭವಿಷ್ಯವೇ ಭಾರತದ ಭವಿಷ್ಯ ಎಂಬ ದೂರದೃಷ್ಟಿಯ ಹಿನ್ನೆಲೆಯಲ್ಲಿ, ಇಲಾಖೆಯು ಮಕ್ಕಳ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಜಾರಿಯಲ್ಲಿರುವ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಿ ಶ್ರಮಿಸುತ್ತಿದೆ. ಈ ಶ್ರಮವು ದೇಶದ ಮುಂದಿನ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಹೂಡುತ್ತಿರುವ ಬಂಡವಾಳವಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ದಿ ಯೋಜನೆಯನ್ನು ಪ್ರಾಯೋಗಿಕವಾಗಿ 2ನೇ ಅಕ್ಟೋಬರ್ 1975 ರಂದು ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲಾಗಿದೆ. ಗರ್ಭಿಣಿ, ಬಾಣಂತಿ, ಕಿಶೋರಿಯರು ಮತ್ತು 6 ವರ್ಷ ಒಳಗಿನ ಮಕ್ಕಳ ಕಲ್ಯಾಣವು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ಯೋಜನೆಯ ಉದ್ದೇಶ :

- 0-6 ವರ್ಷದ ಮಕ್ಕಳ ಆರೋಗ್ಯ, ಪೌಷ್ಠಿಕ ಮಟ್ಟವನ್ನು ವೃದ್ಧಿಸುವುದು.
- ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು.
- ಮಕ್ಕಳಲ್ಲಿ ಸಾವು, ಅನಾರೋಗ್ಯ, ಅಪೌಷ್ಠಿಕತೆ ಮತ್ತು ಶಾಲಾ ಬಿಡುವಿಕೆಯನ್ನು ಕಡಿಮೆಗೊಳಿಸುವುದು.
- ಶಿಶು ಅಭಿವೃದ್ಧಿ ಕಾರ್ಯಕ್ರಮವನ್ನು ಉತ್ತಮಗೊಳಿಸುವ ಕಾರ್ಯನೀತಿ ಮತ್ತು ಅನುಷ್ಠಾನಗೊಳಿಸುವ ದಿಸೆಯಲ್ಲಿ ಪರಿಣಾಮಕಾರಿಯಾದ ಸಮನ್ವಯತೆಯನ್ನು ಸಾಧಿಸುವುದು.
- ಆರೋಗ್ಯ ಮತ್ತು ಪೌಷ್ಠಿಕತೆಯ ಶಿಕ್ಷಣವನ್ನು ನೀಡುವುದರ ಮೂಲಕ ತಾಯಂದಿರಲ್ಲಿ ತಮ್ಮ ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯ ಅಗತ್ಯಗಳನ್ನು ಸರಿಯಾಗಿ ನೋಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು

ಐ.ಸಿ.ಡಿ.ಎಸ್ ಸೇವಾ ಸೌಲಭ್ಯಗಳು

ಸೇವೆಗಳು	ಫಲಾನುಭವಿಗಳು	ಯಾರ ಮುಖಾಂತರ ಅಂಗನವಾಡಿಗಳಲ್ಲಿ ಸೇವೆ ಲಭ್ಯವಾಗಿದೆ
ಪೂರಕ ಪೌಷ್ಠಿಕ ಆಹಾರ	6 ವರ್ಷ ಒಳಗಿನ ಮಕ್ಕಳು, ಗರ್ಭಿಣಿ, ಬಾಣಂತಿ, ಕಿಶೋರಿಯರು	ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು
ಚುಚ್ಚುಮದ್ದು	6 ವರ್ಷದ ಒಳಗಿನ ಮಕ್ಕಳು, ಗರ್ಭಿಣಿಯರು	ಕಿರಿಯ ಆರೋಗ್ಯ ಸಹಾಯಕಿ
ಆರೋಗ್ಯ ತಪಾಸಣೆ	6 ವರ್ಷದ ಒಳಗಿನ ಮಕ್ಕಳು, ಗರ್ಭಿಣಿ, ಬಾಣಂತಿಯರು	ವೈದ್ಯಾಧಿಕಾರಿಗಳು/ಕಿರಿಯ ಆರೋಗ್ಯ ಸಹಾಯಕಿ/ಅಂಗನವಾಡಿ ಕಾರ್ಯಕರ್ತೆ
ಮಾಹಿತಿ ಸೇವೆ	6 ವರ್ಷದ ಒಳಗಿನ ಮಕ್ಕಳು, ಗರ್ಭಿಣಿ, ಬಾಣಂತಿ, ಕಿಶೋರಿಯರು	ವೈದ್ಯಾಧಿಕಾರಿಗಳು/ಕಿರಿಯ ಆರೋಗ್ಯ ಸಹಾಯಕಿ/ಅಂಗನವಾಡಿ ಕಾರ್ಯಕರ್ತೆ
ಶಾಲಾಪೂರ್ವ ಶಿಕ್ಷಣ	3-6 ವರ್ಷದ ಮಕ್ಕಳು	ಅಂಗನವಾಡಿ ಕಾರ್ಯಕರ್ತೆ
ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ	15-45 ವಯಸ್ಸಿನ ಮಹಿಳೆಯರು, ಕಿಶೋರಿಯರು,	ಅಂಗನವಾಡಿ ಕಾರ್ಯಕರ್ತೆ/ ಕಿರಿಯ ಆರೋಗ್ಯ ಸಹಾಯಕಿ/ ಎ.ಎನ್.ಎಂ / ಆಹಾರ ಮತ್ತು ಪೌಷ್ಠಿಕತೆ ಮಂಡಳಿಯ ಸಿಬ್ಬಂದಿ

ರಾಜ್ಯದ ಎಲ್ಲಾ 225 ತಾಲ್ಲೂಕುಗಳಲ್ಲೂ 204 ಶಿಶು ಅಭಿವೃದ್ಧಿ ಯೋಜನೆಗಳ ಮುಖಾಂತರ (181 ಗ್ರಾಮಾಂತರ, 12 ಗುಡ್ಡಗಾಡು ಯೋಜನೆ ಹಾಗು 11 ನಗರ ಪ್ರದೇಶದಲ್ಲಿ) ಒಟ್ಟು 62580 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಅ. ಆಡಳಿತ ವೆಚ್ಚ: ಆಡಳಿತ ವೆಚ್ಚದ ಅಡಿಯಲ್ಲಿ ಗೌರವಧನ, ಉಸ್ತುವಾರಿ ಮತ್ತು ಮೌಲ್ಯಮಾಪನ, ಅಂ. ಕಟ್ಟಡ ಬಾಡಗೆ, ಶಾಲಾ ಪೂರ್ವ ಶಿಕ್ಷಣಕಿಟ್, ಮೆಡಿಸಿನ್ ಕಿಟ್, ಸಮವಸ್ತ್ರ, ಖರೀದಿ ಖರ್ಚು ಭರಿಸಲಾಗುತ್ತಿದೆ. ಸದರಿ ವೆಚ್ಚಗಳನ್ನು 60:40 ಅನುಪಾತದಲ್ಲಿ ಅನುಕ್ರಮವಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಪತ್ರದ ಸಂ: 11-36/2016 ಸಿಡಿ-1 ದಿನಾಂಕ: 23-11-2017 ರಂತೆ 2018-19ನೇ ಸಾಲಿನ ಡಿಸೆಂಬರ್ ಮಾಹೆಯಿಂದ ಜಿಲ್ಲಾ ಘಟಕದ ನಿರೂಪಣಾಧಿಕಾರಿಗಳು, ಅಂಕಿ ಅಂಶಗಳ ಸಹಾಯಕರು, ಯೋಜನಾ ಕಛೇರಿಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಮೇಲ್ವಿಚಾರಕಿಯರ ವೇತನದ ಬಾಬ್ತು ಕೇಂದ್ರ ಸರ್ಕಾರದ ಶೇಕಡಾ 25 ಹಾಗೂ ರಾಜ್ಯ ಸರ್ಕಾರದ ಶೇಕಡಾ 75 ಪಾಲು ಆಗಿರುತ್ತದೆ. ಉಳಿದ ಸಿಬ್ಬಂದಿಗಳ ವೇತನದ ಬಾಬ್ತು ಹಾಗೂ ರಾಜ್ಯ ಐಸಿಡಿಎಸ್ ಘಟಕದ ಸಂಪೂರ್ಣ ವೆಚ್ಚ ರಾಜ್ಯ ಸರ್ಕಾರದ ಭರಿಸುತ್ತಿದೆ.

ಆ. ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಸಮವಸ್ತ್ರ: ಕೇಂದ್ರ ಸರ್ಕಾರದ ಪತ್ರದ ಸಂ: 11-36/2016 ಸಿಡಿ-1 ದಿನಾಂಕ: 23-11-2017 ರಂತೆ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಪ್ರತೀ ಸೀರೆಗೆ ರೂ. 400/- ಗಳಂತೆ ಒಂದು ವರ್ಷಕ್ಕೆ 2 ಸೀರೆಗಳನ್ನು ಒದಗಿಸಲಾಗುತ್ತಿದೆ.

ಇ. ಶಾಲಾ ಪೂರ್ವ ಶಿಕ್ಷಣ ಕಿಟ್: ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಆಡಳಿತ ವೆಚ್ಚದಡಿ ಪ್ರತಿ ಅಂಗನವಾಡಿ ಕೇಂದ್ರ ಹಾಗು ಮಿನಿ ಅಂಗನವಾಡಿ ಕೇಂದ್ರಕ್ಕೆ ವಾರ್ಷಿಕ ರೂ. 5000 ಗಳ ಅನುದಾನವನ್ನು ತರಬೇತಿ ಸೇರಿದಂತೆ ಶಾಲಾ ಪೂರ್ವ ಶಿಕ್ಷಣ ಕಿಟ್ಗಾಗಿ ನಿಗದಿಪಡಿಸಲಾಗಿದೆ. ರಾಜ್ಯಾದ್ಯಂತ ಅಂಗನವಾಡಿ ಕೇಂದ್ರಗಳಲ್ಲಿ ಗುಣಮಟ್ಟ ಹಾಗೂ ಏಕ ರೂಪತೆ ತರುವ ನಿಟ್ಟಿನಲ್ಲಿ ರಾಜ್ಯ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಿ, ನುರಿತ ಶಿಕ್ಷಣ ತಜ್ಞರ ಹಾಗೂ ವಿವಿಧ ಆಯ್ದ ಐಸಿಡಿಎಸ್ ಕರ್ಮಚಾರಿಗಳ ಕಾರ್ಯಾಗಾರ ನಡೆಸಿ, ಮಾದರಿ ಕಿಟ್ ಅಭಿವೃದ್ಧಿ ಪಡಿಸಲಾಗಿದೆ.

ಈ. ಮೆಡಿಸಿನ್ ಕಿಟ್: ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಆಡಳಿತ ವೆಚ್ಚದಡಿ 62580 ಅಂ.ಕೇಂದ್ರಗಳಿಗೆ ಹಾಗೂ 3331 ಮಿನಿ ಅಂ.ಕೇಂದ್ರಗಳಿಗೆ ಪ್ರತಿ ಅಂ.ಕೇಂದ್ರಕ್ಕೆ ರೂ 1500/- ರಂತೆ ಹಾಗೂ ಪ್ರತಿ ಮಿನಿ ಅಂ.ಕೇಂದ್ರಕ್ಕೆ ರೂ 750/- ರಂತೆ ಮೆಡಿಸಿನ್ ಕಿಟ್ಗಳನ್ನು ಒದಗಿಸಲಾಗುತ್ತಿದೆ.

- **ಪೂರಕ ಪೌಷ್ಠಿಕ ಆಹಾರ: ಲೆಕ್ಕಶೀರ್ಷಿಕೆ:2235-00-101-0-61 : ಕೇಂದ್ರದ ಪಾಲು:ರಾಜ್ಯದ ಪಾಲು-50:50:-**

ಪೂರಕ ಪೌಷ್ಠಿಕ ಆಹಾರಕ್ಕಾಗಿ ರಾಜ್ಯ ಸರ್ಕಾರವು ವೆಚ್ಚ ಮಾಡುವ ಮೊತ್ತದ ಶೇ.50% ರಷ್ಟನ್ನು ಕೇಂದ ಸರ್ಕಾರವು ಮರುಪಾವತಿಸುತ್ತದೆ. ಫಲಾನುಭವಿಗಳು ಪತಿ ದಿನ ಮನೆಯಲ್ಲಿ ಸೇವಿಸುವ ಆಹಾರಕ್ಕೆ ಪೂರಕವಾಗಿ ಪರಿಷ್ಕೃತ ಮಾರ್ಗಸೂಚಿಯಂತೆ 6 ತಿಂಗಳಿಂದ - 6 ವರ್ಷದ ಮಕ್ಕಳಿಗೆ 500 ಕ್ಯಾಲೊರಿಗಳನ್ನು, 12-15 ಗ್ರಾಂ ಪ್ರೋಟಿನ್, ಗರ್ಭಿಣಿ/ ಬಾಣಂತಿ/ಪ್ರಾಯಪೂರ್ವ ಬಾಲಕಿಯರಿಗೆ 600 ಕ್ಯಾಲೊರಿಗಳನ್ನು ಮತ್ತು 18-20 ಗ್ರಾಂ ಪ್ರೋಟಿನ್ ಅಲ್ಲದೆ ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ 800 ಕ್ಯಾಲೊರಿಗಳನ್ನು ಮತ್ತು 20-25 ಗ್ರಾಂ ಪ್ರೋಟಿನ್ ನೀಡುವ ಉದ್ದೇಶದಿಂದ ಯೋಜನೆಯಡಿ ಪೂರಕ ಪೌಷ್ಠಿಕ ಅಹಾರ ನೀಡಲಾಗುತ್ತಿದೆ. ಯೋಜನೆಯ ಮಾರ್ಗಸೂಚಿಯಂತೆ ವರ್ಷದಲ್ಲಿ 300 ದಿನಗಳಿಗೆ ಪೂರಕ ಪೌಷ್ಠಿಕ ಆಹಾರ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದ ದಿನಾಂಕ: 23-11-2017 ರ ಮಾರ್ಗಸೂಚಿಯಲ್ಲಿ ಸಾಮಾನ್ಯ ಮಕ್ಕಳಿಗೆ ಪ್ರತಿ ದಿನ ರೂ.8.00/- ರಂತೆ, ಗರ್ಭಿಣಿ/ಬಾಣಂತಿ/ಪ್ರಾಯಪೂರ್ವ ಬಾಲಕಿಯರಿಗೆ ಘಟಕ ವೆಚ್ಚ ರೂ.9.50/- ರಂತೆ ಮತ್ತು ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ರೂ.12.00/-ರ ಘಟಕ ವೆಚ್ಚವನ್ನು ಪರಿಷ್ಕರಿಸಲಾಗಿದ್ದು, ಪರಿಷ್ಕೃತ ಘಟಕ ವೆಚ್ಚದಂತೆ ಆಹಾರವನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನ ಹಾಗೂ ತರಬೇತಿ ಕೇಂದ್ರಗಳು ಇಲಾಖೆಯ ಸಹಾಯದೊಂದಿಗೆ ಕಾರ್ಯನಿರತವಾಗಿದ್ದು, ಇದರಲ್ಲಿ 22-32 ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ಇವರುಗಳು ಬಡತನದ ಹಿನ್ನೆಲೆಯಿಂದ ಬಂದವರಾಗಿದ್ದು, ವಿಧವೆಯರು, ವಿಕಲಚೇತನರು, ಪರಿತ್ಯಕ್ತ ಮಹಿಳೆಯರು, ಫಲಾನುಭವಿಗಳ ತಾಯಂದಿರು ಹಾಗೂ ಸ್ತ್ರೀಶಕ್ತಿ ಗುಂಪಿನ ಸದಸ್ಯರು ಆಗಿರುತ್ತಾರೆ. ಈ ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನ ಹಾಗೂ ತರಬೇತಿ ಕೇಂದ್ರಗಳು ತಿನ್ನಲು ಸಿದ್ಧಪಡಿಸಿದ ಆಹಾರ/ಬೇಯಿಸಲು ಸಿದ್ಧವಿರುವ ಆಹಾರ ಪದಾರ್ಥಗಳನ್ನು ವಾರದ 6 ದಿನಗಳು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರತ MSPTC ಮಹಿಳಾ ಪೂರಕ ಪೌಷ್ಠಿಕ ಕೇಂದ್ರಗಳ ಮೂಲಕ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ.

- **ಮಾತೃಪೂರ್ಣ ಯೋಜನೆ (ರಾಜ್ಯ ವಲಯ):-**

ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡುವ "ಮಾತೃಪೂರ್ಣ" ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ಮಹಿಳೆಯರಿಗೆ ಆಹಾರ ಭದ್ರತೆಯನ್ನು ಒದಗಿಸುವ ಜೊತೆಗೆ ಹೆರಿಗೆ ಸಮಯದಲ್ಲಿನ ಗರ್ಭಿಣಿ ಹಾಗೂ ಶಿಶುಗಳ ಮರಣ ಪ್ರಮಾಣ ಮತ್ತು ಕಡಿಮೆ ತೂಕದ ಮಕ್ಕಳ ಜನನ ನಿಯಂತ್ರಣ ಯೋಜನೆಯ ಉದ್ದೇಶವಾಗಿರುತ್ತದೆ.

- **ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮ : ಲೆಕ್ಕ ಶೀರ್ಷಿಕೆ: 2235-02-102-0-05 : ಕೇಂದ್ರದ ಪಾಲು: ರಾಜ್ಯದ ಪಾಲು 60:40:-**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮವು ಐಸಿಡಿಎಸ್ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಹು ಪ್ರಾಮುಖ್ಯತೆ ಹೊಂದಿದ್ದು ಐಸಿಡಿಎಸ್‌ನ ಎಲ್ಲಾ ಹಂತದ ಕರ್ಮಚಾರಿಗಳ ಕಾರ್ಯನಿರ್ವಹಣೆಗೆ ಅವಿಭಾಜ್ಯ ಅಂಗವಾಗಿರುತ್ತದೆ. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನಿಪ್ಸಿಡ್, ದಕ್ಷಿಣ ಪ್ರಾದೇಶಿಕ ಸಂಸ್ಥೆ, ಬೆಂಗಳೂರು ಇಲ್ಲಿ ಹಾಗೂ ಮೇಲ್ವಿಚಾರಕಿಯರಿಗೆ, ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಮಧ್ಯಮಸ್ತರ ತರಬೇತಿ ಕೇಂದ್ರದಲ್ಲಿ ವೃತ್ತಿ/ಪುನಶ್ಚೇತನ ತರಬೇತಿ ನೀಡಲಾಗುತ್ತಿದೆ. ಪ್ರಥಮವಾಗಿ ನೇಮಕಗೊಂಡ ಅಂಗನವಾಡಿ ಕಾರ್ಯಕರ್ತೆಯರಿಗೆ 32 ದಿನಗಳ ವೃತ್ತಿ ತರಬೇತಿಯನ್ನು ರಾಜ್ಯದಲ್ಲಿರುವ 21 ಅಂಗನವಾಡಿ ತರಬೇತಿ ಕೇಂದ್ರಗಳ ಮೂಲಕ ನೀಡಿ ನಂತರ ಪುನಶ್ಚೇತನ ತರಬೇತಿಯನ್ನು 2 ವರ್ಷಕೊಮ್ಮೆ ನೀಡಲಾಗುತ್ತಿದೆ. ಅಂಗನವಾಡಿ ಸಹಾಯಕಿಯರಿಗೆ ಓರಿಯಂಟೇಷನ್ ಹಾಗೂ ಪುನಶ್ಚೇತನ ತರಬೇತಿಯನ್ನು ಸಹ ಈ ತರಬೇತಿ ಕೇಂದ್ರಗಳಲ್ಲಿ ನೀಡಲಾಗುತ್ತಿದೆ. 2013-14ನೇ ಸಾಲಿನಿಂದ ತರಬೇತಿ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಪರಿಷ್ಕೃತ ಮಾರ್ಗಸೂಚಿಯಂತೆ ಆಯೋಜಿಸಿ, ನಡೆಸಲಾಗುತ್ತಿದೆ.

- **ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಮರಣ ಪರಿಹಾರ ನಿಧಿ : ಲೆಕ್ಕ ಶೀರ್ಷಿಕೆ: 2235-02-103-0-99-(100) : ಕೇಂದ್ರದ ಪಾಲು: ರಾಜ್ಯದ ಪಾಲು 0:100:-**

ಅಂಗನವಾಡಿ ಕಾರ್ಯಕರ್ತೆ ಹಾಗು ಸಹಾಯಕಿಯರು ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಗೌರವ ಸೇವೆಯ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು / ಸಹಾಯಕಿಯರು ಸೇವೆಯಲ್ಲಿರುವಾಗ ಮರಣ ಹೊಂದಿದಲ್ಲಿ ಅವರ ಕುಟುಂಬದವರಿಗೆ ಪರಿಹಾರವನ್ನು ಮತ್ತು ತೀವ್ರತರವಾದ ಖಾಯಿಲೆಗಳಿಂದ ನರಳುತ್ತಿದ್ದಲ್ಲಿ ಅವರ ಕುಟುಂಬದ ಕಾನೂನುಬದ್ಧ ವಾರಸುದಾರರಿಗೆ ರೂ.50,000/- ನೀಡಲಾಗುತ್ತಿದೆ. ಕನಿಷ್ಠ ಒಂದು ವರ್ಷ ಸೇವೆ ಪೂರೈಸಿರುವ ಕಾರ್ಯಕರ್ತೆಯರು/ಸಹಾಯಕಿಯರು ಈ ಆರ್ಥಿಕ ಸಹಾಯಕ್ಕೆ ಅರ್ಹರಿರುತ್ತಾರೆ.

- <u>ಅಂಗನವಾಡಿ ಕಟ್ಟಡಗಳ ನಿರ್ಮಾಣ:-</u>

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಬರುವ ಫಲಾನುಭವಿಗಳಿಗೆ ಯೋಜನೆಯ ಒಳಾಂಗಣ ಹಾಗೂ ಹೊರಾಂಗಣ ಚಟುವಟಿಕೆಗಳನ್ನು ಸಮರ್ಪಕವಾಗಿ ನಡೆಸಲು ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸ್ವಂತ ಕಟ್ಟಡವಿರುವುದು ಅವಶ್ಯವಾಗಿರುತ್ತದೆ. ಅಂಗನವಾಡಿ ಕಟ್ಟಡಗಳನ್ನು ಅನುದಾನ ಹಾಗೂ ನಿವೇಶನ ಲಭ್ಯತೆಗನುಗುಣವಾಗಿ, ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ನಬಾರ್ಡ್‌ದಿಂದ, ವಿಶೇಷ ಅಭಿವೃದ್ಧಿ ಯೋಜನೆ, ನರೇಗಾ ಒಗ್ಗೂಡಿಸುವಿಕೆ, ಇಲಾಖಾ ವಂತಿಗೆ ಹಾಗೂ ಇನ್ನಿತರ ಯೋಜನೆಗಳಡಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

i) ಅಂಗನವಾಡಿ ಕಟ್ಟಡಗಳ ನಿರ್ಮಾಣ (ನಬಾರ್ಡ್ ನೆರವು) : ಲೆಕ್ಕ ಶೀರ್ಷಿಕೆ: 4235-02-102-1-01-436 : ಕೇಂದ್ರದ ಪಾಲು: ರಾಜ್ಯದ ಪಾಲು 0:100 :- ಅಂಗನವಾಡಿ ಕೇಂದ್ರ ನಡೆಸಲು ಕಟ್ಟಡದ ತೀವ್ರ ಅವಶ್ಯಕತೆಯನ್ನು ಮನಗಂಡು ನಬಾರ್ಡ್ ಸಂಸ್ಥೆಯು ಕಟ್ಟಡ ಕಟ್ಟಲು ಸಾಲದ ರೂಪದಲ್ಲಿ ಆರ್ಥಿಕ ನೆರವನ್ನು ನೀಡುತ್ತಿದೆ. ನಬಾರ್ಡ್ ಸಂಸ್ಥೆಯು ಶೇಕಡ 85ರಷ್ಟು ಪಾಲನ್ನು ಕಟ್ಟಡ ನಿರ್ಮಾಣಕ್ಕಾಗಿ ನೀಡುತ್ತದೆ ಹಾಗೂ ಉಳಿದ ಶೇಕಡ 15 ರಷ್ಟನ್ನು ರಾಜ್ಯ ಸರ್ಕಾರವು ನೀಡುತ್ತದೆ. ನಬಾರ್ಡ್ ಸಂಸ್ಥೆಯ ಸಾಲವನ್ನು ಸರ್ಕಾರವು 7 ವರ್ಷಗಳ ಒಳಗಾಗಿ ಹಿಂತಿರುಗಿಸಬೇಕಾಗುತ್ತದೆ.

ii) ವಿಶೇಷ ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣ : ಲೆಕ್ಕ ಶೀರ್ಷಿಕೆ: 4235-02-102-1-02-386 : ಕೇಂದ್ರದ ಪಾಲು: ರಾಜ್ಯದ ಪಾಲು 0:100 :- ಪ್ರಾದೇಶಿಕ ಅಸಮಾನತೆಯ ಬಗ್ಗೆ ನಂಜುಂಡಪ್ಪ ವರದಿಯಲ್ಲಿ 114 ಹಿಂದುಳಿದ/ಅತಿ ಹಿಂದುಳಿದ/ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಲಾಗಿದೆ. ವಿಶೇಷ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಈ ತಾಲ್ಲೂಕುಗಳ/ಜಿಲ್ಲೆಗಳಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ ಆದ್ಯತೆ ನೀಡಲಾಗುತ್ತಿದೆ.

iii) ಅಂಗನವಾಡಿ ಕಟ್ಟಡಗಳ ನಿರ್ವಹಣೆ (ಜಿಲ್ಲಾ ವಲಯ ಕಾರ್ಯಕ್ರಮ) : ಲೆಕ್ಕ ಶೀರ್ಷಿಕೆ: 2211-00-102-0-61 : ಕೇಂದ್ರದ ಪಾಲು: ರಾಜ್ಯದ ಪಾಲು 0:100 :- ಅಂಗನವಾಡಿ ಕಟ್ಟಡಗಳ ಸಣ್ಣ-ಮುಟ್ಟ ದುರಸ್ತಿಗಾಗಿ ಅನುದಾನವನ್ನು ನೇರವಾಗಿ ತಾಲ್ಲೂಕು ಪಂಚಾಯತ್‌ಗಳಿಗೆ ಬಿಡುಗಡೆಗೊಳಿಸಲಾಗುತ್ತಿದೆ. ಪ್ರತಿ ಅಂಗನವಾಡಿ ಕಟ್ಟಡಕ್ಕೆ ರೂ.3,000/-ಗಳನ್ನು ದುರಸ್ತಿಗೆ ವೆಚ್ಚ ಭರಿಸಬಹುದಾಗಿದೆ.

iv) ಅಂಗನವಾಡಿಗಳ ನಿರ್ವಹಣೆ: ರಾಜ್ಯ ವಲಯ : ಲೆಕ್ಕ ಶೀರ್ಷಿಕೆ: 2235-02-102-0-40 : ಕೇಂದ್ರದ ಪಾಲು: ರಾಜ್ಯದ ಪಾಲು 60:40 :- ಪ್ರತಿ ಕಟ್ಟಡಕ್ಕೆ ರೂ.1.00 ಲಕ್ಷಗಳಂತೆ ಅಂಗನವಾಡಿ ಕಟ್ಟಡಗಳ ದುರಸ್ತಿ ಮಾಡಲಾಗುತ್ತಿದೆ.

v) ಅಂಗನವಾಡಿ ಕಟ್ಟಡಗಳ ಉನ್ನತೀಕರಣ(ರಾಜ್ಯ ವಲಯ) : ಲೆಕ್ಕ ಶೀರ್ಷಿಕೆ: 4235-02-102-1-03 : ಕೇಂದ್ರದ ಪಾಲು: ರಾಜ್ಯದ ಪಾಲು 60:40 :- ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವದಲ್ಲಿ ಕ್ರಮವಾಗಿ 60:40 ರ ಅನುಪಾತದಂತೆ ಪ್ರತಿ ಅಂಗನವಾಡಿ ಕಟ್ಟಡಕ್ಕೆ ರೂ.2.00 ಲಕ್ಷಗಳನ್ನು ಅಂಗನವಾಡಿ ಕಟ್ಟಡಗಳ ಉನ್ನತೀಕರಣಕ್ಕಾಗಿ ನೀಡಲಾಗುತ್ತಿದೆ. ಪ್ರತಿ ಶೌಚಾಲಯಕ್ಕೆ ರೂ.12,000/- ಹಾಗೂ ಕುಡಿಯುವ ನೀರಿನ ಸಂಪರ್ಕಕ್ಕೆ ಪ್ರತಿ ಅಂಗನವಾಡಿಗೆ ರೂ.10,000/- ನೀಡಲಾಗುವುದು.

vi) ಅಂಗನವಾಡಿ ಕಟ್ಟಡಗಳ ನಿರ್ಮಾಣ (ನರೇಗಾ) : ಲೆಕ್ಕ ಶೀರ್ಷಿಕೆ: 4235-02-102-0-06-059 : ಕೇಂದ್ರದ ಪಾಲು: ರಾಜ್ಯದ ಪಾಲು 0:100 :- ಪ್ರತಿ ಕಟ್ಟಡಕ್ಕೆ ರೂ.10.00 ಲಕ್ಷ ಘಟಕ ವೆಚ್ಚದಲ್ಲಿ ಅನುದಾನ ಒದಗಿಸಲಾಗುತ್ತಿದೆ. (ನರೇಗಾದ ಪಾಲು ರೂ.5.00 ಲಕ್ಷ, ರಾಜ್ಯದ ಪಾಲು ರೂ.4.00 ಲಕ್ಷ ಹಾಗೂ ಕೇಂದ್ರದ ಪಾಲು ರೂ.1.00 ಲಕ್ಷ)

- **<u>ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ :</u> ಲೆಕ್ಕ ಶೀರ್ಷಿಕೆ: 2235-02-102-0-30-059 : ಕೇಂದ್ರದ ಪಾಲು: ರಾಜ್ಯದ ಪಾಲು 0:100 :-**

2007-08ನೇ ಸಾಲಿನಲ್ಲಿ ಈ ಹೊಸ ಯೋಜನೆಯನ್ನು ಕರ್ನಾಟಕ ಸರ್ಕಾರದಿಂದ ಪ್ರಾರಂಭಿಸಲಾಗಿದ್ದು, ತೀವ್ರ ನ್ಯೂನಪೋಷಣೆಗೊಳಗಾದ ಮಕ್ಕಳ ಪೌಷ್ಟಿಕ ಮಟ್ಟ ಸುಧಾರಿಸಿ ಸಾಮಾನ್ಯ ದರ್ಜೆಗೆ ತರಲು ವೈದ್ಯಾಧಿಕಾರಿಗಳ

ಸೂಚನೆಯಂತೆ ಔಷದೋಪಚಾರ ಹಾಗೂ ಚಿಕಿತ್ಸಾ ಆಹಾರಕ್ಕಾಗಿ ಪ್ರತಿ ಮಗುವಿಗೆ ವರ್ಷಕ್ಕೆ ರೂ.2000/-ನ್ನು ನೀಡಲಾಗುತ್ತಿದೆ.

- **ಪ್ರಾಯಪೂರ್ವ ಬಾಲಕಿಯರ ಯೋಜನೆ –(SAG) : ಲೆಕ್ಕ ಶೀರ್ಷಿಕೆ: 2235–02–103–0–046 : ಕೇಂದ್ರದ ಪಾಲು: ರಾಜ್ಯದ ಪಾಲು 60:40 :-**

ಜೀವನದಲ್ಲಿ ಕಿಶೋರಾವಸ್ಥೆಯು ಮಾನಸಿಕ, ಬೌದ್ಧಿಕ, ಭಾವನಾತ್ಮಕ ಬೆಳವಣಿಗೆಗೆ ಸಂಬಂಧಿಸಿದಂತೆ ಒಂದು ಪ್ರಮುಖ ಅವಧಿಯಾಗಿದೆ. ಹೆಚ್ಚಿನ ರೀತಿಯಲ್ಲಿ ಸೌಲಭ್ಯ ಒದಗಿಸುವುದಕ್ಕಾಗಿ ಹೊಸ ಚಿಂತನೆಯ ರೂಪದಲ್ಲಿ ಕಿಶೋರಿ ಶಕ್ತಿ ಯೋಜನೆ (KSY) ಹಾಗೂ ಸಬಲ ಯೋಜನೆಗಳನ್ನು ವಿಲೀನಗೊಳಿಸಿ ಕೇಂದ್ರ ಸರ್ಕಾರವು 2018–19ನೇ ಸಾಲಿಗೆ ಸದರಿ ಯೋಜನೆಯನ್ನು ಪ್ರಾಯಪೂರ್ವ ಬಾಲಕಿಯರ ಯೋಜನೆಯನ್ನಾಗಿ ಹೆಸರಿಸಿ ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಯಡಿ 11–14 ವರ್ಷದ ಶಾಲೆಯಿಂದ ಹೊರಗುಳಿದ ಪ್ರಾಯಪೂರ್ವ ಬಾಲಕಿಯರನ್ನು ಫಲಾನುಭವಿಗಳೆಂದು ಗುರುತಿಸಲಾಗುತ್ತಿದ್ದು, ಈ ಯೋಜನೆಯಡಿ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ (SNP) ಹಾಗೂ ಪೌಷ್ಠಿಕೇತರ ಅಂಶ ಕಾರ್ಯಕ್ರಮ (Non-Nutrition Components) ಗಳ ಸೇವೆಯನ್ನು ಪ್ರಾಯಪೂರ್ವ ಬಾಲಕಿಯರಿಗೆ ನೀಡಲಾಗುತ್ತಿದೆ.

- **ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ವಂತಿಕೆ ಆಧಾರಿತ ಪಿಂಚಣಿ ಯೋಜನೆ : ಲೆಕ್ಕ ಶೀರ್ಷಿಕೆ: 2235–60–103–0–01 : ಕೇಂದ್ರದ ಪಾಲು: ರಾಜ್ಯದ ಪಾಲು 0:100**

ಈ ಯೋಜನೆಯಡಿ 18–55 ವರ್ಷದ ಅಂ.ಕಾರ್ಯಕರ್ತೆ/ಅಂ. ಸಹಾಯಕಿಯರಿಂದ ಕಮವಾಗಿ ರೂ.150 ಹಾಗೂ ರೂ.84 ಮಾಹೆಯಾನ ವಂತಿಗೆಯಲ್ಲಿ ಪಡೆದು ವಸೂಲಿ ಮಾಡಿ ಅಷ್ಟೇ ಮೊತ್ತದ ವಂತಿಗೆಯನ್ನು ಸರ್ಕಾರ ಭರಿಸುತ್ತದೆ.

- **ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ : ಲೆಕ್ಕ ಶೀರ್ಷಿಕೆ: 2235–02–103–0–61 : ಕೇಂದ್ರದ ಪಾಲು: ರಾಜ್ಯದ ಪಾಲು 60:40 :-**

2010–11ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದ್ದ ಇಂದಿರಾಗಾಂಧಿ ಮಾತೃತ್ವ ಸಹಯೋಗ ಯೋಜನೆ (ಐಜಿಎಮ್‌ಎಸ್‌ವೈ)ಯನ್ನು 2018–19ನೇ ಸಾಲಿನಿಂದ ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ಎಂಬ ಹೆಸರಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಈ ಯೋಜನೆಯು 60:40 ಕೇಂದ್ರ:ರಾಜ್ಯ ಸರ್ಕಾರದ ಧನ ಸಹಾಯ ಯೋಜನೆಯಾಗಿದೆ. 0–6 ತಿಂಗಳವರೆಗೆ ಕೇವಲ ತಾಯಿ ಎದೆ ಹಾಲುಣಿಸುವುದು, ಹೆರಿಗೆಯಾದ ಒಂದು ಗಂಟೆಯೊಳಗೆ ಎದೆ ಹಾಲುಣಿಸುವುದು ಹಾಗೂ ಅತಿ ಸಣ್ಣಮಕ್ಕಳಿಗೆ ಎದೆ ಹಾಲುಣಿಸುವ ಅಭ್ಯಾಸಗಳನ್ನು (ಐವೈಸಿಎಫ್) ಬೆಳಸಿಕೊಳ್ಳುವ ಬಗ್ಗೆ ಮಹಿಳೆಯರನ್ನು ಪ್ರೋತ್ಸಾಹಿಸುವುದು ಹಾಗೂ ಗರ್ಭಿಣಿಯರಿಗೆ ಬಾಣಂತಿಯರಿಗೆ ಆರೋಗ್ಯ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಉತ್ತಮ ವಾತಾವರಣವನ್ನು ಸೃಷ್ಟಿಸಲು ನಗದು ರೂಪದಲ್ಲಿ ಪ್ರೋತ್ಸಾಹಧನ ನೀಡಲಾಗುವುದು.

ಮೊದಲನೆ ಕಂತು ರೂ.1000/–ಗಳನ್ನು, ಗರ್ಭಿಣಿಯಾದ 6 ತಿಂಗಳಲ್ಲಿ, ಎರಡನೇ ಕಂತು ರೂ.2000/– ಗಳನ್ನು ಗರ್ಭಿಣಿಯಾದ 6 ತಿಂಗಳ ನಂತರ ನೀಡಲಾಗುವುದು. ಮೂರನೆಯ ಕಂತು ರೂ.2000/– ಗಳನ್ನು ಮಗು ಮೊದಲನೇ ಹಂತದ ಚುಚ್ಚುಮದ್ದು ಪಡೆದ ನಂತರ ನೀಡಲಾಗುವುದು. ಒಟ್ಟು 3 ಕಂತುಗಳಲ್ಲಿ ರೂ.5000/– ಗಳ ಹೆರಿಗೆ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಖಾತೆಗೆ ಜಮಾ ಮಾಡಲಾಗುವುದು. ಮೇಲ್ಕಂಡ ಫಲಾನುಭವಿಗಳು ಎನ್.ಆರ್.ಹೆಚ್.ಎಮ್. ಅಡಿ ಜನನಿ ಸುರಕ್ಷಾ ಯೋಜನೆಯ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

- **ರಾಷ್ಟ್ರೀಯ ಶಿಶುಪಾಲನಾ ಕೇಂದ್ರ ಯೋಜನೆ : ಲೆಕ್ಕ ಶೀರ್ಷಿಕೆ: 2235–02–102–0–13–101 : ಕೇಂದ್ರದ ಪಾಲು: ರಾಜ್ಯದ ಪಾಲು:ಸ್ವಯಂ ಸೇವಾ ಸಂಸ್ಥೆ – 60:30:10 :-**

ರಾಷ್ಟ್ರೀಯ ಶಿಶು ಪಾಲನಾ ಕೇಂದ್ರ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಸ್ವಯಂ ಸೇವಾ

ಸಂಸ್ಥೆಗಳ ಪಾಲು ಅನುಕ್ರಮವಾಗಿ 60:30:10 ಅನುಪಾತದಂತೆ ಅನುದಾನವನ್ನು ಒದಗಿಸಲಾಗಿರುತ್ತದೆ. ನವೀಕೃತಗೊಂಡ ಈ ಯೋಜನೆಯು 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಪ್ರಾರಂಭಿಕ ಬಾಲ್ಯಾವಸ್ಥೆಯ ಸೇವೆಗಳನ್ನು ನೀಡುವಲ್ಲಿ ಮಹತ್ವಪೂರ್ಣ ಬದಲಾವಣೆಯನ್ನು ತರುವ ಉದ್ದೇಶ ಹೊಂದಿರುತ್ತದೆ. ಉದ್ಯೋಗಸ್ಥ ತಾಯಂದಿರು ತಮ್ಮ ಕೆಲಸದ ಅವಧಿಯಲ್ಲಿ ಮಕ್ಕಳ ಸಮಗ್ರ ಪೋಷಣೆಗಾಗಿ ಶಿಶು ಪಾಲನಾ ಕೇಂದ್ರದಲ್ಲಿ ತಮ್ಮ ಮಕ್ಕಳನ್ನು ಕಳುಹಿಸಲು ಅನುಕೂಲವಾಗುತ್ತದೆ.

ಉದ್ದೇಶಗಳು:

- ಉದ್ಯೋಗಸ್ಥ ತಾಯಂದಿರ 6 ತಿಂಗಳಿಂದ 6 ವರ್ಷದ ಮಕ್ಕಳನ್ನು ದಿನಪೂರ್ತಿ ಸುರಕ್ಷಿತವಾಗಿ ನೋಡಿಕೊಳ್ಳುವುದು.
- ಮಕ್ಕಳ ಪೌಷ್ಠಿಕ ಹಾಗೂ ಆರೋಗ್ಯ ಮಟ್ಟವನ್ನು ಸುಧಾರಿಸುವುದು.
- ಮಕ್ಕಳ ಭೌತಿಕ, ಸಾಮಾಜಿಕ, ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸುವುದು
- ಮಕ್ಕಳನ್ನು ಕಾಳಜಿಯಿಂದ ನೋಡಿಕೊಳ್ಳುವಂತೆ ತಾಯಂದಿರಿಗೆ ಹಾಗೂ ಪೋಷಕರಿಗೆ ಶಿಕ್ಷಣ ನೀಡುವುದು

ಸೇವೆಗಳು:

- ದಿನದ ಆರೈಕೆ, ವಿಶ್ರಾಂತಿ ಸೌಲಭ್ಯ ಒಳಗೊಂಡಿರುತ್ತದೆ.
- 0-3 ವರ್ಷದ ಮಕ್ಕಳಿಗೆ ಪ್ರಾಥಮಿಕ ಉತ್ತೇಜನ ನೀಡುವುದು ಹಾಗೂ 3-6 ವರ್ಷದ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ನೀಡುವುದು.
- ಪೂರಕ ಪೌಷ್ಠಿಕ ಆಹಾರ.
- ಬೆಳವಣಿಗೆ ಪರಿಶೀಲನೆ.
- ಆರೋಗ್ಯ ತಪಾಸಣೆ ಮತ್ತು ಚುಚ್ಚುಮದ್ದು.

- **<u>ರಾಷ್ಟ್ರೀಯ ಪೌಷ್ಟಿಕತೆ ಅಭಿಯಾನ-ಪೋಷಣ್ ಅಭಿಯಾನ :</u> ಲೆಕ್ಕ ಶೀರ್ಷಿಕೆ:2235-02-102-043 : ಕೇಂದ್ರದ ಪಾಲು: ರಾಜ್ಯದ ಪಾಲು - 60:40 :-**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಫಲಾನುಭವಿಗಳ ಗುರಿಯನ್ನಾಧರಿಸಿ ಎಲ್ಲಾ ಪೌಷ್ಠಿಕತೆಯ ಯೋಜನೆಗಳನ್ನು ಒಗ್ಗೂಡಿಸುವ ಯೋಜನೆ ಇದಾಗಿದೆ. ಮುಖ್ಯವಾಗಿ ಮುಂದಿನ 3 ವರ್ಷಗಳಲ್ಲಿ 0-6 ವರ್ಷದ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರ ಪೌಷ್ಠಿಕತೆಯ ಸ್ಥಿತಿಯನ್ನು ನಿರ್ಧಿಷ್ಟ ಅವಧಿಗೆ ಅನುಗುಣವಾಗಿ ಸುಧಾರಿಸುವುದು ಈ ಯೋಜನೆಯ ಮುಖ್ಯವಾದ ಗುರಿಯಾಗಿದೆ. 8ನೇ ಮಾರ್ಚ್ 2018ಕ್ಕೆ ಈ ಯೋಜನೆ ಪ್ರಾರಂಭವಾಗಿದೆ.

ಉದ್ದೇಶಗಳು:

- 0-6 ವರ್ಷದ ಮಕ್ಕಳಲ್ಲಿನ ಕುಂಠಿತ ಬೆಳವಣಿಗೆಯನ್ನು ಕಡಿಮೆಗೊಳಿಸುವುದು (ವರ್ಷಕ್ಕೆ ಶೇಕಡಾ 2 ರಂತೆ).
- 0-6 ವರ್ಷದ ಮಕ್ಕಳಲ್ಲಿನ ಅಪೌಷ್ಠಿಕತೆಯ (ಕಡಿಮೆ ತೂಕದ ಸರಾಸರಿ ಪ್ರಮಾಣ) ಕಡಿಮೆಗೊಳಿಸವುದು (ವರ್ಷಕ್ಕೆ ಶೇಕಡಾ 2 ರಂತೆ).
- 6 ತಿಂಗಳಿಂದ 59 ತಿಂಗಳವರೆಗಿನ ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣ ಕಡಿಮೆಗೊಳಿಸುವುದು.
- 15 ರಿಂದ 49 ವಯಸ್ಸಿನ ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣವನ್ನು ಕಡಿಮೆಗೊಳಿಸುವುದು. (ವರ್ಷಕ್ಕೆ ಶೇಕಡಾ 3 ರಂತೆ).
- ಕಡಿಮೆ ತೂಕದ ಜನನಗಳ ಪ್ರಮಾಣವನ್ನು ಕಡಿಮೆಗೊಳಿಸುವುದು (ವರ್ಷಕ್ಕೆ ಶೇಕಡಾ 2 ರಂತೆ).

- **<u>ಸ್ತ್ರೀಶಕ್ತಿ ಯೋಜನೆ (ರಾಜ್ಯವಲಯ)</u> ಲೆಕ್ಕ ಶೀರ್ಷಿಕೆ: 2235-02-103-0-41 :-** ಸ್ತ್ರೀಶಕ್ತಿ ಯೋಜನೆಯನ್ನು ಅಕ್ಟೋಬರ್-2000 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಮಹಿಳೆಯರನ್ನು ಸ್ತ್ರೀಶಕ್ತಿ ಗುಂಪುಗಳಲ್ಲಿ ಸಂಘಟಿಸುವುದರ

ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಸಶಕ್ತತೆಯನ್ನು ತರುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪ್ರಸ್ತುತ ರಾಜ್ಯದಲ್ಲಿ 1.62 ಲಕ್ಷ ಸ್ತ್ರೀಶಕ್ತಿ ಗುಂಪುಗಳು ರಚನೆಯಾಗಿರುತ್ತವೆ.

- **ಬಾಲಕಿಯರ ವಸತಿನಿಲಯ (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-103-0-99-100:-** ಹಿಂದುಳಿದ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ, ಇಲಾಖಾ ಅನುದಾನಿತ ಸ್ವಯಂಸೇವಾ ಸಂಸ್ಥೆಗಳ ಮೂಲಕ 20 ಜಿಲ್ಲೆಗಳಲ್ಲಿ 39 ವಸತಿ ನಿಲಯಗಳನ್ನು ನಡೆಸಲಾಗುತ್ತದೆ.

- **ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006 (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-103-0-52:-** :- ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಉಂಟಾದಾಗ ನ್ಯಾಯಾಲಯದ ಮುಖಾಂತರ ಮಹಿಳೆಯರಿಗೆ ಆರ್ಥಿಕ ಪರಿಹಾರ, ರಕ್ಷಣಾ ಆದೇಶ, ವಾಸದ ಆದೇಶ, ಮಕ್ಕಳ ವಶ, ತಾತ್ಕಾಲಿಕ ಆಶ್ರಯ, ವೈದ್ಯಕೀಯ ಹಾಗೂ ಕಾನೂನು ನೆರವನ್ನು ಒದಗಿಸಲು ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006ನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- **ಸಾಂತ್ವನ ಯೋಜನೆ (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-103-0-99-100:-** ಸಮಾಜದಲ್ಲಿ ವರದಕ್ಷಿಣೆ, ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯ, ಆರ್ಥಿಕ ಪರಿಹಾರ ಹಾಗೂ ತರಬೇತಿ ಮುಖಾಂತರ ಸ್ವಾವಲಂಬಿಗಳಾಗುವಂತೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರಾಗಿಸಲು ಗುರಿ ಹೊಂದಿದೆ. ಪ್ರಸ್ತುತ 2020-21 ಸಾಲಿನಲ್ಲಿ 193 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅನುದಾನ ನಿಗದಿಪಡಿಸಿರುವುದಿಲ್ಲ. 2020-21ನೇ ಸಾಲಿನಲ್ಲಿ 31.03.2021 ರವರೆಗೆ ಸಾಂತ್ವನ ಯೋಜನೆಯನ್ನು ಮುಂದುವರಿಸಲಾಗಿದೆ. (ಸರ್ಕಾರದ ಪತ್ರ ಸಂ:ಮಮಇ 101 ಮಮಅ 2020 (348886) ದಿನಾಂಕ:25.11.2020) 2020-21ನೇ ಸಾಲಿನಲ್ಲಿ ಅನುದಾನ ನಿಗದಿಪಡಿಸದೆ ಇರುವ ಕಾರಣ ಭಾಗ್ಯಲಕ್ಷ್ಮಿ ಯೋಜನೆಯಡಿ ಅನುದಾನವನ್ನು ಪುನರ್ ವಿನಿಯೋಗ ಮಾಡಿಕೊಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

- **ಹೆಚ್.ಐ.ವಿ./ಏಡ್ಸಿನಿಂದ ಬಾಧಿತರಾದ ಮಹಿಳೆಯರಿಗೆ ಆಶ್ರಯ ಒದಗಿಸುವುದು (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-103-0-99-100:-** ರಾಜ್ಯದಲ್ಲಿ ಹೆಚ್.ಐ.ವಿ./ಏಡ್ಸಿನಿಂದ ಬಾಧಿತರಾದ ಕುಟುಂಬ ಹಾಗೂ ಮಹಿಳೆಯರಿಗೆ ಪೋಷಣೆ ಮತ್ತು ರಕ್ಷಣೆಗಾಗಿ ವಿಭಾಗೀಯ ಮಟ್ಟದಲ್ಲಿ ಆಶ್ರಯ ಕೇಂದ್ರ ಸ್ಥಾಪಿಸಲಾಗಿದೆ.

- **ಸ್ವಾಧಾರಗೃಹ ಯೋಜನೆ (ಕೇಂದ್ರ ಸರ್ಕಾರದ ಯೋಜನೆ) ಲೆಕ್ಕ ಶೀರ್ಷಿಕೆ: 2235-02-103-0-64:** ಸಂಕಷ್ಟದಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ಪ್ರಸ್ತುತ 2020-21ನೇ ಸಾಲಿನಲ್ಲಿ ಈ ಯೋಜನೆಯಲ್ಲಿ 53 ಸ್ವಾಧಾರಗೃಹಗಳು ಕಾರ್ಯನಿರ್ವಹಿಸುತ್ತಿದೆ.

- **ಒನ್ ಸ್ಟಾಪ್ ಸೆಂಟರ್ (ಸಖಿ) (ಕೇಂದ್ರ ಸರ್ಕಾರದ ಯೋಜನೆ) ಲೆಕ್ಕ ಶೀರ್ಷಿಕೆ: 2235-02-102-0-42 :-** ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗು ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲು ಭಾರತ ಸರ್ಕಾರವು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಒನ್ ಸ್ಟಾಪ್ ಸೆಂಟರ್ (ಸಖಿ) ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಒನ್ ಸ್ಟಾಪ್ ಸೆಂಟರ್ (ಸಖಿ) ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ.

- **ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್ ಸಂಖ್ಯೆ 181:-** ಮಹಿಳೆಯರಿಗೆ ಮಾಹಿತಿಯನ್ನು ನೀಡಲು ಹಾಗೂ ದೌರ್ಜನ್ಯ ಹಾಗೂ ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒಂದೇ ಸೂರಿನಡಿ ಒದಗಿಸುವ ನಿಟ್ಟಿನಲ್ಲಿ ಯೂನಿವರ್ಸಲೈಸೇಷನ್ ಆಫ್ ವುಮೆನ್ ಹೆಲ್ಪ್‌ಲೈನ್ ಸಂಖ್ಯೆ 181 ಎಂಬ ಉಚಿತ ದೂರವಾಣಿ ಸೇವೆಯನ್ನು 24*7 ರಾಜ್ಯಾದ್ಯಂತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಭಾಗಿತ್ವದೊಂದಿಗೆ ಜಾರಿಗೊಳಿಸಲಾಗುತ್ತಿದೆ.

- **ಭಾಗ್ಯಲಕ್ಷ್ಮಿ ಯೋಜನೆ (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-102-0-25:-** ಭಾಗ್ಯಲಕ್ಷ್ಮಿ ಯೋಜನೆಯು ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸಬಲೀಕರಣಕ್ಕಾಗಿ ಬಿಪಿಎಲ್ ಕುಟುಂಬದ ಎರಡು ಹೆಣ್ಣು ಮಕ್ಕಳಿಗೆ 2006-07 ರಿಂದ ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ಮೊದಲನೇ ಫಲಾನುಭವಿಗೆ ರೂ.19,300/- ಮತ್ತು ಎರಡನೇ ಫಲಾನುಭವಿಗೆ ರೂ.18,350/-ಗಳನ್ನು ಪಾಲುದಾರು ಹಣಕಾಸು ಸಂಸ್ಥೆಯಾದ ಭಾರತೀಯ ಜೀವ ವಿಮಾ ನಿಗಮದಲ್ಲಿ ಠೇವಣಿ ಹೂಡಲಾಗುತ್ತಿದ್ದು, ಫಲಾನುಭವಿಗೆ 18 ವರ್ಷ ತುಂಬಿದ ನಂತರ ಅಂದಾಜು ರೂ.1,00,000/- ಪರಿಪಕ್ವ ಮೊತ್ತವಾಗಿ ದೊರೆಯುತ್ತದೆ.

  2020-21ನೇ ಸಾಲಿಂದ ಭಾಗ್ಯಲಕ್ಷ್ಮಿ ಯೋಜನೆಯನ್ನು ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯ ಮೂಲಕ ಅನುಷ್ಠಾನಗೊಳಿಸಲು ಸಚಿವ ಸಂಪುಟದ ಅನುಮೋದನೆ ಪಡೆದು ಸರ್ಕಾರದ ಆದೇಶ ಸಂಖ್ಯೆ: ಮಮಇ 87 ಮಮಅ 2020 ಬೆಂಗಳೂರು. ದಿನಾಂಕ: 10-11-2020 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಕ್ಕಾಗಿ 2020-21ನೇ ಸಾಲಿನಲ್ಲಿ ರೂ.100.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ.

  ಭಾಗ್ಯಲಕ್ಷ್ಮಿ ಯೋಜನೆಯ ಹೆಸರು ಹಾಗೆಯೇ ಮುಂದುವರೆಯುತ್ತದೆ ಹಾಗೂ ಇಂದಿನಂತೆಯೇ ಬಿಪಿಎಲ್ ಕುಟುಂಬದ ಇಬ್ಬರು ಹೆಣ್ಣು ಮಕ್ಕಳಿಗೆ ಯೋಜನೆಯಡಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಪ್ರತಿ ಮಗುವಿನ ಹೆಸರಿನಲ್ಲಿ ರೂ.3,000/- ದಂತೆ 15 ವರ್ಷಗಳ ವರೆಗೆ ಒಟ್ಟು ರೂ.45,000/-ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷ ಅವಧಿ ಪೂರ್ಣಗೊಂಡ ನಂತರ ಅಥವಾ 18 ವರ್ಷಗಳ ನಂತರ ವಿವಾಹವಾದಲ್ಲಿ (ಯಾವುದು ಮೊದಲೋ ಅದು) ಪರಿಪಕ್ವ ಮೊತ್ತ ರೂ.1.27 ಲಕ್ಷ ನೀಡಲಾಗುತ್ತದೆ. 10ನೇ ತರಗತಿ ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಖಾತೆಯಲ್ಲಿರುವ ಮೊತ್ತದ ಶೇ.50 ರಷ್ಟು ಭಾಗವನ್ನು ಹಿಂಪಡೆಯಲು ಅವಕಾಶವಿರುತ್ತದೆ.

- **ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-102-0-27:** 6-15 ವರ್ಷದ ವಯೋಮಿತಿಯೊಳಗಿನ ಮಕ್ಕಳಲ್ಲಿ ಅಪ್ರತಿಮ ಶೌರ್ಯವನ್ನು ಪ್ರದರ್ಶಿಸಿ ಇತರರ ಪ್ರಾಣ ರಕ್ಷಣೆ ಮಾಡುವ ಮಕ್ಕಳಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು 2006-07 ರಿಂದ ಜಾರಿಗೆ ತರಲಾಗಿದೆ. ಸದರಿ ಯೋಜನೆಯ ಮಾರ್ಗಸೂಚಿಗಳನ್ನು ಪರಿಷ್ಕರಿಸಿ 2017-18ನೇ ಸಾಲಿನಿಂದ 6-18 ವರ್ಷ ವಯೋಮಿತಿಯೊಳಗಿನ ಬಾಲಕರನ್ನು ಹೊಯ್ಸಳ ಪ್ರಶಸ್ತಿಗೆ ಮತ್ತು ಬಾಲಕಿಯರನ್ನು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಆಯ್ಕೆ ಮಾಡಲು ಆದೇಶವನ್ನು ಹೊರಡಿಸಲಾಗಿದೆ. ಈ ಪ್ರಶಸ್ತಿಯು ರೂ.10,000/-ಗಳ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಈ ಪ್ರಶಸ್ತಿಗಾಗಿ ಆಯ್ಕೆಯಾದ ಮಕ್ಕಳಿಗೆ ದ್ವಿತೀಯ ಪಿಯುಸಿ ಪೂರೈಸುವವರೆಗೂ ವಿದ್ಯಾಭ್ಯಾಸ ಮುಂದುವರೆಸಲು ಪ್ರತಿ ವರ್ಷ ರೂ.2000/- ಗಳ ಶಿಷ್ಯವೇತನವನ್ನು ನೀಡಲಾಗುವುದು.

- **ಉಜ್ವಲ ಯೋಜನೆ : ಲೆಕ್ಕ ಶೀರ್ಷಿಕೆ: 2235-02-103-0-67: ಕೇಂದ್ರದ ಪಾಲು: ರಾಜ್ಯದ ಪಾಲು:ಸ್ವಯಂ ಸೇವಾ ಸಂಸ್ಥೆ - 60:30:10 :-** ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆಗೆ ಮತ್ತು ವಾಣಿಜ್ಯ ಲೈಂಗಿಕ ಉಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು, ಇವರಿಗೆ ಪುನರ್ವಸತಿ ಕಲ್ಪಿಸಲು ಹಾಗೂ ಕುಟುಂಬದವರೊಂದಿಗೆ ಪುನರ್ವಿಲೀನಗೊಳಿಸಲು ಉಜ್ವಲ ಎಂಬ ಸಮಗ್ರ ಯೋಜನೆಯನ್ನು ರೂಪಿಸಿರುತ್ತದೆ.
  ಟಾರ್ಗೆಟ್ ಗುಂಪು:
  - ವಾಣಿಜ್ಯ ಲೈಂಗಿಕ ದುರುಪಯೋಗಕ್ಕಾಗಿ ತುತ್ತಾಗಬಹುದಾದ ಮಹಿಳೆಯರು ಮತ್ತು ಮಕ್ಕಳು.
  - ವಾಣಿಜ್ಯ ಲೈಂಗಿಕ ದುರುಪಯೋಗಕ್ಕಾಗಿ ಒಳಪಟ್ಟಿರುವ ಮಹಿಳೆಯರು ಮತ್ತು ಮಕ್ಕಳು.

- **ಮಕ್ಕಳ ದಿನಾಚರಣೆ ಕಾರ್ಯಕ್ರಮ (ರಾಜ್ಯವಲಯ) ಲೆಕ್ಕ ಶೀರ್ಷಿಕೆ : 2235-02-102-0-99-100 :** ಅಂತರ ರಾಷ್ಟ್ರೀಯ ಮಕ್ಕಳ ವರ್ಷದ ಅಂಗವಾಗಿ ಭಾರತ ಸರ್ಕಾರವು 1979 ರಲ್ಲಿ ಜಾರಿಗೆ ತಂದ ರಾಷ್ಟ್ರ ಪ್ರಶಸ್ತಿಗೆ ಅನುಗುಣವಾಗಿ ರಾಜ್ಯ ಸರ್ಕಾರವು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ನಿರತವಾಗಿರುವ ಕನಿಷ್ಠ 5 ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿದ 4 ಸಂಸ್ಥೆಗಳನ್ನು ಹಾಗೂ 4 ವ್ಯಕ್ತಿಗಳನ್ನು ಸನ್ಮಾನಿಸಲು ರಾಜ್ಯ ಪ್ರಶಸ್ತಿಯನ್ನು ಜಾರಿಗೆ

ತಂದಿರುತ್ತದೆ. ಈ ಪ್ರಶಸ್ತಿಯನ್ನು ಪ್ರತಿ ವರ್ಷ ನವೆಂಬರ್-14 ರಂದು ಆಚರಿಸಲಾಗುವ ಮಕ್ಕಳ ದಿನಾಚರಣೆಯ ದಿನದಂದು ನೀಡಲಾಗುವುದು.

- **ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ (ಕೇಂದ್ರ ಸರ್ಕಾರದ ಯೋಜನೆ) ಲೆಕ್ಕ ಶೀರ್ಷಿಕೆ : 2235-02-102-0-41:** ಸನ್ಮಾನ್ಯ ಪ್ರಧಾನ ಮಂತ್ರಿಗಳು "ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ" (Beti Bachao Beti Padhao) ಎಂಬ ಹೊಸ ಯೋಜನೆಯನ್ನು 22, ಜನವರಿ 2015 ರಂದು ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದಿರುತ್ತದೆ. ಕುಸಿಯುತ್ತಿರುವ ಮಕ್ಕಳ ಲಿಂಗ ಅನುಪಾತವನ್ನು (Declining CSR) ಉತ್ತಮ ಪಡಿಸುವುದು ಹಾಗೂ ಮಹಿಳೆಯರನ್ನು ಸಬಲೀಕರಣಗೊಳಿಸುವುದು, "ಬೇಟಿ ಬಚಾವೋ ಬೇಟಿ ಪಡಾವೋ" ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.ಈ ಯೋಜನೆಯನ್ನು ಅನುಷ್ಠಾನಗೊಳಿಸಲು, ಮಕ್ಕಳ ಲಿಂಗಾನುಪಾತ ಇಳಿಮುಖವಾಗುತ್ತಿರುವ ಕರ್ನಾಟಕ ರಾಜ್ಯದ ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ , ದಕ್ಷಿಣ ಕನ್ನಡ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳ ಸಹಕಾರದಿಂದ ಅನುಷ್ಠಾನಗೊಳಿಸಲಾಗುತ್ತದೆ.

- **ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ (ರಾಜ್ಯವಲಯ) ಲೆಕ್ಕ ಶೀರ್ಷಿಕೆ : 2235-02-102-0-24-100:** 2006-07ನೇ ಸಾಲಿನಲ್ಲಿ ಜಾರಿಗೆ ಬಂದಿರುತ್ತದೆ. ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆಯನ್ನು ತಡೆಗಟ್ಟಲು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸಲು 17180 ಸದಸ್ಯರಿಗೆ ಉಪಗ್ರಹ ಆಧಾರಿತ ತರಬೇತಿಯನ್ನು ನೀಡಲಾಗಿದೆ. ಅಲ್ಲದೆ ದೂರದರ್ಶನ ರೇಡಿಯೋಗಳಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2020-21ನೇ ಸಾಲಿಗೆ ರೂ.30.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

- **ಬಾಲ್ಯವಿವಾಹ ನಿಷೇಧ ಕಾಯ್ದೆ-2006 (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-001-0-01-051:** ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:11154/2006 ರಲ್ಲಿ ನೀಡಿದ ನಿರ್ದೇಶನದಂತೆ ಕ್ರಿಯಾ ಯೋಜನೆಯನ್ನು ತಯಾರಿಸಲು ಸರ್ಕಾರವು ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಜಸ್ಟೀಸ್ ಶಿವರಾಜ್ ವಿ. ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಿದ್ದು, ಸದರಿ ಕೋರ್ ಕಮಿಟಿಯು ದಿನಾಂಕ:30-06-2011 ರಂದು ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವರದಿಯಲ್ಲಿ ಮಾಡಲಾಗಿರುವ ಶಿಫಾರಸ್ಸುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಮಮಇ 501 ಎಸ್ ಜೆಡಿ 2011 ದಿನಾಂಕ:16-11-2011 ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ 1 ಉಪನಿರ್ದೇಶಕರು, 1 ಸಹಾಯಕ ನಿರ್ದೇಶಕರು, 02 ಪ್ರಥಮ ದರ್ಜೆ ಸಹಾಯಕರು, 02 ಗಣಕಯಂತ್ರ ಸಹಾಯಕರು ಮತ್ತು 1 ಸೇವಕರನ್ನೊಳಗೊಂಡಂತೆ ಉಸ್ತುವಾರಿ ಕೋಶವನ್ನು ಸ್ಥಾಪಿಸಲಾಗಿದೆ.

  ಸದರಿ ವರದಿಯಲ್ಲಿನ ಶಿಫಾರಸ್ಸುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬಾಲ್ಯವಿವಾಹ ನಿಷೇಧ ಉಸ್ತುವಾರಿ ಕೋಶವು 2020-21ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕಾರ್ಯಕ್ರಮಗಳಿಗಾಗಿ 2020-21ನೇ ಸಾಲಿನಲ್ಲಿ ರೂ.175.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದ್ದು, ರೂ.87.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. 01-04-2020 ರಿಂದ 30-11-2020 ರವರೆಗೆ 1877 ಬಾಲ್ಯವಿವಾಹಗಳನ್ನು ತಡೆಗಟ್ಟಲಾಗಿದೆ. 2020-21ನೇ ಸಾಲಿನಲ್ಲಿ ಬಾಲ್ಯವಿವಾಹ ತಡೆಗಟ್ಟುವುದು ಮತ್ತು ಬಾಲ್ಯವಿವಾಹ ನಿಷೇಧದ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸಲು ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳಲ್ಲಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಕ್ರಿಯಾ ಯೋಜನೆಯಲ್ಲಿ ಹಮ್ಮಿಕೊಳ್ಳಲಾಗಿದೆ.

- **ಸ್ವೀಕಾರ ಕೇಂದ್ರ ಹಾಗೂ ರಾಜ್ಯ ಮಹಿಳಾ ನಿಲಯ (ರಾಜ್ಯವಲಯ) ಲೆಕ್ಕ ಶೀರ್ಷಿಕೆ: 2235-02-106-0-06:-** ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956 ನಿಯಮ 1989ರ ಅಡಿ ರಾಜ್ಯದಲ್ಲಿ 04 ಸ್ವೀಕಾರ ಕೇಂದ್ರಗಳು ಮತ್ತು 08 ರಾಜ್ಯ ಮಹಿಳಾ ನಿಲಯಗಳು ಸರ್ಕಾರದಿಂದ ನಡೆಸಲ್ಪಡುತ್ತಿವೆ. ಸ್ವೀಕಾರ ಕೇಂದ್ರಗಳು 18 ವರ್ಷದ ಮೇಲ್ಪಟ್ಟ ಮಹಿಳೆಯರಿಗೆ ತಾತ್ಕಾಲಿಕ ಪುನರ್ವಸತಿ ಕೇಂದ್ರವಾಗಿರುತ್ತದೆ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಧೀರ್ಘಾವಧಿ ಪುನರ್‌ವಸತಿ ಅವಶ್ಯವಿರುವ ಮಹಿಳೆಯರಿಗೆ ಆಶ್ರಯ ಮತ್ತು ಪೋಷಣೆ ಅಗತ್ಯವಿರುವ ಮಹಿಳೆಯರು

ಸ್ವ–ಇಚ್ಛೆಯಿಂದ, ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ, ಯಾವುದೇ ವ್ಯಕ್ತಿಗಳ ಮುಖಾಂತರ ಹಾಗೂ ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956ರ ಅಡಿಯಲ್ಲಿ ನ್ಯಾಯಾಲಯದಿಂದ ಪ್ರಕರಣವನ್ನು ದಾಖಲಿಸಿ ಕಳುಹಿಸಲ್ಪಟ್ಟ ಮಹಿಳೆಯರನ್ನು ದಾಖಲಿಸಿಕೊಳ್ಳಲಾಗುವುದು. ಸಂಸ್ಥೆಯಲ್ಲಿ ನಿವಾಸಿಯರಿಗೆ ಪಾಲನೆ, ಪೋಷಣೆ, ಊಟ, ವಸತಿ, ಬಟ್ಟೆ, ವೈದ್ಯಕೀಯ ಸೌಲಭ್ಯ, ರಕ್ಷಣೆ ಮತ್ತು ತರಬೇತಿಯನ್ನು ನೀಡಲಾಗುವುದು.

- **ನಿರ್ಗತಿಕ ಮಕ್ಕಳ ಕುಟೀರ (ಜಿಲ್ಲಾವಲಯ) ಲೆಕ್ಕ ಶೀರ್ಷಿಕೆ: 2211–00–102–0–26:–** ಅನಾಥ ಮತ್ತು ನಿರ್ಗತಿಕ ಮಕ್ಕಳ ಪಾಲನೆ/ಪೋಷಣೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಡಿ ಕನಿಷ್ಠ 3 ವರ್ಷ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿರುವ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ 25 ಮಕ್ಕಳ ಒಂದು ಘಟಕದಂತೆ ಪಾಲನೆ ಹಾಗೂ ಪೋಷಣೆಗೆ ನಿರ್ಗತಿಕ ಮಕ್ಕಳ ಕುಟೀರವನ್ನು ತೆರೆಯಲು ಅನುಮತಿಯೊಂದಿಗೆ ಧನ ಸಹಾಯವನ್ನು ನೀಡಲಾಗುವುದು. ಈ ಯೋಜನೆಯಡಿ ಪ್ರತಿ ಮಗುವಿನ ನಿರ್ವಹಣೆಗಾಗಿ ಮಾಸಿಕ ರೂ.1000/– ಗಳ ಅನುದಾನವನ್ನು ಕೊಡಲಾಗುತ್ತದೆ.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ವಿಕಲಚೇತನರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

(ಎ) ಶೈಕ್ಷಣಿಕ:-

1) ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಶ್ರವಣದೋಷವುಳ್ಳ ಮಕ್ಕಳಿಗಾಗಿ ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 4 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ಇಲಾಖಾವತಿಯಿಂದ ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

2. ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಅಂಧ ಮಕ್ಕಳಿಗಾಗಿ ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

3. 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳು:

(ಅ) 1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ.ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:

ಈ ಯೋಜನೆಯಡಿ ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ.1982ರ ರಾಜ್ಯ ಅನುದಾನ ಸಂಹಿತೆಯಡಿ 5 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರಿನಲ್ಲಿ 03 ಮತ್ತು ಮೈಸೂರಿನಲ್ಲಿ 02 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾಕ್ ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ.ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

(ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:

ಈ ಯೋಜನೆಯಡಿ ಬುದ್ದಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 138 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ದಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ.ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

(ಇ) ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆಯಡಿ 8 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು ನಡೆಯುತ್ತಿದ್ದು, ಸದರಿ ಶಾಲೆ ಹಾಗೂ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

4. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ:

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ.2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ.ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ

ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

ಬ್ರೈಲ್ ಮುದ್ರಣಾಲಯ:

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

8. **ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:**

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

9. **ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:** ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ.10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

(ಬಿ) ಉದ್ಯೋಗ ಮತ್ತು ತರಬೇತಿ:

2. **ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:**

ಬೆಂಗಳೂರಿನ ಕೆಂಗೇರಿಯಲ್ಲಿ ವಿಕಲಚೇತನ ಮಹಿಳೆ ಮತ್ತು ವಿಕಲಚೇತನ ಪುರುಷರಿಗಾಗಿ ಅಂಗವಿಕಲ ಉದ್ಯೋಗಸ್ಥ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗಾಗಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ವಸತಿ ನಿಲಯವನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸಲಾಗುತ್ತಿದೆ.ಪ್ರಸ್ತುತ ಈ ಎರಡೂ ವಸತಿ ನಿಲಯಗಳು ಬೆಂಗಳೂರಿನ ಕೆಂಗೇರಿಯಲ್ಲಿ ನಡೆಯುತ್ತಿವೆ. ಪ್ರತಿ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.

3. **ಆಧಾರ ಯೋಜನೆ :**

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಸಾಲ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತಿದೆ.ಈ ಯೋಜನೆಯಡಿ ರೂ.1.00 ಲಕ್ಷ ರೂ.ಗಳ ಸಹಾಯಧನವನ್ನು ನೀಡಲು ಅವಕಾಶವಿದ್ದು, ಇದರಲ್ಲಿ ಶೇ.50ರಷ್ಟು ಬಡ್ಡಿ ಸಹಿತವಾಗಿ ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲಾಗುವುದು.

4. ಗ್ರಾಮೀಣ ಪುನರ್ವಸತಿ ಯೋಜನೆ:

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಮಮಇ/241/ಪಿಹೆಚ್‌ಪಿ/2019, ದಿನಾಂಕ: 07-02-2020ರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/-ಗಳಿಂದ ರೂ.6000/-ಗಳಿಗೆ ಹಾಗೂ ವಿವಿದ್ದೊದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.6000/-ಗಳಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಮರಣ ಪರಿಹಾರ ನಿಧಿ ಯೋಜನೆ:ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ನಿಧನ ಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲು ಅವಕಾಶವಿರುತ್ತದೆ.

5. ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 25 ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳು (ಬೆಂಗಳೂರು ನಗರ ಜಿಲ್ಲೆಯಲ್ಲಿ 4 ವಸತಿ ನಿಲಯಗಳು) ನಡೆಯುತ್ತಿವೆ. ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಹಾಗೂ ತರಬೇತಿದಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸದರಿ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/-ಗಳನ್ನು ಪಾವತಿಸಬೇಕಾಗಿರುತ್ತದೆ.ರಾಮನಗರ, ದಾವಣಗೆರೆ, ರಾಯಚೂರು, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದ ವಸತಿ ನಿಲಯಗಳನ್ನು ನಡೆಯುತ್ತಿಲ್ಲ.

ಸಿ. ಸಾಮಾಜಿಕ ಭದ್ರತಾ ಯೋಜನೆಗಳು:

1. ಸಮಾಜ ಸೇವಾ ಸಂಕೀರ್ಣ:

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ.ಪ್ರಸ್ತುತ ಸಂಸ್ಥೆಯಲ್ಲಿ 85 ನಿವಾಸಿಗಳು ದಾಖಲಾಗಿರುತ್ತಾರೆ.

2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ

ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ.ಪ್ರಸ್ತುತ ಬೆಂಗಳೂರು ಅನುಪಾಲನಾ ಕೇಂದ್ರದಲ್ಲಿ 100 ಮಂದಿ ಹಾಗೂ ಹುಬ್ಬಳ್ಳಿ ಅನುಪಾಲನ ಕೇಂದ್ರದಲ್ಲಿ 70 ನಿವಾಸಿಗಳು ದಾಖಲಾಗಿರುತ್ತಾರೆ.

3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:

ಮಾನಸಿಕ ಅಸ್ವಸ್ಥರಿಗಾಗಿ ಮಾನಸ ಕೇಂದ್ರಗಳನ್ನು ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ನಡೆಸುತ್ತಿದ್ದು, ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ.

4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ.ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ **5 ವರ್ಷಗಳ** ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ.ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

(ಡಿ) ಪುನರ್ವಸತಿ ಯೋಜನೆಗಳು:

1. ಅಂಗವಿಕಲರಿಗೆ ಸಾಧನ ಸಲಕರಣೆಗಳು :

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡ ಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ

ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ. ಈ ಯೋಜನೆಯಡಿ ರೂ.15,000/-ಗಳ ಮಿತಿಯೊಳಗೆ ವಿಕಲಚೇತನರಿಗೆ ಅವಶ್ಯವಿರುವ ಕ್ಯಾಲಿಪರ್ಸ್, ಕ್ರಚರ್ಸ್, ಶ್ರವಣ ಸಾಧನ, ವೈಟ್ ಕೇನ್, ಬ್ರೈಲ್ ವಾಚ್ ಇನ್ನಿತರ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಅ. **ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :**

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ತೀವ್ರತರೆನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಓಡಾಡಲು ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮಂಜೂರು ಮಾಡಲಾಗುತ್ತದೆ.ಈ ಯೋಜನೆಯಡಿ ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರಬೇಕಾಗಿರುತ್ತದೆ.

2.ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ಪ್ರಸ್ತುತ 16 ಜಿಲ್ಲೆಗಳಲ್ಲಿ ಜಿಲ್ಲಾ ಪುನರ್ವಸತಿ ಕೇಂದ್ರಗಳು ನಡೆಯುತ್ತಿವೆ. (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಕ್ಷಿಣ ಕನ್ನಡ, ಮೈಸೂರು, ಉಡುಪಿ, ಹಾಸನ, ವಿಜಯಪುರ, ರಾಯಚೂರು, ಚಿಕ್ಕಮಗಳೂರು, ಬಳ್ಳಾರಿ, ಹಾವೇರಿ, ಚಾಮರಾಜನಗರ, ಗದಗ)

3. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

4. ಸಾಧನೆ ಮತ್ತು ಪ್ರತಿಭೆ ಯೋಜನೆ:

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

5. ನಿರಾಮಯ ಆರೋಗ್ಯ ವಿಮಾ ಯೋಜನೆ :

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿ ಹಾಗೂ ಮಗುವಿಗೆ ವರ್ಷಕ್ಕೆ ಒಂದು ಬಾರಿ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಭಾರತ ಸರ್ಕಾರದಿಂದ ಗುರುತಿಸಲ್ಪಟ್ಟ ಅಧಿಕೃತ ಸಂಸ್ಥೆಯಾದ ಅಂಗವಿಕಲರ ಪುನಶ್ಚೇತನ ಸಂಸ್ಥೆ (ರಿ) (ಎ.ಪಿ.ಡಿ) ಬೆಂಗಳೂರು ರವರಿಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ. ಈ ಮೊತ್ತದಲ್ಲಿ ರೂ.60,000/-ಗಳವರೆಗೆ ಸರ್ಜರಿ ವೆಚ್ಚ ಉಳಿದ ರೂ.40,000/-ಗಳಲ್ಲಿ ವೈದ್ಯಕೀಯ ಖರ್ಚು ಥೆರಪಿ, ಪ್ರಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ.

7. ಸ್ಪರ್ಧಾ ಚೇತನ:-

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗೆಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

8. ನಿರುದ್ಯೋಗ ಭತ್ಯೆ:- ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

(ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:

1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.ಈ ಕೇಂದ್ರಗಳಲ್ಲಿ ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು.

2) ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:-

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ.ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ(ಗಓಙಕಿಗಇ ಆಖಙಖಂಃಙಖಙಖಿಜ ಖಆ)ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

3).ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್:

ಈ ಯೋಜನೆಯಡಿ ವಿಕಲಚೇತನರಿಗೆ 100 ಕಿ.ಮೀ. ವ್ಯಾಪ್ತಿಯೊಳಗೆ ಸಂಚರಿಸಲು ವಾರ್ಷಿಕ ರೂ.660/- ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ಕೆ.ಎಸ್.ಆರ್.ಟಿ.ಸಿ ಹಾಗೂ ಬಿ.ಎಂ.ಟಿ.ಸಿ ವತಿಯಿಂದ ವಿತರಿಸಲಾಗುತ್ತಿದೆ ಪೂರ್ಣ ಅಂಧರು ಉಚಿತವಾಗಿ ರಾಜ್ಯದಲ್ಲಿ ಸಂಚರಿಸಲು ಅವಕಾಶವಿರುತ್ತದೆ.

ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

ಹಗಲು ಯೋಗಕ್ಷೇಮ ಕೇಂದ್ರಗಳು:

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50-150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

1. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

2. ಹಿರಿಯ ನಾಗರಿಕರ ವೃದ್ಧಾಶ್ರಮ:

ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ಮಂಜೂರು ಮಾಡಲಾಗುತ್ತಿದೆ.

ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 8 ಕಂದಾಯ ಉಪ ವಿಭಾಗಕ್ಕೆ ವೃದ್ಧಾಶ್ರಮ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

3. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

ಕೇಂದ್ರ ಸರ್ಕಾರದ ಅನುದಾನಿತ ಯೋಜನೆಗಳು

1. **ದೀನದಯಾಳ್ ರಿಹ್ಯಾಬಿಲಿಟೇಷನ್ (ಡಿಡಿಆರ್ಎಸ್) ಯೋಜನೆಯಡಿ ವಿಕಲಚೇತನರಿಗೆ ಶೈಕ್ಷಣಿಕ ಹಾಗೂ ವೃತ್ತಿ ತರಬೇತಿ ಯೋಜನೆಗಳು**

ವಿವಿಧ ಬಗೆಯ ವಿಕಲಚೇತನ ಮಕ್ಕಳಿಗೆ ಹಾಗೂ ವ್ಯಕ್ತಿಗಳಿಗೆ ಉಚಿತ ವಿದ್ಯಾಭ್ಯಾಸ, ತರಬೇತಿ, ಪುನರ್ವಸತಿ, ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ವಿದ್ಯಾಭ್ಯಾಸವನ್ನು ಒದಗಿಸಲು ಈ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಮೂಲಕ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

2. **ಸುಗಮ್ಯ ಭಾರತ ಅಭಿಯಾನ (ಐಚಿಅ) ಯೋಜನೆಯಡಿ ವಿಕಲಚೇತನರಿಗೆ ಸಾರ್ವಜನಿಕ ಕಟ್ಟಡಗಳಲ್ಲಿ ಅಡೆತಡೆರಹಿತ ವಾತವರಣ ಕಲ್ಪಿಸುವುದು.**

ಸುಗಮ್ಯ ಭಾರತ ಯೋಜನೆಯಡಿ ವಿಕಲಚೇತನರು ಸಾರ್ವಜನಿಕ ಕಟ್ಟಡ ಹಾಗೂ ಸ್ಥಳಗಳಲ್ಲಿ ಅಡೆತಡೆ ರಹಿತವಾಗಿ ಸುಲಭವಾಗಿ ಓಡಾಡಲು ಅನುವಾಗುವಂತೆ ಇಳಿಜಾರು ದಾರಿ(ರ್‍ಯಾಂಪ್), ಅಂಗವಿಕಲಸ್ನೇಹಿ ಶೌಚಾಲಯ, ಸೂಚನಾ ಫಲಕಗಳು, ಟ್ಯಾಕ್ಟೇಲ್ ಫ್ಲೋರಿಂಗ್, ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತ ಮತ್ತು ಶಬ್ದ ಸಂಕೇತಗಳನ್ನು ನಿರ್ಮಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

3. **ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರ**

- ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರಗಳ ಅನುಷ್ಠಾನದ ಯೋಜನೆಯು 2015-16ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈ ಇಲಾಖೆಗೆ ವರ್ಗಾವಣೆಯಾಗಿರುತ್ತದೆ.
- ಕರ್ನಾಟಕದಲ್ಲಿ ಒಟ್ಟು 38 ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರಗಳು(ಐಆರ್‌ಸಿಎ) ಕೇಂದ್ರಗಳು ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತಿವೆ.
- ಆ ಪೈಕಿ 38 ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ (ಐಆರ್‌ಸಿಎ) ಕೇಂದ್ರಗಳು ಕೇಂದ್ರ ಸರ್ಕಾರದಿಂದ ಅನುದಾನ ಪಡೆಯುತ್ತಿವೆ.
- ವಿವಿಧ ಜಿಲ್ಲೆಗಳಲ್ಲಿ 15 ಬೆಡ್‌ಗಳ ಕೇಂದ್ರಗಳು-34 ಹಾಗೂ 30 ಬೆಡ್‌ಗಳ ಕೇಂದ್ರಗಳು-4 ಒಟ್ಟು 38 ಕೇಂದ್ರಗಳು ನಡೆಯುತ್ತಿವೆ.

ಇಂಟಿಗ್ರೇಟೆಡ್ ಪ್ರೋಗ್ರಾಂ ಫಾರ್ ಓಲ್ಡರ್ ಪರ್ಸನ್ಸ್:

ಕೇಂದ್ರ ಸರ್ಕಾರದ ಯೋಜನೆಯು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಹಿರಿಯ ನಾಗರಿಕರಿಗಾಗಿ ಈ ಕೆಳಕಂಡ ಯೋಜನೆಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಅ. ವೃದ್ಧಾಶ್ರಮಗಳು ಗ 40

ಆ. ಡಿಮೆನ್ಶಿಯಾ ಕೇರ್ ಸೆಂಟರ್ -1 ದಾವಣಗೆರೆ ಜಿಲ್ಲೆ

ಇ. ಮೊಬೈಲ್ ಮೆಡಿಕೇರ್ ಯೂನಿಟ್ -01 ಕೋಲಾರ ಜಿಲ್ಲೆ.

ಈ. ಫಿಜಿಯೋ ಥೆರಪಿ ಕ್ಲಿನಿಕ್ -1 ಕೋಲಾರ ಜಿಲ್ಲೆ.

ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ

ಮಕ್ಕಳ ರಕ್ಷಣಾ ನಿರ್ದೇಶನಾಲಯದ ಮೂಲಕ ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಬಾಲ ನ್ಯಾಯ ಕಾರ್ಯಕ್ರಮ – ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗಾಗಿ ಬಾಲಮಂದಿರಗಳು (ಮಕ್ಕಳ ಪಾಲನಾ ಸಂಸ್ಥೆ) ಹಾಗೂ ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳಿಗಾಗಿ (ವೀಕ್ಷಣಾಲಯಗಳು) ಮಕ್ಕಳ ಪಾಲನಾ ಸಂಸ್ಥೆಗಳು.
2. ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿ ತೆರೆದ ತಂಗುದಾಣಗಳು.
3. ದತ್ತು ಕಾರ್ಯಕ್ರಮ:
4. ಪ್ರಾಯೋಜಕತ್ವ ಕಾರ್ಯಕ್ರಮ.
5. ವಿಶೇಷ ಪಾಲನಾ ಯೋಜನೆ:

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳು ಮತ್ತು ವಿವರಗಳು.

1. ಉದ್ಯೋಗಿನಿ ಯೋಜನೆ:

ಈ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳ ಬಯಸುವ 18–55 ವರ್ಷ ವಯೋಮಿತಿಯೊಳಗಿನ ಎಲ್ಲಾ ಮಹಿಳೆಯರಿಗೆ ಬ್ಯಾಂಕುಗಳಿಂದ ಸಾಲ ಮತ್ತು ನಿಗಮದಿಂದ ಸಹಾಯಧನ (ಪ.ಜಾತಿ/ಪ.ಪಂಗಡದವರಿಗೆ ಸಾಲದ ಮೊತ್ತದ ಶೇ.50 ರಷ್ಟು, ಇತರೆ ವರ್ಗದವರಿಗೆ ಶೇ.30 ರಷ್ಟು) ಒದಗಿಸುವುದು.

2. ಕಿರುಸಾಲ ಯೋಜನೆ:

ಈ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀಶಕ್ತಿ ಸ್ವ ಸಹಾಯ ಸಂಘಗಳು ಆರ್ಥಿಕವಾಗಿ ಸಬಲರಾಗಲು ಪ್ರತಿ ಸ್ತ್ರೀಶಕ್ತಿ ಸ್ವ ಸಹಾಯ ಸಂಘಕ್ಕೆ ನಿಗಮದ ವತಿಯಿಂದ ಬಡ್ಡಿರಹಿತ ಸಾಲ (ಪ.ಜಾತಿ/ಪಂಗಡ ಸಂಘಗಳಿಗೆ ರೂ.3.00 ಲಕ್ಷಗಳವರೆಗೆ ಮತ್ತು ಇತರೆ ವರ್ಗದ ಸಂಘಗಳಿಗೆ ರೂ.2.00 ಲಕ್ಷಗಳವರೆಗೆ ಸಾಲ) ಒದಗಿಸುವುದು.

3. ಚೇತನಾ ಯೋಜನೆ:

ಈ ಯೋಜನೆಯಡಿ ದಮನಿತ (ಲೈಂಗಿಕ ಕಾರ್ಯಕರ್ತೆಯರು) ಮಹಿಳೆಯರಿಗೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ನಿಗಮದಿಂದ ಎಲ್ಲ ವರ್ಗದ ದಮನಿತ ವರ್ಗದವರಿಗೆ ರೂ.50,000/–ಗಳ (ರೂ.25,000/– ಬಡ್ಡಿರಹಿತ ಸಾಲ ಹಾಗೂ ರೂ.25,000/–ಗಳ ಸಹಾಯಧನ) ಗಳ ಆರ್ಥಿಕ ಸೌಲಭ್ಯ ನೀಡಲಾಗುವುದು.

4. ಧನಶ್ರೀ ಯೋಜನೆ:

ಈ ಯೋಜನೆಯಡಿ ಹೆಚ್.ಐ.ವಿ. ಸೋಂಕಿತ ಹಾಗೂ ಬಾಧಿತ ಮಹಿಳೆಯರಿಗೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ನಿಗಮದಿಂದ ರೂ.50,000/–ಗಳ (ರೂ.25,000/– ಬಡ್ಡಿರಹಿತ ಸಾಲ ಹಾಗೂ ರೂ.25,000/–ಗಳ ಸಹಾಯಧನ) ಆರ್ಥಿಕ ಸೌಲಭ್ಯ ನೀಡಲಾಗುವುದು.

5. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:

ಈ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರು (ಟ್ರಾನ್ಸ್ ಜೆಂಡರ್ಸ್) ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ನಿಗಮದಿಂದ ರೂ.50,000/–ಗಳ (ರೂ.25,000/– ಬಡ್ಡಿರಹಿತ ಸಾಲ ಹಾಗೂ ರೂ.25,000/–ಗಳ ಸಹಾಯಧನ) ಆರ್ಥಿಕ ಸೌಲಭ್ಯ ನೀಡಲಾಗುವುದು.

6. ಮಹಿಳಾ ತರಬೇತಿ ಯೋಜನೆ:

ಈ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ವಿಧವೆಯರಿಗೆ, ನಿರ್ಗತಿಕ ಹಾಗೂ ವಿಕಲಚೇತರನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು.

7. ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ ಮೂಲಕ)

ಮಹಿಳಾ ಉದ್ದಿಮೆದಾರರು ಸಣ್ಣ ಮತ್ತು ಮದ್ಯಮ ಉದ್ದಿಮೆಗಳನ್ನು ಸ್ಥಾಪಿಸಿಲು ರೂ.50.00 ಲಕ್ಷಗಳಿಂದ ರೂ.200.00 ಲಕ್ಷಗಳವರೆಗೆ ಸಾಲವನ್ನು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಒದಗಿಸಿದಾಗ, ಶೇ.14 ರ ಬಡ್ಡಿಯಲ್ಲಿ ಶೇ.10 ರ ಬಡ್ಡಿಯ ಸಹಾಯಧನವನ್ನು ಕ.ರಾ.ಮ.ಅ.ನಿಗಮದ ಮೂಲಕ ಒದಲಾಗಿಸಲಾಗುವುದು.

8. ದೇವದಾಸಿ ಪುನರ್ವಸತಿ ಯೋಜನೆ:

1993-94 ಮತ್ತು 2007-08ನೇ ಸಾಲಿನಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸಮೀಕ್ಷೆ ಮಾಡಿ ಗುರುತಿಸಲಾದ ಮಾಜಿ ದೇವದಾಸಿಯರಿಗೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ನಿಗಮದಿಂದ ರೂ.50,000/-ಗಳ (ರೂ.25,000/- ಬಡ್ಡಿರಹಿತ ಸಾಲ ಹಾಗೂ ರೂ.25,000/-ಗಳ ಸಹಾಯಧನ) ಆರ್ಥಿಕ ಸೌಲಭ್ಯವನ್ನು 6 ದಿನಗಳ ಇ.ಡಿ.ಪಿ. ತರಬೇತಿಯೊಂದಿಗೆ ಒದಲಾಗಿಸಲಾಗುವುದು.

9. ಮಾಜಿ ದೇವದಾಸಿಯರಿಗೆ ಮಾಸಾಶನ ಯೋಜನೆ:

ಮಾಜಿ ದೇವದಾಸಿಯರು ಕನಿಷ್ಟ ಜೀವನ ನಿರ್ವಹಣೆ ನಡೆಸಲು ಅನುಕೂಲವಾಗುವಂತೆ ಸಾಮಾಜಿಕ ಭದ್ರತೆಗಾಗಿ 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿಯರಿಗೆ ಪ್ರತಿ ಮಾಹೆಯಾನ ರೂ.1500/- ಮಾಸಾಶನವನ್ನು ನೇರವಾಗಿ ನಿಗಮದಿಂದ ಒದಗಿಸಲಾಗುತ್ತಿದೆ.

****

ಅನುಬಂಧ-2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಗಳಲ್ಲಿ ಫಲಾನುಭವಿಗಳಾಗಿ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳ/ಮಾನದಂಡಗಳ ವಿವರಗಳು

ಕ್ರ ಸಂ.	ಯೋಜನೆ/ಕಾರ್ಯಕ್ರಮಗಳ ವಿವರ	ಅರ್ಹತೆಗಳು
1.	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಸಮವಸ್ತ್ರ ಯೋಜನೆ	ಅಂಗನವಾಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ವಾರ್ಷಿಕ 2 ಸಮವಸ್ತ್ರಗಳನ್ನು ನೀಡಲಾಗುತ್ತಿದೆ.
2.	ಪೂರಕ ಪೌಷ್ಠಿಕ ಆಹಾರ:	ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. ಅಂಗನವಾಡಿ ಕೇಂದ್ರಕ್ಕೆ 06 ತಿಂಗಳಿಂದ 06 ವರ್ಷದ ಮಕ್ಕಳು/ ಗರ್ಭಿಣಿಯರು/ಬಾಣಂತಿಯರು, 11 ರಿಂದ 14 ವರ್ಷದ ಶಾಲೆಯಿಂದ ಹೊರಗುಳಿದ ಕಿಶೋರಿಯರು ದಾಖಲಾಗಬಹುದಾಗಿರುತ್ತದೆ. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರೂ ಸಹಾ ಫಲಾನುಭವಿಗಳಾಗಿರುತ್ತಾರೆ.
3.	ಮಾತೃಪೂರ್ಣ ಯೋಜನೆ:	ಅಂಗನವಾಡಿ ಕೇಂದ್ರಕ್ಕೆ ದಾಖಲಾದ ಗರ್ಭಿಣಿಯರು/ಬಾಣಂತಿಯರು ಮಾತೃಪೂರ್ಣ ಯೋಜನೆ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ.
4.	ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಮರಣ ಪರಿಹಾರ ನಿಧಿ	ಅಂಗನವಾಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿ ಸೇವೆಯಲ್ಲಿದ್ದಾಗ ಮರಣ ಹೊಂದಿದ್ದಲ್ಲಿ ರೂ.50000/- ಮರಣ ಪರಿಹಾರ ನೀಡಲಾಗುತ್ತಿದೆ.
5.	ಅಂಗನವಾಡಿ ಕಟ್ಟಡಗಳ ನಿರ್ಮಾಣ	ನಿವೇಶನ ಮತ್ತು ಅನುದಾನ ಲಭ್ಯತೆಗನುಗುಣವಾಗಿ ವಿವಿಧ ಯೋಜನೆಗಳಡಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.
6.	ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ	ಅಂಗನವಾಡಿ ಕೇಂದ್ರದಲ್ಲಿ ದಾಖಲಾದ 06 ತಿಂಗಳಿಂದ 06 ವರ್ಷದ ಮಕ್ಕಳ ಆರೋಗ್ಯ ತಪಾಸಣೆಯಲ್ಲಿ ತೀವ್ರ ಅಪೌಷ್ಠಿಕ ಮಕ್ಕಳೆಂದು ಗುರುತಿಸಿದ ಮಕ್ಕಳಿಗೆ ವರ್ಷದಲ್ಲಿ ಗರಿಷ್ಠ ರೂ.2000/- ಮೀರದಂತೆ (ಪ್ರತಿ ಮಗುವಿಗೆ) ಖರ್ಚು ಭರಿಸಲಾಗುತ್ತಿದೆ.
7.	ಪ್ರಾಯಪೂರ್ವ ಬಾಲಕಿಯರ ಯೋಜನೆ –(SAG)	ಅಂಗನವಾಡಿ ಕೇಂದ್ರದಲ್ಲಿ ನೋಂದಣಿಯಾದ ಶಾಲೆಯಿಂದ ಹೊರಗುಳಿದ 11 ರಿಂದ 14 ವರ್ಷದ ಬಾಲಕಿಯರು ಪೌಷ್ಠಿಕ ಮತ್ತು ಪೌಷ್ಠಿಕೇತರ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
8.	ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ	ಈ ಯೋಜನೆಯಡಿ ಅರ್ಜಿಯನ್ನು ಸಲ್ಲಿಸಿದ ಮೊದಲ ಮಗುವಿಗೆ ಗರ್ಭಿಣಿ / ಬಾಣಂತಿಯರು ಮೂರು ಕಂತುಗಳಲ್ಲಿ ರೂ.5000/- ಪಡೆಯಲು ಅರ್ಹರಿರುತ್ತಾರೆ. ಫಲಾನುಭವಿಯ ಮತ್ತು ಗಂಡನ ಆಧಾರ್ ಸಂಖ್ಯೆ ಕಡ್ಡಾಯವಾಗಿರುತ್ತದೆ. ಸರ್ಕಾರಿ/ ಅರೆಸರ್ಕಾರಿ ನೌಕರರು ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಿರುವುದಿಲ್ಲ. ಮೊದಲ ಕಂತು ಪಡೆಯಲು ಗರ್ಭಿಣಿ ಎಂದು ತಿಳಿದು ಬಂದ ತಕ್ಷಣ ಅಂಗನವಾಡಿ ಕೇಂದ್ರದಲ್ಲಿ ನೋಂದಣಿಯಾಗಿರಬೇಕು. ಎರಡನೇ ಕಂತು ಪಡೆಯಲು ಕನಿಷ್ಠ 01 ಎಎನ್‌ಸಿಯನ್ನು ಗರ್ಭಿಣಿ ಮಹಿಳೆ ಮಾಡಿಸಿರಬೇಕು. ಮೂರನೇ ಕಂತನ್ನು ಪಡೆಯಲು ಮಗು ಜನಿಸಿ ಮೊದಲ ಸುತ್ತಿನ ಚುಚ್ಚುಮದ್ದು ಹಾಕಿಸಿರಬೇಕು.
9.	**ಸ್ತ್ರೀಶಕ್ತಿ ಯೋಜನೆ**	
ಅ	ಸುತ್ತುನಿಧಿ: ಮೊತ್ತ ರೂ.5000/-	• ಗುಂಪು ರಚನೆಯಾಗಿ ಕನಿಷ್ಠ 6 ತಿಂಗಳಾಗಿರಬೇಕು • ಗುಂಪಿನಲ್ಲಿ ಕನಿಷ್ಠ 15 ರಿಂದ 20 ಸದಸ್ಯರಿರಬೇಕು • ಪ್ರತಿ ಸದಸ್ಯರು ಉಳಿತಾಯ ಪ್ರಾರಂಭಿಸಿರಬೇಕು. • ಪ್ರತಿವಾರ ಸದಸ್ಯರು ಸಭೆ ನಡೆಸಬೇಕು. • ಗುಂಪಿನ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರ ಬೇಕು. • ಗುಂಪಿನಲ್ಲಿ ನಿಗದಿಪಡಿಸಿದ ದಾಖಲಾತಿಗಳನ್ನು ನಿರ್ವಹಿಸುತ್ತಿರ ಬೇಕು. • ಗುಂಪಿನ ಆಂತರಿಕ ಸಾಲ ಹಾಗೂ ಸಾಲ ಮರುಪಾವತಿ ಉತ್ತಮವಾಗಿರಬೇಕು.

ಆ	ಹೆಚ್ಚುವರಿ ಸುತ್ತುನಿಧಿ ರೂ.5000/- ರಿಂದ ರೂ.25000/-	• ಗುಂಪಿನಲ್ಲಿ 15-20 ಸದಸ್ಯರಿರಬೇಕು • ಶೇ 50%ಕ್ಕಿಂತ ಹೆಚ್ಚು ಸದಸ್ಯರು ಬಡತನ ರೇಖೆಗಿಂತ ಕೆಳಗಿರಬೇಕು • ಯೋಜನೆಯ ಪ್ರಾರಂಭದಿಂದ ಸತತವಾಗಿ ಕನಿಷ್ಠ 10 ವರ್ಷ ಕಾರ್ಯನಿರತವಾಗಿರಬೇಕು. ಸಾಕ್ಷರರಾಗಿರಬೇಕು. • ಆಂತರಿಕ ಸಾಲ ಹಾಗೂ ಬ್ಯಾಂಕ ಸಾಲ ಪಡೆದಿರಬೇಕು. • ಸಾಲ ಮರುಪಾವತಿ ಉತ್ತಮವಾಗಿರಬೇಕು • ದಾಖಲಾತಿಗಳನ್ನು ಗುಂಪಿನ ಸದಸ್ಯರು ನಿರ್ವಹಿಸುತ್ತಿರಬೇಕು • ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಸೌಲಭ್ಯ ಪಡೆದಿರಬೇಕು • ಮಾರುಕಟ್ಟೆ ಚಟುವಟಿಕೆಗಳಲ್ಲಿ ವಿಶೇಷವಾಗಿ ತೊಡಗಿರಬೇಕು • ಗೊಂಚಲು ಗುಂಪಿನ ಸದಸ್ಯರಾಗಿರಬೇಕು • ಪ್ರತಿ ವರ್ಷ ಗ್ರೇಡಿಂಗ ಮಾಡಬೇಕು • ಗುಂಪುಗಳು ಸಾಮಾಜಿಕ ಸುಧಾರಣೆ ಹಾಗೂ ಸಾಕ್ಷರತಾ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರ ಬೇಕು
ಇ	ಆದಾಯೋತ್ಪನ್ನ ಚಟುವಟಿಕೆಗಳಿಗೆ ಪ್ರೋತ್ಸಾಹಧನ ರೂ.5000/-	ಗುಂಪಿನಿಂದ ಸುತ್ತುನಿಧಿ, ಉಳಿತಾಯದಿಂದ ಆಂತರಿಕ ಸಾಲ, ಬ್ಯಾಂಕ್ ಸಾಲಗಳನ್ನು ಬಳಸಿಕೊಂಡು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಗುಂಪುಗಳು.
ಈ	ಅಧಿಕ ಉಳಿತಾಯ ಮಾಡಿದ ಗುಂಪುಗಳಿಗೆ ಪ್ರೋತ್ಸಾಹಧನ ರೂ.15000/- ರೂ.20000/-	• ರೂ, 75000/-ಕ್ಕೂ ಮೇಲ್ಪಟ್ಟು ಉಳಿತಾಯ ಮಾಡಿರುವ ಗುಂಪುಗಳಿಗೆ ರೂ.15,000 ಪ್ರೋತ್ಸಾಹಧನ. • ರೂ, 100000/-ಕ್ಕೂ ಮೇಲ್ಪಟ್ಟು ಉಳಿತಾಯ ಮಾಡಿರುವ ಗುಂಪುಗಳಿಗೆ ರೂ.20,000 ಪ್ರೋತ್ಸಾಹಧನ.
ಉ	ಬ್ಯಾಂಕ್ ಸಾಲದ ಮೇಲಿನ ಬಡ್ಡಿಗೆ 6%ರ ಸಹಾಯಧನ:	ರೂ,25000/- ರಿಂದ ರೂ.1.00 ಲಕ್ಷದವರೆಗೆ ಸಾಲವನ್ನು ಪಡೆಯುವ ಸ್ತ್ರೀಶಕ್ತಿ ಗುಂಪುಗಳಿಗೆ ಸಾಲದ ಮೇಲಿನ ಬಡ್ಡಿ ದರಕ್ಕೆ ಶೇ. 6ರ ಸಹಾಯಧನ.
10.	ಬಾಲಕಿಯರ ವಸತಿನಿಲಯ	ಗ್ರಾಮಾಂತರ ಹಾಗೂ ಹಿಂದುಳಿದ ಪ್ರದೇಶಗಳ ಹೆಣ್ಣು ಮಕ್ಕಳಲ್ಲಿ ಶಿಕ್ಷಣ ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವ ಹೆಣ್ಣುಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಲು ಇಲಾಖೆಯಿಂದ ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ. ಮಾನದಂಡಗಳು 1) ಗ್ರಾಮಾಂತರ ಪ್ರದೇಶಗಳ ಹೆಣ್ಣುಮಕ್ಕಳಿಗೆ ಶಿಕ್ಷಣ ಪ್ರೋತ್ಸಾಹಿಸಲು ಹೆಚ್ಚಿನ ಅಂಕ ಪಡೆದ ಮೆರಿಟ್ ಆಧಾರದ ವಿದ್ಯಾರ್ಥಿನಿಯರನ್ನು ದಾಖಲು ಮಾಡಲಾಗುವುದು. 2) ಬಡತನ ರೇಖೆಗಿಂತ ಕಡಿಮೆ ಆದಾಯ ಹೊಂದಿದ ಹೆಣ್ಣುಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುವುದು.
11.	ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006	ಕೌಟುಂಬಿಕ ಸಂಬಂಧದಿಂದ ದೈಹಿಕ, ಲೈಂಗಿಕ, ಆರ್ಥಿಕ ಭಾವನಾತ್ಮಕ ಹಿಂಸೆಗಳನ್ನು ಅನುಭವಿಸುತ್ತಿರುವ ಮಹಿಳೆಯರನ್ನು ಸಂರಕ್ಷಿಸುವುದು ಮುಖ್ಯ ಉದ್ದೇಶವಾಗಿದೆ.
12.	"ಗೆಳತಿ"-ವಿಶೇಷ ಚಿಕಿತ್ಸಾ ಘಟಕ	ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲು "ಗೆಳತಿ"-ವಿಶೇಷ ಚಿಕಿತ್ಸಾ ಘಟಕಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಬೆಂಗಳೂರು ಮಹಾನಗರದಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಹಾಗೂ ಕೆ.ಸಿ.ಜನರಲ್ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿರುತ್ತದೆ. ಈ ಘಟಕಗಳು ದಿನದ 24 ಗಂಟೆಗಳು ಕಾರ್ಯ ನಿರ್ವಹಿಸುತ್ತಿದೆ. **ಸರ್ಕಾರದ ಆದೇಶ ಸಂ:ಮಮಇ:03:ಮಮಅ:2018 (ಭಾಗ-1) ಬೆಂಗಳೂರು, ದಿ:02-11-2019ರಲ್ಲಿ** ಎಲ್ಲಾ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ "ಗೆಳತಿ"-ವಿಶೇಷ ಚಿಕಿತ್ಸಾ ಘಟಕ ಯೋಜನೆಯನ್ನು ಸ್ಥಗಿತಗೊಳಿಸಲು ಸೂಚಿಸಿದೆ. ಅದರಂತೆ ಕ್ರಮವಹಿಸಲಾಗಿದೆ.
13.	ಕೇಂದ್ರ ಸರ್ಕಾರದ ಸ್ವಾಧಾರಗೃಹ	ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗಾಗಿ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ. ನೊಂದಣಿಯಾಗಿ ಮೂರು ವರ್ಷವಾಗಿರುವ ಆರ್ಥಿಕವಾಗಿ ಸದೃಢವಾದ ಎಲ್ಲಾ ಮೂಲಭೂತ ಅನುಕೂಲತೆಗಳನ್ನು

		ಹೊಂದಿದ, ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಅನುಭವವಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರಗಳಲ್ಲಿ, ಸಲಹಾ ಕೇಂದ್ರ, ತರಬೇತಿ ಕೇಂದ್ರ ಹಾಗೂ ವೈದ್ಯಕೀಯ ಕೇಂದ್ರಗಳನ್ನು ನಡೆಸಲು ಅವಕಾಶವಿದೆ. ರಾಜ್ಯದಲ್ಲಿ ಪ್ರಸ್ತುತ 53 ಸ್ವಾಧಾರಗೃಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
14.	ಕೇಂದ್ರ ಸರ್ಕಾರದ ಒನ್ ಸ್ಟಾಪ್ ಸೆಂಟರ್(ಸಖಿ)	ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲು ಭಾರತ ಸರ್ಕಾರವು ಮೊದಲನೇ ಹಂತದಲ್ಲಿ ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ತಲಾ ಒಂದರಂತೆ ಒನ್ ಸ್ಟಾಪ್ ಸೆಂಟರ್‌ನ್ನು ಸ್ಥಾಪಿಸಲು ಉದ್ದೇಶಿಸಿರುತ್ತದೆ.
15.	ಸಾಂತ್ವನ ಯೋಜನೆ	ವಿವಿಧ ರೀತಿಯ ದೌರ್ಜನ್ಯಕ್ಕೊಳಗಾದ (ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಕ್ಕೊಳಗಾದ) ಮಹಿಳೆಯರಿಗೆ ಸಮಾಲೋಚನೆ ಮತ್ತು ಅಗತ್ಯ ನೆರವನ್ನು ಒದಗಿಸುತ್ತಿದೆ. ಸಾಂತ್ವನ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಮಾನದಂಡಗಳು 1)ಉತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಸ್ವಯಂ ಸೇವಾಸಂಸ್ಥೆಯು ನೊಂದಣಿಯಾಗಿ ಕನಿಷ್ಠ 8 ವರ್ಷಗಳಾಗಿರಬೇಕು 2) ಮಹಿಳಾ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿರಬೇಕು 3) ಸಂಸ್ಥೆಯು ಪ್ರತಿ ವರ್ಷ ನವೀಕರಣಗೊಂಡಿರಬೇಕು 4) ಸಂಸ್ಥೆಯು ಸೂಕ್ತವಾದ ಸ್ಥಳಾವಕಾಶ ಹಾಗೂ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು 5) ಸಂಸ್ಥೆಯು ಆರ್ಥಿಕವಾಗಿ ಸದೃಢವಾಗಿರಬೇಕು 6) ಸಂಸ್ಥೆಯ ಲೆಕ್ಕಪತ್ರ ದಾಖಲೆಗಳು ವಾರ್ಷಿಕ ಪ್ರಗತಿ ವರದಿಗಳನ್ನು ಕ್ರಮಬದ್ಧವಾಗಿರಬೇಕು. ಈ ಎಲ್ಲಾ ಅರ್ಹತೆ ಹೊಂದಿರುವ ಸಂಸ್ಥೆಯವರಿಂದ ಪ್ರಸ್ತಾವನೆ ಪಡೆದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ನಿರ್ದೇಶನಾಲಯಕ್ಕೆ ಸಲ್ಲಿಸಲಾಗುವುದು.
16.	ಭಾಗ್ಯಲಕ್ಷ್ಮಿ ಯೋಜನೆ	ಈ ಯೋಜನೆಯ ಆರ್ಥಿಕ ಸೌಲಭ್ಯವನ್ನು ಹೆಣ್ಣು ಮಗುವಿಗೆ ಅದರ ತಾಯಿ/ತಂದೆ/ಪೋಷಕರ ಮೂಲಕ ಕೆಲವು ನಿಬಂಧನೆಗಳನ್ನು ಪೂರೈಸಿದಲ್ಲಿ ನೀಡಲಾಗುವುದು. ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಲ್ಲಿ 31.3.2006ರ ನಂತರ ಜನಿಸಿದ ಹೆಣ್ಣು ಮಕ್ಕಳು ಈ ಯೋಜನೆಯಡಿ ಫಲಾನುಭವಿಗಳಾಗಿ ನೋಂದಾಯಿಸಿಕೊಳ್ಳಲು ಅರ್ಹರಿರುತ್ತಾರೆ. ➢ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಗುರುತಿಸಿ ಶಾಶ್ವತ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳು ಯೋಜನೆಯಡಿ ನೋಂದಣಿ ಮಾಡಲು ಅರ್ಹರಿರುತ್ತಾರೆ. ➢ ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು. ವಿಶೇಷ ಪ್ರಕರಣಗಳಲ್ಲಿ ಅಂದರೆ ಮೊದಲನೇ ಹೆರಿಗೆಯಲ್ಲಿ ಅವಳಿ ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಹಾಗು ಎರಡನೇ ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಈ ಎಲ್ಲಾ ಹೆಣ್ಣು ಮಕ್ಕಳಿಗೂ ಸೌಲಭ್ಯ ನೀಡುವುದು. ಈ ಸೌಲಭ್ಯವನ್ನು ಎರಡು ಹೆರಿಗೆಗೆ ಮಾತ್ರ ಮಿತಿಗೊಳಿಸುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಕುಟುಂಬದ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು ಎಂಬ ನಿಯಮವನ್ನು ಸಡಿಲಿಸಲಾಗಿದೆ. ➢ ಈ ಯೋಜನೆಯನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು. ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವ ಪ್ರದೇಶಗಳಲ್ಲಿ ವಾಸಿಸುವ ಪೋಷಕರು ತಮ್ಮ ಸಮೀಪದ ಅಂಗನವಾಡಿ ಕೇಂದ್ರದಲ್ಲಿ ನೋಂದಣಿ ಮಾಡುವುದು. ಮಗುವಿನ ಜನನವನ್ನು ಕಡ್ಡಾಯವಾಗಿ ನೋಂದಾಯಿಸಿರಬೇಕು ಹಾಗೂ ಜನನ ಪ್ರಮಾಣ ಪತ್ರವನ್ನು ಹೊಂದಿರಬೇಕು.
17.	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ	6-18 ವರ್ಷದ ವಯೋಮಿತಿಯೊಳಗಿನ ಮಕ್ಕಳಲ್ಲಿ ಅಪ್ರತಿಮ ಶೌರ್ಯವನ್ನು ಪ್ರದರ್ಶಿಸಿ ಇತರರ ಪ್ರಾಣ ರಕ್ಷಣೆ ಮಾಡಿದ ಮಕ್ಕಳಿಗೆ ಪ್ರಶಸ್ತಿ ನೀಡುವ ಯೋಜನೆಯನ್ನು 2006-07ನೇ ಸಾಲಿನಿಂದ ಜಾರಿಗೆ ತರಲಾಗಿದೆ.
18.	ಮಕ್ಕಳ ದಿನಾಚರಣೆ ಕಾರ್ಯಕ್ರಮ	ರಾಜ್ಯ ಸರ್ಕಾರವು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ನಿರತವಾಗಿರುವ ಕನಿಷ್ಠ 5 ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿದ 4 ಸಂಸ್ಥೆಗಳನ್ನು ಹಾಗೂ 4 ವ್ಯಕ್ತಿಗಳನ್ನು ಸನ್ಮಾನಿಸಲು ರಾಜ್ಯ ಪ್ರಶಸ್ತಿಯನ್ನು ಜಾರಿಗೆ ತಂದಿರುತ್ತದೆ.

19.	ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ನಿವಾರಣೆ	ಮಾನವ ಸಾಗಾಣಿಕೆಯನ್ನು ತಡೆಗಟ್ಟಲು ಮತ್ತು ಸಾಗಣಿಕೆಗೆ ಒಳಪಟ್ಟ ಮಹಿಳೆಯರ ಮತ್ತು ಮಕ್ಕಳ ಪುನರ್ವಸತಿ ಮಾಡುವುದು ನಾಗರೀಕ ಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಈ ವ್ಯವಸ್ಥಿತ ಪಿಡುಗನ್ನು ನಿಯಂತ್ರಿಸಲು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸುವುದು ಅಗತ್ಯವೆಂದು ಇಲಾಖೆಯು ಭಾವಿಸಿ ಮಹಿಳೆಯರ ಮತ್ತು ಮಕ್ಕಳ ಸಾಗಣೆ ನಿವಾರಣೆ ಯೋಜನೆಯನ್ನು 2006-07ರಲ್ಲಿ ಜಾರಿಗೆ ತರಲಾಗಿದೆ.
20.	ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ	ಸನ್ಮಾನ್ಯ ಪ್ರಧಾನ ಮಂತ್ರಿಗಳು "ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ" ((**Beti Bachao, Beti Padhao**) ಎಂಬ ಯೋಜನೆಯನ್ನು 22, ಜನವರಿ 2015ರಂದು ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದಿರುತ್ತಾರೆ. ಕುಸಿಯುತ್ತಿರುವ ಮಕ್ಕಳ ಲಿಂಗ ಅನುಪಾತವನ್ನು (Declining CSR) ಉತ್ತಮ ಪಡಿಸುವುದು ಹಾಗೂ ಮಹಿಳೆಯರನ್ನು ಸಬಲೀಕರಣಗೊಳಿಸುವುದು, "ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು, ಮಕ್ಕಳ ಲಿಂಗಾನುಪಾತ ಇಳಿಮುಖವಾಗುತ್ತಿರುವ ಕರ್ನಾಟಕ ರಾಜ್ಯದ ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳ ಸಹಕಾರದಿಂದ ಅನುಷ್ಠಾನಗೊಳಿಸಲಾಗುತ್ತದೆ.
21.	ಉಜ್ವಲ ಯೋಜನೆ :	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆಗೆ ಹಾಗೂ ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು, ಇವರಿಗೆ ಪುರ್ನವಸತಿ ಕಲ್ಪಿಸಲು ಮತ್ತು ಕುಟುಂಬದವರೊಂದಿಗೆ ಪುನರ್ ವಿಲೀನಗೊಳಿಸಲು ಉಜ್ವಲ ಎಂಬ ಸಮಗ್ರ ಯೋಜನೆಯನ್ನು ರೂಪಿಸಿರುತ್ತದೆ.
22.	ಸ್ವೀಕಾರ ಕೇಂದ್ರ ಹಾಗೂ ರಾಜ್ಯ ಮಹಿಳಾ ನಿಲಯ	• ಅನೈತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956 ನಿಯಮ 1989ರ ಅಡಿ ರಾಜ್ಯದಲ್ಲಿ 04 ಸ್ವೀಕಾರ ಕೇಂದ್ರಗಳು ಮತ್ತು 08 ರಾಜ್ಯ ಮಹಿಳಾ ನಿಲಯಗಳು ಸರ್ಕಾರದಿಂದ ನಡೆಸಲ್ಪಡುತ್ತಿವೆ. ಸ್ವೀಕಾರ ಕೇಂದ್ರಗಳು 18 ವರ್ಷದ ಮೇಲ್ಪಟ್ಟ ಮಹಿಳೆಯರಿಗೆ ತಾತ್ಕಾಲಿಕ ಪುನರ್ವಸತಿ ಕೇಂದ್ರವಾಗಿರುತ್ತದೆ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಧೀರ್ಘಾವಧಿ ಪುನರ್‌ವಸತಿ ಅವಶ್ಯವಿರುವ ಮಹಿಳೆಯರಿಗೆ ಆಶ್ರಯ ಮತ್ತು ಪೋಷಣೆ ಅಗತ್ಯವಿರುವ ಮಹಿಳೆಯರು ಸ್ವ-ಇಚ್ಚೆಯಿಂದ, ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ, ಯಾವುದೇ ವ್ಯಕ್ತಿಗಳ ಮುಖಾಂತರ ಹಾಗೂ ಅನ್ಯೆತಿಕ ವ್ಯವಹಾರಗಳ (ತಡೆಗಟ್ಟುವ) ಅಧಿನಿಯಮ 1956ರ ಅಡಿಯಲ್ಲಿ ನ್ಯಾಯಾಲಯದಿಂದ ಪ್ರಕರಣವನ್ನು ದಾಖಲಿಸಿ ಕಳುಹಿಸಲ್ಪಟ್ಟ ಮಹಿಳೆಯರನ್ನು ದಾಖಲಿಸಿಕೊಳ್ಳಲಾಗುವುದು.
23.	ನಿರ್ಗತಿಕ ಮಕ್ಕಳ ಕುಟೀರ	• ಅನಾಥ ಮತ್ತು ನಿರ್ಗತಿಕ ಮಕ್ಕಳ ಪಾಲನೆ/ಪೋಷಣೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಡಿ ಕನಿಷ್ಠ 3 ವರ್ಷ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿರುವ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ 25 ಮಕ್ಕಳ ಒಂದು ಘಟಕದಂತೆ ಪಾಲನೆ ಹಾಗೂ ಪೋಷಣೆಗೆ ನಿರ್ಗತಿಕ ಮಕ್ಕಳ ಕುಟೀರವನ್ನು ತೆರೆಯಲು ಅನುಮತಿಯೊಂದಿಗೆ ಧನ ಸಹಾಯವನ್ನು ನೀಡಲಾಗುವುದು. ಈ ಯೋಜನೆಯಡಿ ಪ್ರತಿ ಮಗುವಿನ ನಿರ್ವಹಣೆಗಾಗಿ ಮಾಸಿಕ ರೂ.1000/-ಗಳ ಅನುದಾನವನ್ನು ನೀಡಲಾಗುತ್ತದೆ.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ವಿಕಲಚೇತನ ಹಾಗೂ ಹಿರಿಯ ನಾಗರಿಕರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾನದಂಡಗಳು

ಕ್ರ ಸಂ.	ಯೋಜನೆಯ ಹೆಸರು ಮತ್ತು ಯೋಜನೆಯ ವಿವರ	ಮಾನದಂಡಗಳು
1	**ಸರ್ಕಾರದಿಂದ ಶ್ರವಣದೋಷವುಳ್ಳ ಮತ್ತು ಅಂಧ ಮಕ್ಕಳಿಗಾಗಿ ವಿಶೇಷ ವಸತಿಯುತ ಶಾಲೆಗಳು :** ಇಲಾಖೆಯಿಂದ ಶ್ರವಣದೋಷವುಳ್ಳ ಮಕ್ಕಳಿಗಾಗಿ ಬೆಂಗಳೂರು ನಗರ, ಮೈಸೂರು, ಗುಲ್ಬರ್ಗ, ಬಳ್ಳಾರಿ, ಬೆಳಗಾಂ ಜಿಲ್ಲೆಗಳಲ್ಲಿ 4 ಕಿವುಡು ಮಕ್ಕಳ ಶಾಲೆಗಳು ಹಾಗೂ ಗುಲ್ಬರ್ಗಾ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಗಳಲ್ಲಿ 4 ಅಂಧ ಮಕ್ಕಳ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತವಾಗಿ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಬೆಳಗಾಂನಲ್ಲಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಹಾಗೂ ದಾವಣಗೆರೆಯಲ್ಲಿ ಅಂಧ ಹೆಣ್ಣು ಮಕ್ಕಳಿಗಾಗಿ ಇರುವ ಪ್ರತ್ಯೇಕ ಶಾಲೆಯಾಗಿರುತ್ತದೆ.	• ಹುಟ್ಟಿದ ದಿನಾಂಕದ ಬಗ್ಗೆ ದಾಖಲಾತಿ. • ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ಅಂಗವಿಕಲರಿಗೆ • ಅಂಗವಿಕಲತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು, • ಬೇರೆ ಶಾಲೆಯಲ್ಲಿ ಓದಿದಲ್ಲಿ ವರ್ಗಾವಣೆ ಪ್ರಮಾಣ ಪತ್ರ • 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಲು ಅವಕಾಶವಿರುತ್ತದೆ.
2	**1982ರ ಅನುದಾನ ಸಂಹಿತೆಯಡಿ ವಿಶೇಷ ಶಾಲೆಗಳು** ವಿವಿಧ ವಿಕಲಚೇತನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಊಟ, ವಸತಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ಸಮಾಜದಲ್ಲಿ ಇತರೆ ಮಕ್ಕಳಂತೆ ವಿದ್ಯಾಭ್ಯಾಸವನ್ನು ಒದಗಿಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆರಾಜ್ಯ ಸರ್ಕಾರವು ಜಿಲ್ಲಾ ಪಂಚಾಯಿತಿ ಮೂಲಕ ಧನ ಸಹಾಯ ನೀಡುವ ಯೋಜನೆ.	ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ. • ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೊಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್ ಸೊಸೈಟಿ ಅಥವಾ ಸಮಾಜಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಯಾಗಿರಬೇಕು. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲರ ಕಾಯ್ದೆ-1995 ಸಕ್ಷನ್ 50, 51 ರಂತೆ ನೊಂದಣಿ ಮಾಡಿಸಿರಬೇಕು. • ಈ ಯೋಜನೆಯನ್ನು ಪಡೆಯಲು ಸ್ವಯಂ ಸೇವಾ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ 2 ವರ್ಷಗಳಾಗಿರಬೇಕು. ಸ್ವಯಂ ಸೇವಾ ಸಂಸ್ಥೆಯು, ಸಾಕಷ್ಟು ಸಿಬ್ಬಂದಿವರ್ಗದೊಂದಿಗೆ ಅಗತ್ಯವಾದ ಮೂಲ ಸೌಲಭ್ಯ ಸಂಪನ್ಮೂಲ ಹಾಗೂ ಅನುಭವ ಮತ್ತು ಆರ್ಥಿಕವಾಗಿ ಸದೃಢವಾಗಿರಬೇಕು. • ಸ್ವಯಂ ಸೇವಾ ಸಂಸ್ಥೆಯು ಶಾಲೆಯನ್ನು ನಡೆಸುವಲ್ಲಿ ಅಥವಾ ಇಂತಹುದೇ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವ ಹೊಂದಿರಬೇಕು.
3	**ಅಂಗವಿಕಲ ಮಕ್ಕಳ ಶಿಶು ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ** ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಹಾಯ ಧನ ನೀಡುವ ಯೋಜನೆಯಾಗಿದೆ. ಸದರಿ ಯೋಜನೆಯು ಎಲ್ಲಾ ವಿಧದ ವಿಕಲಚೇತನ ಮಕ್ಕಳಿಗೆ ವ್ಯಾಸಂಗ ಮಾಡಲು ಪ್ರತ್ಯೇಕವಾಗಿ ಅಂಗವಿಕಲತೆಯ ಅನುಸಾರ ವಿಶೇಷ ಶಾಲೆಗಳನ್ನು ನಡೆಸಲು ಅವಕಾಶ ಮಾಡಿಕೊಡಲಾಗಿದೆ.	• ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೊಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್ ಸೊಸೈಟಿ ಅಥವಾ ಸಮಾಜಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಯಾಗಿರಬೇಕು. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲರ ಕಾಯ್ದೆ-1995 ಸಕ್ಷನ್ 50, 51 ರಂತೆ ನೊಂದಣಿ ಮಾಡಿಸಿರಬೇಕು. • ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ವತಿಯಿಂದ ಅನುಮತಿ ಪಡೆದಂತಹ ಸಂಸ್ಥೆಗಳಿಗೆ ಮಾತ್ರವೇ ಸಹಾಯಧನ ನೀಡಲಾಗುವುದು. • ಸಂಸ್ಥೆಯು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ, ಧನಸಹಾಯ ಮುಂತಾದವುಗಳನ್ನು ಸ್ವೀಕರಿಸತಕ್ಕದ್ದಲ್ಲ. • ಶಾಲೆಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳು ದಾಖಲಾಗಿರಬೇಕು. ಶಾಲೆಯಲ್ಲಿ 20 ಕ್ಕಿಂತ ಕಡಿಮೆ ಇದ್ದಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ. ಮತ್ತು ಯೋಜನೆಯ ನಿಯಮಾನುಸಾರ ಅರ್ಹತೆಯನ್ನು ಪಡೆದಿರಬೇಕು.

4	ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು 3 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರನಾದ ಬುದ್ಧಿಮಾಂದ್ಯರ ಪಾಲನೆಗಾಗಿ ಬೆಂಗಳೂರು ನಗರದಲ್ಲಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಅನುದಾನವನ್ನು ಮಕ್ಕಳ ಸಂಖ್ಯೆಯನ್ನು ಆಧಾರಿಸಿ ನೀಡಲಾಗುತ್ತದೆ.	• ಬೆಂಗಳೂರು ನಗರದ 6 ರಿಂದ 18 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಬುದ್ಧಿಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರನಾದ ವಿಕಲಚೇತನ ಮಕ್ಕಳಿಗೆ ಸೌಲಭ್ಯವನ್ನು ಒದಗಿಸಲಾಗುವುದು. • ಈ ಯೋಜನೆಯನ್ನು ಯಾವುದೇ ಆದಾಯಮಿತಿಗೆ ಒಳಪಡಿಸಿರುವುದಿಲ್ಲ. • ಪ್ರತಿ ಕೇಂದ್ರದಲ್ಲಿ 25 ಮಕ್ಕಳು ಮಾತ್ರ ಇರಲು ಅವಕಾಶ ಕಲ್ಪಸಲಾಗಿದೆ. • ಇಲಾಖೆಯಿಂದ ಅನುಮತಿಯನ್ನು ಪಡೆದ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
5	ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನ ಈ ಕಾರ್ಯಕ್ರಮದಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.	• ವಿಕಲಚೇತನ ವಿದ್ಯಾರ್ಥಿಗಳ ವೇತನವನ್ನು ಮಂಜೂರು ಮಾಡಲು ಶಾಲಾ/ಕಾಲೇಜು ಮುಖ್ಯಸ್ಥರ ದೃಢೀಕರಣದೊಂದಿಗೆ ಅರ್ಜಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುವುದು. • ಎಲ್ಲಾ ವರ್ಗದ ವಿಕಲಚೇತನ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. • ವಿಕಲಚೇತನ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಪಡೆಯಲು ಯಾವುದೇ ಆದಾಯ ಮಿತಿ ಇರುವುದಿಲ್ಲ. • ಉನ್ನತ ಶಿಕ್ಷಣದಲ್ಲಿ ಆಯಾ ವರ್ಷಗಳಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು. • ವಿದ್ಯಾರ್ಥಿಗಳು ಕಡ್ಡಾಯವಾಗಿ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು ಹಾಗೂ ಅವರ ಬ್ಯಾಂಕ್ ಖಾತೆಗೆ ವಿದ್ಯಾರ್ಥಿವೇತನವನ್ನು ಜಮಾ ಮಾಡಲಾಗುವುದು.
6	ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಬಹುಮಾನ ಯೋಜನೆ ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ವಿಕಲಚೇತನ ವಿದ್ಯಾರ್ಥಿಗಳನ್ನು ಪ್ರತಿಭಾವಂತರನ್ನಾಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಯೋಜನೆಯಾಗಿದೆ.	• ವ್ಯಾಸಂಗ ಮಾಡುತ್ತಿರುವ ಹಾಗೂ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಯು ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರಬೇಕು ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು. • ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಪ್ರಥಮ ಬಾರಿಗೆ ಉತ್ತೀರ್ಣರಾಗಿರಬೇಕು. • ಶೇ.60%ಕ್ಕಿಂತಲೂ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ. • ಅರ್ಜಿಯನ್ನು ವ್ಯಾಸಂಗ ಮಾಡುತ್ತಿರುವ ಶಾಲೆ/ಕಾಲೇಜು ಮುಖ್ಯಸ್ಥರ ಮೂಲಕ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
7	ಶುಲ್ಕ ಮರುಪಾವತಿ ಎಸ್.ಎಸ್.ಎಲ್.ಸಿ. ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿಕಲಚೇತನ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರು ಪಾವತಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ.	• ವಿಕಲಚೇತನರು ಭಾರತದ ಪ್ರಜೆಯಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 5 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರತಕ್ಕದ್ದು. • ಎಸ್.ಎಸ್.ಎಲ್.ಸಿ ನಂತರದ ವಿಕಲಚೇತನ ವಿದ್ಯಾರ್ಥಿಗಳು ಶುಲ್ಕ ಮರು ಪಾವತಿ ಪಡೆಯಲು ಅರ್ಹರಿರುತ್ತಾರೆ. • ಯಾವ ಸಂಸ್ಥೆಗಳು ವಿಕಲಚೇತನ ವಿದ್ಯಾರ್ಥಿಗಳಿಗೆ ಶುಲ್ಕವನ್ನು ವಿಧಿಸುವುದಿಲ್ಲವೋ ಅಂತಹ ಸಂಸ್ಥೆಯ ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಿರುವುದಿಲ್ಲ. • ವಿಕಲಚೇತನ ವಿದ್ಯಾರ್ಥಿಗಳು ಹಿಂದಿನ ವರ್ಷದ ಫಬ್ಲಿಕ್ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗದಿದ್ದಲ್ಲಿ ಮುಂದಿನ ವರ್ಷದಲ್ಲಿ ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ. ಆದರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹಿಂದಿನ ಬಾಕಿ ವಿಷಯಗಳು ಸೇರಿದಂತೆ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ನಂತರದ ವರ್ಷದಲ್ಲಿ ಶುಲ್ಕ ಮರುಪಾವತಿಗೆ, ಆ ಕೋರ್ಸ್‌ಗಳಲ್ಲಿ ಕ್ಯಾರಿ ಓವರ್ ಪದ್ಧತಿ ಜಾರಿಯಿದ್ದು ಮುಂದಿನ ತರಗತಿಗೆ/ವರ್ಷಕ್ಕೆ ಪ್ರವೇಶ ಅವಕಾಶವಿದ್ದಲ್ಲಿ ಅಂತಹವರು ಶುಲ್ಕ ಮರುಪಾವತಿಗೆ ಅರ್ಹರಿರುತ್ತಾರೆ.

		• ಪರೀಕ್ಷಾ ಶುಲ್ಕವನ್ನು ವರ್ಷಕ್ಕೆ ಒಂದು ಸಲ ಮಾತ್ರ ಮರುಪಾವತಿಸಲಾಗುವುದು. • ಬೇರೆ ಇಲಾಖೆ ಹಾಗೂ ಇತರೆ ಮೂಲಗಳಿಂದ ಶುಲ್ಕವನ್ನು ಪಡೆದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಶುಲ್ಕ ಮರುಪಾವತಿಗೆ ಅವಕಾಶವಿರುವುದಿಲ್ಲ. • ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.
8	<u>ಸ್ಪರ್ಧಾಚೇತನ</u> ವಿಶೇಷ ಸಾಮರ್ಥ್ಯ / ಭಿನ್ನ ಸಾಮರ್ಥ್ಯದ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಗೆ ಐ.ಎ.ಎಸ್ / ಕೆ.ಎ.ಎಸ್/ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಯೋಜನೆಯಾಗಿದೆ. ಕೇಂದ್ರ ಲೋಕಸೇವಾ ಆಯೋಗದಿಂದ (ಯು.ಪಿ.ಎಸ್.ಸಿ) ನಡೆಸುವ ಗ್ರೂಪ್ 'ಎ' ಮತ್ತು 'ಬಿ' ವೃಂದದ ಪರೀಕ್ಷೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ (ಕೆ.ಪಿ.ಎಸ್.ಸಿ) ಗ್ರೂಪ್ 'ಎ' ಮತ್ತು 'ಬಿ' ವೃಂದದ ಪರೀಕ್ಷೆಗಳಿಗೆ, ಬ್ಯಾಂಕ್ / ಜೀವವಿಮಾ ನಿಗಮ, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಮತ್ತು ಇತರೆ ಸಂಸ್ಥೆಗಳು ನಡೆಸುವ ಅಧಿಕಾರಿ / ಪ್ರಥಮ ದರ್ಜೆ / ದ್ವಿತೀಯ ದರ್ಜೆ ಹುದ್ದೆಗಳಿಗೆ ನಡೆಸುವ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಸಹಾಯಧನ ನೀಡುವುದು.	• ರಾಜ್ಯ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು (ಪ್ರಿ ಎಕ್ಸಾಮಿನೇಷನ್ ಟ್ರೈನಿಂಗ್ ಸೆಂಟರ್) • ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಗುರುತಿಸಲ್ಪಟ್ಟ ಖಾಸಗಿ / ಅನುದಾನಿತ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ತರಬೇತಿ ಕೇಂದ್ರಗಳು
9	<u>ಮಾನಸ ಕೇಂದ್ರ</u> ಮಾನಸಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದ ಮಾನಸಿಕ ಅಸ್ವಸ್ಥರಿಗೆ ತರಬೇತಿ ಹಾಗೂ ಆಪ್ತ ಸಮಾಲೋಚನೆ ನೀಡಿ ಪುನರ್ವಸತಿ ಕಲ್ಪಿಸಲಾಗುತ್ತದೆ. ಇವರಿಗೆ ಅವಶ್ಯಕವಾಗಿ ಬೇಕಾಗಿರುವ ಆರೋಗ್ಯ, ಪೋಷಣೆಮತ್ತು ಆಶ್ರಯವನ್ನು ಒದಗಿಸುವುದು.	• ಮಾನಸಿಕ ಅಸ್ವಸ್ಥರು ಅಂದರೆ ಅಂಗವಿಕಲರ ಅಧಿನಿಯಮ 1995ರಲ್ಲಿ ತಿಳಿಸಿರುವ ವ್ಯಾಖ್ಯಾನಕ್ಕೆ ಒಳಪಟ್ಟವರು. • ಫಲಾನುಭವಿಯು ಮಾನಸಿಕ ಅಸ್ವಸ್ಥರಾಗಿದ್ದು ಅವರ ಅಂಗವಿಕಲತೆಯು ಕನಿಷ್ಠ ಶೇಕಡ 40 ರಷ್ಟು ಇರತಕ್ಕದ್ದು. • ಫಲಾನುಭವಿಯ ಕೌಟುಂಬಿಕ ವಾರ್ಷಿಕ ಆದಾಯ ನಗರ ಪ್ರದೇಶಗಳಲ್ಲಿ 24,000 ಮತ್ತು ಗ್ರಾಮೀಣ ಪ್ರದೇಶದಲ್ಲಿ 11,500 ರೂಗಳಿಗಿಂತ ಕಡಿಮೆ ಇರತಕ್ಕದ್ದು. • ರಸ್ತೆಗಳಲ್ಲಿ ಓಡಾಡುವ (ಫಾಚಿಟಿಜಜಡಿಟಿಜ) ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಿಗೆ ಸೇರಿಸಿಕೊಳ್ಳಲಾಗುವುದು. • ರಾಜ್ಯ ಉಚ್ಛ ನ್ಯಾಯಾಲಯವು ಮತ್ತು ನ್ಯಾಯಾಲಯಗಳು ಆದೇಶಿಸುವ ಫಲಾನುಭವಿಗಳನ್ನು ಸಹ ಈ ಕೇಂದ್ರಗಳಿಗೆ ಸೇರಿಸಕೊಳ್ಳಲಾಗುವುದು.
10	<u>ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳು</u> ಗ್ರಾಮೀಣ ವಿಕಲಚೇತನ ಯುವತಿಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು 26 ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಕಾರ್ಯನಿರ್ವಹಿಸುತ್ತಿವೆ. ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.	✓ ಈ ವಸತಿ ನಿಲಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಅಂಗವಿಕಲ ಉದ್ಯೋಗಸ್ಥ ಮಹಿಳೆಯರು/ ವಿದ್ಯಾರ್ಥಿನಿಯರು/ವೃತ್ತಿಪರ ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ ಮಾತ್ರ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿರುತ್ತದೆ. ✓ ಉದ್ಯೋಗಸ್ಥ ಮಹಿಳೆಯರು ಈ ವಸತಿ ನಿಲಯದಲ್ಲಿ ಪ್ರವೇಶ ಪಡೆದಲ್ಲಿ ಊಟದ ವೆಚ್ಚವಾಗಿ ಮಾಹೆಯಾನ ರೂ.600.00 ಗಳನ್ನು ಮಾತ್ರ ಪಾವತಿಸಬೇಕಾಗಿರುತ್ತದೆ. ✓ ಈ ವಸತಿ ನಿಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಇತರೆ ಯಾವುದೇ ತರಹದ ಶಿಷ್ಯವೇತನವನ್ನು ಪಡೆಯಲು ಅರ್ಹರಿರುವುದಿಲ್ಲ, (ಪ್ರತಿಭಾನ್ವಿತವಾಗಿ ಪಡೆಯುವ ಶಿಷ್ಯ ವೇತನ ಹೊರತುಪಡಿಸಿ)
11	<u>ಸಾಧನ ಸಲಕರಣೆಗಳು</u> ಅಂಗವಿಕಲರ ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾಗಿರುವ ತ್ರಿಚಕ್ರವಾಹನಗಳು, ಶ್ರವಣ ಸಾಧನಗಳು, ಕೃತಕ ಅಂಗಾಂಗಗಳು, ಬ್ರೈಲ್	1. ಅಂಗವಿಕಲ ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿ 10 ವರ್ಷಗಳಿಂದ ವಾಸ ಮಾಡುತ್ತಿರುವ ಬಗ್ಗೆ ತಹಸೀಲ್ದಾರ್ ರವರಿಂದ ಪಡೆದ ದೃಢೀಕರಣ ಅಥವಾ ಕರ್ನಾಟಕದಲ್ಲಿ 10 ವರ್ಷಗಳಿಂದ ವ್ಯಾಸಂಗ ಮಾಡಿದ

	ಗಡಿಯಾರಗಳು, ದೃಷ್ಟಿದೋಷ ವುಳ್ಳವರು ಉಪಯೋಗಿಸುವ ಬಿಳಿ ಕೋಲುಗಳನ್ನು ಉಚಿತವಾಗಿ ವಿತರಿಸುವುದು.	ವಿದ್ಯಾಭ್ಯಾಸದ ದೃಢೀಕರಣ ಪತ್ರ ಒದಗಿಸಬೇಕು. 2. ಅಂಗವಿಕಲತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ವೈದ್ಯಕೀಯ ಮಂಡಳಿಯಿಂದ ಪಡೆದ ದೃಢೀಕರಣ ಒದಗಿಸಬೇಕು. 3. ಅಂಗವಿಕಲ ಅಭ್ಯರ್ಥಿಯು ಕುಟುಂಬದ ವಾರ್ಷಿಕ ಆದಾಯ ನಗರ ವಾಸಿಯಾಗಿದ್ದಲ್ಲಿ ರೂ.24,000 ಮತ್ತು ಗ್ರಾಮೀಣ ವಾಸಿಯಾಗಿದ್ದಲ್ಲಿ ರೂ. 11,500 ಮೀರಿರಬಾರದು. 4. ಈ ಹಿಂದೆ ಸರ್ಕಾರದವತಿಯಿಂದಾಗಲಿ ಅಥವಾ ಸಂಘ ಸಂಸ್ಥೆಗಳಿಂದಾಗಲೀ ಸಹಾಯಧನ/ಸಾಧನ ಸಲಕರಣೆ ಪಡೆದಿರಬಾರದು.
12	<u>ಟಾಕಿಂಗ್ ಲ್ಯಾಪ್‌ಟಾಪ್</u> ಅಂಧ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಹೊಂದಲು ಅನುಕೂಲವಾಗುವಂತೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆಯನ್ನು ಜಾರಿಗೆ ತರಲಾಗಿದೆ.	• ಯೋಜನೆಯ ಸೌಲಭ್ಯ ಪಡೆಯಲು ಯಾವುದೇ ಆದಾಯ ಮಿತಿ ಇರುವುದಿಲ್ಲ. • ವ್ಯಾಸಂಗ ಮಾಡುತ್ತಿರುವ ಬಗ್ಗೆ ಸಂಬಂಧಿತ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪತ್ರ ಒದಗಿಸಬೇಕು. • ಜೀವಿತ ಕಾಲದಲ್ಲಿ ಒಂದು ಬಾರಿ ಈ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. • ಬೇರೆ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಲ್ಯಾಪ್‌ಟಾಪ್ ಪಡೆದಿದ್ದಲ್ಲೀ ಅರ್ಹರಿರುವುದಿಲ್ಲ. ಈ ಬಗ್ಗೆ ಸ್ವಯಂ ಘೋಷಿತ ದೃಢೀಕರಣ ನೀಡಬೇಕು.
13	<u>ಯಂತ್ರಚಾಲಿತ ದ್ವಿಚಕ್ರವಾಹನಗಳು</u> ಉದ್ಯೋಗ ನಿರ್ವಹಿಸುವ / ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಿಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ಬರಲು ವಿಕಲಚೇತನರಿಗೆ ಚಲನವಲನಕ್ಕೆ ಅನುಕೂಲವಾಗುವಂತೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವ ಯೋಜನೆಯಾಗಿದೆ.	• ವಿಕಲಚೇತನ ವ್ಯಕ್ತಿಗಳು ಭಾರತದ ಪ್ರಜೆಯಾಗಿದ್ದು ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳು ವಾಸವಾಗಿರಬೇಕು. 20 ರಿಂದ 60ರ ವಯೋಮಾನದ ತೀವ್ರತರನಾದ ದೈಹಿಕ ವಿಕಲಚೇತನರಿಗೆ ಜೀವಿತ ಕಾಲದಲ್ಲಿ 1 ಬಾರಿ ಮಾತ್ರ ಸೌಲಭ್ಯ ಕಲ್ಪಿಸಲಾಗಿದೆ. • ಈ ಯೋಜನೆಯ ಸೌಲಭ್ಯ ಪಡೆಯಲು ಕುಟುಂಬ ವಾರ್ಷಿಕ ಆದಾಯ ರೂ.2 ಲಕ್ಷಗಳಿಗಿಂತ ಕಡಿಮೆಯಿರಬೇಕು • ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ಇತರ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಯಂತ್ರಚಾಲಿತ ದ್ವಿಚಕ್ರವಾಹನ ಪಡೆದಿದ್ದಲ್ಲಿ ಅಂತಹವರು ಅರ್ಹರಾಗಿರುವುದಿಲ್ಲ. • ಈ ಸೌಲಭ್ಯ ಪಡೆಯುವ ದೈಹಿಕ ವಿಕಲಚೇತನರು ಶೇ.75% ಕಿಂತ ಹೆಚ್ಚಿನ ದೈಹಿಕ ವಿಕಲಚೇತನರಾಗಿರಬೇಕು ಹಾಗೂ ಸೊಂಟದ ಕೆಳಗೆ ಅಂದರೆ ಎರಡು ಕಾಲುಗಳಲ್ಲಿ ಸ್ವಾಧೀನ ಕಳೆದುಕೊಂಡಿರುವ, ಎರಡು ಕೈಗಳು ಸ್ವಾಧೀನದಲ್ಲಿರುವ ಹಾಗೂ ಇತರೆ ಎಲ್ಲಾ ರೀತಿಯಲ್ಲಿ ಸದೃಢವಾಗಿರುವ ವಿಕಲಚೇತನರಾಗಿರಬೇಕು. ಇಂತಹ ನ್ಯೂನತೆಯನ್ನು ಹೊಂದಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮೊದಲ ಆದ್ಯತೆ ಮೇಲೆ ಈ ಸೌಲಭ್ಯ ನೀಡಬಹುದು. • ಈ ಸೌಲಭ್ಯ ಪಡೆಯಲಿಚ್ಛಿಸುವ ವಿಕಲಚೇತನರು ದ್ವಿಚಕ್ರವಾಹನ ಚಾಲನೆ ಮಾಡುವ ಪರವಾನಗಿ ಪತ್ರ ಪಡೆದಿರಬೇಕು
14	<u>ಸಾಧನೆ</u> ಈ ಯೋಜನೆಯ ಅಡಿಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿದ ಕ್ರೀಡಾ ಪಟುಗಳಿಗೆ ಧನಸಹಾಯ ನೀಡಲಾಗುವುದು.	• ಕ್ರೀಡೆಯಲ್ಲಿ ಭಾಗವಹಿಸಿದ ನಂತರ, ಭಾಗವಹಿಸಲು ಆಹ್ವಾನಿಸಿರುವ ಮಾಹಿತಿ ಹಾಗೂ ಪ್ರಯಾಣದ ವೆಚ್ಚದ ಹಾಗೂ ಇತರೆ ವೆಚ್ಚದ ಮೂಲ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. • ಪ್ರಸ್ತಾವನೆ ಪರಿಶೀಲಿಸಿದ ನಂತರ ಸಹಾಯಧನವನ್ನು ಮಂಜೂರು ಮಾಡಲಾಗುವುದು.
15	<u>ಪ್ರತಿಭೆ</u> ಅಂಗವಿಕಲರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು, ನೋಂದಾಯಿತ ಸಾಂಸ್ಕೃತಿಕ ಸ್ವಯಂ ಸೇವಾ ಸಂಸ್ಥೆಗಳು	• ಪ್ರಾಯೋಜಿತ ಕಾರ್ಯಕ್ರಮ ನೀಡುವ ಕಲಾವಿದರು ಅಲ್ಲವೇ ಪ್ರಾಯೋಜಿತ ಕಾರ್ಯಕ್ರಮಗಳನ್ನು ಪಡೆಯಲು ಉದ್ದೇಶಿಸಿರುವ ನೊಂದಾಯಿತ ಸಂಸ್ಥೆ ಕಲಾವಿದರು ಹಾಗೂ ಕಾರ್ಯಕ್ರಮದ ಕುರಿತು

	ಅಂಗವಿಕಲ ಕಲಾವಿದರನ್ನು ಒಳಗೊಂಡು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮತ್ತು ವಿಕಲಚೇತನರು ವೈಯಕ್ತಿಕವಾಗಿ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಹಾಯಧನ ನೀಡುವ ಯೋಜನೆಯಾಗಿದೆ.	ಎಲ್ಲಾ ವಿವರಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಕನಿಷ್ಠ 1 ತಿಂಗಳ ಮೊದಲು ಅರ್ಜಿಯನ್ನು ಸಲ್ಲಿಸತಕ್ಕದ್ದು. • ಕಾರ್ಯಕ್ರಮ ನಡೆದಿರುವ ಬಗ್ಗೆ ಸೂಕ್ತ ವಿವರಗಳನ್ನು ಹಾಗೂ ಅಗತ್ಯವಿರುವ ದಾಖಲೆಗಳನ್ನು ಒದಗಿಸುವುದು.
16	<u>ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆ</u> ರಾಜ್ಯದಲ್ಲಿರುವ ಎಲ್ಲಾ ಅಂಗವಿಕಲರಿಗೆ ಅವರ ವಾಸಸ್ಥಳದಲ್ಲಿಯೇ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪುನರ್ವಸತಿ ಸೇವೆಯನ್ನು ಒದಗಿಸಲು ಅವಕಾಶ ಕಲ್ಪಿಸಿ ಅಗತ್ಯವಿರುವ ಸೇವೆಗಳನ್ನು ಅವರಿಗೆ ಒದಗಿಸುವ ಯೋಜನೆಯಾಗಿದೆ.	• ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬರಂತೆ ಎಸ್.ಎಸ್.ಎಲ್.ಸಿ ಪಾಸಾದ ಅಥವಾ ಎಸ್.ಎಸ್.ಎಲ್.ಸಿಯಲ್ಲಿ ಅನುತ್ತೀರ್ಣರಾದವರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ನೇಮಕ ಮಾಡಲು ಅವಕಾಶವಿದೆ. • ಪ್ರತಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿನ ಸ್ಥಳೀಯ ಪದವಿಧರ ಅಥವಾ ಪದವಿಯಲ್ಲಿ ಅನುತ್ತೀರ್ಣರಾದವರನ್ನು ವಿವಿಧೋದ್ದೇಶ ಕಾರ್ಯಕರ್ತರನ್ನಾಗಿ ನೇಮಕ ಮಾಡಲು ಅವಕಾಶವಿದೆ. • ಕಾರ್ಯಕರ್ತರಾಗಿ ಆಯ್ಕೆಯಾಗಲು ಅಂಗವಿಕಲರ ಪ್ರಮಾಣ ಪತ್ರವನ್ನು ಹೊಂದಿರಬೇಕು. ಸ್ಥಳೀಯ ಪ್ರಜೆಯಾಗಿರಬೇಕು.
17	ಉದ್ಯೋಗ ಕೋಶ ವಿವಿಧ ಬಗೆಯ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಸೂಕ್ತ ತರಬೇತಿ ಯನ್ನು ನೀಡಿ ಉದ್ಯೋಗವನ್ನು ಒದಗಿಸುವ ಸಲುವಾಗಿ ಹಾಗೂ ಸಾರ್ವಜನಿಕ ವಲಯಗಳಲ್ಲಿ ವಿಕಲಚೇತನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವ ಉದ್ದೇಶ ದಿಂದ ಉದ್ಯೋಗ ಕೋಶವನ್ನು ಸರ್ಕಾರದ ಆದೇಶದಂತೆ ಮೆ॥ ಎನೇಬಲ್ ಇಂಡಿಯಾ, ಕೋರಮಂಗಲ, ಬೆಂಗಳೂರು ಸಂಸ್ಥೆಯ ಮುಖಾಂತರ ಬೆಂಗಳೂರಿನಲ್ಲಿ ಪ್ರಾರಂಭಿಸಲಾಗಿದೆ.	➢ ವಿಕಲಚೇತನರು 18–45 ವಯೋಮಾನದವರಾಗಿರಬೇಕು. ➢ ಅಭ್ಯರ್ಥಿಯು ಕರ್ನಾಟಕ ರಾಜ್ಯದವರಾಗಿರಬೇಕು. ➢ ಅಂಗವಿಕಲತೆಯ ಕುರಿತಂತೆ ವೈದ್ಯಕೀಯ ಮತ್ತು ವಿದ್ಯಾರ್ಹತೆ ಪ್ರಮಾಣ ಪತ್ರ ಸಲ್ಲಿಸಬೇಕು.
18	ನಿರುದ್ಯೋಗ ಭತ್ಯೆ : ಅಂಗವಿಕಲರ ಅಧಿನಿಯಮ 1995ರ ಸೆಕ್ಷನ್ 68ರ ಪ್ರಕಾರ ಆಯಾ ರಾಜ್ಯ ಸರ್ಕಾರಗಳು ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡಲು ಅವಕಾಶ ಕಲ್ಪಿಸಿಕೊಳ್ಳಬೇಕೆಂದು ತಿಳಿಸಿರುವ ಅನ್ವಯ ನಿರುದ್ಯೋಗ ಅಂಗವಿಕಲರಿಗೆ ಉದ್ಯೋಗ ದೊರೆಯುವವರೆಗೆ ಭತ್ಯೆ ರೂಪದಲ್ಲಿ ಸಹಾಯಧನವನ್ನು ನೀಡಲಾಗುವ ಯೋಜನೆಯಾಗಿದೆ.	• ಶೇ.40ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿರಬೇಕು ಹಾಗೂ ಎಸ್.ಎಸ್.ಎಲ್.ಸಿ. ಮತ್ತು ನಂತರದ ವಿದ್ಯಾರ್ಹತೆ ಹೊಂದಿರಬೇಕು • 25 ರಿಂದ 45ರ ವರ್ಷ ವಯೋಮಿತಿಯೊಳಗಿರಬೇಕು. • ಭಾರತದ ಪ್ರಜೆಯಾಗಿದ್ದು, ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳು ವಾಸವಾಗಿರಬೇಕು. • ಈ ಸೌಲಭ್ಯ ಪಡೆಯಲು ಯಾವುದೇ ಆದಾಯ ಮಿತಿ ಇರುವುದಿಲ್ಲ • ಬೇರೆ ಯಾವುದೇ ಯೋಜನೆಯಡಿ ಅಂದರೆ, ಮಾಸಿಕ ಪೋಷಣಾ ಭತ್ಯೆ/ಶುಲ್ಕ ಮರುಪಾವತಿ/ವಿದ್ಯಾರ್ಥಿ ವೇತನ ಯೋಜನೆಗಳಡಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳು ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಿರುವುದಿಲ್ಲ.
19	ಆಧಾರ ಯೋಜನೆ • ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ ಯೋಜನೆಯು ಜಾರಿಯಲ್ಲಿದೆ. **2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಆಧಾರ ಸ್ವಯಂ ಉದ್ಯೋಗ ಯೋಜನೆಯ ಘಟಕ ವೆಚ್ಚವನ್ನು ಈಗಿರುವ ರೂ.35,000/–ಗಳಿಂದ ರೂ.1,00,000/–ಗಳಿಗೆ ಹೆಚ್ಚಿಸಿ, ಇದರಲ್ಲಿ ಶೇಕಡ 50ರಷ್ಟು ಬ್ಯಾಂಕ್ ಸಾಲ ಮತ್ತು ಶೇಕಡ 50ರಷ್ಟು ಸಬ್ಸಿಡಿ" ಎಂದು ಘೋಷಿಸಲಾಗಿದೆ.**	• ಫಲಾನುಭವಿಗಳಿಗೆ ಶೇ 40 ಹಾಗೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು. • ಗ್ರಾಮೀಣ ಅಭ್ಯರ್ಥಿಗಳಿಗೆ ರೂ.11,500/– ಗಳು ಮತ್ತು ನಗರದ ಅಭ್ಯರ್ಥಿಗಳಿಗೆ ರೂ.24,00/–ಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇರತಕ್ಕದ್ದು. • ಅಕ್ಷರಸ್ಥರಾಗಿರಬೇಕು. • ಸಣ್ಣ ವ್ಯಾಪಾರ ಮಾಡುವ ನೈಪೂಣ್ಯವಿರಬೇಕು. • ಕಳೆದ 10 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು. • ಕನಿಷ್ಠ 18 ಹಾಗೂ ಗರಿಷ್ಠ 55 ವರ್ಷಗಳೊಗಿನ ನಿರುದ್ಯೋಗಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.

20	ವೈದ್ಯಕೀಯ ಪರಿಹಾರ ಅಂಗವಿಕಲತೆಯ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲು ಅಥವಾ ನಿವಾರಿಸುವ ಸಲುವಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗುವ ವಿಕಲಚೇತನ ವ್ಯಕ್ತಿಗೆ ಶಸ್ತ್ರಚಿಕಿತ್ಸೆ/ ಔಷಧಿ/ವೈದ್ಯಕೀಯ ಪರೀಕ್ಷೆ/ ಬೆಡ್‌ಚಾರ್ಜ್‌ಗಳ ವೆಚ್ಚವನ್ನು ಭರಿಸಲು ಗರಿಷ್ಠ ರೂ.1.00 ಲಕ್ಷಗಳವರೆಗೆ ಅನುದಾನವನ್ನು ನೀಡಲಾಗುವುದು.	• ಶಸ್ತ್ರ ಚಿಕಿತ್ಸೆಯಿಂದ ಅಂಗವಿಕಲತೆ ನಿವಾರಣೆಯಾಗುವ ಇಲ್ಲವೆ ಅಂಗವಿಕಲತೆಯ ಪ್ರಮಾಣ ಕಡಿಮೆಯಾಗುವ ಕುರಿತಂತೆ ತಜ್ಞ ವೈದ್ಯಾಧಿಕಾರಿಗಳಿಂದ ಪಡೆದ ದೃಢೀಕರಣ ಒದಗಿಸಬೇಕು. • ಮರುಪಾವತಿ ಪಡೆಯಲು, ಚಿಕಿತ್ಸೆಗೆ ಸಂಬಂಧಪಟ್ಟ ಔಷಧಿ ಖರೀದಿ, ಬೆಡ್ ಖರ್ಚು, ವೈದ್ಯಕೀಯ ಪರೀಕ್ಷೆಗಳ ವೆಚ್ಚ ಮತ್ತು ಶಸ್ತ್ರಚಿಕಿತ್ಸೆಗೆ ತಗಲುವ ವೆಚ್ಚದ ರಸೀದಿ ಒದಗಿಸಬೇಕು
21	ಬುದ್ಧಿಮಾಂದ್ಯ ಮಕ್ಕಳ ಪೋಷಕರ ವಿಮಾ ಯೋಜನೆ ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರ ಹೆಸರಲ್ಲಿ, ಭಾರತೀಯ ಜೀವ ವಿಮಾ ನಿಗಮಕ್ಕೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದಿಂದ ವಾರ್ಷಿಕ ವಿಮಾ ಕಂತನ್ನು ಪಾವತಿ ಮಾಡಿ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತದೆ. ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ಗರಿಷ್ಠ ರೂ.20,000ಗಳಿಗೆ ವಿಮೆ ಮಾಡಿಸಲಾಗುವುದು.	• ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರು 18 ರಿಂದ 60 ವರ್ಷವರೆಗಿನ ವಯೋಮಿತಿಯವರಾಗಿರಬೇಕು. • ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ 11,500/– ಮತ್ತು ನಗರ ಪ್ರದೇಶಗಳಲ್ಲಿ ರೂ.24,000/–ಗಳನ್ನು ಮೀರಿರಬಾರದು. • ಬುದ್ಧಿಮಾಂದ್ಯತೆ ಬಗ್ಗೆ ತಜ್ಞ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದಿರಬೇಕು.
22	ವಿವಾಹ ಪ್ರೋತ್ಸಾಹ ಧನ ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ಜಂಟಿಯಾಗಿ ರೂ.50,000/– ಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 5 ವರ್ಷಗಳ ಅವಧಿಗೆ ನಿಶ್ಚಿತ ಠೇವಣಿ ಇಡಲಾಗುವುದು. 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರಿಸಬಹುದಾಗಿರುತ್ತದೆ.	• ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ. • ವಿವಾಹವಾಗುವ ಯುವತಿಯರ ವಯಸ್ಸು 18 ಹಾಗೂ ಯುವಕರ ವಯಸ್ಸು 21 ವರ್ಷಕ್ಕಿಂತ ಮೇಲ್ಪಟ್ಟಿರಬೇಕು. • ವಿಕಲಚೇತನ ವ್ಯಕ್ತಿಗಳು/ಸಾಮಾನ್ಯ ವ್ಯಕ್ತಿಗಳು 2ನೇ ಮದುವೆ ಮಾಡಿಕೊಂಡಲ್ಲಿ ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ. • ವಿಕಲಚೇತನರ ಯುವಕ/ಯುವತಿಯರ ವಿಕಲಚೇತನತೆಯ ಪ್ರಮಾಣ ಶೇ.40%ಕ್ಕಿಂತ ಹೆಚ್ಚಾಗಿರತಕ್ಕದ್ದು. • ವಿವಾಹವಾಗುವ ಯುವಕ/ಯುವತಿಯರು ಕಡ್ಡಾಯವಾಗಿ ಸಂಬಂಧಪಟ್ಟವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರ ನೀಡತಕ್ಕದ್ದು.
23	ಶಿಶುಪಾಲನ ಭತ್ಯೆ ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರು ಹಾಗೂ ಅವರಿಗೆ ಜನಿಸುವ ಕನಿಷ್ಠ 2 ಮಕ್ಕಳಿಗೆ ಆರೈಕೆ ಮಾಡಲು ದಾದಿ/ಶುಶ್ರುಷಕರ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/– ಗಳಂತೆ 5 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡುವುದು.	• ವಿಕಲಚೇತನ ಅಂಧ ಮಹಿಳೆಯು ಭಾರತದ ಪ್ರಜೆಯಾಗಿರಬೇಕು. ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಕನಿಷ್ಠ 6 ವರ್ಷಗಳು ಕರ್ನಾಟಕದಲ್ಲಿ ವಾಸವಾಗಿರಬೇಕು. • ಅಂಧ ಮಹಿಳೆಯ ವಯಸ್ಸು ಕನಿಷ್ಠ 18 ವರ್ಷಕ್ಕಿಂತ ಹೆಚ್ಚಾಗಿರಬೇಕು. • ಕಂದಾಯ ಇಲಾಖೆಯಿಂದ ಪಡೆಯಲಾದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅವರುಗಳ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳ ಒಳಗಿರಬೇಕು. • ಶಿಶು ಪಾಲನಾ ಭತ್ಯೆಯು 2 ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ. • ಸಹಾಯಕ್ಕಾಗಿ ಬರುವ ವ್ಯಕ್ತಿಯಿಂದ ಶಿಶು ಲಾಲನೆ, ಪಾಲನೆ, ಆರೋಗ್ಯ ಹಾಗೂ ಪೌಷ್ಠಿಕ ಆಹಾರ ಒದಗಿಸುವ ಕುರಿತು ಮುಚ್ಚಳಿಕೆ ಪಡೆಯತಕ್ಕದ್ದು. • ಶಿಶು ಪಾಲನಾ ಭತ್ಯೆಯನ್ನು ಮಗುವಿನ ಆರೋಗ್ಯ, ಪೌಷ್ಠಿಕ ಆಹಾರ ಮತ್ತು ಪಾಲನೆಗೆ ಮಾತ್ರ ಉಪಯೋಗಿಸಲಾಗುವುದೆಂದು ದೃಢೀಕರಿಸತಕ್ಕದ್ದು.
24	ನಿರಾಮಯ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್–1999 ಅಧಿನಿಯಮದಡಿ ಬರುವ 04 ಬಗೆಯ ವಿಕಲಚೇತನರಿಗೆ (ಬುದ್ಧಿಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲರು) "ನಿರಾಮಯ" ಆರೋಗ್ಯ ವಿಮಾ ಯೋಜನೆ ಯನ್ನು ಜಾರಿಗೆ ತಂದಿದ್ದು, ಸದರಿ	• ಕರ್ನಾಟಕ ರಾಜ್ಯಾದ್ಯಾಂತ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ–1999 ಆಕ್ಟ್‌ನಡಿ ಬರುವ 04 ಬಗೆಯ ವಿಕಲಚೇತನರು ಅರ್ಹರಿರುತ್ತಾರೆ. (ಬುದ್ಧಿಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ, ಮತ್ತು ಬಹುವಿಧ ಅಂಗವಿಕಲರು)

	ಯೋಜನೆ ಯನ್ವಯ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 04 ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಪ್ರಥಮ ಬಾರಿ ಒಂದುಸಲ ವಾರ್ಷಿಕ ರೂ.250/-ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿ ಪ್ರತಿ ವರ್ಷ ರೂ.1.00 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯನ್ನು ರಾಜ್ಯದಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.	• ಬಡತನ ರೇಖೆಗಿಂತ ಕೆಳಗಿರುವ ವಿಕಲಚೇತನರು ಅರ್ಹರಿರುತ್ತಾರೆ.
25	<u>ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ.</u> ಹಿರಿಯ ನಾಗರಿಕರ ರಕ್ಷಣೆಗಾಗಿ, ಉಚಿತ ಕಾನೂನು ಸಲಹೆ, ಆಪ್ತ ಸಲಹೆ ನೀಡಲು ಹಾಗೂ ಸಮಸ್ಯೆಗಳ ತುರ್ತು ಸ್ಪಂದನೆಗಾಗಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ (ಟೋಲ್ ಫ್ರೀ ದೂರವಾಣಿ ಸಂಖ್ಯೆ:1090)ಗಳನ್ನು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.	• 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. • ಈ ಕೇಂದ್ರಗಳನ್ನು ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ / ಟ್ರಸ್ಟ್ ಆಕ್ಟ್‌ನಡಿ ನೊಂದಣಿಯಾದ ಸಂಸ್ಥೆಗಳ ಮುಖಾಂತರ ನಿರ್ವಹಿಸಲಾಗುತ್ತದೆ.
26	ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ ಹಿರಿಯ ನಾಗರಿಕರ ರಕ್ಷಣೆ, ಆರೋಗ್ಯ ಹಾಗೂ ಇತರೆ ಅಗತ್ಯ ಅವಶ್ಯಕತೆಗಳನ್ನು ಹಾಗೂ ಸಮಾಜದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು ಯೋಜನೆಯ ಉದ್ದೇಶವಾಗಿದೆ.	• 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. • ಈ ಕೇಂದ್ರಗಳನ್ನು ಸೊಸೈಟಿಸ್ ರಿಜಿಸ್ಟ್ರೇಷನ್ ಆಕ್ಟ್ / ಟ್ರಸ್ಟ್ ಆಕ್ಟ್‌ನಡಿ ನೋಂದಣಿಯಾದ ಸಂಸ್ಥೆಗಳ ಮುಖಾಂತರ ನಿರ್ವಹಿಸಲಾಗುತ್ತದೆ.
27	ವೃದ್ಧಾಶ್ರಮಗಳು ಅರವತ್ತು ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ನಿರ್ಗತಿಕ ವೃದ್ಧರಿಗೆ ಉಚಿತ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿ ವೃದ್ಧರು ಸಮಾಜದಲ್ಲಿ ನಿಶ್ಚಿಂತೆಯಿಂದ ಬಾಳಲು ವೃದ್ಧಾಶ್ರಮಗಳನ್ನು ನಡೆಸುತ್ತಿರುವ ಮತ್ತು ನಡೆಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರವು ಧನ ಸಹಾಯ ನೀಡುವ ಯೋಜನೆ. **ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪವಿಭಾಗಗಳಿಗೆ ತಲಾ ಒಂದರಂತೆ ವಿಸ್ತರಿಸಲಾಗಿದೆ.**	• ಈ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. • ಸ್ವಯಂ ಸೇವಾ ಸಂಸ್ಥೆಯು ಸಾಕಷ್ಟು ಸಿಬ್ಬಂದಿ ವರ್ಗದೊಂದಿಗೆ ಅಗತ್ಯವಾದ ಸೌಲಭ್ಯ ಸಂಪನ್ಮೂಲ ಹಾಗೂ ಅನುಭವ ಹೊಂದಿ ಆರ್ಥಿಕವಾಗಿ ಸದೃಢತೆ ಹೊಂದಿರಬೇಕು. • ಸ್ವಯಂ ಸೇವಾ ಸಂಸ್ಥೆಯು ವೃದ್ಧಾಶ್ರಮವನ್ನು ನಡೆಸುವಲ್ಲಿ ಅಥವಾ ಇಂತಹದೇ ಇನ್ನಿತರ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅನುಭವ ಹೊಂದಿರಬೇಕು ಅಥವಾ ವೃದ್ಧಾಶ್ರಮವನ್ನು ನಡೆಸಲು ಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು ಅದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬೇಕು. • ಯಾವುದೇ ಸಂಸ್ಥೆಯು ವೃದ್ಧಾಶ್ರವನ್ನು ಪ್ರಾರಂಭಮಾಡಬೇಕಾದಲ್ಲಿ ಕನಿಷ್ಠ 25 ಜನ ಫಲಾನುಭವಿಗಳು ಇರಬೇಕು. • ರಾಜ್ಯ ಸರ್ಕಾರದಿಂದ ಪ್ರತಿ ಜಿಲ್ಲೆಗೆ ಒಂದರಂತೆ ಮಾತ್ರ ವೃದ್ಧಾಶ್ರಮಕ್ಕೆ ಅನುದಾನವನ್ನು ನೀಡಲಾಗುವುದು. • ವೃದ್ಧಾಶ್ರಮವನ್ನು ಪ್ರಾರಂಭ ಮಾಡಬೇಕಾದಲ್ಲಿ ಮತ್ತು ಅನುದಾನವನ್ನು ಪಡೆಯಬೇಕಾದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿಸಬೇಕು.

ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಕ್ರ ಸಂ.	ಯೋಜನೆಯ ವಿವರ	ಅರ್ಹತಾ ಮಾನದಂಡ
1	ಪ್ರಾಯೋಜಕತ್ವ ಕಾರ್ಯಕ್ರಮ	• ಫಲಾನುಭವಿಗಳ ಆಯ್ಕೆಯ ಮಾನದಂಡ: ➢ 0–18 ವರ್ಷ ವಯೋಮಿತಿಯೊಳಗಿನ ಏಕಪೋಷಕರ ಮಕ್ಕಳು, ➢ ಕುಷ್ಠರೋಗ ಪೀಡಿತ ಪೋಷಕರ ಮಕ್ಕಳು, ➢ ಜೈಲಿನಲ್ಲಿರುವ ಪೋಷಕರ ಮಕ್ಕಳು ಮತ್ತು ➢ ವಾರ್ಷಿಕ ಆದಾಯ ಕಡಿಮೆ ಇರುವ ಕುಟುಂಬದ ಮಕ್ಕಳು. • ಪ್ರತಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ **"ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನೆ ಸಮಿತಿ"**ಯು ಮಕ್ಕಳ ಪೂರಕ ದಾಖಲಾತಿಗಳಾದ ಗೃಹ ಮತ್ತು ಶಾಲಾ ತನಿಖಾ ವರದಿಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಜಕಾರ್ಯಕರ್ತರು / ಕ್ಷೇತ್ರಕಾರ್ಯಕರ್ತರಿಂದ ಪಡೆದು ಪರಿಶೀಲಿಸಿ ಫಲಾನುಭವಿಗಳನ್ನು ಗುರುತಿಸುವ ಕಾರ್ಯವನ್ನು ನಿರ್ವಹಿಸುತ್ತದೆ. • ತಿಂಗಳಿಗೆ ರೂ.1000/–ಗಳಂತೆ ಒಂದು ಕುಟುಂಬದಲ್ಲಿನ ಗರಿಷ್ಠ 2 ಮಕ್ಕಳಿಗೆ, ಗರಿಷ್ಠ 3 ವರ್ಷಗಳ ಅವಧಿಗೆ ಅಥವಾ ಮಗುವಿಗೆ 18 ವರ್ಷಗಳಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಈ ಯೋಜನೆಯ ಸೌಲಭ್ಯವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸುವ ಮೂಲಕ ಒದಗಿಸಲಾಗುತ್ತಿದೆ.
	ವಿಶೇಷ ಪಾಲನಾ ಯೋಜನೆ	ಫಲಾನುಭವಿಗಳ ಆಯ್ಕೆಯ ಮಾನದಂಡ: 0–18 ವರ್ಷ ವಯೋಮಿತಿಯೊಳಗಿನ ಅನಾಥ ಹಾಗೂ ಸಂಕಷ್ಟದಲ್ಲಿರುವ ಹೆಚ್.ಐ.ವಿ.(ಏಡ್ಸ್) ಸೋಂಕಿತ/ಬಾಧಿತ ಮಕ್ಕಳು ಈ ಯೋಜನೆಗೆ ಒಳಪಡುವ ಮಕ್ಕಳನ್ನು ಎಲ್ಲಾ ಜಿಲ್ಲೆಗಳಲ್ಲಿನ ಐ.ಸಿ.ಟಿ.ಸಿ. (Integreated Councelling and Testing Center) ಹಾಗೂ ಎ.ಆರ್.ಟಿ. (Anti Retro Viral Theraphy) ಕೇಂದ್ರಗಳಲ್ಲಿ ನೊಂದಣಿಯಾದ ಕುಟುಂಬಗಳ ಸಮೀಕ್ಷೆಯನ್ನು ನಡೆಸಿ, ಪ್ರತಿ ಕುಟುಂಬದ ಅವಶ್ಯಕತೆಯನ್ನು ಗುರುತಿಸಿ ಸರ್ಕಾರದ ವಿವಿಧ ಯೋಜನೆಯಡಿ ಇರುವ ಸೌಕರ್ಯಗಳನ್ನು ಹೊರತುಪಡಿಸಿ ಈ ಯೋಜನೆಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಕರ್ನಾಟಕ ಆರೋಗ್ಯ ಸಂವರ್ಧನ ಪ್ರತಿಷ್ಠಾನ ಹಾಗು ಕರ್ನಾಟಕ ಏಡ್ಸ್ ನಿಯಂತ್ರಣ ಸೊಸೈಟಿಯ ತಾಂತ್ರಿಕ ಮಾರ್ಗದರ್ಶನದೊಂದಿಗೆ ಹಾಗು ಸಂಪರ್ಕ ಕಾರ್ಯಕರ್ತರು (Link Workers), ಆರೋಗ್ಯ ಸಹಾಯಕಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹಾಗು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸದರಿ ಕುಟುಂಬಗಳ ಆರ್ಥಿಕ/ ಸಾಮಾಜಿಕ ಸಮೀಕ್ಷೆ ನಡೆಸಿ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ಪ್ರತಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ **"ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನೆ ಸಮಿತಿ"** ಯಿಂದ ಅನುಮೋದನೆ ನೀಡುವ ಮೂಲಕ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಮಗುವಿಗೆ ಪ್ರತಿ ಮಾಹೆಗೆ ರೂ.1000/–ಗಳಂತೆ ಆರ್ಥಿಕ ಸಹಾಯವನ್ನು ಹೆಚ್.ಐ.ವಿ./ಏಡ್ಸ್ ಸೋಂಕಿತ/ ಬಾಧಿತ ಮಕ್ಕಳ ಹಾಗೂ ಏಡ್ಸ್‌ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳಿಗೆ ಪೌಷ್ಠಿಕ ಆಹಾರ, ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವುದರೊಂದಿಗೆ ಅವರನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸುವ ಮೂಲಕ ಒದಗಿಸಲಾಗುತ್ತಿದೆ.
	ದತ್ತು ಕಾರ್ಯಕ್ರಮ	• ಮಕ್ಕಳ ಆಯ್ಕೆಯ ಮಾನದಂಡ: • ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆದ 0–18 ವಯೋಮಾನದ ಅನಾಥ, ಪರಿತ್ಯಕ್ತ ಹಾಗೂ ಒಪ್ಪಿಸಲ್ಪಟ್ಟ ಮಕ್ಕಳು ಈ ಕಾರ್ಯಕ್ರಮದ ವ್ಯಾಪ್ತಿಗೊಳಪಡುತ್ತಾರೆ. • ದತ್ತು ಕಾರ್ಯಕ್ರಮದ ಮೂಲಕ ಇಂತಹ ಮಕ್ಕಳಿಗೆ ಜೈವಿಕ ಪೋಷಕರನ್ನು ಒದಗಿಸಿಕೊಡುವುದರ ಮೂಲಕ ಶಾಶ್ವತ ಕುಟುಂಬದ ವ್ಯವಸ್ಥೆಯನ್ನು ಕಾನೂನುಬದ್ಧವಾಗಿ ಕಲ್ಪಿಸಲು ನೆರವಾಗುತ್ತಿದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಹೊಂದಿರಬೇಕಾದ ಅರ್ಹತೆಗಳು

ಕ್ರ.ಸಂ	ಫಲಾನುಭವಿ ಆಧಾರಿತ ಯೋಜನೆ/ ಕಾರ್ಯಕ್ರಮ	ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳು
1	ಉದ್ಯೋಗಿನಿ	1. ಕುಟುಂಬದ ವಾರ್ಷಿಕ ಆದಾಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.2,00,000/– ಗಳು ಹಾಗೂ ವಿಶೇಷ ವರ್ಗ ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ರೂ.1,50,000/–ಗಳಿಗೆ ಮೀರಿರಬಾರದು.2. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು. 3. ಸಾಲ ಮಂಜೂರಾದ ನಂತರ ಉದ್ಯಮಶೀಲತ ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕು. 4. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 5. ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತದೆ.
2	ಕಿರುಸಾಲ ಯೋಜನೆ	1. ಗುಂಪಿನ ಉಳಿತಾಯ ಕನಿಷ್ಟ ರೂ.1.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಇರಬೇಕು. 2. ಸ್ತ್ರೀಶಕ್ತಿ ಗುಂಪು ತಾಲ್ಲೂಕು ಒಕ್ಕೂಟದಲ್ಲಿ ನೊಂದಣಿಯಾಗಿದ್ದು, ಸದಸ್ಯತ್ವ ಹೊಂದಿರಬೇಕು. 3. ಗುಂಪಿನ ಸದಸ್ಯರೆಲ್ಲರೂ ಸೇರಿ ಒಂದೇ ಉದ್ದಿಮೆ ಕೈಗೊಳ್ಳಬೇಕು. 4. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. 5. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಂಘದ ಗ್ರೇಡಿಂಗ್ ಆಗಿರಬೇಕು. ಎ ಅಥವಾ ಬಿ ಗ್ರೇಡ್ ಪಡೆದಿರಬೇಕು. 6. ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
3	ಚೇತನ ಯೋಜನೆ	1. ವಯೋಮಿತಿ 18 ವರ್ಷ ಮೀರಿರಬೇಕು. 2. ಲೈಂಗಿಕ ಕಾರ್ಯಕರ್ತೆಯರ ಸಮುದಾಯ ಆಧಾರಿತ ಸಂಸ್ಥೆಯ ಗುರುತಿನ ಚೀಟಿ ಹೊಂದಿರಬೇಕು 3. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 4. ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 5. ಎಲ್ಲಾ ವರ್ಗದ ದಮನಿತ ಮಹಿಳೆಯರಿಗೆ ಇ.ಡಿ.ಪಿ. ತರಬೇತಿಯೊಂದಿಗೆ ಸೌಲಭ್ಯ ನೀಡಲಾಗುತ್ತದೆ. 6. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡಲಾಗುತ್ತದೆ.

4	ಧನಶ್ರೀ ಯೋಜನೆ	1. ಅರ್ಜಿದಾರರು ಹೆಚ್.ಐ.ವಿ. ಸೋಂಕಿತರೆಂದು ಆರೋಗ್ಯ ಕೇಂದ್ರದಲ್ಲಿ/ಐ.ಸಿ.ಟಿ.ಸಿ. ಕೇಂದ್ರಗಳಲ್ಲಿ ಪಡೆದ ವೈದ್ಯಕೀಯ ವರದಿಯನ್ನು ಹೊಂದಿರುವುದು. 2. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. 3.ಅರ್ಜಿದಾರರು ರಾಷ್ಟ್ರೀಕೃತ ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಚಾಲ್ತಿಯಲ್ಲಿರಬೇಕು. 4.ಅರ್ಜಿದಾರರು 18 ರಿಂದ 60 ವರ್ಷದೊಳಗಿರಬೇಕು. 5. ಅರ್ಜಿದಾರರು ಖಾತೆ ಹೊಂದಿರುವ ಆರ್ಥಿಕ ಸಂಸ್ಥೆ/ ಬ್ಯಾಂಕುಗಳಲ್ಲಿ ಸಾಲಗಾರರಾಗಿರಬಾರದು.
5	ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ	1. ವಯೋಮಿತಿ 18 ವರ್ಷ ಮೀರಿರಬೇಕು. 2.ಲಿಂಗತ್ವ ಅಲ್ಪಸಂಖ್ಯಾತರು ಸಮುದಾಯ ಆಧಾರಿತ ಸಂಸ್ಥೆ ಅಥವಾ ಜಿಲ್ಲಾಧಿಕಾರಿಗಳು ಅನುಮೋದಿಸಿದ ಸಂಸ್ಥೆಗಳಾದ ಸಂಗಮ ಅಥವಾ ಕೆ.ಎಸ್.ಎಂ.ಎಫ್. ಸಂಸ್ಥೆಗಳಲ್ಲಿ ನೊಂದಣಿಯಾಗಿರಬೇಕು. 3.ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 4.ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 5. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.
6	ಮಹಿಳಾ ತರಬೇತಿ ಯೋಜನೆ	1 ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ವಿಧವೆಯರಿಗೆ, ನಿರ್ಗತಿಕ ಮತ್ತು ವಿಕಲಚೇತನರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ತರಬೇತಿ ನೀಡಿ ಉದ್ಯಮಶೀಲತೆ ಬೆಳೆಸುವುದು.2.ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳ ಮೂಲಕ ತರಬೇತಿಯನ್ನು ನೀಡುವುದು.3. ವಯೋಮಿತಿ 18 ರಿಂದ 45 ವರ್ಷಗಳು.
7	ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ. ಮುಖಾಂತರ)	1.ಹಾಲಿ ಕಾರ್ಯನಿರ್ವಹಿಸುತ್ತಿರುವ ಸಣ್ಣ/ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರಿಗೆ ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ/ ಆಧುನೀಕರಣಗೊಳಿಸುವ ಸಲುವಾಗಿ. ಘಟಕ ವೆಚ್ಚ ಕನಿಷ್ಠ ರೂ.5ಲಕ್ಷದಿಂದ ಗರಿಷ್ಠ ರೂ.2ಕೋಟಿಗಳ ವರೆಗೆ ಆರ್ಥಿಕ ನೆರವು ಒದಗಿಸಲಾಗುವುದು. 2. * ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು. * ಪಾಲುದಾರಿಕೆಯ ಉದ್ಯಮ/ನಿಯಮಿತ ಕಂಪನಿಗಳಲ್ಲಿ ಹೆಚ್ಚಿನ ಷೇರು/ನಿರ್ದೇಶಕರು ಶೇ 5ರಷ್ಟು ಇರಬೇಕು. * ಫಲಾನುಭವಿಗಳು ಒಂದು ಸಲ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
8	ಮಾಜಿ ದೇವದಾಸಿ ಪುನರ್ವಸತಿ ಯೋಜನೆ(ಆದಾಯೋತ್ಪನ್ನಕರ ಚಟುವಟಿಕೆ)	1. 1993-94 ಹಾಗೂ 2007-08ನೇ ಸಾಲಿನಲ್ಲಿ ಮಾಡಿದ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರಬೇಕು. 2. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆ ಹೊಂದುವುದು. ಬ್ಯಾಂಕ್ ಖಾತೆಯೊಂದಿಗೆ ಅರ್ಜಿದಾರರ ಆಧಾರ ಸೀಡಿಂಗ್ ಆಗಿರಬೇಕು. 3. ಯಾವುದೇ ಬ್ಯಾಂಕು/ಸಂಸ್ಥೆಗಳಲ್ಲಿ ಸುಸ್ತಿದಾರರಾಗಿರಬಾರದು ಎನ್ನುವುದು ಕಡ್ಡಾಯವಾಗಿರುತ್ತದೆ. 4. ಮಾಜಿ ದೇವದಾಸಿ ಮಹಿಳೆಯರಿಗೆ ಇ.ಡಿ.ಪಿ. ತರಬೇತಿಯೊಂದಿಗೆ , ಸೌಲಭ್ಯ ನೀಡಲಾಗುತ್ತದೆ. 5. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

9	ಮಾಜಿ ದೇವದಾಸಿಯರಿಗೆ ಮಾಸಾಶನ	1. 1993–94ನೇ ಮತ್ತು 2007–08ನೇ ಸಾಲಿನಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಹಾಗೂ ಪುನರ್ ಖಾತರೀಕರಣದಲ್ಲಿಯೂ ಗುರುತಿಸಲ್ಪಟ್ಟ ಮಾಜಿ ದೇವದಾಸಿಯರು ಮಾತ್ರ ಮಾಸಾಶನಕ್ಕೆ ಅರ್ಹರಿರುತ್ತಾರೆ. 2. 45 ವರ್ಷ ಅಥವಾ 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವಳಾಗಿರತಕ್ಕದ್ದು. 3. ಮಾಸಾಶನಕ್ಕೆ ಅರ್ಹರಿವ ಮಾಜಿ ದೇವದಾಸಿಯರ ಸಂಪೂರ್ಣ ವಿವರವನ್ನು ಪರಿಶೀಲಿಸಿ ಆಯಾಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅನುಮೋದನೆ ನೀಡುವುದು. 4.ಅನುಮೋದನೆಯಾದ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಿಕ ರೂ.1500/– ಗಳಂತೆ ಮಾಸಾಶನವನ್ನು ನಿಗಮದ ಮೂಲಕ ನೇರವಾಗಿ ಅವರ ಖಾತೆಗೆ ಜಮೆ ಮಾಡಲಾಗುವುದು.

****

ಅನುಬಂಧ–3

2020–21ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಕಾರ್ಯಕ್ರಮ/ಯೋಜನೆಗಳ ಪ್ರಗತಿ ವರದಿ (ಆರ್ಥಿಕ ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಆಯವ್ಯಯ ಹಂಚಿಕೆ	ಬಿಡುಗಡೆ ಜನವರಿ–2021ರ ಅಂತ್ಯಕ್ಕೆ	ವೆಚ್ಚ ಜನವರಿ–2021ರ ಅಂತ್ಯಕ್ಕೆ
	I. ಕೇಂದ್ರ ಪುರಸ್ಕೃತ ಯೋಜನೆಗಳು (ರಾಜ್ಯವಲಯ ಯೋಜನೆ)			
1	ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ತರಬೇತಿ (CSS)(60:40) 2235-02-102-0-05-015	50.00	299.17	0.00
2	ಉದ್ಯೋಗಿ ಮಾತೆಯರ ಮಕ್ಕಳಿಗಾಗಿ ಶಿಶುವಿಹಾರಗಳು (CSS:SS–60:40) 2235-02-102-0-13	500.00	562.65	93.83
3	ಬೇಟಿ ಬಚಾವೊ ಬೇಟಿ ಪಡಾವೊ 2235–02–102–0–41	0.00	125.00	61.17
4	ಕೇಂದ್ರ ಪುರಸ್ಕೃತ ಯೋಜನೆ–ಪೋಷಣ ಅಭಿಯಾನ (ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನ) 2235–02–102–0–43	12500.00	6396.45	3225.70
5	ಪ್ರಾಯಪೂರ್ವ ಬಾಲಕಿಯರ ಸಬಲೀಕರಣ ರಾಜೀವ್ ಗಾಂಧಿ ಯೋಜನೆ (ಸಬಲ) ಪೌಷ್ಠಿಕಾಂಶ (CSS: SS - 50:50) & ಪೌಷ್ಠಿಕೇತರಾಂಶ (CSS: SS - 60:40) 2235-02-103-0-46	712.00	20.31	0.00
6	ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ (CSS: SS – 60:40) 2235-02-103-0-61-059	5700.00	10716.25	16056.47
7	ಸ್ವಾಧಾರ ಗೃಹ 2235-02-103-0-64-059	200.00	454.75	0.00
8	ಉಜ್ವಲ ಯೋಜನೆ 2235-02-103-0-67	100.00	197.20	52.12
9	ಅಂಗನವಾಡಿ ಕಟ್ಟಡಗಳ ಉನ್ನತೀಕರಣ 4235-02-102-1-03-125	1000.00	0.00	0.00
	II. ಕೇಂದ್ರ ಪುರಸ್ಕೃತ ಯೋಜನೆಗಳು (ಜಿಲ್ಲಾವಲಯ ಯೋಜನೆ)			
1	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) (CSS:SS – 60:40) 2211-00-102-0-02	1212.66	1208.70	1096.77
2	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (204 ಶಿಶು ಅಭಿವೃದ್ಧಿ ಯೋಜನೆಯ ಆಡಳಿತ ವೆಚ್ಚ) (2211-00-102-0-22 (TP) CSS:SS - 60:40)	156826.81	155314.15	149110.86
3	ಶಾಲಾ ಪೂರ್ವ ಮಕ್ಕಳ ಊಟದ ಯೋಜನೆ 2235-00-101-0-61 (TP) (CSS: SS - 50:50)	197174.53	131447.25	131095.56
	III. ರಾಜ್ಯ ವಲಯ ಯೋಜನೆಗಳು			
1	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಪ್ರಧಾನ ಕಛೇರಿ) 2235-02-001-0-01	2102.00	1944.34	1212.84
2	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (H.O. Cell) 2235-02-102-0-04	265.00	260.50	134.42
3	ಮಹಿಳಾ ಮತ್ತು ಮಕ್ಕಳ ಅನೈತಿಕ ಸಾಗಾಟಕ ನಿವಾರಣೆಯ ಯೋಜನೆ 2235-02-102-0-24-100	30.00	30.00	0.00
4	ಭಾಗ್ಯಲಕ್ಷ್ಮಿ ಯೋಜನೆ 2235-02-102-0-25	10000.00	3873.68	0.00

ಕ್ರ. ಸಂ.	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಆಯವ್ಯಯ ಹಂಚಿಕೆ	ಬಿಡುಗಡೆ ಜನವರಿ–2021ರ ಅಂತ್ಯಕ್ಕೆ	ವೆಚ್ಚ ಜನವರಿ–2021ರ ಅಂತ್ಯಕ್ಕೆ
5	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ 2235-02-102-0-27-117	30.00	30.00	1.86
6	ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚಗಳನ್ನು ಭರಿಸುವ ಬಗ್ಗೆ (ಬಾಲಸಂಜೀವಿನಿ) 2235-02-102-0-30	200.00	200.00	57.70
7	ಅಂಗನವಾಡಿಗಳ ನಿರ್ವಹಣೆ 2235-02-102-0-40 (CSS: SS - 60:40)	1000.00	979.00	0.00
8	ನಗರ ಅಂಗನವಾಡಿಗಳ ಮೇಲ್ದರ್ಜೆಕರಣ 2235–02–102–0–44	300.00	150.00	0.00
9	ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸೇವೆ ಸಲ್ಲಿಸಿದ 2 ವ್ಯಕ್ತಿ ಹಾಗೂ 2 ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ –ಮಕ್ಕಳ ದಿನಾಚರಣೆ 2235–02–102–0–99–100	15.00	15.00	0.00
10	ಮಹಿಳಾ ದಿನಾಚರಣೆ 2235–02–102–0–99–100	35.00	35.00	0.00
11	ಸ್ತ್ರೀಶಕ್ತಿ ಯೋಜನೆ 2235-02-103-0-41	702.00	697.50	103.77
12	ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರಿಗೆ ರಕ್ಷಣೆ ನೀಡುವ ಯೋಜನೆ 2235–02–103–0–52	704.00	698.00	355.36
13	ಬಾಲಕಿಯರ ವಸತಿ ನಿಲಯ 2235-02-103-0-99-100	495.00	288.50	123.48
14	ಹೆಚ್‌ಐವಿ / ಎಡ್ಸ್ ಬಾದಿತರಾದ ಮಹಿಳೆಯರಿಗೆ ಅಶ್ರಯ ಒದಗಿಸುವ ಯೋಜನೆ 2235–02–103–0–99–100	5.00	2.50	0.00
15	ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಮರಣ ಪರಿಹಾರ ನಿಧಿ 2235-02-103-0-99-100	100.00	100.00	54.80
16	ರಾಜ್ಯ ಮಹಿಳಾ ನಿಲಯ ಮತ್ತು ಸ್ವೀಕಾರ ಕೇಂದ್ರ 2235-02-106-0-06	674.00	605.50	358.59
17	ಅಂಗನವಾಡಿ ಕಾರ್ಯಕರ್ತೆಯರಿಗೆ ನೂತನ ಪಿಂಚನೆ ವ್ಯವಸ್ಥೆ 2235-60-103-0-01	1000.00	1000.00	500.00
18	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಆರ್‌ಐಡಿಎಫ್–ನಬಾರ್ಡ್) 4235-02-102-0-01-436	5000.00	5000.00	1816.00
19	ಅಂಗನವಾಡಿ ಕಟ್ಟಡಗಳು ವಿಶೇಷ ಅಭಿವೃದ್ಧಿ ಯೋಜನೆ 4235-02-102-0-02-133	2000.00	1990.00	0.00
20	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 4235-02–102–0–05	332.00	330.00	0.00
21	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಐ.ಸಿ.ಡಿ.ಎಸ್. – ನರೇಗ) 4235-02-102-0-06	500.00	375.00	155.00
22	ಸುಧಾರಣಾ ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಕಾಮಗಾರಿ 4235-02-106-1-01-139	550.00	0.00	0.00
	IV. ಜಿಲ್ಲಾ ವಲಯ ಯೋಜನೆಗಳು			
1	ನಿರ್ಗತಿಕ ಮಕ್ಕಳ ಕುಟೀರ ಯೋಜನೆ 2211-00-102-0-26	599.65	516.71	39.84
2	ಅಂಗನವಾಡಿ ಕಟ್ಟಡ ನಿರ್ವಹಣೆ ಮತ್ತು ದುರಸ್ತಿ	2500.00	2500.00	2220.28

ಕ್ರ. ಸಂ.	ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಆಯವ್ಯಯ ಹಂಚಿಕೆ	ಬಿಡುಗಡೆ ಜನವರಿ–2021ರ ಅಂತ್ಯಕ್ಕೆ	ವೆಚ್ಚ ಜನವರಿ–2021ರ ಅಂತ್ಯಕ್ಕೆ
	2211-00-102-0-61 (TP)			
3	ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ2211-00-102-0-63 (TP)	20.00	6.00	3.85
4	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (ಜಿಲ್ಲಾ ಸಿಬ್ಬಂದಿ ಮತ್ತು ಆಡಳಿತ) 2235-00-101-0-27	1087.94	1054.51	807.63
5	ಮುಖ್ಯ ಸೇವಕರು ಮತ್ತು ಗ್ರಾಮ ಸೇವಕರು 2235-00-101-0-31	7.42	6.71	4.90

ಕಳೆದ 03 ವರ್ಷದಲ್ಲಿ ಇಲಾಖೆಯ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿಯ ವಿವರ (ಯೋಜನವಾರು)

ಕ್ರಂ	ಯೋಜನೆಯ ವಿವರ	2017–2018		2018–2019		2019–2020	
		ಮಂಜೂರಾದ ಅನುದಾನ	ಬಳಕೆಯಾದ ಅನುದಾನ	ಮಂಜೂರಾದ ಅನುದಾನ	ಬಳಕೆಯಾದ ಅನುದಾನ	ಮಂಜೂರಾದ ಅನುದಾನ	ಬಳಕೆಯಾದ ಅನುದಾನ
1	ವಿಕಲಚೇತನರಿಗೆ ವಿದ್ಯಾರ್ಥಿವೇತನ ಯೋಜನೆ	596.00	526.57	596.00	504.08	563.28	544.76
2	ಉದ್ಯೋಗಸ್ಥ ವಿಕಲಚೇತನರ ಮಹಿಳೆಯರಿಗೆ ವಸತಿ ನಿಲಯ	350.00	303.34	350.00	313.32	320.09	320.09
3	ಸಾಧನ ಸಲಕರಣೆಗಳು	145.75	135.66	300.00	240.85	332.00	245.80
4	ಟಾಕಿಂಗ್ ಲ್ಯಾಪ್ ಟಾಪ್	170.92	170.92	241.00	0.00	240.67	240.67
5.	ಯಂತ್ರಚಾಲಿತ ದ್ವಿಚಕ್ರ ವಾಹನ	2800.00	2619.96	700.00	0.00	1329.53	1329.53
6.	ಸಾಧನೆ ಪ್ರತಿಭೆ	47.10	25.74	70.50	63.24	62.57	51.82
7.	ಗ್ರಾಮೀಣ ಪುನರ್ವಸತಿ ಕೇಂದ್ರ	1759.26	1600.96	1901.00	1756.93	1943.26	1859.05
8.	ಮರಣ ಪರಿಹಾರ ನಿಧಿ	6.50	5.00	13.00	10.50	6.50	6.00
9.	ನಿರುದ್ಯೋಗ ಭತ್ಯೆ	3.88	1.65	49.55	1.59	3.33	3.29
10.	ಆಧಾರ ಯೋಜನೆ	466.38	455.87	0.00	0.00	389.98	142.32
11	ವೈದ್ಯಕೀಯ ಪರಿಹಾರ ನಿಧಿ	90.38	49.45	100.00	45.76	59.52	51.82
12.	ಶುಲ್ಕ ಮರುಪಾವತಿ	209.17	173.98	175.00	161.98	199.40	186.02
13.	ವಿವಾಹ ಪ್ರೋತ್ಸಾಹ ಧನ	613	570.50	450.00	463.50	378.50	374.00
14.	ಶಿಶುಪಾಲನ ಭತ್ಯೆ	33.79	25.66	30.00	28.68	31.10	27.36
15.	ನಿರಾಮಯ	15.84	2.09	10.00	0.56	2.48	1.72
16.	ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ	192.96	185.55	275.00	204.57	192.17	192.17
17.	ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ	149.13	130.10	144.20	160.75	149.75	132.23
18.	ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ	171.24	170.58	172.48	172.04	150.82	145.04
19.	ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ	318.65	225.07	246.24	323.96	206.96	205.74
20.	ಶಿಶುಕೇಂದ್ರಿಕೃತ ಯೋಜನೆ	6056.00	5751.10	5236.00	5257.55	5527.13	5377.75
21	ವೃದ್ಧಾಶ್ರಮ	523.00	187.43	240.00	239.70	195.89	167.13

22	1982 ರಾಜ್ಯ ಅನುದಾನ ಸಂಹಿತ ಯೋಜನೆ	1487.77	907.64	1379.92	1205.57	1462.52	1130.40
	ಒಟ್ಟು	**16206.72**	**14224.82**	**12679.89**	**11155.13**	**13747.45**	**12734.71**

ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ

2019-20ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ಪ್ರಯೋಜನ ಪಡೆದ ಫಲಾನುಭವಿಗಳ ವಿವರ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಯೋಜನೆಯ ವಿವರ	ಫಲಾನುಭವಿಗಳ ಸಂಖ್ಯೆ
1	ಬಾಲಮಂದಿರಗಳು	2201
2	ವೀಕ್ಷಣಾಲಯಗಳು	78
3	ತೆರೆದ ತಂಗುದಾಣಗಳು	783
4	ವಿಶೇಷ ಪ್ರಾಯೋಜಕತ್ವ ಯೋಜನೆ	2078
5	ವಿಶೇಷ ಪಾಲನಾ ಯೋಜನೆ	17548
	ಒಟ್ಟು	**22688**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

2020-21ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ, ವಿವಿಧ ಯೋಜನೆಗಳಲ್ಲಿ ಜನವರಿ ಅಂತ್ಯದ ವರೆಗಿನ ಪ್ರಗತಿ ವಿವರ

(ರೂ. ಲಕ್ಷಗಳಲ್ಲಿ)

ಕ್ರಸಂ	ಯೋಜನೆ ಹೆಸರು	2020-21		ಷರಾ
		ಮಂಜೂರಾದ ಅನುದಾನ	ಬಳಕೆಯಾದ ಅನುದಾನ (ಜನವರಿ ಅಂತ್ಯದವರೆಗೆ)	
1	ಉದ್ಯೋಗಿನಿ	2000.00	2000.00	
2	ಕಿರುಸಾಲ	2500.00	500.00	
3	ಸಮೃದ್ಧಿ	-	-	2020-21ನೇ ಸಾಲಿನಲ್ಲಿ ಅನುದಾನ ನಿಗದಿಪಡಿಸಿರುವುದಿಲ್ಲ
4	ಧನಶ್ರೀ	200.00	137.50	
5	ಚೇತನಾ	400.00	263.90	
6	ಲಿಂಗತ್ವ ಅಲ್ಪ ಸಂಖ್ಯಾತರ ಪುನರ್ವಸತಿ	300.00	212.50	
7	ನಿಗಮದ ಬಡ್ಡಿ ಸಹಾಯಧನ ಯೋಜನೆ (ಇಂದಿರಾ)	151.00	0.00	
8	ಕೆ.ಎಸ್.ಎಫ್.ಸಿ ಬಡ್ಡಿ ಸಹಾಯಧನ ಯೋಜನೆ	5000.00	5000.00	
9	ದೇದವಾಸಿ ಪುನರ್ವಸತಿ ಯೋಜನೆ	614.00	438.80	
10	ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ	-	-	2020-21ನೇ ಸಾಲಿನಲ್ಲಿ ಅನುದಾನ ನಿಗದಿಪಡಿಸಿರುವುದಿಲ್ಲ
11	ದೇವದಾಸಿ ಮಾಸಾಶನ	5423.40	4519.50	
12	ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಬಳಕೆಯಾಗದ ಅನುದಾನ	7825.00	5216.00	
13	ಮಹಿಳಾ ತರಬೇತಿ ಯೋಜನೆ	100.00	0.00	

****

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1652
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
ಉತ್ತರಿಸಬೇಕಾದ ದಿನಾಂಕ	:	10.03.2021
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಂಖ್ಯೆ ಎಷ್ಟು? (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ವಿಕಲಚೇತನರ ಜನಸಂಖ್ಯೆ 1324205 ಇರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ) 2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಹಿರಿಯ ನಾಗರಿಕರ ಜನಸಂಖ್ಯೆ 57,91,032 ಇರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 2ರಲ್ಲಿ ಲಗತ್ತಿಸಿದೆ)
ಆ)	ರಾಜ್ಯದಲ್ಲಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಜಾರಿಯಲ್ಲಿರುವ ವಿವಿಧ ಯೋಜನೆಗಳಡಿ ಯಲ್ಲಿ ನೀಡುತ್ತಿರುವ ಸೌಲಭ್ಯಗಳು ಯಾವುವು ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಯೋಜನೆಗಳ ವಿವರಗಳನ್ನು ಕೆಳಕಂಡಂತೆ ಇದೆ. **<u>(ಎ) ಶೈಕ್ಷಣಿಕ:-</u>** 1.ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು 2.ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು 3.ಸರ್ಕಾರಿ ಅನುದಾನಿತ ಶಾಲೆಗಳು (ಅ) 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುವ ವಿಶೇಷ ಶಾಲೆ / ತರಬೇತಿ ಕೇಂದ್ರಗಳು (ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ 4.ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ 5. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ 6. ಬ್ರೈಲ್ ಮುದ್ರಣಾಲಯ 7. ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ 8. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು **<u>(ಬಿ) ಉದ್ಯೋಗ ಮತ್ತು ತರಬೇತಿ:</u>** 1.ಅಂಗವಿಕಲ ಉದ್ಯೋಗಸ್ಥ ಪುರುಷ ಹಾಗೂ ಮಹಿಳೆಯರ ವಸತಿನಿಲಯ 2.ಆಧಾರ ಯೋಜನೆ 3.ಗ್ರಾಮೀಣ ಪುನರ್ವಸತಿ ಯೋಜನೆ 4.ಉದ್ಯೋಗಸ್ಥ ವಿಕಲಚೇತನ ಮಹಿಳೆಯರ ಹಾಗೂ ತರಬೇತಿದಾರರ / ವಿದ್ಯಾರ್ಥಿನಿಯರ ವಸತಿ ನಿಲಯಗಳು **<u>(ಸಿ) ಸಾಮಾಜಿಕ ಭದ್ರತಾ ಯೋಜನೆಗಳು:</u>** 1.ಸಮಾಜ ಸೇವಾ ಸಂಕೀರ್ಣ 2.ಮಂದಮತಿ ಮಹಿಳೆಯರ ಅನುಪಾಲನಾ ಗೃಹ 3.ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು 4.ಬುದ್ಧಿಮಾಂದ್ಯ ಮಕ್ಕಳ ತಂದೆ / ತಾಯಿ / ಪೋಷಕರ ವಿಮಾ ಯೋಜನೆ 5.ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ 6.ಶಿಶುಪಾಲನಾ ಭತ್ಯೆ

		(ಡಿ) ಪುನರ್ವಸತಿ ಯೋಜನೆಗಳು: 1.ಅಂಗವಿಕಲರಿಗೆ ಸಾಧನ ಸಲಕರಣೆಗಳು ಅ) ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ ಆ)ತೀವ್ರತರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ 2.ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ 3.ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ 4.ಸಾಧನೆ ಮತ್ತು ಪ್ರತಿಭೆ ಯೋಜನೆ 5.ನಿರಾಮಯ ಆರೋಗ್ಯ ವಿಮಾ ಯೋಜನೆ 6.ಸ್ಪರ್ಧಾ ಚೇತನ 7.ನಿರುದ್ಯೋಗ ಭತ್ಯೆ (ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು: 1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ 2. ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ 3. ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್ **(ಈ) ಹಿರಿಯನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು:** 1. ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ 2. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು 3. ವೃದ್ಧಾಶ್ರಮಗಳಿಗೆ ಅನುದಾನ ನೀಡುವ ಯೋಜನೆ 4. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು: **ಮೇಲ್ಕಂಡ ಎಲ್ಲಾ ಯೋಜನೆಗಳಡಿ ನೀಡುತ್ತಿರುವ ಸೌಲಭ್ಯ ಹಾಗೂ ಯೋಜನೆ ಮಾನದಂಡಗಳನ್ನು ಅನುಬಂಧ-03 ಮತ್ತು 04ರಲ್ಲಿ ಲಗತ್ತಿಸಿದೆ.**
ಇ)	ಹಾಸನ ಜಿಲ್ಲೆಯಲ್ಲಿ, ವಿಕಲಚೇತನರ ಶ್ರೇಯೋಭಿವೃದ್ಧಿಗೆ ನೊಂದಣಿಯಾಗಿರುವ ಸಂಸ್ಥೆಗಳೆಷ್ಟು? ಈ ಪೈಕಿ ಎಷ್ಟು ಸಂಸ್ಥೆಗಳು ವಿಕಲಚೇತನರ ಏಳಿಗೆಗೆ ಶ್ರಮಿಸುತ್ತಿವೆ? (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ ವಿಕಲಚೇತನರ ಶ್ರೇಯೋಭಿವೃದ್ಧಿಗೆ 8 ಸಂಸ್ಥೆಗಳು ನೊಂದಣಿಯಾಗಿರುತ್ತದೆ. ಈ 8 ಸಂಸ್ಥೆಗಳೂ ಸಹ ವಿಕಲಚೇತನರ ಏಳಿಗೆಗಾಗಿ ಶ್ರಮಿಸುತ್ತಿದೆ. **ವಿಧಾನಸಭಾ ಕ್ಷೇತ್ರವಾರು ಮಾಹಿತಿ ಈ ಕೆಳಕಂಡಂತಿದೆ. ಹಾಸನ ವಿಧಾನಸಭಾ ಕ್ಷೇತ್ರ:** (6) 1. ಕರ್ನಾಟಕ ಅಂಧರ ಒಕ್ಕೂಟ, ಹಾಸನ 2. ಕರ್ನಾಟಕ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ (ರಿ), ಬೆಂಗಳೂರು, 3. ಶ್ವೇತ ವಿದ್ಯಾಸಂಸ್ಥೆ (ರಿ) ಹಾಸನ, 4. ಶ್ರೀ ನಿವೇದಿತಾ ವಿದ್ಯಾಸಂಸ್ಥೆ, ಹಾಸನ, 5. ಸಾಧ್ಯ ಟ್ರಸ್ಟ್ ಫಾರ್ ಸೋಶಿಯಲ್ ಡೆವಲಪ್‌ಮೆಂಟ್ (ರಿ) ಮಡಿಕೇರಿ 6. ಭುವನೇಶ್ವರಿ ಅಸೋಸಿಯೇಷನ್ (ರಿ) ಹರಿಹರ **ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ:**(1) 1. ವಿದ್ಯಾರಣ್ಯ (ರಿ) ಬೆಂಗಳೂರು **ಸಕಲೇಶಪುರ-ಆಲೂರು ವಿಧಾನಸಭಾ ಕ್ಷೇತ್ರ :** (1) 1. ರೋಟರಿ ಟ್ರಸ್ಟ್, ಸಕಲೇಶಪುರ
ಈ)	ಹಾಸನ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ರೀತಿಯ ಎಷ್ಟು ವಿಕಲಚೇತನರಿಗೆ ವೀಲ್‌ಚೇರ್ ಮತ್ತು 3 ಚಕ್ರಗಳ ಮೋಟರ್ ವಾಹನಗಳನ್ನು ವಿತರಣೆ ಮಾಡಲಾಗಿದೆ? ಈ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸುವ ಮಾನದಂಡಗಳೇನು? (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ 29 ಅರ್ಹ ವಿಕಲಚೇತನರಿಗೆ ವೀಲ್‌ಚೇರ್‌ಗಳನ್ನು ವಿತರಿಸಲಾಗಿದೆ. 3 ಚಕ್ರಗಳ ಮೋಟರ್ ವಾಹನಗಳನ್ನು ರಾಜ್ಯ ಮಟ್ಟದಲ್ಲಿ ಖರೀದಿಸಲಾಗುತ್ತಿದ್ದು, ಪ್ರಧಾನ ಕಛೇರಿಯಿಂದ ಜಿಲ್ಲೆಗಳಿಗೆ ಸರಬರಾಜು ಮಾಡಲು ಕಾರ್ಯಾದೇಶವನ್ನು ನೀಡಲಾಗಿದೆ. 3 ಚಕ್ರಗಳ ಮೋಟಾರ್ ವಾಹನಗಳನ್ನು ಫಲಾನುಭವಿಗಳಿಗೆ ವಿತರಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯ ಮುಖಾಂತರ ಫಲಾನುಭವಿಗಳ ಆಯ್ಕೆಯನ್ನು ಮಾಡಲಾಗುತ್ತದೆ. ಈ ಸಮಿತಿಯಲ್ಲಿ

		ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ, ಪ್ರಾದೇಶಿಕ ಅಧಿಕಾರಿಗಳು, ಸಾರಿಗೆ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ದೈಹಿಕ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ. ಉದ್ಯೋಗ ನಿರ್ವಹಿಸುವ / ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವರ ಕಾರ್ಯಕ್ಷೇತ್ರಕ್ಕೆ / ಕಾಲೇಜುಗಳಿಗೆ ಹೋಗಿ ಬರಲು ಅನುಕೂಲವಾಗುವಂತೆ ಕುಟುಂಬದ ವಾರ್ಷಿಕ ಆದಾಯ ರೂ.2.00ಲಕ್ಷಗಿಂತ ಕಡಿಮೆಯಿರುವ ಶೇ.75ಕ್ಕಿಂತ ಹೆಚ್ಚಿನ ಅಂಗವಿಕಲತೆಯನ್ನು ಹೊಂದಿರುವ ತೀವ್ರತರನಾದ ವಿಕಲಚೇತನರನ್ನು ಈ ಯೋಜನೆಯಡಿ ಆಯ್ಕೆ ಮಾಡಿ ಅವರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ನೀಡಲಾಗುವುದು. ವೀಲ್‌ಚೇರ್ ಯೋಜನೆಯಡಿ ಆಯ್ಕೆಯಾಗುವ ಫಲಾನುಭವಿಗಳನ್ನು ವೈದ್ಯಕೀಯ ಪ್ರಮಾಣ ಪತ್ರದ ಶಿಫಾರಸ್ಸಿನ ಮೇರೆಗೆ ಆಯ್ಕೆ ಮಾಡಲಾಗುವುದು.
ಉ)	ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ರೀತಿಯ ಎಷ್ಟು ವಿಕಲಚೇತನರಿಗೆ ವೀಲ್‌ಚೇರ್ ಮತ್ತು 3 ಚಕ್ರಗಳ ಮೋಟಾರ್ ವಾಹನಗಳನ್ನು ವಿತರಣೆ ಮಾಡಲಾಗಿದೆ? ಈ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸುವ ಮಾನದಂಡಗಳೇನು? ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ 793 ವೀಲ್‌ಚೇರ್‌ಗಳನ್ನು ವಿತರಣೆ ಮಾಡಲಾಗಿದೆ. ದ್ವಿಚಕ್ರ ಯಂತ್ರಚಾಲಿತ ಮೋಟಾರ್ ವಾಹನಗಳನ್ನು ವಿತರಣೆ ಮಾಡಲು ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ವೀಲ್‌ಚೇರ್ ಯೋಜನೆಯಡಿ ಆಯ್ಕೆಯಾಗುವ ಫಲಾನುಭವಿಗಳನ್ನು ವೈದ್ಯಕೀಯ ಪ್ರಮಾಣ ಪತ್ರದ ಶಿಫಾರಸ್ಸಿನ ಮೇರೆಗೆ ಆಯ್ಕೆ ಮಾಡಲಾಗುವುದು. ದ್ವಿಚಕ್ರ ಯಂತ್ರಚಾಲಿತ ಮೋಟಾರ್ ವಾಹನಗಳನ್ನು ಫಲಾನುಭವಿಗಳಿಗೆ ವಿತರಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯ ಮುಖಾಂತರ ಫಲಾನುಭವಿಗಳ ಆಯ್ಕೆಯನ್ನು ಮಾಡಲಾಗುತ್ತದೆ. ಈ ಸಮಿತಿಯಲ್ಲಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ, ಪ್ರಾದೇಶಿಕ ಅಧಿಕಾರಿಗಳು, ಸಾರಿಗೆ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ದೈಹಿಕ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ. ಉದ್ಯೋಗ ನಿರ್ವಹಿಸುವ / ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವರ ಕಾರ್ಯಕ್ಷೇತ್ರಕ್ಕೆ / ಕಾಲೇಜುಗಳಿಗೆ ಹೋಗಿ ಬರಲು ಅನುಕೂಲವಾಗುವಂತೆ ಕುಟುಂಬದ ವಾರ್ಷಿಕ ಆದಾಯ ರೂ.2.00ಲಕ್ಷಗಿಂತ ಕಡಿಮೆಯಿರುವ ಶೇ.75ಕ್ಕಿಂತ ಹೆಚ್ಚಿನ ಅಂಗವಿಕಲತೆಯನ್ನು ಹೊಂದಿರುವ ತೀವ್ರತರನಾದ ವಿಕಲಚೇತನರನ್ನು ಈ ಯೋಜನೆಯಡಿ ಆಯ್ಕೆ ಮಾಡಿ ಅವರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ನೀಡಲಾಗುವುದು. ಈ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಮಾನದಂಡವು ರಾಜ್ಯದಲ್ಲಿ ಏಕ ಸ್ವರೂಪದಲ್ಲಿರುತ್ತದೆ.

ಸಂಖ್ಯೆ: ಮಮಇ 74 ಪಿಹೆಚ್‌ಪಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಅನುಬಂಧ–1

2011ರ ಜನಗಣತಿಯ ಅನುಸಾರ ರಾಜ್ಯದಲ್ಲಿರುವ ವಿಕಲಚೇತನರ ಜನಸಂಖ್ಯೆ

ಕ್ರ. ಸಂ.	ಜಿಲ್ಲೆಗಳ ಹೆಸರು	ಒಟ್ಟು
1	ಬೆಂಗಳೂರು ನಗರ	274230
2	ಬೆಂಗಳೂರು (ಗ್ರಾ)	20294
3	ಬೆಳಗಾಂ	92594
4	ಬಳ್ಳಾರಿ	50895
5	ಬೀದರ್	42637
6	ಬಿಜಾಪುರ	43533
7	ಬಾಗಲಕೋಟೆ	43179
8	ಚಿತ್ರದುರ್ಗ	35971
9	ಚಿಕ್ಕಮಗಳೂರು	21224
10	ಚಾಮರಾಜನಗರ	20464
11	ಧಾರವಾಡ	37221
12	ದಕ್ಷಿಣ ಕನ್ನಡ	28095
13	ದಾವಣಗೆರೆ	40819
14	ಗುಲ್ಬರ್ಗಾ	66392
15	ಗದಗ	25114
16	ಹಾಸನ	32232
17	ಹಾವೇರಿ	37760
18	ಕೊಡಗು	7369
19	ಕೋಲಾರ	32277
20	ಕೊಪ್ಪಳ	34599
21	ಮೈಸೂರು	60470
22	ಮಂಡ್ಯ	36228
23	ರಾಯಚೂರು	39366
24	ಶಿವಮೊಗ್ಗ	28835
25	ತುಮಕೂರು	58957
26	ಉತ್ತರ ಕನ್ನಡ	22593
27	ಉಡುಪಿ	16922
28	ರಾಮನಗರ	19183
29	ಚಿಕ್ಕಬಳ್ಳಾಪುರ	29848
30	ಯಾದಗಿರಿ	24904
	ಒಟ್ಟು	1324205

Annexure 02

Senior Citizens Survey Report 2011 Censes			
	Total		
District-Name	**Persons**	**Males**	**Females**
Total Bagalkot	168890	76248	92642
TOTAL Bangalore	722578	365864	356714
TOTAL Bangalore Rural	101168	49949	51219
TOTAL Belgaum	483958	227341	256617
TOTAL Bellary	182156	81628	100528
TOTAL Bidar	173723	81793	91930
TOTAL Bijapur	198261	95440	102821
TOTAL Chamarajanagar	117813	57390	60423
TOTAL Chikkaballapura	132581	65249	67332
TOTAL Chikmagalur	122246	57991	64255
TOTAL Chitradurga	167841	82656	85185
TOTAL Dakshina Kannada	207055	93344	113711
TOTAL Davanagere	180049	86113	93936
TOTAL Dharwad	173767	82759	91008
TOTAL Gadag	101044	45759	55285
TOTAL Gulbarga	214776	100209	114567
TOTAL Hassan	209808	97271	112537
TOTAL Haveri	141138	68988	72150
TOTAL Kodagu	57774	26704	31070
TOTAL Kolar	154857	74908	79949
TOTAL Koppal	114013	50110	63903
TOTAL Mandya	214369	99438	114931
TOTAL Mysore	302368	146192	156176
TOTAL Raichur	139496	60881	78615
TOTAL Ramanagara	132692	63839	68853
TOTAL Shimoga	165386	77222	88164
TOTAL Tumkur	318448	155004	163444
TOTAL Udupi	154782	68172	86610
TOTAL Uttara Kannada	145646	68354	77292
TOTAL Yadgir	92349	40256	52093
TOTAL KARNATAKA	**5791032**	**2747072**	**3043960**

ಅನುಬಂಧ–3

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿಕಲಚೇತನ ಹಾಗೂ ಹಿರಿಯ ನಾಗರಿಕರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

ವಿಕಲಚೇತನರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

(ಎ) ಶೈಕ್ಷಣಿಕ:–

1) ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಶ್ರವಣದೋಷವುಳ್ಳ ಮಕ್ಕಳಿಗಾಗಿ ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 4 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ಇಲಾಖಾವತಿಯಿಂದ ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

2. ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಅಂಧ ಮಕ್ಕಳಿಗಾಗಿ ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ.ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

3. 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳು:

(ಅ) 1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ.ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:

ಈ ಯೋಜನೆಯಡಿ ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ.1982ರ ರಾಜ್ಯ ಅನುದಾನ ಸಂಹಿತೆಯಡಿ 5 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರಿನಲ್ಲಿ 03 ಮತ್ತು ಮೈಸೂರಿನಲ್ಲಿ 02 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾಕ್ ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ.ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

(ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 138 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/– ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/– ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/– ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/– ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ.

ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

(ಇ) ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆಯಡಿ 8 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು ನಡೆಯುತ್ತಿದ್ದು, ಸದರಿ ಶಾಲೆ ಹಾಗೂ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

4. <u>ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ:</u>

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ.2001–02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

<u>ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:</u>

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ.ಈ ಯೋಜನೆಯನ್ನು 2001–02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

<u>ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:</u>

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013–14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

<u>ಬ್ರೈಲ್ ಮುದ್ರಣಾಲಯ:</u>

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

8. <u>ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:</u>

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

9. <u>ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:</u> ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ.10,000/–ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

(ಬಿ) ಉದ್ಯೋಗ ಮತ್ತು ತರಬೇತಿ:

2. ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:

ಬೆಂಗಳೂರಿನ ಕೆಂಗೇರಿಯಲ್ಲಿ ವಿಕಲಚೇತನ ಮಹಿಳೆ ಮತ್ತು ವಿಕಲಚೇತನ ಪುರುಷರಿಗಾಗಿ ಅಂಗವಿಕಲ ಉದ್ಯೋಗಸ್ಥ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗಾಗಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ವಸತಿ ನಿಲಯವನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸಲಾಗುತ್ತಿದೆ.ಪ್ರಸ್ತುತ ಈ ಎರಡೂ ವಸತಿ ನಿಲಯಗಳು ಬೆಂಗಳೂರಿನ ಕೆಂಗೇರಿಯಲ್ಲಿ ನಡೆಯುತ್ತಿವೆ. ಪ್ರತಿ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.

3. ಆಧಾರ ಯೋಜನೆ :

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಸಾಲ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತಿದೆ.ಈ ಯೋಜನೆಯಡಿ ರೂ.1.00 ಲಕ್ಷ ರೂ.ಗಳ ಸಹಾಯಧನವನ್ನು ನೀಡಲು ಅವಕಾಶವಿದ್ದು, ಇದರಲ್ಲಿ ಶೇ.50ರಷ್ಟು ಬಡ್ಡಿ ಸಹಿತವಾಗಿ ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲಾಗುವುದು.

4. ಗ್ರಾಮೀಣ ಪುನರ್ವಸತಿ ಯೋಜನೆ:

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಮಮಇ/241/ಪಿಹೆಚ್‌ಪಿ/2019, ದಿನಾಂಕ: 07-02-2020ರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/-ಗಳಿಂದ ರೂ.6000/-ಗಳಿಗೆ ಹಾಗೂ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.6000/-ಗಳಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಮರಣ ಪರಿಹಾರ ನಿಧಿ ಯೋಜನೆ: ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ನಿಧನ ಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲು ಅವಕಾಶವಿರುತ್ತದೆ.

5. ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 25 ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳು (ಬೆಂಗಳೂರು ನಗರ ಜಿಲ್ಲೆಯಲ್ಲಿ 4 ವಸತಿ ನಿಲಯಗಳು) ನಡೆಯುತ್ತಿವೆ. ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಹಾಗೂ ತರಬೇತಿದಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸದರಿ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/-ಗಳನ್ನು ಪಾವತಿಸಬೇಕಾಗಿರುತ್ತದೆ.ರಾಮನಗರ, ದಾವಣಗೆರೆ, ರಾಯಚೂರು, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದ ವಸತಿ ನಿಲಯಗಳನ್ನು ನಡೆಯುತ್ತಿಲ್ಲ.

ಸಿ. ಸಾಮಾಜಿಕ ಭದ್ರತಾ ಯೋಜನೆಗಳು:

1. ಸಮಾಜ ಸೇವಾ ಸಂಕೀರ್ಣ:

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ.ಪ್ರಸುತ ಸಂಸ್ಥೆಯಲ್ಲಿ 85 ನಿವಾಸಿಗಳು ದಾಖಲಾಗಿರುತ್ತಾರೆ.

2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ.ಪ್ರಸ್ತುತ ಬೆಂಗಳೂರು ಅನುಪಾಲನಾ ಕೇಂದ್ರದಲ್ಲಿ 100 ಮಂದಿ ಹಾಗೂ ಹುಬ್ಬಳ್ಳಿ ಅನುಪಾಲನ ಕೇಂದ್ರದಲ್ಲಿ 70 ನಿವಾಸಿಗಳು ದಾಖಲಾಗಿರುತ್ತಾರೆ.

3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:

ಮಾನಸಿಕ ಅಸ್ವಸ್ಥರಿಗಾಗಿ ಮಾನಸ ಕೇಂದ್ರಗಳನ್ನು ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ನಡೆಸುತ್ತಿದ್ದು, ರಾಜ್ಯ ಉಚ್ಛ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ.

4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ.ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ **5 ವರ್ಷಗಳ** ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ.ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

(ಡಿ) ಪುನರ್ವಸತಿ ಯೋಜನೆಗಳು:

1. ಅಂಗವಿಕಲರಿಗೆ ಸಾಧನ ಸಲಕರಣೆಗಳು :

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ. ಈ ಯೋಜನೆಯಡಿ ರೂ.15,000/-ಗಳ ಮಿತಿಯೊಳಗೆ ವಿಕಲಚೇತನರಿಗೆ ಅವಶ್ಯವಿರುವ ಕ್ಯಾಲಿಪರ್ಸ್, ಕ್ರಚರ್ಸ್, ಶ್ರವಣ ಸಾಧನ, ವೈಟ್ ಕೇನ್, ಬ್ರೈಲ್ ವಾಚ್ ಇನ್ನಿತರ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಅ. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಠಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ತೀವ್ರತೆರೆನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಓಡಾಡಲು ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮಂಜೂರು ಮಾಡಲಾಗುತ್ತದೆ.ಈ ಯೋಜನೆಯಡಿ ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರಬೇಕಾಗಿರುತ್ತದೆ.

2.ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ಪ್ರಸ್ತುತ 16 ಜಿಲ್ಲೆಗಳಲ್ಲಿ ಜಿಲ್ಲಾ ಪುನರ್ವಸತಿ ಕೇಂದ್ರಗಳು ನಡೆಯುತ್ತಿವೆ. (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಕ್ಷಿಣ ಕನ್ನಡ, ಮೈಸೂರು, ಉಡುಪಿ, ಹಾಸನ, ವಿಜಯಪುರ, ರಾಯಚೂರು, ಚಿಕ್ಕಮಗಳೂರು, ಬಳ್ಳಾರಿ, ಹಾವೇರಿ, ಚಾಮರಾಜನಗರ, ಗದಗ)

3. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

4. ಸಾಧನೆ ಮತ್ತು ಪ್ರತಿಭೆ ಯೋಜನೆ:

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

5. ನಿರಾಮಯ ಆರೋಗ್ಯ ವಿಮಾ ಯೋಜನೆ :

ಬುದ್ದಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿ ಹಾಗೂ ಮಗುವಿಗೆ ವರ್ಷಕ್ಕೆ ಒಂದು ಬಾರಿ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಭಾರತ ಸರ್ಕಾರದಿಂದ ಗುರುತಿಸಲ್ಪಟ್ಟ ಅಧಿಕೃತ ಸಂಸ್ಥೆಯಾದ ಅಂಗವಿಕಲರ ಪುನಶ್ಚೇತನ ಸಂಸ್ಥೆ (ರಿ) (ಎ.ಪಿ.ಡಿ) ಬೆಂಗಳೂರು ರವರಿಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ. ಈ ಮೊತ್ತದಲ್ಲಿ ರೂ.60,000/-ಗಳವರೆಗೆ ಸರ್ಜರಿ ವೆಚ್ಚ ಉಳಿದ ರೂ.40,000/-ಗಳಲ್ಲಿ ವೈದ್ಯಕೀಯ ಖರ್ಚು ಥೆರಪಿ, ಪ್ರಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ.

7. ಸ್ಪರ್ಧಾ ಚೇತನ:-

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗೆಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

8. <u>ನಿರುದ್ಯೋಗ ಭತ್ಯೆ:-</u> ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

<u>(ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:</u>

<u>1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :</u>

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.ಈ ಕೇಂದ್ರಗಳಲ್ಲಿ ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು.

2) <u>ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:-</u>

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ.ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. <u>ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ(ಗಓಖಕಿಗಇ ಆಖಖಂಃಖಐಖಖಿಜ ಖಅ)</u>ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

<u>3).ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್:</u>

ಈ ಯೋಜನೆಯಡಿ ವಿಕಲಚೇತನರಿಗೆ 100 ಕಿ.ಮೀ. ವ್ಯಾಪ್ತಿಯೊಳಗೆ ಸಂಚರಿಸಲು ವಾರ್ಷಿಕ ರೂ.660/- ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ಕೆ.ಎಸ್.ಆರ್.ಟಿ.ಸಿ ಹಾಗೂ ಬಿ.ಎಂ.ಟಿ.ಸಿ ವತಿಯಿಂದ ವಿತರಿಸಲಾಗುತ್ತಿದೆ ಪೂರ್ಣ ಅಂಧರು ಉಚಿತವಾಗಿ ರಾಜ್ಯದಲ್ಲಿ ಸಂಚರಿಸಲು ಅವಕಾಶವಿರುತ್ತದೆ.

<u>ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು</u>

<u>ಹಗಲು ಯೋಗಕ್ಷೇಮ ಕೇಂದ್ರಗಳು:</u>
ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50-150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

1. <u>ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:</u>

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

2. <u>ಹಿರಿಯ ನಾಗರಿಕರ ವೃದ್ಧಾಶ್ರಮ:</u>

ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ಮಂಜೂರು ಮಾಡಲಾಗುತ್ತಿದೆ.

ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 8 ಕಂದಾಯ ಉಪ ವಿಭಾಗಕ್ಕೆ ವೃದ್ಧಾಶ್ರಮ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

3. **ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:**

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1677
ಮಾನ್ಯ ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖಾ ಸಚಿವರು,
ಉತ್ತರಿಸಬೇಕಾದ ದಿನಾಂಕ : 10-03-2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಂಜೂರು ಮಾಡಿದ ಅನುದಾನವೆಷ್ಟು; (ಯೋಜನಾವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಂಜೂರು ಮಾಡಿದ ಅನುದಾನದ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ	ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿರುವ ಮಹಿಳಾ ಸ್ವಸಹಾಯ ಸಂಘಗಳ ಸಂಖ್ಯೆ ಎಷ್ಟು; ಈ ಸ್ವಸಹಾಯ ಸಂಘಗಳಿಗೆ ಎಷ್ಟು ಸಾಲ ಸೌಲಭ್ಯವನ್ನು ನೀಡಲಾಗಿದೆ; (ಸಂಘವಾರು, ಗ್ರಾಮವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿರುವ ಮಹಿಳಾ ಸ್ವ ಸಹಾಯ ಸಂಘಗಳ ಸಂಖ್ಯೆ ಹಾಗೂ ಸ್ವಸಹಾಯ ಸಂಘಗಳಿಗೆ ನೀಡಲಾದ ಸಾಲ ಸೌಲಸಭ್ಯದ ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ;
ಇ	ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿರುವ ಒಟ್ಟು ಅಂಗವಿಕಲರ ಸಂಖ್ಯೆ ಎಷ್ಟು ಮತ್ತು ಅಂಗವಿಕಲರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ. (ವಿವರ ನೀಡುವುದು)	ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿರುವ ಒಟ್ಟು ಅಂಗವಿಕಲರ ಸಂಖ್ಯೆ ಮತ್ತು ಅಂಗವಿಕಲರ ಅಭಿವೃದ್ಧಿಗೆ ರಾಜ್ಯ ಸರ್ಕಾರ ರೂಪಿಸಲಾದ ಯೋಜನೆಗಳ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.
ಈ	ಕಳೆದ ಮೂರು ವರ್ಷಗಳಿಂದ ಎಷ್ಟು ಅಂಗವಿಕಲ ಚೇತನರಿಗೆ ಸರ್ಕಾರದಿಂದ ಸಾಲ ಸೌಲಭ್ಯ, ದ್ವಿಚಕ್ರ ವಾಹನ ನೀಡಲಾಗಿದೆಯೇ; (ಫಲಾನುಭವಿವಾರು, ಯೋಜನಾವಾರು ಮಾಹಿತಿ ನೀಡುವುದು)	ಮಾಹಿತಿಯನ್ನು ಅನುಬಂಧ-4 ರಲ್ಲಿ ಒದಗಿಸಲಾಗಿದೆ.
ಉ	ಈ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಅನುದಾನ ಬಿಡುಗಡೆ ಮಾಡಲಾಗುವುದೇ?	ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳ ವಿವರವನ್ನು ಅನುಬಂಧ-5 ರಲ್ಲಿ ಒದಗಿಸಲಾಗಿದೆ.

ಸಂ:ಮಮಇ 61 ಸ್ವೀಮರ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಅನುಬಂಧ-1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಂಜೂರು ಮಾಡಿದ ಅನುದಾನದ ವಿವರ (ಅನುದಾನ ರೂ.ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆ	ಲೆಕ್ಕಶೀರ್ಷಿಕೆ	2017-18	2018-19	2019-20
1	ಕೇಂದ್ರ ಪುರಸ್ಕೃತ ವೇತನ ಆಡಳಿತ ವೆಚ್ಚ	2211-00-102-0-22 (001)	56.09	67.50	70.37
		2211-00-102-0-22 (050)	394.19	431.65	536.91
		2211-00-102-0-22 (034)	1.51	1.75	4.00
2	ಪೂರಕ ಪೌಷ್ಠಿಕ ಆಹಾರ	2235-00-101-0-61 (050)	474.00	508.80	462.82
		2235-00-101-0-61 (422)	101.86	110.96	305.48
		2235-00-101-0-61 (423)	33.63	35.08	19.80
3	ಅಂಗನವಾಡಿ ಕಟ್ಟಡ ನಿರ್ವಹಣೆ	2211-00-101-0-61 (140)	12.50	15.00	10.00
4	ಎನ್.ಎಂ.ಆರ್.ಜಿ.ಎ. ಅಂಗನವಾಡಿ ಕಟ್ಟಡಗಳ ನಿರ್ಮಾಣ	4235-02-102-0-6 (386)	111.47	0.00	0.00
5	ತೀವ್ರ ಅಪೌಷ್ಠಿಕ ಮಕ್ಕಳು (ಸಾಮಾನ್ಯ)	2235-02-102-0-30 (059)	0.32	0.14	0.06
	ತೀವ್ರ ಅಪೌಷ್ಠಿಕ ಮಕ್ಕಳು (ಎಸ್.ಸಿ)	2235-02-102-0-30(422)	0.30	0.16	0.04
	ತೀವ್ರ ಅಪೌಷ್ಠಿಕ ಮಕ್ಕಳು (ಎಸ್.ಟಿ.)	2235-02-102-0-30 (423)	0.06	0.02	0.00
6	ಬಾಲ ಸ್ನೇಹಿ ಅಂಗನವಾಡಿ ಕಟ್ಟಡಗಳು	2235-02-102-0-04 (051)	2.50	0.00	0.00
7	ಸಬಲ ತರಬೇತಿ (ಕಿಶೋರಿ)	2235-02-103-0-46 (059)	0.00	0.35	0.00
8	ಅಂಗನವಾಡಿ ಸಹಾಯಕಿಯರ ಮರಣ ಪರಿಹಾರ	2235-02-103-0-99 (100)	0.00	0.50	1.00
9	ಮಾತೃಶ್ರೀ ಯೋಜನೆಯ ಅರ್ಜಿ ಮುದ್ರಣ	2235-02-103-0-58 (059)	0.00	0.50	0.00
10	ಪೋಷಣ್ ಅಭಿಯಾನ	2235-02-102-0-43 (059)	0.00	0.00	15.03
11	ಮಾತೃವಂದನಾ ಯೋಜನೆಯಡಿ ತರಬೇತಿ ಕಾರ್ಯಕ್ರಮ	2235-02-103-0-61 (059)	0.00	0.68	4.16
	ಮಾತೃವಂದನಾ ಯೋಜನೆ	2235-02-103-0-61 (059)	5.32	43.74	53.31
		2235-02-103-0-61 (422)	1.71	11.74	14.95
		2235-02-103-0-61 (423)	0.45	2.36	3.22
12	ಸ್ತ್ರೀಶಕ್ತಿ ಯೋಜನೆ	2235-02-103-0-41	49.94	2.98	0.44
13	ಭಾಗ್ಯಲಕ್ಷ್ಮೀ ಕಂಪ್ಯೂಟರ್ ಆಪರೇಟರ್ ಗೌರವಧನ	2235-02-001-0-01 (034)	2.32	2.29	2.05
14	ಭಾಗ್ಯಲಕ್ಷ್ಮೀ ಅಂಗನವಾಡಿ ಕಾರ್ಯಕರ್ತೆಯರ ಪ್ರೋತ್ಸಾಹಧನ	2235-02-102-0-25 (100)	0.00	0.86	0.85
15	ಕೌಟುಂಬಿಕ ದೌರ್ಜನ್ಯ ಯೋಜನೆ	2235-02-103-0-52	1.45	2.18	2.18
16	ಸಾಂತ್ವನ	2235-02-103-0-99-100	4.52	3.50	4.52
17	ನಿರ್ಗತಿಕ ಮಕ್ಕಳ ಕುಟೀರ	2211-00-102-0-26	2.70	11.77	9.84

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು

2017-18, 2018-19 ಹಾಗೂ 2019-20ನೇ ಸಾಲಿನವರೆಗೆ ಇಲಾಖೆಗೆ ಬಿಡುಗಡೆಯಾದ ಅನುದಾನದ ವಿವರಗಳು				
				(ರೂ. ಲಕ್ಷಗಳಲ್ಲಿ)
ಕ್ರಸಂ.	ಯೋಜನೆಯ ವಿವರ	**2017-18**	**2018-19**	**2019-20**
1	ವಿದ್ಯಾರ್ಥಿವೇತನ	4.81	5.40	4.35
2	ಸಾಧನ ಸಲಕರಣೆ	3.00	5.00	6.50
3	ಯಂತ್ರಚಾಲಿತ ದ್ವಿಚಕ್ರ ವಾಹನ	9.82	0.00	6.79
4	ಟಾಕಿಂಗ್ ಲ್ಯಾಪ್‌ಟಾಪ್	0.00	0.00	1.93
5	ಗ್ರಾಮೀಣ ಪುನರ್ವಸತಿ ಕೇಂದ್ರ	31.84	41.55	43.50
6	ಮರಣ ಪರಿಹಾರ ನಿಧಿ	0.00	0.00	0.00
7	ನಿರಾಮಯ	0.50	0.00	0.00
8	ಅರಿವಿನ ಸಿಂಚನ	2.73	0.00	0.00
9	ಆಧಾರ	7.35	0.00	8.50
10	ಸಾಧನ್-ಪ್ರತಿಭೆ	0.60	0.30	1.00
11	ವೈದ್ಯಕೀಯ ಪರಿಹಾರ ನಿಧಿ	1.00	5.00	5.00
12	ಶುಲ್ಕ ಮರುಪಾವತಿ	0.29	1.50	2.10
13	ವಿವಾಹ ಪ್ರೋತ್ಸಾಹಧನ	7.00	11.00	8.00
14	ಶಿಶುಪಾಲನಾ ಭತ್ಯೆ	0.85	0.60	0.50
15	ಡಿ.ಡಿ.ಆರ್.ಸಿ.	17.75	21.32	24.09
16	ವಿಕಲಚೇತನರ ಸಹಾಯವಾಣಿ	5.71	5.39	5.21
17	ವಿಶ್ವ ವಿಕಲಚೇತನರ ದಿನಾಚರಣೆ	0.75	0.60	0.60
18	ಶಿಶುಕೇಂದ್ರೀಕೃತ	52.81	57.80	109.37
19	ಮಹಿಳಾ ವಸತಿ ನಿಲಯ	5.92	12.58	12.58
20	ನಿರುದ್ಯೋಗ ಭತ್ಯೆ	0.00	0.00	0.00
21	ಸ್ಪರ್ಧಾಚೇತನ	0.00	0.00	0.00
22	ಮಾನಸಿಕ ಅಸ್ವಸ್ಥರಿಗೆ ನಿವಾಸಿ ಗೃಹಗಳು	0.00	0.00	0.00
23	ಹಿ. ನಾ. ಸಹಾಯವಾಣಿ ಕೇಂದ್ರ	3.08	6.15	5.25
24	ಹಿ. ನಾ.ಹಗಲು ಯೋಗಕ್ಷೇಮ ಕೇಂದ್ರ	7.25	0.00	1.84
25	ವಿಶ್ವ ಹಿ. ನಾ. ದಿನಾಚರಣೆ	0.60	0.75	0.00
26	ವೃದ್ಧಾಶ್ರಮ	0.00	0.00	8.00
27	1982ರ ರಾಜ್ಯ ಅನುದಾನ ಸಂಹಿತೆ	0.00	0.00	0.00
	ಒಟ್ಟು ರೂ.	**163.66**	**174.94**	**255.11**

* ಕ್ರಮಸಂಖ್ಯೆ 6, 20,21 ಮತ್ತು 22ರಲ್ಲಿನ ಇಲಾಖಾ ಯೋಜನೆಗಳು ಫಲಾನುಭವಿಗಳ ಆಧಾರಿತ ಯೋಜನೆಗಳಾಗಿರುವುದರಿಂದ ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಕೋವಿಡ್-19ರ ಸಾಂಕ್ರಾಮಿಕ ಕಾಯಿಲೆ ಪರಿಣಾಮದ ಹಿನ್ನೆಲೆಯಲ್ಲಿ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ಈ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವನ್ನು ಈಗ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲಾಗುತ್ತಿದೆ.

* ಕ್ರಮಸಂಖ್ಯೆ 27ರಲ್ಲಿನ ಯೋಜನೆಯು ಅನುಷ್ಠಾನಗೊಳ್ಳುತ್ತಿರುವುದಿಲ್ಲ.

ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ವಿಶೇಷ ಪಾಲನಾ ಯೋಜನೆ

(ಎಸ್‌ಸಿಪಿ/ಟಿಎಸ್‌ಪಿ ಫಲಾನುಭವಿಗಳನ್ನೊಳಗೊಂಡಿದೆ)

ಕ್ರಸಂ.	ತಾಲ್ಲೂಕು	ವರ್ಷ	ಫಲಾನುಭವಿಗಳ ಸಂಖ್ಯೆ	ಮಂಜೂರಾದಅನುದಾನ	ಫಲಾನುಭವಿಗಳಿಗೆ ಬಿಡುಗಡೆಮಾಡಿದಅನುದಾನ
1	ನೆಲಮಂಗಲ	2017-18	39	ರೂ.2,34,000/-	ರೂ.2,34,000/-
		2018-19	38	ರೂ.3,04,000/-	ರೂ.3,04,000/-
		2019-20	37	ರೂ.3,70,000/-	ರೂ.3,70,000/-

ಪ್ರಾಯೋಜಕತ್ವಕಾರ್ಯಕ್ರಮ

ಕ್ರಸಂ.	ತಾಲ್ಲೂಕು	ವರ್ಷ	ಫಲಾನುಭವಿಗಳ ಸಂಖ್ಯೆ	ಮಂಜೂರಾದಅನುದಾನ	ಫಲಾನುಭವಿಗಳಿಗೆ ಬಿಡುಗಡೆಮಾಡಿದಅನುದಾನ
1	ನೆಲಮಂಗಲ	2017-18	12	ರೂ.96,000/-	ರೂ.96,000/-
		2018-19	43	ರೂ.4,18,046/-	ರೂ.4,18,046/-
		2019-20	42	ರೂ.3,44,000/-	ರೂ.3,44,000/-

ಪರಸ್ಪರ -ವಿಶೇಷ ದತ್ತುಕೇಂದ್ರ

ಕ್ರಸಂ.	ತಾಲ್ಲೂಕು	ವರ್ಷ	ಮಂಜೂರಾದಅನುದಾನ	ಬಿಡುಗಡೆಮಾಡಿದಅನುದಾನ
1	ನೆಲಮಂಗಲ	2017-18	ರೂ.13,58,435/-	ರೂ.13,33,868/-
		2018-19	ರೂ.15,54,941/-	ರೂ.15,26,223/-
		2019-20	ರೂ.14,12,280/-	ರೂ.14,12,280/-

ಕರ್ಡ್ಸ್-ತೆರೆದತಂಗುದಾಣ

ಕ್ರಸಂ.	ತಾಲ್ಲೂಕು	ವರ್ಷ	ಮಂಜೂರಾದಅನುದಾನ	ಬಿಡುಗಡೆಮಾಡಿದಅನುದಾನ
1	ನೆಲಮಂಗಲ	2017-18	ರೂ.17,32,505/-	ರೂ.17,15,180/-
		2018-19	ರೂ.17,68,924/-	ರೂ.17,68,924/-
		2019-20	ರೂ.17,58,200/-	--

ಜೀವನಾಲಯ -ಅರ್ಹ ಸಂಸ್ಥೆ

ಕ್ರಸಂ.	ತಾಲ್ಲೂಕು	ವರ್ಷ	ಮಂಜೂರಾದಅನುದಾನ	ಬಿಡುಗಡೆಮಾಡಿದಅನುದಾನ
1	ನೆಲಮಂಗಲ	2017-18	ರೂ.19,07,948/-	ರೂ.19,07,948/-
		2018-19	ರೂ.19,64,838/-	ರೂ.17,68,354/-
		2019-20	2019-20ನೇ ಸಾಲಿನ ಅನುದಾನ ಬಿಡುಗಡೆಯಾಗಿರುವುದಿಲ್ಲ.	

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ನೆಲಮಂಗಲ ವಿಧಾನ ಕ್ಷೇತ್ರಕ್ಕೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಮಂಜೂರು ಮಾಡಲಾದ ಅನುದಾನದ ವಿವರ

ಕ್ರಸಂ	ಯೋಜನೆಯ ಹೆಸರು	ವರ್ಷ	ಭೌತಿಕ	ಬಿಡುಗಡೆಯಾದ ಅನುದಾನ
1	ಉದ್ಯೋಗಿನಿ	2018-19	11	5,13,000
